ಭಾನುವಾರ, ಫೆಬ್ರುವರಿ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 44 | ಪುಟ 20 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ಕಾನ್ಸುಲೇಟ್ ಕಚೇರಿ 3

ನೂರಾರು ಕೋಟಿ ಹಗರಣ: ತನಿಖೆ ಆರಂಭಿಸಿದ ಎಸಿಬಿ 3A

ಉದ್ಯಮಿ ರಾಹುಲ್ ಬಜಾಜ್ ನಿಧನ 3B

ಬಿಡಿಎ ಅಕ್ರಮ: ಐದು ಎಫ್‌ಐಆರ್ ದಾಖಲು

ಭಾನುವಾರದ ಪುರವಣಿ

ಕೋಮು ಸಾಮರಸ್ಯವನ್ನೇ ಉಸಿರಾಡುವ 'ಬಹುತ್ವ ಭಾರತ'ದ ತುಣುಕು ಮಹಾಲಿಂಗಪುರದ ಪರಂಪರೆಯಲ್ಲಿ ಒಂದು ಸುತ್ತು...

SSLC/PUC II
2022 EXAMINATION
ZEN
EXAM RECKONER
HOT MODEL PAPERS
80% Most Expected Exam Questions
Available in all Bookstores
www.zenstudents.com

ಯುವಸಮೂಹವೇ ಗುರಿ • ಅಧಿಕಾರಸ್ಥರಿಂದ ರಕ್ಷಣೆ

ಗಾಂಜಾ ಗಮ್ಮತ್ತಿನ ಆಪತ್ತು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕ್ಷಣಿಕ ನಶೆಯಲ್ಲಿ ತೇಲಿಸಿ ಸಾವಿನ ದವಡೆಗೆ ದೂಡುವ ಮಾದಕ ವಸ್ತುವಾದ 'ಗಾಂಜಾ' ಹಾವಳಿ ರಾಜ್ಯದಲ್ಲಿ ವಿಪರೀತವಾಗಿದೆ. ಬೆಂಗಳೂರು ಸೇರಿ ವಿವಿಧ ನಗರಗಳಲ್ಲಿ ವ್ಯಸನಿಗಳ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಯುವಸಮೂಹ ಈ ಚಟಕ್ಕೆ ಬೀಳುತ್ತಿದ್ದು, ಗಾಂಜಾ ಸಾಗಣೆ ಹಾಗೂ ಮಾರಾಟಕ್ಕೆ ಲಗಾಮು ಹಾಕಲು ಮಾತ್ರ ಸಾಧ್ಯವಾಗುತ್ತಿಲ್ಲ.

ಹೊರರಾಜ್ಯದಲ್ಲಿ ಬೆಳೆಯುವ ಗಾಂಜಾ ಹಾಗೂ ಅದರ ಉತ್ಪನ್ನಗಳನ್ನು ಟನ್‌ಗಟ್ಟಲೇ ಕರ್ನಾಟಕಕ್ಕೆ ತಂದು ಮಾರುವ ಜಾಲಗಳು ಸಕ್ರಿಯವಾಗಿವೆ.

ಜಾಲದಲ್ಲಿರುವ ಪೆಡ್ಲರ್ ಹಾಗೂ ಉಪ ಪೆಡ್ಲರ್‌ಗಳು, ವ್ಯವಸ್ಥಿತವಾಗಿ ಗಾಂಜಾ ಮಾರಿ ವಾರ್ಷಿಕ ಕೋಟಿಗಟ್ಟಲೇ ವ್ಯವಹಾರ ನಡೆಸುತ್ತಿದ್ದಾರೆ.

ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಗಾಂಜಾ ಹಾಗೂ ಇತರೆ ಮಾದಕ ವಸ್ತುವನ್ನು ದೇಶದಲ್ಲಿ ನಿಷೇಧಿಸಲಾಗಿದೆ. ರಾಜ್ಯ ಪೊಲೀಸರು ಹಾಗೂ ರಾಷ್ಟ್ರೀಯ ತನಿಖಾ ತಂಡಗಳು, ಮೇಲಿಂದ ಮೇಲೆ ಕಾರ್ಯಾ ಚರಣೆ ನಡೆಸಿದರೂ ಜಾಲಗಳನ್ನು ಬುಡ ಸಮೇತ ಕಿತ್ತೆಸೆಯಲು ಸಾಧ್ಯವಾಗುತ್ತಿಲ್ಲ.

ಒಳನೋಟ

ಗಾಂಜಾ ಸುಳಿಯಲ್ಲಿ ರಾಜ್ಯ

ಪ್ರತಿಕ್ರಿಯಿಸಿ: 9606038256

feedback@prajavani.co.in

ಗಾಂಜಾ ವಿರುದ್ಧ ಪೊಲೀಸ್ ಇಲಾಖೆ ಕಾರ್ಯಾಚರಣೆ



'ಡೆಲಿವರಿ ಬಾಯ್‌ಗಳೇ ಪೂರೈಕೆದಾರರು'

'ಆಹಾರ ಪೂರೈಕೆ ಮಾಡಲೆಂದು ಸ್ವಿಗ್ಗಿ, ಝೊಮ್ಯಾಟೊ, ಡೊನ್ಜು ಸೇರಿದಂತೆ ಹಲವು ಆ್ಯಪ್‌ಗಳು ಕಾರ್ಯನಿರ್ವಹಿಸುತ್ತಿವೆ. ಇದರ ಕೆಲ ಡೆಲಿವರಿ ಬಾಯ್‌ಗಳು, ಗಾಂಜಾ ಪೂರೈಸುತ್ತಿದ್ದ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಇವರ ಜಾಲ ದೊಡ್ಡದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

ಇನ್ನಷ್ಟು ಸುದ್ದಿಗಳು 4

'ಗಾಂಜಾ ವ್ಯಸನಿಗಳ ಬಗ್ಗೆ ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು ಇತ್ತೀಚೆಗೆ ಅಧ್ಯಯನ ನಡೆಸಿದ್ದರು. ದಕ್ಷಿಣ ಭಾರತದಲ್ಲಿ ಅತೀ ಹೆಚ್ಚು ಗಾಂಜಾ ವ್ಯಸನಿಗಳಿರುವ ನಗರವೆಂಬ ಅಪಖ್ಯಾತಿ ರಾಜಧಾನಿ ಬೆಂಗಳೂರಿಗೆ ಬಂದಿದೆ. ರಾಜ್ಯದ ಇತರೆ ನಗರಗಳಲ್ಲೂ ಗಾಂಜಾ ಸೇವನೆ ಅಧಿಕವಾಗಿದೆ. ಮುಂಬರುವ ದಿನಗಳಲ್ಲಿ ಗಾಂಜಾದಿಂದಲೇ ರಾಜ್ಯಕ್ಕೆ ಆಪತ್ತು ಎದುರಾಗುವ ಸಾಧ್ಯತೆ ಇದೆ. ಇದನ್ನು ಮಟ್ಟಹಾಕಲು ಪ್ರತ್ಯೇಕವಾದ ಎಸ್‌ಸಿಬಿ (ರಾಜ್ಯ ಮಾದಕ ವಸ್ತು ನಿಯಂತ್ರಣ ಘಟಕ) ಅಗತ್ಯವಿದೆ' ಎಂದು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಹೆದ್ದಾರಿಯಲ್ಲೇ ಗಾಂಜಾ ಸಾಗಣೆ: 'ಡ್ರಗ್ಸ್ ವ್ಯಸನಿಯೇ, ಕ್ರಮೇಣ ಗಾಂಜಾ ಮಾರಾಟದ ಪೆಡ್ಲರ್ ಆಗಿ ಮಾರ್ಪಡುತ್ತಿದ್ದಾನೆ. ಸಣ್ಣ ಪ್ರಮಾಣದಲ್ಲಿ ಗಾಂಜಾ ಮಾರಾಟಕ್ಕೆ ಇಳಿದ ವ್ಯಕ್ತಿ, ಟನ್‌ಗಟ್ಟಲೇ ವ್ಯವಹಾರ ನಡೆಸುತ್ತಿದ್ದಾನೆ. ಇಂಥವರ ವಿರುದ್ಧ ನಿರಂತರವಾಗಿ ದಾಳಿ ಮಾಡಲಾಗುತ್ತಿದ್ದು, ಅವರು ಮಾತ್ರ ದಂಧೆ ಬಿಟ್ಟಿಲ್ಲ' ಎಂದು ಬೆಂಗಳೂರು ಸಿಸಿಬಿ ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

4ನೇ ಪುಟ ನೋಡಿ

ಪಿಯು ಕಾಲೇಜುಗಳಿಗೆ 15ರವರೆಗೆ ರಜೆ

ಬೆಂಗಳೂರು: ಹಿಜಾಬ್ ಮತ್ತು ಕೇಸರಿ ಶಾಲು ವಿವಾದದಿಂದಾಗಿ ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಗೆ ಇದೇ 15ರವರೆಗೂ ರಜೆ ಘೋಷಿಸಲಾಗಿದೆ.

ಇದಕ್ಕೂ ಮುನ್ನ ಫೆ.11ರವರೆಗೆ ಅನ್ವಯವಾಗುವಂತೆ ರಜೆ ನೀಡಲಾಗಿತ್ತು. ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಮುಂಜಾಗ್ರತಾ ಕ್ರಮವಾಗಿ ರಜೆ ಮುಂದುವರಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುವ ಶಿಕ್ಷಣ ಸಂಸ್ಥೆಗಳಿಗೆ ಇದೇ 16ರವರೆಗೆ ರಜೆಯನ್ನು ವಿಸ್ತರಿಸಿ ಶುಕ್ರವಾರ ಸುತ್ತೋಲೆ ಹೊರಡಿಸಲಾಗಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಇಶಾನ್‌ಗೆ ಜಾಕ್‌ಪಾಟ್; ಚಾಹರ್‌ಗೆ ಬಂಪರ್

ಬೆಂಗಳೂರು: ವಿಕೆಟ್‌ಕೀಪರ್ ಇಶಾನ್ ಕಿಶನ್ ಮತ್ತು ಆಲ್‌ರೌಂಡರ್ ದೀಪಕ್ ಚಾಹರ್ ಶನಿವಾರ ಇಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜಿನಲ್ಲಿ ಭಾರಿ ಮೌಲ್ಯ ಗಳಿಸಿದರು. ಕರ್ನಾಟಕದ ಆಟಗಾರರಾದ ಪ್ರಸಿದ್ಧಕೃಷ್ಣ ಮತ್ತು ದೇವದತ್ತ ಪಡಿಕ್ಕಲ್ ಅವರಿಗೂ ಅದೃಷ್ಟ ಒಲಿಯಿತು.

ಪ್ರ.ವಾ ಗ್ರಾಫಿಕ್ಸ್: ಕಣಕಾಲಮಠ



ಶಾಸ್ತ್ರೀಯ, ಪಾಶ್ಚಾತ್ಯ ಸಂಗೀತ ಸಲಕರಣೆಗಳ ಮಾರಾಟ ತಾಣ

ಸಂಗೀತ ಕೊಂಡಿ ಬೆಸೆದಿಹ 'ವೀಣಾ'

• ಶಿವರಾಜ ರಾಮನಾಳ

ಜಯನಗರದಲ್ಲಿರುವ ವೀಣಾ ಮ್ಯೂಸಿಕಲ್ ಸ್ಟೋರ್ —ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಹಲವು ಐತಿಹ್ಯಗಳ ತಾಣವಾಗಿರುವ ಬೆಂಗಳೂರಿಗೂ ಸಂಗೀತಕ್ಕೂ ನಂಟು ಇದೆ. ಇಲ್ಲಿನ ಸಂಗೀತ ಪರಂಪರೆಯ ಜೊತೆ ಜಯನಗರದ 'ವೀಣಾ ಮ್ಯೂಸಿಕಲ್ಸ್' ಹೆಸರು ಕೂಡಾ ಥಳಕು ಹಾಕಿಕೊಂಡಿದೆ. 1912ರಲ್ಲಿ ಆರಂಭವಾದ ಈ ಮಳಿಗೆ ಸಂಗೀತದ ಅನೇಕ ತಲೆಮಾರುಗಳನ್ನು ಬೆಸೆದಿದೆ. ಇಲ್ಲಿನ ಸಂಗೀತ ಪರಿಕರಗಳು ನಾಡಿನಾದ್ಯಂತ ಸಂಗೀತದ ನಿನಾದವನ್ನು ಮೊಳಗಿಸಿವೆ.

ಹೆಸರಿನಿಂದಲೇ ಗಮನ ಸೆಳೆಯುವ ಈ ಮಳಿಗೆಯ ಒಳಗೆ ಪ್ರವೇಶಿಸುತ್ತಿದ್ದಂತೆ ಸಂಗೀತ ಪರಿಕರಗಳ ಲೋಕವೇ ಅನಾವರಣಗೊಳ್ಳುತ್ತದೆ. ಶಾಸ್ತ್ರೀಯ ಸಂಗೀತ ಪರಂಪರೆಯ ವಿವಿಧ ಬಗೆಯ ವೀಣೆಗಳು, ವೃತ್ತಾಕಾರದಲ್ಲಿ ಜೋಡಿಸಿರುವ ವಿವಿಧ ಆಕಾರಗಳ ಗಿಟಾರ್‌ಗಳು, ಹಾರ್ಮೋನಿಯಂಗಳು ಕಣ್ಮನ ಸೆಳೆಯುತ್ತವೆ. ಪಿಯಾನೊ, ಕೀಬೋರ್ಡ್, ತಬಲ, ಮೃದಂಗ ಮೊದಲಾದವು ಸಂಗೀತ ಪರಿಕರಗಳ ಭಾರಿ ಸಂಗ್ರಹವೇ ಇಲ್ಲಿದೆ.

110 ವರ್ಷಗಳಷ್ಟು ಹಳೆಯ ಈ ಮಳಿಗೆಯನ್ನು ಸದ್ಯ ಕಾರ್ತಿಕ್ ಎಂಬುವವರು ನೋಡಿಕೊಳ್ಳುತ್ತಿದ್ದಾರೆ. ಮಳವಳ್ಳಿಯವರಾದ ಇವರ ಮುತ್ತಾತ ಡಿ.ಕೆ.ಪಿಳ್ಳಪ್ಪ ಈ ಮಳಿಗೆಯನ್ನು ಮೊದಲಿಗೆ ಬಳೆಪೇಟೆಯಲ್ಲಿ ಪ್ರಾರಂಭಿಸಿದ್ದರು. ನಂತರ ಅವರ ಮಗ ಸದಾಶಿವ, ಬಳಿಕ ನಾಗರಾಜ್ ಇದರ ಹೊಣೆ ಹೊತ್ತಿದ್ದರು. ಕಾರ್ತಿಕ್ ನಾಲ್ಕನೇ ತಲೆಮಾರಿನವರು.

ಸುಮಾರು 30 ವರ್ಷಗಳ ಕಾಲ ಬಳೆಪೇಟೆಯಲ್ಲಿದ್ದ ಮಳಿಗೆಯ ಮತ್ತೊಂದು ಘಟಕವನ್ನು ಜಯನಗರದಲ್ಲಿ ಆರಂಭಿಸಲಾಗಿತ್ತು. ಇಲ್ಲಿ ಸಂಗೀತ ಪರಿಕರಗಳ ದುರಸ್ತಿ ಕಾರ್ಯ ಮಾತ್ರ ನಡೆಯುತ್ತಿತ್ತು. ನಂತರದಲ್ಲಿ ಮಾರಾಟ ಆರಂಭಿಸಲಾಯಿತು. ಈಗ ಬಳೆಪೇಟೆಯಲ್ಲಿನ ಮಳಿಗೆಯನ್ನು ಕಾರ್ತಿಕ್ ಅವರ ಅಣ್ಣ ಸತೀಶ್ ನೋಡಿಕೊಳ್ಳುತ್ತಿದ್ದಾರೆ.

ವಾದ್ಯ ನುಡಿಸುತ್ತಿದ್ದ ಪಿಳ್ಳಪ್ಪ ಅವರು ನಂತರದಲ್ಲಿ ಅದನ್ನು ತಯಾರಿಸಲಾರಂಭಿಸಿದರು. ಮಾರಾಟ ಮಳಿಗೆಯನ್ನೂ ತೆರೆದರು.

ಬೆಂಗಳೂರು ನಮ್ಮ ಹೆಮ್ಮೆ...

ಮಳಿಗೆಯ ಹೆಸರು 'ವೀಣಾ' ಎಂದಿದ್ದರೂ ಇಲ್ಲಿ ಮೊದಲು ಆರಂಭವಾದುದು ಹಾರ್ಮೋನಿಯಂ ದುರಸ್ತಿ. ಕ್ರಮೇಣ ಇಲ್ಲಿ ವೀಣೆಯ ತಯಾರಿಯೂ ಆರಂಭವಾಯಿತು. ಕಾರ್ತಿಕ್ ಅವರ ತಂದೆ ನಾಗರಾಜ್ ಅವರು ಉಸ್ತುವಾರಿ ವಹಿಸಿಕೊಂಡ ನಂತರ ಈ ಮಳಿಗೆಗೆ ವೀಣಾ ಮ್ಯೂಸಿಕಲ್ಸ್ ಎಂದು ನಾಮಕರಣ ಮಾಡಿದರು.

'ಈಗಲೂ ಮುತ್ತಾತ ಪಿಳ್ಳಪ್ಪ ಅವರ ಹೆಸರಿನಿಂದಲೇ ನಮ್ಮನ್ನು ಗುರುತಿಸುತ್ತಾರೆ. ಹಾರ್ಮೋನಿಯಂ ಮೂಲತಃ ಯುರೋಪಿನದ್ದಾದರೂ, ಈಗ ಭಾರತದ್ದೇ ಅನ್ನುವಷ್ಟರಮಟ್ಟಿಗೆ ಇಲ್ಲಿನ ಸಂಗೀತ ಪರಂಪರೆಯ ಜೊತೆ ಮಿಳಿತಗೊಂಡಿದೆ. ಶಾಸ್ತ್ರೀಯ ಸಂಗೀತ ಕಚೇರಿಗಳಿಗೆ, ನಾಟಕಗಳಿಗೆ ಅದು ಅತ್ಯವಶ್ಯಕ' ಎನ್ನುತ್ತಾರೆ ಕಾರ್ತಿಕ್.

1980ರವರೆಗೂ ಇಲ್ಲೇ ವಾದ್ಯಗಳನ್ನೂ ತಯಾರಿಸಲಾಗುತ್ತಿತ್ತು. ಆದರೆ ಈಗ ದುರಸ್ತಿ ಹಾಗೂ ಮಾರಾಟ ಮಾತ್ರ ಮಾಡಲಾಗುತ್ತಿದೆ.

ಮಳಿಗೆಯಲ್ಲಿ ಲಭ್ಯವಿರುವ ವಾದ್ಯಗಳು

ವೀಣೆ, ಹಾರ್ಮೋನಿಯಂ, ತಬಲ, ಡೋಲಕ್, ಮೃದಂಗ, ಕೊಳಲು, ತಂಬೂರಿ, ಸಿತಾರ್, ಖಂಜೀರ, ಕೀ ಬೋರ್ಡ್, ಗಿಟಾರ್, ಡ್ರಮ್ಸ್, ಪಿಯಾನೊ, ಸ್ಯಾಕ್ಸೊಫೋನ್, ಚಲೋ, ಡಬಲ್ ಬೇಸ್, ಟ್ರಂಪೆಟ್, ವಯೊಲಿನ್

ಆಧುನಿಕತೆಗೆ ತಕ್ಕಂತೆ ಈಗ ಪಾಶ್ಚಾತ್ಯ ಸಂಗೀತ ವಾದ್ಯಗಳನ್ನೂ ಇಲ್ಲಿ ಮಾರಾಟ ಮಾಡಲಾಗುತ್ತಿದೆ.

'ಈ ಮೊದಲು ಶಾಸ್ತ್ರೀಯ ಸಂಗೀತ ವಾದ್ಯಗಳೇ ಇಲ್ಲಿ ಪ್ರಧಾನವಾಗಿದ್ದವು. 40 ವರ್ಷಗಳ ಹಿಂದಿನಿಂದಲೇ ಪಾಶ್ಚಾತ್ಯ ಸಂಗೀತ ವಾದ್ಯಗಳ ತಯಾರಿ ಮತ್ತು ಮಾರಾಟ ಆರಂಭವಾಯಿತು. ಇಲ್ಲಿ ಸಣ್ಣ ಗೆಜ್ಜೆಯಿಂದ ಹಿಡಿದು ದೊಡ್ಡ ವಾದ್ಯಗಳವರೆಗೂ ದೊರೆಯುತ್ತವೆ' ಎಂದು ಕಾರ್ತಿಕ್ ಮಾಹಿತಿ ನೀಡುತ್ತಾರೆ.

'ಕೋವಿಡ್ ಬಂದ ನಂತರ ಜನರಲ್ಲಿ ಸಂಗೀತದ ಒಲವು ಹೆಚ್ಚಾಗಿದೆ. ಆನ್‌ಲೈನ್ ಮೂಲಕವೂ ವಾದ್ಯಗಳಿಗೆ ಬೇಡಿಕೆ ಬರುತ್ತಿದೆ' ಎಂದು ಅವರು ತಿಳಿಸಿದರು.

'ನಮ್ಮದು ವಾದ್ಯಗಳ ತಯಾರಿಕೆ ವೃತ್ತಿ ಆಗಿರುವುದರಿಂದ ಇದರ ಅರಿವು ನಮಗೆ ಅಗತ್ಯ. ಮಳಿಗೆ ಪ್ರಾರಂಭಿಸಿದ ನಮ್ಮ ಮುತ್ತಾತ, ತಾತ, ತಂದೆ ಹಾರ್ಮೋನಿಯಂ, ವೀಣೆ ನುಡಿಸುತ್ತಿದ್ದರು. ಈಗ ನಾನು, ನಮ್ಮ ಅಣ್ಣ ತಬಲ, ಗಿಟಾರ್ ಕಲಿತಿದ್ದೇವೆ. ನಮ್ಮ ಅಕ್ಕ ವೀಣೆ ನುಡಿಸುತ್ತಾರೆ' ಎಂದು ಕುಟುಂಬದ ಜೊತೆ ಸಂಗೀತ ಪರಂಪರೆ ಬೆಸೆದುಕೊಂಡಿರುವ ಬಗ್ಗೆ ವಿವರಿಸುತ್ತಾರೆ ಕಾರ್ತಿಕ್.

ಈಗ ಪಾಶ್ಚಾತ್ಯ ಸಂಗೀತ ವಾದ್ಯಗಳಿಗೆ ಬೇಡಿಕೆ ಹೆಚ್ಚಾಗಿದೆ. ಯುವಜನತೆ ಅತ್ತ ವಾಲುತ್ತಿದ್ದಾರೆ. ಆದರೆ ಹಳೆಯ ತಲೆಮಾರಿನವರು ಈಗಲೂ ಶಾಸ್ತ್ರೀಯ ಸಂಗೀತ ವಾದ್ಯಗಳನ್ನು ಖರೀದಿಸುತ್ತಾರೆ

ಕಾರ್ತಿಕ್, ಮಾಲೀಕ, ವೀಣಾ ಮ್ಯೂಸಿಕಲ್ಸ್

ಅಂಕಿ-ಅಂಶಗಳು

1,500	ಮಳಿಗೆಯಲ್ಲಿರುವ ವಾದ್ಯಗಳ ಸಂಖ್ಯೆ
₹15,000-₹65,000	ವೀಣೆಗಳ ದರ
₹2,500-₹1.50 ಲಕ್ಷ	ಗಿಟಾರ್‌ಗಳ ದರ
₹7,500-₹55,000	ಹಾರ್ಮೋನಿಯಂಗಳ ದರ
₹1.50 ಲಕ್ಷ-₹30 ಲಕ್ಷ	ಪಿಯಾನೊಗಳ ದರ

ಕೋವಿಡ್: ದೃಢ ಪ್ರಮಾಣ ಶೇ 2.95ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣ ಶೇ 2.95ಕ್ಕೆ ಇಳಿಕೆಯಾಗಿದೆ. 3,202 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯೂ ಇಳಿಕೆ ಕಂಡಿದೆ. ಒಂದು ದಿನದ ಅವಧಿಯಲ್ಲಿ 1.08 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿ, 23 ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿ ಇದೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 1,293 ಮಂದಿ ಸೋಂಕಿತರಾಗಿದ್ದಾರೆ. ಬೆಳಗಾವಿಯಲ್ಲಿ 250, ಮೈಸೂರಿನಲ್ಲಿ 197, ಶಿವಮೊಗ್ಗದಲ್ಲಿ 155, ತುಮಕೂರಿನಲ್ಲಿ 142 ಹಾಗೂ ಬಳ್ಳಾರಿಯಲ್ಲಿ 126 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.24 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 3,833 ಮಂದಿ ಸೇರಿದಂತೆ ರಾಜ್ಯದಲ್ಲಿ 8,988 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.45 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 38,747ಕ್ಕೆ ಇಳಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 38 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 10, ದಕ್ಷಿಣ ಕನ್ನಡದಲ್ಲಿ ನಾಲ್ಕು, ಹಾವೇರಿಯಲ್ಲಿ ಮೂರು, ಬಳ್ಳಾರಿ, ಬೀದರ್, ಧಾರವಾಡ, ಮೈಸೂರು, ರಾಯಚೂರು ಹಾಗೂ ತುಮಕೂರಿನಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 1.18ಕ್ಕೆ ಏರಿಕೆಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,613ಕ್ಕೆ ತಲುಪಿದೆ

ನಗರದ ಕೋವಿಡ್ ಅಂಕಿ-ಅಂಶ

17,69,809 ▲	ಒಟ್ಟು ಪ್ರಕರಣಗಳು
15,679 ▼	ಸಕ್ರಿಯ ಪ್ರಕರಣಗಳು
17,37,367 ▲	ಗುಣಮುಖರಾದವರು
16,762 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,293 ▼
ಗುಣಮುಖ	3,833 ▼
ಸಾವು	10 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ-ಅಂಶ

ಆಧಾರ: ವರ್ಲ್ಡೋಮೀಟರ್/ ಕೋವಿಡ್‌19 ಇಂಡಿಯಾ.ಆರ್ಗ್ (ಮೈಗೌ.ಇನ್/ ಕೋವಿಡ್‌19 ವರ್ಲ್ಡೋಮೀಟರ್)

	ವಿಶ್ವ	ಭಾರತ
ಒಟ್ಟು ಪ್ರಕರಣ	40.99 ಕೋಟಿ ▲	4.25 ಕೋಟಿ
ಸಕ್ರಿಯ ಪ್ರಕರಣ	7.38 ಕೋಟಿ ▼	6.10 ಲಕ್ಷ ▼
ಗುಣಮುಖ	33.02 ಕೋಟಿ ▲	4.14 ಕೋಟಿ ▲
ಸಾವು	58.24 ಲಕ್ಷ ▲	5.07 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	23.33 ಲಕ್ಷ ▼	50,407 ▼
ಗುಣಮುಖ	25.92 ಲಕ್ಷ ▲	1.36 ಲಕ್ಷ ▼
ಸಾವು	11,193 ▲	804 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	1.66 ಲಕ್ಷ ▲
ಜರ್ಮನಿ	2.29 ಲಕ್ಷ ▼
ಅಮೆರಿಕ	1.49 ಲಕ್ಷ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	2.86 ಕೋಟಿ
ಫ್ರಾನ್ಸ್	48.11 ಲಕ್ಷ ▼
ಜರ್ಮನಿ	33.27 ಲಕ್ಷ

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.43 ಲಕ್ಷ
ಕೇರಳ	61,626 ▲
ತಮಿಳುನಾಡು	37,887 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	78.35 ▲
ಕೇರಳ	63.81 ▲
ತಮಿಳುನಾಡು	34.31 ▲

ಭಾರತ ಕೋವಿಡ್ ಸಂಖ್ಯೆ ವಿವರ: ಶನಿವಾರ ಬೆಳಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ-ಅಂಶ

39,24,297 ▲	ಒಟ್ಟು ಸೋಂಕಿತರು (39,21,095 ನಿನ್ನೆಯ ವಿವರ)
38,747 ▼	ಸಕ್ರಿಯ ಪ್ರಕರಣಗಳು
38,45,903 ▲	ಗುಣಮುಖರಾದವರು
39,613 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	3,202 ▼
ಗುಣಮುಖ	8,988 ▼
ಸಾವು	38 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅದಮ್ಯ ಚೇತನದಿಂದ ಸಾವಿರ ಸಸಿ ನಾಟಿ

ಪ್ರಜಾವಾಣಿ ವಾರ್ತೆ

ಅದಮ್ಯ ಚೇತನ ಸಂಸ್ಥೆಯ ವತಿಯಿಂದ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಶನಿವಾರ ಗಿಡಗಳನ್ನು ನೆಡಲಾಯಿತು. ತೇಜಸ್ವಿನಿ, ವಿ.ನಾಗರಾಜ್, ಕೆ.ಆರ್.ವೇಣುಗೋಪಾಲ್ ಹಾಗೂ ಇತರರು ಇದ್ದಾರೆ

ಬೆಂಗಳೂರು: ಅದಮ್ಯ ಚೇತನ ಸಂಸ್ಥೆಯ ಹಸಿರು ಬೆಂಗಳೂರು ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಶನಿವಾರ ಸಾವಿರ ಗಿಡಗಳನ್ನು ನೆಡಲಾಯಿತು.

ದೇಶದ ಪ್ರಸಿದ್ಧ ಸಾಮ್ರಾಜ್ಯಗಳಾದ ಮೌರ್ಯರು, ಗುಪ್ತರು, ಬನವಾಸಿಯ ಕದಂಬರು, ವರ್ಧನರು, ಚಾಲುಕ್ಯರು, ರಾಷ್ಟ್ರಕೂಟರು, ಶಾತವಾಹನರು, ಪಾಂಡ್ಯರು, ಪಲ್ಲವರು, ಚೋಳರು, ಹೊಯ್ಸಳರು, ಗಂಗರು, ವಿಜಯನಗರ ಮತ್ತು ಮರಾಠರ ಸಾಮ್ರಾಜ್ಯದ ಹೆಸರುಗಳ ಸ್ವಯಂಸೇವಕರ ತಂಡಗಳನ್ನು ರಚಿಸಲಾಗಿತ್ತು. ಪ್ರತಿಯೊಂದು ತಂಡದ ಸ್ವಯಂಸೇವಕರೂ ಹಲಸು, ಬಟರ್ ಫ್ರೂಟ್, ನೇರಳೆ, ಸೀಬೆ, ಮಹಾಗನಿ, ಸೀತಾಫಲ ಗಿಡಗಳನ್ನು ನೆಟ್ಟರು.

ಎಂ.ಎಸ್ ರಾಮಯ್ಯ, ಆರ್.ವಿ ಕಾಲೇಜು, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯೂಥ್ ಫಾರ್ ಸೇವಾ ಹಾಗೂ ಯೂಥ್ ಫಾರ್ ಪರಿವರ್ತನ್ ಸಂಸ್ಥೆಗಳ ಕಾರ್ಯಕರ್ತರು, ಸಾರ್ವಜನಿಕರು ಸೇರಿದಂತೆ 750ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

'ಅದಮ್ಯ ಚೇತನ ಸಂಸ್ಥೆಯು ದಿವಂಗತ ಅನಂತಕುಮಾರ್ ಮಾರ್ಗದರ್ಶನದಲ್ಲಿ ಹಸಿರು ಭಾನುವಾರ ಕಾರ್ಯಕ್ರಮದಡಿ ಸಸಿಗಳನ್ನು ನೆಡುತ್ತಾ ಬಂದಿದೆ. ಇದುವರೆಗೆ 320 ದಿನ ಈ ಕಾರ್ಯಕ್ರಮ ನಡೆದಿದೆ. 2 ಲಕ್ಷಕ್ಕೂ ಅಧಿಕ ಗಿಡಗಳನ್ನು ನೆಟ್ಟು ಬೆಳೆಸಲಾಗಿದೆ' ಎಂದು ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ. ಆರ್.ವೇಣುಗೋಪಾಲ್, ಆರ್‌ಎಸ್‌ಎಸ್ ಮುಖಂಡ ವಿ. ನಾಗರಾಜ್, ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜಿನ ಪ್ರಾಂಶುಪಾಲ ಡಾ. ಮುರಳೀಧರ್, ವಿಭಾಗದ ಮುಖ್ಯಸ್ಥೆ ಡಾ. ಸುಜಾತಾ ಇದ್ದರು.

₹1.32 ಕೋಟಿ ವಿದ್ಯಾರ್ಥಿ ವೇತನ

ಪ್ರಜಾವಾಣಿ ವಾರ್ತೆ

ನಗರದಲ್ಲಿ ವಿದ್ಯಾರ್ಥಿನಿಯೊಬ್ಬರಿಗೆ ಬಝ್ಮೆ ನಿಸ್ವಾನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ಹುಸ್ನಾ ಶರೀಫ್ ಅವರು ವಿದ್ಯಾರ್ಥಿ ವೇತನ ವಿತರಿಸಿದರು. ಸಿಗ್ಮಾ ಫೌಂಡೇಷನ್ ಮುಖ್ಯಸ್ಥ ಅಮೀನ್ ಮುದಸ್ಸರ್, ಟ್ರಸ್ಟ್ ಜಂಟಿ ಕಾರ್ಯದರ್ಶಿ ಸಯ್ಯದಾ ರಹಮತ್ ಬಾನು, ಟ್ರಸ್ಟಿ ರ್‍ವೀನ್ ಸುಲ್ತಾನಾ ಇದ್ದರು

ಬೆಂಗಳೂರು: ಬಝ್ಮೆ ನಿಸ್ವಾನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 3,613 ಬಡ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಒಟ್ಟು ₹1.32 ಕೋಟಿ ವಿದ್ಯಾರ್ಥಿ ವೇತನ ವಿತರಿಸಲಾಗಿದೆ.

ಕೋವಿಡ್ ಕಾರಣಕ್ಕೆ ಸಂಸ್ಥೆಯು ಬಝ್ಮೆ ನಿಸ್ವಾನ್ ಆನ್‌ಲೈನ್ ಸಾಫ್ಟ್‌ವೇರ್ ಅಪ್ಲಿಕೇಶನ್ ಬಿಡುಗಡೆ ಮಾಡಿ, 2021ರ ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಿತ್ತು.

'ಒಟ್ಟು 4,505 ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲಾಗಿತ್ತು. 4,505 ಅರ್ಜಿಗಳ ಪೈಕಿ ವಿದ್ಯಾರ್ಥಿನಿಯರ ಶೈಕ್ಷಣಿಕ ದಾಖಲಾತಿಗಳು ಹಾಗೂ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ 3,613 ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಲಾಯಿತು. ಇವರಲ್ಲಿ ಪದವಿ ಪೂರ್ವ ಕಾಲೇಜುಗಳ 1,731 ವಿದ್ಯಾರ್ಥಿನಿಯರು, ಡಿಪ್ಲೊಮಾ ಕೋರ್ಸ್‌ನ 65 ವಿದ್ಯಾರ್ಥಿನಿಯರು, 1,722 ಮಂದಿ ಪದವಿ ವಿದ್ಯಾರ್ಥಿನಿಯರು ಹಾಗೂ 95 ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರಿದ್ದಾರೆ' ಎಂದು ಟ್ರಸ್ಟ್ ಅಧ್ಯಕ್ಷೆ ಹುಸ್ನಾ ಶರೀಫ್ ಮಾಹಿತಿ ನೀಡಿದ್ದಾರೆ.

'ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವ ಉದ್ದೇಶದಿಂದ 1971ರಲ್ಲಿ ಬೆಂಗಳೂರು ನಗರದಲ್ಲಿ ನೋಂದಣಿಯಾದ ನಮ್ಮ ಸಂಸ್ಥೆಯು ಈವರೆಗೆ 63 ಸಾವಿರಕ್ಕೂ ಹೆಚ್ಚು ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸಿದೆ. ಸಂಸ್ಥೆಯಿಂದ ವಿದ್ಯಾರ್ಥಿ ವೇತನ ಪಡೆದ ಹಲವು ಹೆಣ್ಣು ಮಕ್ಕಳು ಶಿಕ್ಷಕರು, ಪ್ರಾಧ್ಯಾಪಕರು, ವೈದ್ಯರು, ವಕೀಲರು, ಸರ್ಕಾರಿ ಅಧಿಕಾರಿಗಳು, ಉದ್ಯಮಿಗಳು, ಎಂಜಿನಿಯರ್‌ಗಳು, ಪತ್ರಕರ್ತರು, ನರ್ಸ್‌ಗಳು, ಅರೆ ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಅನೇಕ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ ಕಾನ್ಸುಲೇಟ್ ಕಚೇರಿ

ಮೆಲ್ಬರ್ನ್ (ಪಿಟಿಐ): ಬೆಂಗಳೂರಿನಲ್ಲಿ ಕಾನ್ಸುಲೇಟ್ ಜನರಲ್ ಕಚೇರಿ ಹಾಗೂ ಆಧುನಿಕ ತಂತ್ರಜ್ಞಾನದ ಶ್ರೇಷ್ಠತಾ ಕೇಂದ್ರವನ್ನು ಸ್ಥಾಪಿಸುವುದಾಗಿ ಆಸ್ಟ್ರೇಲಿಯಾ ತಿಳಿಸಿದೆ.

ವಿದೇಶಾಂಗ ವ್ಯವಹಾರ ಸಚಿವ ಎಸ್.ಜೈಶಂಕರ್ ಹಾಗೂ ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಮರೈಸ್ ಪೇನ್ ಅವರ ನಡುವೆ ಶನಿವಾರ ಇಲ್ಲಿ ನಡೆದ ದ್ವಿಪಕ್ಷೀಯ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ.

ಆಸ್ಟ್ರೇಲಿಯಾದ ಈ ನಿರ್ಧಾರ ಶಿಕ್ಷಣ, ಉದ್ಯೋಗ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಉಭಯ ದೇಶಗಳ ನಡುವಿನ ದೀರ್ಘಾವಧಿಯ ಸಹಕಾರ, ಬದ್ಧತೆಯನ್ನು ತೋರುತ್ತದೆ ಎಂಬುದಾಗಿ ಜೈಶಂಕರ್ ತಿಳಿಸಿದರು.

ಕೋವಿಡ್ ನಿರ್ಬಂಧಗಳನ್ನು ಸಡಿಲಿಸಿ ಆಸ್ಟ್ರೇಲಿಯಾ ಗಡಿಯನ್ನು ವಿದೇಶಿ ವಿದ್ಯಾರ್ಥಿಗಳಿಗೆ ಮುಕ್ತಗೊಳಿಸಿದ್ದನ್ನು ಸಹ ಸಚಿವರು ವಿಶೇಷವಾಗಿ ಉಲ್ಲೇಖಿಸಿ, ಕೃತಜ್ಞತೆ ಸಲ್ಲಿಸಿದರು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಇದೇ 14ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಬಾಪೂಜಿ ಬಡಾವಣೆ, ಕಾಮಾಕ್ಷಿಪಾಳ್ಯ, ಗಣಪತಿ ನಗರ, ರಂಗನಾಥ ಕಾಲೋನಿ, ಕೋಡಿಪಾಳ್ಯ, ಭವಾನಿನಗರ, ಅಪೂರ್ವ ಬಡಾವಣೆ, ಕೆಂಗೇರಿ ಮುಖ್ಯ ರಸ್ತೆ, ಭುವನೇಶ್ವರಿ ನಗರ, ಬಿಇಎಲ್ 1ನೇ ಮತ್ತು 2ನೇ ಹಂತ, ಗಾಂಧಿ ಪಾರ್ಕ್–1, ಭವಾನಿ ನಗರ ಸುತ್ತಮುತ್ತ ಪ್ರದೇಶಗಳು.

ನಗರದಲ್ಲಿ ಇಂದು

ಪೂರ್ಣಿಮಾ ಸುರೇಶ್ ಅವರ 'ಮಧ್ಯಮಾವತಿ' ಪುಸ್ತಕ ಬಿಡುಗಡೆ: ಎಂ.ಆರ್.ಕಮಲಾ, ಅಧ್ಯಕ್ಷತೆ–ಬಿ.ಆರ್. ಲಕ್ಷ್ಮಣರಾವ್, ಕೃತಿ ಪರಿಚಯ–ಗಿರೀಶ್ ರಾವ್ ಜೋಗಿ, ಆಯೋಜನೆ–ವಿಕಾಸ ಪ್ರಕಾಶನ, ಸ್ಥಳ–ಸಿ.ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಪೂರ್ಣಿಮಾ ಸುರೇಶ್

'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ: ಮಹೇಶ್ ಜೋಶಿ, ಎಚ್.ಬಿ.ತೋಂಟೇಶ್, ವಿ.ಜೆ. ಕೆ.ನಾಯರ್, ಪುರಸ್ಕೃತರು–ಚಂದ್ರಶೇಖರ ಕಂಬಾರ, ಉದ್ಘಾಟನೆ–ಮಂಜಮ್ಮ ಜೋಗತಿ, ಅಧ್ಯಕ್ಷತೆ–ಪದ್ಮಿನಿ ನಾಗರಾಜು, ಅತಿಥಿಗಳು–ಎಸ್.ಶ್ರೀನಾಥ್, ಸಂಗಣ್ಣ ಸಾಹುಕಾರ, ಬಿ.ಪ್ರಕಾಶ್, ಆಯೋಜನೆ–ಮೈಕೊ ಕನ್ನಡ ಬಳಗ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ಕುರುಬ ಸಮುದಾಯದ ವಧು–ವರರ ಸಮಾವೇಶ: ಉದ್ಘಾಟನೆ–ಡಿ.ವೆಂಕಟೇಶಮೂರ್ತಿ, ಅಧ್ಯಕ್ಷತೆ–ಎ.ಬಿ.ಸುಧಾಕರ್, ಆಯೋಜನೆ ಮತ್ತು ಸ್ಥಳ–ಕರ್ನಾಟಕ ಪ್ರದೇಶ ಕುರುಬರ ಸಂಘ, ಗಾಂಧಿನಗರ, ಬೆಳಿಗ್ಗೆ 9ರಿಂದ ಮಧ್ಯಾಹ್ನ 3

ಲತಾ ಮಂಗೇಶ್ಕರ್ ಅವರಿಗೆ ಶ್ರದ್ಧಾಂಜಲಿ: ಪುಷ್ಪನಮನ–ಸಿ.ಸೋಮಶೇಖರ್, ಆನೂರು ಅನಂತಕೃಷ್ಣ ಶರ್ಮ, 'ಮುಖ್ಯಮಂತ್ರಿ' ಚಂದ್ರು, ಹಂಸಲೇಖ, ನುಡಿನಮನ–ಸಂಗೀತ ಕಟ್ಟಿ ಕುಲಕರ್ಣಿ, ಮುದ್ದುಮೋಹನ್, ನಾಗಚಂದ್ರಿಕ ಭಟ್, ಎಂ.ಕೆ.ಭಾಸ್ಕರ್ ರಾವ್, ನಗರ ಶ್ರೀನಿವಾಸ್ ಉಡುಪ, ಬಿ.ವಿ.ರಾಜಾರಾಂ, ಕೆ.ವಿ.ನಾಗರಾಜಮೂರ್ತಿ, ಶಶಿಧರ್ ಭಾರಿಘಾಟ್, ಆಯೋಜನೆ–ನಾಟಕ ಬೆಂಗ್ಳೂರು, ಸ್ಥಳ–ಕಲಾಗ್ರಾಮ ಆವರಣ, ಮಲ್ಲತ್ತಹಳ್ಳಿ, ಸಂಜೆ 4

ವೈಕುಂಠನಾರಾಯಣ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ: ಬೆಳಿಗ್ಗೆ 8 ಗಂಟೆಗೆ ಮಹಾವಿಷ್ಣು ಹೋಮ, ಸಂಜೆ 6 ಗಂಟೆಗೆ ಕರ್ನಾಟಕ ಶಾಸ್ತ್ರೀಯ ಗಾಯನ–ಅಮೃತವರ್ಷಿಣಿ ಮತ್ತು ತಂಡ, ಸ್ಥಳ–ವೈಕುಂಠ ನಾರಾಯಣಸ್ವಾಮಿ ದೇವಸ್ಥಾನ, ನಾಗಪ್ಪ ಬಡಾವಣೆ, ಬಿಳೇಕಹಳ್ಳಿ, ಬಿ.ಜಿ.ರಸ್ತೆ

ಜಿ.ಎನ್.ತೇಜಸ್ವಿನಿ ಮತ್ತು ಜಿ.ಎನ್. ಯಶಸ್ವಿನಿ ಅವರಿಂದ 'ನರ್ತನ ನಟರಾಜ' ನೃತ್ಯ ಕಾರ್ಯಕ್ರಮ: ಅತಿಥಿ–ಸೀತಾ ಗುರುಪ್ರಸಾದ್, ಆಯೋಜನೆ–ಭರತಾಂಜಲಿ ನೃತ್ಯ ಶಾಲೆ, ಸ್ಥಳ–ಸೇವಾ ಸದನ, ಮಲ್ಲೇಶ್ವರ, ಸಂಜೆ 6.15



ನೂರಾರು ಕೋಟಿ ಹಗರಣ: ತನಿಖೆ ಆರಂಭಿಸಿದ ಭ್ರಷ್ಟಾಚಾರ ನಿಗ್ರಹ ದಳ

ಬಿಡಿಎ ಅಕ್ರಮ: ಐದು ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ನಡೆದಿರುವ ನೂರಾರು ಕೋಟಿ ಮೊತ್ತದ ಹಗರಣಗಳ ತನಿಖೆ ಆರಂಭಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಕೆಎಎಸ್ ಅಧಿಕಾರಿಗಳೂ ಸೇರಿದಂತೆ ಹಲವರ ವಿರುದ್ಧ ಗುರುವಾರ ಐದು ಎಫ್‌ಐಆರ್‌ಗಳನ್ನು ದಾಖಲಿಸಿದೆ.

2021ರ ನವೆಂಬರ್ 19ರಿಂದ 23ರವರೆಗೆ ಬಿಡಿಎ ಕೇಂದ್ರ ಕಚೇರಿ ಮತ್ತು ವಲಯ ಕಚೇರಿಗಳಲ್ಲಿ ಶೋಧ ನಡೆಸಿದ್ದ ಎಸಿಬಿ ಅಧಿಕಾರಿಗಳು, ನಿವೇಶನ ಹಂಚಿಕೆ, ಬದಲಿ ನಿವೇಶನ ಹಂಚಿಕೆ, ಭೂಸ್ವಾಧೀನ, ಪರಿಹಾರ ಪಾವತಿ, ಕ್ರಯಪತ್ರ ವಿತರಣೆ, ಸಗಟು ನಿವೇಶನ ಹಂಚಿಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಆರೋಪದ ಮೇಲೆ ನೂರಾರು ಕಡತಗಳನ್ನ ವಶಕ್ಕೆ ಪಡೆದಿದ್ದರು. 70ಕ್ಕೂ ಹೆಚ್ಚು ಅಧಿಕಾರಿಗಳು, ನೌಕರರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲು ಅವಕಾಶ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

ಕೆಲವು ಪ್ರಕರಣಗಳಲ್ಲಿ ತನಿಖೆಗೆ ಅನುಮತಿ ನೀಡಿ ನಗರಾಭಿವೃದ್ಧಿ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳು ಆದೇಶ ಹೊರಡಿಸಿವೆ. ಬಳಿಕ ತನಿಖಾ ಪ್ರಕ್ರಿಯೆ ಚುರುಕುಗೊಂಡಿದ್ದು, ಎಸಿಬಿ ಬೆಂಗಳೂರು ನಗರ ಘಟಕದ ಕಚೇರಿಯಲ್ಲಿ ಐದು ಎಫ್‌ಐಆರ್‌ಗಳನ್ನು ದಾಖಲು ಮಾಡಲಾಗಿದೆ.

ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ: ಲೋಕೋಪಯೋಗಿ ಇಲಾಖೆಯ ನಿವೃತ್ತ ಮುಖ್ಯ ಎಂಜಿನಿಯರ್ ಜಿ. ಗುರುಪ್ರಸಾದ್ ಅವರಿಗೆ 2000ನೇ ಸಾಲಿನಲ್ಲಿ ಜೆ.ಪಿ.ನಗರ ಒಂಬತ್ತನೇ ಹಂತದ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಅವರು ₹ 3.54 ಲಕ್ಷ ಪಾವತಿಸಿದ್ದರು. ಅದನ್ನು ರದ್ದು ಮಾಡಿ, ಬಳಿಕ ಎಚ್.ಎಸ್.ಆರ್. ಬಡಾವಣೆಯ ಆರನೇ ಸೆಕ್ಟರ್‌ನಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಫಲಾನುಭವಿಗೆ ತಿಳಿಸದೇ ಅದೇ ನಿವೇಶನವನ್ನು ಬೇರೊಬ್ಬರಿಗೆ ರವಿರಾಜ್ ಎಂಬುವವರಿಗೆ ₹2.90 ಲಕ್ಷಕ್ಕೆ ಹಂಚಿಕೆ ಮಾಡಲಾಗಿದೆ. ಆ ವ್ಯಕ್ತಿ ನಿವೇಶನವನ್ನು ₹ 1.5 ಕೋಟಿಗೆ ಮಾರಾಟ ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದೆ. ಈ ಪ್ರಕರಣದಲ್ಲಿ ಗುರುಪ್ರಸಾದ್ ನೀಡಿರುವ ದೂರನ್ನು ಆಧರಿಸಿ ಬಿಡಿಎ ಮೇಲ್ವಿಚಾರಕ ಡಿ. ಅಶ್ವತ್ಥನಾರಾಯಣ ರಾವ್ ಮತ್ತು ನಿವೃತ್ತ ಪ್ರಥಮ ದರ್ಜೆ ಸಹಾಯಕ ಎಸ್. ಮಂಜುನಾಥ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಮುಂಬೈನ ವರ್ಸೋವಾದಲ್ಲಿ ನೆಲೆಸಿರುವ ವರದಾಚಾರಿ ಎಂಬುವರಿಗೆ ಭೂಪಸಂದ್ರದಲ್ಲಿ ಹಂಚಿಕೆ ಮಾಡಿದ್ದ ನಿವೇಶನವನ್ನು ಅವರಿಗೆ ತಿಳಿಸದೇ ಪದ್ಮಾವತಮ್ಮ ಎಂಬುವವರಿಗೆ ಅಕ್ರಮವಾಗಿ ಮಂಜೂರು ಮಾಡಿರುವ ಆರೋಪದ ಮೇಲೆ ಬಿಡಿಎ ಉಪ ಕಾರ್ಯದರ್ಶಿ–4 ಹುದ್ದೆಯಲ್ಲಿದ್ದು, ನಿವೃತ್ತರಾಗಿರುವ ಮಂಜುಳಾ ಬಾಯಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ರಾಜಾಜಿನಗರ ಕೈಗಾರಿಕಾ ಬಡಾವಣೆಯಲ್ಲಿ ಹಂಚಿಕೆಯಾಗಿದ್ದ ನಿವೇಶನಗಳಿಗೆ ಬದಲಿಯಾಗಿ ಕೆಲವು ಪ್ರತಿಷ್ಠಿತ ಬಡಾವಣೆಗಳಲ್ಲಿ ನಿವೇಶನ ಹಂಚಿಕೆ ಮಾಡಿರುವ ಆರೋಪದ ಮೇಲೆ ಬಿಡಿಎ ಉಪ ಕಾರ್ಯದರ್ಶಿ–4 ಹುದ್ದೆಯಲ್ಲಿದ್ದ ಬಿ. ರಾಜು ವಿರುದ್ಧ ಎಫ್‌ಐಆರ್ ದಾಖಲು ಮಾಡಿ, ತನಿಖೆ ಆರಂಭಿಸಲಾಗಿದೆ.

ಸಗಟು ನಿವೇಶನ ಹಂಚಿಕೆ ಹಗರಣ: ಅರ್ಕಾವತಿ ಬಡಾವಣೆ ನಿರ್ಮಾಣಕ್ಕಾಗಿ ಕೆ.ಆರ್. ಪುರ ತಾಲ್ಲೂಕಿನ ಕೆ. ನಾರಾಯಣಪುರ ಗ್ರಾಮದಲ್ಲಿ ಸ್ವಾಧೀನ ಪಡಿಸಿಕೊಂಡಿದ್ದ ಜಮೀನಿನಲ್ಲಿ ಟ್ರಿನಿಟಿ ಫ್ಲ್ಯಾಟ್ ಓನರ್ಸ್ ಅಸೋಸಿಯೇಷನ್ ಮತ್ತು ವಿಲ್ಲೇಜ್ ಫ್ಲ್ಯಾಟ್ ಓನರ್ಸ್ ಅಸೋಸಿಯೇಷನ್ ಹೆಸರಿನಲ್ಲಿ ಅಕ್ರಮವಾಗಿ ಸಗಟು ನಿವೇಶನ ಹಂಚಿಕೆ ಮಾಡಿರುವ ಆರೋಪದ ಮೇಲೆ ಬಿಡಿಎ ಲೆಕ್ಕ ಪರಿಶೋಧಕಿ ಎಚ್.ಎಸ್. ಸುಜಾತಾ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಫ್ಲ್ಯಾಟ್ ಮಾಲೀಕರ ಸಂಘಗಳ ಹೆಸರಿನಲ್ಲಿ ಸಲ್ಲಿಕೆಯಾದ ಅರ್ಜಿಗಳ ಆಧಾರದಲ್ಲಿ ಅಕ್ರಮವಾಗಿ ಅನರ್ಹರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ. ಹಳೆಯ ದರದಲ್ಲೇ ನಿವೇಶನ ಮಂಜೂರು ಮಾಡಿ ಪ್ರಾಧಿಕಾರಕ್ಕೆ ನಷ್ಟ ಉಂಟುಮಾಡಲಾಗಿದೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಮಾಜಿ ಶಾಸಕರಿಗೆ ಕ್ರಯಪತ್ರ!

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಬಸವರಾಜ ನಾಯಕ್ ಅವರಿಗೆ ‘ಜಿ’ ಕೋಟಾದಲ್ಲಿ ಮಂಜೂರು ಮಾಡಿದ್ದ ನಿವೇಶನದ ಕುರಿತು ಹೈಕೋರ್ಟ್ ಆದೇಶಕ್ಕೆ ವಿರುದ್ಧವಾಗಿ ಕ್ರಯಪತ್ರ ಮಾಡಿಕೊಟ್ಟ ಆರೋಪದ ಮೇಲೆ ಬಿಡಿಎ ಮೇಲ್ವಿಚಾರಕ ಡಿ. ಅಶ್ವತ್ಥನಾರಾಯಣ ರಾವ್ ಮತ್ತು ನಿವೃತ್ತ ಪ್ರಥಮ ದರ್ಜೆ ಸಹಾಯಕ ಎಸ್. ಮಂಜುನಾಥ್ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಿಸಲಾಗಿದೆ.

ಕೆ.ಆರ್‌.ಪುರ ಬಳಿಯ ಭಟ್ಟರಹಳ್ಳಿ ಕೆರೆ ಸುತ್ತ ನೆಡಲಾದ ಸಸಿಗಳಿಗೆ ಸರ್ಕಾರಿ ಶಾಲೆ ವಿದ್ಯಾರ್ಥಿಗಳು ಶನಿವಾರ ನೀರು ಹಾಕಿದರು. ಬಾಲಾಜಿ ರಘೋತ್ತಮ ಇದ್ದಾರೆ

ಸಸಿ ನೆಟ್ಟ ವಿದ್ಯಾರ್ಥಿಗಳು

ಬೆಂಗಳೂರು: ಕೆ.ಆರ್.ಪುರದ ಭಟ್ಟರಹಳ್ಳಿ ಕೆರೆ ಸುತ್ತ ಪ್ರದೇಶದಲ್ಲಿ ಸರ್ಕಾರಿ ಶಾಲೆಯ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶನಿವಾರ ಸಸಿಗಳನ್ನು ನೆಟ್ಟರು. ಮನೆಯಿಂದಲೇ ನೀರು ತಂದು ಸಸಿಗಳಿಗೆ ಸುರಿದರು.

‘ಮನೆಯಿಂದ ನೀರು ತರುವ ಅಭಿಯಾನಕ್ಕೆ ಮಕ್ಕಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಕ್ಕಳಲ್ಲಿ ಪರಿಸರ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ಈ ಅಭಿಯಾನ ಕೈಗೊಳ್ಳಲಾಗಿದೆ. 2016ರಿಂದಲೂ ಇಂತಹ ಅಭಿಯಾನ ನಡೆಸುತ್ತಿದ್ದೇವೆ. ಎಲ್ಲ ವಯೋಮಾನದವರು ಬೆಂಬಲ ನೀಡುತ್ತಿದ್ದಾರೆ’ ಎಂದು ಕೆರೆ ಸಂರಕ್ಷಣಾ ಕಾರ್ಯಕರ್ತ ಬಾಲಾಜಿ ರಘೋತ್ತಮ ಬಾಲಿ ತಿಳಿಸಿದರು.

‘2017ರಲ್ಲಿ ಸೀಗೆಹಳ್ಳಿ ಕೆರೆ ಪ್ರದೇಶದಲ್ಲಿ 3,000 ಸಸಿಗಳು ಮತ್ತು ಕಳೆದ ವರ್ಷ ಬಸವನಪುರ ಕೆರೆಯಲ್ಲಿ 2,000 ಸಸಿಗಳನ್ನು ನೆಡಲಾಗಿತ್ತು. ಈ ವರ್ಷ 800 ಸಸಿಗಳನ್ನು ನೆಡಲಾಗಿದೆ. ಮಕ್ಕಳು 200ಕ್ಕೂ ಹೆಚ್ಚು ಸಸಿಗಳನ್ನು ದತ್ತು ತೆಗೆದುಕೊಂಡು ಪೋಷಿಸುತ್ತಿದ್ದಾರೆ’ ಎಂದರು.

₹200 ಕೋಟಿ ಮೌಲ್ಯದ ಗಾಂಜಾ ನಾಶ

ವಿಶಾಖಪಟ್ಟಣ: ₹200 ಕೋಟಿ ಮೌಲ್ಯದ 2 ಲಕ್ಷ ಕೆ.ಜಿ ಗಾಂಜಾವನ್ನು ನಾಶಪಡಿಸಲಾಗಿದೆ ಎಂದು ಆಂಧ್ರಪ್ರದೇಶ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಕಳೆದ ಕೆಲವೊಂದು ವರ್ಷಗಳಿಂದ ರಾಜ್ಯದ ಕರಾವಳಿ ಜಿಲ್ಲೆಗಳಿಂದ ಈ ಮಾದಕದ್ರವ್ಯವನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ಹೇಳಿದ್ದಾರೆ.

‘ಒಡಿಶಾದ 23 ಜಿಲ್ಲೆಗಳು ಮತ್ತು ವಿಶಾಖಪಟ್ಟಣ ಜಿಲ್ಲೆಯ 11 ಮಂಡಲಗಳಲ್ಲಿ ಮಾವೋವಾದಿಗಳು ಗಾಂಜಾ ಕೃಷಿಯನ್ನು ಪ್ರೋತ್ಸಾಹಿಸುತ್ತಿದ್ದಾರೆ’ ಎಂದು ಪೊಲೀಸ್ ಮಹಾನಿರ್ದೇಶಕ ಗೌತಮ್ ಸವಾಂಗ್ ಹೇಳಿದ್ದಾರೆ.

‘ಪರಿವರ್ತನ’ ಕಾರ್ಯಾಚರಣೆಯ ಭಾಗವಾಗಿ 406 ವಿಶೇಷ ಪೊಲೀಸರ ತಂಡವು 313 ಗ್ರಾಮಗಳ 11 ಮಂಡಲಗಳಲ್ಲಿ ಬೆಳೆಸಲಾಗಿದ್ದ ಗಾಂಜಾ ಗಿಡಗಳನ್ನು ನಾಶಪಡಿಸಿದೆ. ಗಾಂಜಾ ಬೆಳೆದ ಆರೋಪದಡಿ ಈವರೆಗೆ 1,500 ಮಂದಿಯನ್ನು ಬಂಧಿಸಲಾಗಿದೆ ಮತ್ತು 577 ಪ್ರಕರಣಗಳನ್ನು ದಾಖಲಿಸಲಾಗಿದೆ. ಗಾಂಜಾ ಅಕ್ರಮ ಸಾಗಣೆಯಲ್ಲಿ ತೊಡಗಿದ್ದ 314 ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Anjanapura

✓ AVAILABLE WANTED Anjanapura Banashankari 6th Stage Kempegowda Layout JP Nagar 9th 8th Phase Visveswaraiah Immediate Settlement: 7259015156

Banashankari

WANTED BDA BBMP Sites 20x30,30x40, 40x60 Banashankari, Anjanapura, Vishweshwarya, Arkavathi, J.P.Nagar, Kempegowda Layout Contact: 9886673794

BDA SITES Wanted Arkavathy, Anjanapura Banashnkari 6th Stage, Vishweshwaraiah Kempegowda, Any BDA Layout,Contact: 9845062822, 8660751654

Multiple Locations

BDA SITES WANTED Arkavathi, Anjanapura, Banashankari 6th Stage, Vishweswaraiah, Kempegowda, any BDA Layout. Contact: SAPTHAGIRI Property Consultant:: 9900268073, 9448068073.

Vishweshwariah Layout

WANTED BDA Site- Vishveshwaraiah Layout, Kempegowda Layout, Arunachalam Layout Housing Board. Owners only Contact: 98444-14188

WANTED BDA Site Anjanapura, Banashankari 6th Stage, Vishweshwaraiah layout & Mysore MUDA Site, any BDA Katha or MUDA Katha, Immediate settlement. Genuine Sellers Contact: 9902038118

AVAILABLE/ WANTED, BDA Sites in Vishweshwaraiah Layout, Kempegowda Layout, 20x30, 30x40, 40x60, 50x80 Contact: Genuine Buyers/ Sellers For Immediate Settlement: 8892901567/ 9341733480.

BUILDERS ESSENTIAL

Building Contractors

KANTHI CONSTRUCTIONS WE CONSTRUCT YOUR DREAM HOUSE. FREE:- SUMP, OVERHEADTANK. 1700/- PER SQFT: 9880785589/ 9066487178

Water Proofing Materials

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

DH Deccan Herald ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

JOB OPPORTUNITIES

Teachers/ Professors

ACHIEVE SCHOOL OF EDUCATION- 52, K.R. Road, Basavanagudi, Bangalore-04. Requires Experienced TEACHERS (3- 5 years) for Pre School & Primary School- EVS, English & Hindi. Phone: 9164222288. Email to: info@asoe.in

POORNAPRAJNA EDUCATION CENTRE, INDIRANAGAR
(Promoted & Managed by Udupi Sri Admar Mutt Education Council)
CA Site No.48, New Thippasandra, HAL 3rd Stage, B'lore -75. Ph.080-25292930
Invites applications from Experienced & Qualified Teachers for the following posts
HIGH SCHOOL SECTION
KANNADA: M.A (Kannada) B.Ed with 5+yrs teaching experience in High school
PRIMARY SCHOOL SECTION
HEADMISTRESS: BA /B.Sc.,B.Ed with 10+yrs teaching experience in Primary School or 5+ yrs experience in High school
ENGLISH, KANNADA, SANSKRIT, MATHS CUM SCIENCE TEACHERS: Graduate in the relevant subjects with B.Ed and 3+yrs teaching experience in Pry School
SPECIAL DEPARTMENT
DRAWING & FINE ARTS: BFA with 3+yrs teaching experience
COMPUTER: Bachelor/ Master of Computer Applications with 3+ yrs teaching experience
SUPW: Degree with expert in Craft, Glass painting, Tailoring, Embroidery, Cookery, etc with 2+yrs teaching experience
MUSIC (Part Time): Junior grade in Carnatic Music with expert in Sugama Sangeetha & 2 yrs teaching experience
*Computer literacy is mandatory for all the posts
Apply to the Hon. Secretary on or before 21-02-2022

REGIONAL COLLEGE OF MANAGEMENT, BANGALORE RATED A+++
Approved by AICTE, Affiliated to Bengaluru North University (BNU)
RECRUITMENTS
Invites applications for Eligible candidates for the post of
Professors, Associate Professor, Assistant Professor & Admission coordinator.
(Preferably in the area of Accounting, finance, HR, sales & marketing)
Eligibility: As per UGC Norms
Pay Scale: Higher compensation is considered for deserving candidates
Course Offered MBA, PGDM, BBA, B.Com
Send applications to email id director@rcmb.in
Website: https://www.rcmb.in/ Whatsup: 9538902136

MATHS HIGH SCHOOL TEACHERS REQUIRED FOR STATE BOARD SCHOOL IN YELACHENAHALLI. WHATSAPP CV to 9980944566

NEW CAMBRIDGE INTERNATIONAL PUBLIC SCHOOL
CA Site No: 6 (P), WOC Road, II Stage, Mahalakshmipuram, Bangalore -560086.
Contact: 9886006459 / 9845087439 / 8660136247
E-mail: info@ncips.in
REQUIRED TEACHERS
Vice Principal post with subject expertise English & Social.
And Teachers (Bsc / BA, B.Ed) with minimum 5 years Exp handling CBSE board in English and Social.
Sanskrit Teacher (BA/MA, B.Ed) for Class 5 to 8

WANTED QUALIFIED and TRAINED TEACHERS TO TEACH HIGH SCHOOL HIGHER PRIMARY AND PRIMARY CLASSES FOR ALL THE SUBJECTS with good fluency in English. Freshers can also apply, preferably Ladies. Immediately contact Secretary, SRI VINAYAKA VIDYA KENDRA, Thindlu Main road, Kodigehalli, SahakarnagarPost, Bangalore-560092. Phone:9880357297/ 08041698983

REPUTED CBSE affiliated SCHOOL Imparting Quality Education in JP_Nagar for 40 Years REQUIRES VICE PRINCIPAL with Post_graduation Degree With Minimum Experience of 3 Years WhatsApp CV: 9008744856

ST SOPHIA Convent School (CBSE) Nagarabhavi requires trained experienced Female Nursery teachers, Academic Coordinators and Teachers for the academic year 2022-23 to teach Mathematics, Science, Social science, English, and Hindi for primary and High school. Walk-in interview scheduled on Saturday 19th February 2022 principal@stsophiaconvent.org 9243031872

WIDIA POORNA PRAJNA SCHOOL
A Poornaprajna Education Centre®
(Promoted and Managed by Udupi Sri Admar Mutt Education Council)
14th KM, Tumkur Road, Bengaluru-560 073
Contact : 080 68956148 / 9620219331
REQUIRES
1. HEADMISTRESS - for Nursery / Kindergarten
B.A / B.Sc with Nursery Training
Minimum experience as Headmistress 3 years / Nursery teacher 10 years
2. SOCIAL SCIENCE - for Primary Classes
B.A, B.Ed. with Minimum 5 years experience in Primary School
Eligible candidates can send resume with relevant certificates to The Secretary at the above address on or before 23rd February 2022.

NEW MILLENNIUM SCHOOL (ICSE)
Invites applications from qualified teachers to teach
Mathematics and English in Middle and High School, Football Coach and a Lady P E Teacher.
Apply in writing enclosing copies of relevant certificates, testimonials and a recent photograph to:
The Founder Secretary New Millennium School Hormavu, Agara Bangalore - 560 043.
Ph. 7349415287 / 7349415308

EXPERIENCED ACCOUNTS and ADMINISTRATIVE OFFICER (AAO) needed by 45-year old Engineering Company in Fraser Town. Should be familiar with Accounts, Tally, Computer operation, dealing with Auditor, Bank and other Agencies such as Income Tax, Professional Tax, Periodical returns, Shop and Establishment Dept, Sales Tax. Age 40 to 45 years. Salary Rs.18000 to 22000 pm. Apply with full details to-spmnirvana@gmail.com

Multiple Vacancy

REQUIRED, TEAMLEADER, Telecaller, Backend & Field executive For Banking Loan collection (salary upto 20,000- 25,000). Direct recruitment to company Contact: 9620206756, 9620200756.

Engg/ Production Technical

REQUIRED EXPERIENCED ITI candidates for Property Maintenance in Bengaluru - Supervisors - (Electrical / A.C); Technicians - (Electrical / A.C). Apply with details to hr@mfar.com T: +91 80 41217471

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Senior/Junior Marketing Officers	Matriculates. 1+ years experience in field sales of consumer goods. Fluency in Kannada and English
Production Supervisor	2+ years experience in a production unit, preferably a paper/book industry
Proofreader	Excellent language reading skills in Kannada and English
Office Staff	Computer knowledge, including Microsoft Word, Excel

Please email details (including resume with your work experience and expected salary) to bangalorepressjobs@gmail.com

Accounts & Finance

WANTED GRADUATE ACCOUNTANT to handle Companies & Individual Accounts independently including GST with an experience of 10 to 15 years for a reputed Construction Company Mail resume to: enquiries@farahgroup.in

WANTED FEMALE Accountant for a manufacturing company with good experience in Tally, Sales Tax and GST Contact: 9740679740 Email: info@revanthfoods.com

WANTED ACCOUNTS Assistant and Supervisor for HBR layout, Contact: 9972214845

REQUIRED EXPERIENCED 01). Auto CADD operator, 02). Female Administrative Cum Secretary. Good Salary, Guidline Surveying Consultants, 272, 14th Cross, Domlur Layout, Bangalore-71, PH: 25353877, 25357205. guidelinesurveys@gmail.com

WANTED VMC OPERATORS and FITTERS, experience or freshers Age below 35years. 'MAP SYSTEM INDIA PVT LTD' Peenya 3rd phase, Bangalore-58 Ph: 8310411192, 080-42111161.

FRESHER'S/ EXPERIENCE in Valuation Field, BE Civil/ Diploma for Property Valuation in Bangalore. 7259810579, pavanak.1970@gmail.com

Drivers

WANTED DRIVER for MERCEDEZ, reputed company in Rajarajeshwarinagar. Minimum 10 years experience Contact: 7337844260

Factory

AN BAKERY and kitchen equipment manufacturing company seeking Sales Manager minimum 8 to 10 Years working experience and sale executives with 3-4 Years experience, send your resume at arkamachineries@gmail.com, phone: 9686198499.

General

WALK-IN INTERVIEW (1)HR/ADMIN Male/ Female Experience: 10-15years Salary: 30,000/- (2)Marketing Executives Petroleum Products Experience: 5-10years Salary: 30,000/- Free Family Accommodation Call:7338084555 9742245241, 9845053636, glprojects7889@gmail.com

REQUIRED
We are Hiring Office Assistant with knowledge of Tally and 2-3 Years of Experience. Salary from 12k to 15k. Male / Female can apply. Contact A.R. Swamy : 98440 99258.
Contact Send Resume to E-Mail : cpcbooksindia@gmail.com or WhatsApp : +91 98440 99258 +91 63637 47668
Cambridge Publishing Co. Pvt. Ltd. www.cpcbooksindia.com

A GOOD company in Bangalore requires:1.MALE TECHNICIAN-B.Sc.,/I.T.I Electronics. Travel mandatory.2.SALES EXECUTIVE - Male M.Sc.,/ D.E.E. Travel mandatory.3.COMMERCIAL DOCUMENTATION STAFF- female with any degree.4. A Male with B.Com/ M.Com. Knowledge of Tally and accounting essential.Communication and computer skills essential for all the above.Apply:accounts@siskin.in

CLINICAL SALES Associates For leading Laboratory Device Co. M/F ..UG/G/PG with good communication. Call: 9833024719

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Hospital & Medical Jobs

DOCTORS WANTED
Physician / Anaesthetist / Intensivist / Gynaecologist & Duty Doctor to
SBS Hospital Pvt Ltd
NABH Accredited Hospital
HOSUR - Tamil Nadu
Salary : Negotiable
Contact No: 97894 00314

Part-Time Jobs

WORK FROM Home, Earn 30- 50K per month. Age:32+, PUC and above. Malleshwaram. 7899493370

Self Employment

START YOUR Career with Student & any Working Person, Leading Bank, VRS, Retired Bankers: 7892382907

MATRIMONIAL

Brides Wanted

Brahmin

HANDSOME BRAHMIN 40, 5'8' M.Tech industrialist seeks any professionals. Contact Ushodhaya 9611919477

English

NAIR BOY 32 yrs MNC employed looking for suitable Bride from Nair Menon Nambiar family Bangalore settled contact 9448704438 sudhasnair33@gmail.com

HANDSOME PUNJABI 33yr 6' 40L+ seeks alliance from tall educated girl of reputed families: bride480@gmail.com

Grooms Wanted

Brahmin

BEAUTIFUL BRAHMIN 28 MBA well-settled seeks any professional Bangalore based groom. Contact Ushodhaya 9611919477

Second Marriage

BEAUTIFUL HINDU Caste no bar 30, 5'7', MBBS MD rich, only daughter seeks any professionals. Contact Ushoshaya 9611919477

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಧು-ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

WEEKEND CORNER

Congratulations
Stanley Deepak. N
Grand son of Late Mr.David Jambiah S/o Late Mr. Natarajan & Dr.Shashikala Natarajan (DJS)Awarded the Global Top 50 Business Growth Leader in the field of IT Sales, Marketing & OperationsThe award presented at BizzTalk World Conference held on 7th & 8th Feb 2022 organized by CAC media & events Canada recognising business growth leaders globally.

Wishing him all the best and god's richest blessings always From family and friends

AUTOMOTIVE

Four Wheelers Selling

Honda

QUOTATIONS REQUIRED for with & without RC KA01 MB5285/ Honda city GXI/ 2006/ Accident vehicle, Contact: 9818352154/ 9844080129

2 / 3 Wheelers Selling

Mopeds

FIRE DAMAGED Two wheeler Honda Activa-3G. KA-53 EK-3733 for sale as on condition without R.C. Please contact- 9845002975 within 5-Days.

BUSINESS

Business to Business

Construction And Maintenance

KGN BUILDERS Construct your DREAM HOME Just Rs.1,650/- Psqft (Ground+2) Fully Furnished 9886677711

Business Offers

Dealers And Stockists

ELECTRIC Moped dealers wanted through out Karnataka. 6-8 lakhs of investment with a showroom area of 250- 400 sqft. Contact 9379794873/ 9740449955 /sales@urbanelectrek.com

Finance

MAHAVEER FINANCE Loan Avail @ 3.5% per Annum Personal, Business, Housing Project takeover all types loan in 5 days. Call & whatsApp ::8826494700.

WANTED BUSINESS Partner Non Veg Hotel 10 Lakhs Investment Monthly Income 2.5 Lakhs: 9606701007/ 8892501007

FINANCE AGAINST Land & Building Properties Industries Schools Hospitals Projects& NRI Funds 7358729820

Business For Sale

BUSINESS FOR Sale- Lucrative Business since 2007, dealing in Industrial Products in Mysuru. Contact: 9880819977

PERSONAL

Change of Name

I, BHAGYALAKSHMI, Spouse of NO 6901410-K Rank Ex-Havildar, Name Devanath Kumar, 195, 5th Cross, Sriranganagar, Near Veerabhadra Nagar, BSK 3rd Stage Bangalore-85 have changed my name from BHAGYALAKSHMI to BHAGYALAKSHAMMA vide affidavit dated:24/01/2022 before B.K.R Krishnamurthy Govt of India Notary Reg No 1351, City Court Complex, Bangalore-09

I, NAVEENAKUMARA A.G. S/o. Gangabhoraiah, aged about 31years, residing at Shivani Main Road, Antaragange, Shimoga, Karnataka-577245 have changed my name to NAVEEN KUMAR A.G. vide affidavit dated 12.02.2022 before Notary B.M. Chandrashekar, Bangalore. Henceforth I shall becalled as NAVEEN KUMAR A.G. only.

I, FARZANA Begum Amanulla W/o Amanulla, aged about 43 years, residing at Tayalur Village and Hobli, Mulbagal Taluk, Kolar District. Have changed my name to FARZANA BEGUM vide affidavit dated 07.02.2022 before Notary N.Krishnaveni, Mulbagal. Henceforth I shall be called as FARZANA BEGUM only.

I, SHAKSHI SHAH, R/at No. 75/3, Nanki Nivas, Serpentine Road, Opp State Bank of Mysore, Kumarapark West, Seshadripuram, Bangalore-560020, have changed my name as SHAKSHI DHARMIL SHAH vide affidavit dated 11/02/2022 before notary V. Rajashekhara, Bangalore.

I, MOHAMMED ISMAIL HAIDER ALI, R/@10/38, 2nd Main, Behind Maruthi Layout, BTM Layout, 1st Stage, Bangalore-29. Have changed My Name to MOHAMMED ISMAIL vide affidavit Dated:12/02/2022 before notary H.S.Dharma Prasad Bengaluru.

MORE Classifieds IN SUPPLEMENT

ಉದ್ಯಮಿ ರಾಹುಲ್ ಬಜಾಜ್ ನಿಧನ



ಮುಂಬೈ: ದೇಶದ ಯಶಸ್ವಿ ಉದ್ಯಮಿಗಳಲ್ಲಿ ಒಬ್ಬರಾಗಿರುವ ಹಾಗೂ ಬಜಾಜ್ ಸಮೂಹದ ಮಾಜಿ ಅಧ್ಯಕ್ಷ ರಾಹುಲ್ ಬಜಾಜ್ (83) ಅವರು ಅನಾರೋಗ್ಯದಿಂದಾಗಿ ಶನಿವಾರ ನಿಧನರಾಗಿದ್ದಾರೆ.

ಪುಣೆಯ ರೂಬಿ ಹಾಲ್ ಕ್ಲಿನಿಕ್ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಶನಿವಾರ ಮಧ್ಯಾಹ್ನ 2.30ರ ವೇಳೆಗೆ ಅವರು ನಿಧನರಾದರು. ಅವರ ಅಂತ್ಯ ಸಂಸ್ಕಾರವು ಪುಣೆಯಲ್ಲಿ ಭಾನುವಾರ ನಡೆಯಲಿದೆ ಎಂದು ಬಜಾಜ್ ಗ್ರೂಪ್ ಪ್ರಕಟಣೆಯಲ್ಲಿ ತಿಳಿಸಿದೆ. ಅವರಿಗೆ ಪುತ್ರರಾದ ರಾಜೀವ್ ಮತ್ತು ಸಂಜೀವ್ ಹಾಗೂ ಪುತ್ರಿ ಸುನೈನಾ ಇದ್ದಾರೆ.

1965ರಲ್ಲಿ ಬಜಾಜ್ ಸಮೂಹದ ಅಧಿಕಾರ ವಹಿಸಿಕೊಂಡ ಬಳಿಕ ಕಂಪನಿಯನ್ನು ಬೆಳವಣಿಗೆಯ ಹಾದಿಗೆ ಕೊಂಡೊಯ್ದರು. ಬಜಾಜ್ ಆಟೊ ಕಂಪನಿಯ ಅಧ್ಯಕ್ಷ ಸ್ಥಾನಕ್ಕೆ ಕಳೆದ ಏ. 30ರಂದು ಅವರು ರಾಜೀನಾಮೆ ನೀಡಿದ್ದರು. ಭಾರತೀಯ ಕೈಗಾರಿಕಾ ಮಹಾಸಂಘ, ಭಾರತೀಯ ವಾಹನ ತಯಾರಕರ ಒಕ್ಕೂಟ ಹಾಗೂ ಇಂಡಿಯನ್ ಏರ್‌ಲೈನ್ಸ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಉದ್ಯಮ ಕ್ಷೇತ್ರದ ಸಾಧನೆಗಾಗಿ ಅವರಿಗೆ ಪದ್ಮ ಭೂಷಣ ಗೌರವವೂ ದೊರೆತಿದೆ.

ಆರ್‌.ಆರ್‌. ನಗರದಲ್ಲಿ ₹ 118.26 ಕೋಟಿ ಅಕ್ರಮ

‘ಅಕ್ರಮ’ಗಳೆಲ್ಲ ಸಕ್ರಮವೆಂದ ಕೆಆರ್‌ಐಡಿಎಲ್‌!

• ರಾಜೇಶ್ ರೈ ಚಟ್ಲ

ಆರ್‌. ಆರ್‌. ನಗರ ಮೊಗೆದಷ್ಟು ಅಕ್ರಮ

ಬೆಂಗಳೂರು: ರಾಜರಾಜೇಶ್ವರಿನಗರ (ಆರ್‌.ಆರ್‌. ನಗರ) ವಿಧಾನಸಭಾ ಕ್ಷೇತ್ರದಲ್ಲಿ ಅನುಷ್ಠಾನಗೊಳ್ಳದ ಕಾಮಗಾರಿಗೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಬಿಬಿಎಂಪಿ ₹ 118.26 ಕೋಟಿ ಬಿಡುಗಡೆ ಮಾಡಿ ಅಕ್ರಮ ಎಸಗಿದ ಪ್ರಕರಣವನ್ನು ಲೋಕಾಯುಕ್ತ ತಾಂತ್ರಿಕ ಲೆಕ್ಕಪರಿಶೋಧನಾ ಕೋಶ ಬಿಚ್ಚಿಟ್ಟಿದ್ದರೂ, ‘ಯಾವುದೇ ಅಕ್ರಮ ನಡೆದಿಲ್ಲ. ಹಣ ದುರ್ಬಳಕೆ ಆಗಿಲ್ಲ’ ಎಂದು ಕೆಐಆರ್‌ಡಿಎಲ್ ಸಮರ್ಥಿಸಿಕೊಂಡಿದೆ!

ದೂರು ಸಲ್ಲಿಕೆಯಾಗಿರುವ ಒಟ್ಟು 126 ಕಾಮಗಾರಿಗಳಲ್ಲಿ 11 ಕಾಮಗಾರಿಗಳು ಪುನರಾವರ್ತನೆ ಆಗಿವೆ. ಒಂದು ಕಾಮಗಾರಿಯ ಗುತ್ತಿಗೆಯನ್ನು ಕೆಆರ್‌ಐಡಿಎಲ್‌ಗೆ ವಹಿಸಿಲ್ಲ. ಇನ್ನೊಂದು ಕಾಮಗಾರಿಯಲ್ಲಿ ಜಾಬ್ ಕೋಡ್ ಸರಿಯಾಗಿ ಉಲ್ಲೇಖಿಸಿಲ್ಲ. ಉಳಿದ 113 ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಮತ್ತು ಕೆಆರ್‌ಐಡಿಎಲ್ ಮಧ್ಯೆ ಒಪ್ಪಂದ ಆಗಿತ್ತು. ಅಷ್ಟೂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಲೋಕಾಯುಕ್ತಕ್ಕೆ ಕೆಆರ್‌ಐಡಿಎಲ್‌ನ ಸೂಪರಿಟೆಂಡಿಂಗ್ ಎಂಜಿನಿಯರ್ (ಎಸ್‌ಇ) ವಿವರಣೆ ನೀಡಿದ್ದಾರೆ.

‘ಬಿಬಿಎಂಪಿ ಕಾರ್ಯಾದೇಶ ಮತ್ತು ಕರಾರು ಪತ್ರದಂತೆ 28 ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಆದರೆ, ಈ ಕಾಮಗಾರಿಗಳ ಅನುದಾನವನ್ನು ಬಿಬಿಎಂಪಿ ಬಿಡುಗಡೆ ಮಾಡಿಲ್ಲ. ಬಿಬಿಎಂಪಿ ಆಯುಕ್ತರು 2020ರ ಜುಲೈ 7ರಂದು ಪತ್ರ ಬರೆದು, ತಾಂತ್ರಿಕ ಮತ್ತು ಜಾಗೃತ ಕೋಶದಿಂದ ವರದಿ ಪಡೆದ ಬಳಿಕ ಬಿಲ್ ಪಾವತಿಗೆ ಸೂಚಿಸಿದ್ದರು. ಈ ಕಾರಣಕ್ಕೆ ಐದು ಕಾಮಗಾರಿಗಳಿಗೆ ಬಿಬಿಎಂಪಿ ವತಿಯಿಂದ ಕೆಆರ್‌ಐಡಿಎಲ್‌ಗೆ ಅನುದಾನ ಬಿಡುಗಡೆ ಆಗಿದ್ದರೂ ಗುತ್ತಿಗೆದಾರರಿಗೆ ಬಿಲ್ ಪಾವತಿಸಿಲ್ಲ. 80 ಕಾಮಗಾರಿಗಳಿಗೆ ಮಾತ್ರ ಬಿಲ್ ಪಾವತಿ ಆಗಿದೆ’ ಎಂದೂ ಕೆಆರ್‌ಐಡಿಎಲ್‌ನ ಎಸ್‌ಇ ನೀಡಿರುವ ಮಾಹಿತಿ ಲೋಕಾಯುಕ್ತ ವರದಿಯಲ್ಲಿದೆ.

‘ಈ 80 ಕಾಮಗಾರಿಗಳ ಅಂದಾಜು ಮೊತ್ತ ₹ 154.97 ಕೋಟಿ. ಅದರಲ್ಲಿ ₹ 6.98 ಕೋಟಿಯನ್ನು ಎಫ್‌ಎಸ್‌ಡಿ (ಭದ್ರತಾ ಠೇವಣಿ) ಎಂದು ಬಿಬಿಎಂಪಿ ಕಡಿತ ಮಾಡಿದೆ. ಉಳಿದ ₹ 133.95 ಕೋಟಿಯನ್ನು ಕೆಆರ್‌ಐಡಿಎಲ್‌ಗೆ ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಗುಂಪಿನ ನಾಯಕರಿಗೆ ಪಾವತಿಸಲಾಗಿದೆ. ಆದರೆ, ಈ 88 ಕಾಮಗಾರಿಗಳಲ್ಲಿ ಮೂರು ಕಾಮಗಾರಿಗಳಿಗೆ ಬಿಬಿಎಂಪಿ ಸಂಪೂರ್ಣ ಹಣ ಪಾವತಿಸಿದೆ. ಉಳಿದ 77 ಕಾಮಗಾರಿಗಳಿಗೆ ಕೆಐಆರ್‌ಡಿಎಲ್ ಕಾರ್ಯಪಾಲಕ ಎಂಜಿನಿಯರ್ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ ಪತ್ರದಂತೆ ಬಿಬಿಎಂಪಿಯು ಮೊದಲ ಬಿಲ್ ಮತ್ತು ನಂತರದ ಬಿಲ್‌ಗಳ ಭಾಗಶಃ ಮೊತ್ತವನ್ನು ಮಾತ್ರ ಪಾವತಿಸಿದೆ. ಯಾವುದೇ ಕಾಮಗಾರಿಗಳಲ್ಲಿ ಹಣ ದುರ್ಬಳಕೆ ಆಗಿಲ್ಲ’ ಎಂದೂ ಅವರು ಸಮರ್ಥಿಸಿಕೊಂಡಿರುವ ಅಂಶವೂ ವರದಿಯಲ್ಲಿದೆ.

ಆದರೆ, ದೂರಿನಲ್ಲಿ ಉಲ್ಲೇಖಿಸಿರುವ 126 ಕಾಮಗಾರಿಗಳ ಪೈಕಿ, 10 ಕಾಮಗಾರಿಗಳು ಪುನರಾವರ್ತನೆಯಾಗಿವೆ. ಹೀಗಾಗಿ, 116 ಕಾಮಗಾರಿಗಳಿಗೆ ಸಂಬಂಧಿಸಿ ಕಡತಗಳನ್ನು ರಾಜರಾಜೇಶ್ವರಿ ನಗರ ವಾರ್ಡ್‌ನ ಬಿಬಿಎಂಪಿ ಅಧಿಕಾರಿಗಳು ಲೋಕಾಯುಕ್ತಕ್ಕೆ ನೀಡಿದ್ದರು.

‘ಕಾಮಗಾರಿಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ತಟಸ್ಥ ಸಂಸ್ಥೆಯಿಂದ (ಸಿವಿಲ್ ಸ್ಕ್ವೇರ್ ಕನ್ಸಲ್ಟಂಟ್ಸ್) ವರದಿ ಪಡೆಯಲಾಗಿದೆ. ಎಲ್ಲ ಬಿಲ್‌ಗಳನ್ನು ಬಿಬಿಎಂಪಿಯ ಲೆಕ್ಕಪರಿಶೋಧನಾ ವಿಭಾಗ ಪರಿಶೀಲನೆ ನಡೆಸಿದೆ. ಸಹಾಯಕ ಎಂಜಿನಿಯರ್ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮತ್ತು ಕಾರ್ಯಪಾಲಕ ಎಂಜಿನಿಯರ್‌ಗಳು ಪರಿಶೀಲಿಸಿ, ಅಳತೆ ಪುಸ್ತಕದಲ್ಲಿ (ಎಂ.ಬಿ) ದಾಖಲಿಸಿ, ಅನುಷ್ಠಾನಗೊಂಡಿರುವ ಕಾಮಗಾರಿ ತೃಪ್ತಿಕರವಾಗಿದೆ ಎಂದು ವರದಿ ನೀಡಿದ ಬಳಿಕ ಬಿಬಿಎಂಪಿಯಿಂದ ಕೆಆರ್‌ಐಡಿಎಲ್‌ಗೆ ಹಣ ಪಾವತಿಯಾಗಿದೆ. ಹೀಗಾಗಿ, ನನ್ನಿಂದ ಯಾವುದೇ ದುರ್ನಡತೆ ಆಗಿಲ್ಲ’ ಎಂದು ಲೋಕಾಯುಕ್ತ ಆಪಾದಿತರ ಪಟ್ಟಿಯಲ್ಲಿ 12ನೇ ಆರೋಪಿ ಕೆಐಆರ್‌ಡಿಎಲ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಚಂದ್ರನಾಥ್ ಸಮರ್ಥಿಸಿಕೊಂಡಿದ್ದಾರೆ.

ಪ್ರಕರಣದ 13ನೇ ಆರೋಪಿಯಾಗಿರುವ ಕೆಆರ್‌ಐಡಿಎಲ್‌ನ ಕಾರ್ಯಪಾಲಕ ಎಂಜಿನಿಯರ್ ಶ್ರೀನಿವಾಸ್ ಕೂಡಾ ತಮ್ಮಿಂದ ಪ್ರಮಾದ ಆಗಿಲ್ಲ ಎಂದಿದ್ದಾರೆ. ‘ತನಿಖಾಧಿಕಾರಿ ಸ್ಥಳ ಮಹಜರು ನಡೆಸಿಲ್ಲ. ಯಾವುದೇ ಅಧಿಕಾರಿಗಳನ್ನು ವಿಚಾರಣೆ ನಡೆಸಿಲ್ಲ. ಕಾಮಗಾರಿಗಳಲ್ಲಿ ಆಗಿರುವ ಲೋಪಗಳ ಬಗ್ಗೆಯೂ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಉನ್ನತ ಅಧಿಕಾರಿಗಳ ಸೂಚನೆಯಂತೆ ಕಾಮಗಾರಿಗಳ ಮೇಲುಸ್ತುವಾರಿ ನೋಡಿಕೊಂಡಿದ್ದೇನೆ. ಕಾಮಗಾರಿ ಅನುಷ್ಠಾನಗೊಂಡ ಬಳಿಕವಷ್ಟೆ ಹಣ ಪಾವತಿ ಮಾಡಲಾಗಿದೆ’ ಎಂದು ಶ್ರೀನಿವಾಸ್ ಹೇಳಿಕೆ ನೀಡಿದ್ದರು ಎಂದೂ ವರದಿಯಲ್ಲಿ ಲೋಕಾಯುಕ್ತರು ತಿಳಿಸಿದ್ದಾರೆ. ಆದರೆ, ಈ ವಿವರಣೆಗಳಿಗೆ ಲೋಕಾಯುಕ್ತ ಸೊಪ್ಪುಹಾಕಿಲ್ಲ.

ಎಂಜಿನಿಯರ್ ವಿರುದ್ಧದ ಎಸಿಬಿ ತನಿಖೆಗೆ ತಡೆ

ಎನ್‌. ಆರ್‌. ರಮೇಶ್ ಪ್ರವೃತ್ತಿ ಪ್ರಶ್ನಿಸಿ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ದುರಾಲೋಚನೆಯಿಂದ ದೂರು ಸಲ್ಲಿಸುವ ಪ್ರವೃತ್ತಿ ಹೊಂದಿರುವ ಬಿಜೆಪಿಯ ಬೆಂಗಳೂರು ಜಿಲ್ಲೆ ದಕ್ಷಿಣ ಘಟಕದ ಅಧ್ಯಕ್ಷ ಎನ್‌.ಆರ್‌. ರಮೇಶ್ ಅವರ ದುರುದ್ದೇಶಪೂರಿತ ನಡೆ ಪರಿಶೀಲಿಸಬೇಕು ಮತ್ತು ಅಧಿಕಾರಿಯೊಬ್ಬರ ವಿರುದ್ಧ ಸಲ್ಲಿಸಿರುವ ದೂರು ವಜಾಗೊಳಿಸಬೇಕು’ ಎಂದು ಕೋರಲಾದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ವೈ.ಎಂ.ರಾಜು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ರಾಜು ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ ನಡೆಸುತ್ತಿರುವ ತನಿಖೆಗೆ ಮಧ್ಯಂತರ ತಡೆ ನೀಡಿರುವ ನ್ಯಾಯಪೀಠ, ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಬಿಬಿಎಂಪಿ ಮುಖ್ಯ ಎಂಜಿನಿಯರ್, ಬಿಬಿಎಂಪಿ ತಾಂತ್ರಿಕ ವಿಚಕ್ಷಣಾ ವಿಭಾಗದ ಮುಖ್ಯಸ್ಥರು, ಎಸಿಬಿ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್) ಡಿಎಸ್ಪಿ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿಯಲ್ಲಿ ಏನಿದೆ?: ‘ವೈ.ಎಂ.ರಾಜು ಅವರು ಗಾಂಧಿನಗರ ಉಪವಿಭಾಗದಲ್ಲಿ ಸಹಾಯಕ ಎಂಜಿನಿಯರ್ ಆಗಿದ್ದಾಗ ಕೆಲವು ಅಭಿವೃದ್ಧಿ ಯೋಜನೆ ಕಾಮಗಾರಿ ನಿರ್ವಹಣೆ ಮಾಡಿದ್ದರು. ಈ ಕಾಮಗಾರಿಗಳು ಕಳಪೆಯಾಗಿದೆ ಮತ್ತು ಇವುಗಳಿಗೆ ಒದಗಿಸಲಾದ ಅನುದಾನ ದುರ್ಬಳಕೆಯಾಗಿದೆ’ ಎಂದು ಆರೋಪಿಸಿ ಎನ್‌.ಆರ್‌.ರಮೇಶ್ ಅವರು ರಾಜು ವಿರುದ್ಧ ಏಕಕಾಲಕ್ಕೆ ಹಲವು ತನಿಖಾ ಸಂಸ್ಥೆಗಳಿಗೆ ದೂರು ಸಲ್ಲಿಸಿದ್ದರು.

‘ರಾಜು ಅವರು ಕಾಮಗಾರಿ ನಿರ್ವಹಣೆ ಮಾಡಿದ್ದು 2015-16ರಲ್ಲಿ. ಆದರೆ, ರಮೇಶ್ ದೂರು ಸಲ್ಲಿಸಿ ತನಿಖೆಗೆ ಕೋರಿರುವುದು 2021ರ ನವೆಂಬರ್‌ನಲ್ಲಿ. ಆರು ವರ್ಷಗಳ ನಂತರ ಈ ರೀತಿ ದೂರು ನೀಡಿರುವ ರಮೇಶ್ ಅವರ ವರ್ತನೆ ಅಧಿಕಾರಿಗಳನ್ನು ಶೋಷಣೆ ಮಾಡುವುದೇ ಆಗಿದೆ. ಅವರು, ಈ ರೀತಿ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ದುರುದ್ದೇಶದಿಂದ ದೂರು ಸಲ್ಲಿಸುವ ಪ್ರವೃತ್ತಿ ಹೊಂದಿದ್ದಾರೆ’ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

‘ಏಕಕಾಲಕ್ಕೆ ಒಂದೇ ವಿಷಯದ ಬಗ್ಗೆ ಹಲವು ತನಿಖಾ ಸಂಸ್ಥೆಗಳಿಗೆ ದೂರು ನೀಡಿರುವುದು, ಕೇವಲ ಅಧಿಕಾರಿಗಳು ಮತ್ತು ಗುತ್ತಿಗೆದಾರರನ್ನು ಹೆದರಿಸುವ ಏಕೈಕ ಉದ್ದೇಶ ಹೊಂದಿದೆ. ರಮೇಶ್ ಅವರಿಗೆ ಈ ರೀತಿ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ಸಾರ್ವಜನಿಕ ಸೇವಕರ ವಿರುದ್ಧ ದೂರು ನೀಡುವುದು ಅಭ್ಯಾಸವಾಗಿದೆ. ಆದ್ದರಿಂದ, ರಮೇಶ್ ಅವರ ಈ ಪ್ರವೃತ್ತಿಯ ಬಗ್ಗೆ ಕೋರ್ಟ್ ಪರಾಮರ್ಶಿಸಿ ಸೂಕ್ತ ಕ್ರಮಕ್ಕೆ ಆದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ • ಗುರುಲಿಂಗ ಕಾಪಸೆಗೆ ‘ಶ್ರೀಸಾಹಿತ್ಯ ಪ್ರಶಸ್ತಿ’ ಪ್ರದಾನ

‘ವಿವಾದಾಲಯಗಳಾಗುತ್ತಿರುವ ವಿಶ್ವವಿದ್ಯಾಲಯಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವವಿದ್ಯಾಲಯಗಳು ಮೂಲ ಉದ್ದೇಶಗಳನ್ನು ಮರೆತು ವಿವಾದಾಲಯಗಳಾಗುತ್ತಿವೆ. ಕನ್ನಡಕ್ಕಾಗಿ ಇರುವ ಏಕೈಕ ವಿಶ್ವವಿದ್ಯಾಲಯವೂ ಆರ್ಥಿಕವಾಗಿ ಸೊರಗಿ, ವಿದ್ಯುತ್ ಬಿಲ್ ಪಾವತಿಸಲಾಗದ ಸ್ಥಿತಿಗೆ ತಲುಪಿರುವುದು ಅವಮಾನಕರ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ ವ್ಯಕ್ತಪಡಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನವು ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾಂಸ ಗುರುಲಿಂಗ ಕಾಪಸೆ ಅವರಿಗೆ 2022ನೇ ಸಾಲಿನ ‘ಶ್ರೀಸಾಹಿತ್ಯ ಪ್ರಶಸ್ತಿ’ ಪ್ರದಾನ ಮಾಡಿ ಅವರು ಮಾತನಾಡಿದರು. ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

‘ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ₹ 24 ಕೋಟಿ ಅನುದಾನವನ್ನು ಸರ್ಕಾರ ಬಾಕಿ ಉಳಿಸಿಕೊಂಡಿದೆ. ಇದರಿಂದ ವಿದ್ಯುತ್ ಹಾಗೂ ನೀರಿನ ಬಿಲ್ ಕೂಡ ಪಾವತಿಯಾಗುತ್ತಿಲ್ಲ. ಸಂಶೋಧನಾ ವಿದ್ಯಾರ್ಥಿಗಳಿಗೆ 36 ತಿಂಗಳುಗಳಿಂದ ಶಿಷ್ಯವೇತನವನ್ನೂ ನೀಡಿಲ್ಲ. ವಿಶ್ವವಿದ್ಯಾಲಯವು ಆರ್ಥಿಕ ದುಃಸ್ಥಿತಿ ತಲುಪಿರುವ ಬಗ್ಗೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು. ಆದಷ್ಟು ಬೇಗ ಸರ್ಕಾರವು ಅಗತ್ಯ ಅನುದಾನ ಬಿಡುಗಡೆ ಮಾಡುವ ಮೂಲಕ ವಿಶ್ವವಿದ್ಯಾಲಯವನ್ನು ರಕ್ಷಿಸಬೇಕು’ ಎಂದು ಆಗ್ರಹಿಸಿದರು.

ನಗರದಲ್ಲಿ ಶನಿವಾರ 'ಬಿಎಂಶ್ರೀ ಪ್ರತಿಷ್ಠಾನ' ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿದ್ವಾಂಸ ಪ್ರೊ. ಗುರುಲಿಂಗ ಕಾಪಸೆ ಅವರಿಗೆ ಶ್ರೀ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಸಾಹಿತಿ ಡಾ. ಬೈರಮಂಗಲ ರಾಮೇಗೌಡ, ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, 'ಬಿಎಂಶ್ರೀ ಪ್ರತಿಷ್ಠಾನ'ದ ಕೋಶಾಧಿಕಾರಿ ಡಾ.ಎಸ್ ಅನಿಲ್ ಕುಮಾರ್, ಕಾರ್ಯದರ್ಶಿ ಡಾ. ಬಿ ಸಿ ರಾಜಕುಮಾರ್, ಸಾಹಿತಿ ಡಾ.ಪಿ.ವಿ ನಾರಾಯಣ ಮತ್ತು ಡಾ. ಆರ್ ಲಕ್ಷ್ಮೀನಾರಾಯಣ ಇದ್ದರು ಪ್ರಜಾವಾಣಿ ಚಿತ್ರ

‘ಬಿ.ಎಂ.ಶ್ರೀ. ಸೇರಿದಂತೆ ಹಲವು ಕನ್ನಡ ಸಂಸ್ಥೆಗಳು ಸರ್ಕಾರಕ್ಕಿಂತಲೂ ಉತ್ತಮವಾಗಿ ಕನ್ನಡ ಸೇವೆ ಮಾಡುತ್ತಿವೆ. ಅತ್ಯುತ್ತಮವಾದ ಕನ್ನಡ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ನಿಜವಾದ ಕನ್ನಡದ ಕೆಲಸ ಮಾಡುವ ಸಂಘ-ಸಂಸ್ಥೆಗಳಿಗೆ ಅನುದಾನ ನೀಡುವ ಮೂಲಕ ಆರ್ಥಿಕ ಬಲ ತುಂಬಬೇಕು’ ಎಂದು ಒತ್ತಾಯಿಸಿದರು.

ವಿದ್ವಾಂಸ ಪಿ.ವಿ. ನಾರಾಯಣ, ‘ಇವತ್ತು ಧರ್ಮ ಮತ್ತು ದೇವರ ಹೆಸರಲ್ಲಿ ಏನೇನೆಲ್ಲ ನಡೆಯುತ್ತಿವೆ. ಧರ್ಮವನ್ನು ಕೇವಲ ಆಚರಣೆ ವಿಧಾನದಲ್ಲಿ ನೋಡಿ, ವ್ಯಕ್ತಿಯನ್ನು ಅಳೆಯುವ ಸಮಾಜ ಇದಾಗಿದೆ. ಅರಿವು ಮೂಡಿಸುವವರ ಸಂಖ್ಯೆ ಕಡಿಮೆ ಆಗಿರುವುದರಿಂದ ಚಿಕ್ಕಮಕ್ಕಳಲ್ಲಿ ದ್ವೇಷ ಹೆಚ್ಚುತ್ತಿದೆ. ಜಾತಿ, ಧರ್ಮ ಮೀರಿದ ಆಲೋಚನಾ ಕ್ರಮ ಬರುವವರೆಗೂ ಈ ಸಮಾಜ ಉದ್ಧಾರ ಆಗುವುದಿಲ್ಲ’ ಎಂದು ಹೇಳಿದರು.

ಪ್ರಶಸ್ತಿ ಪುರಸ್ಕೃತ ಗುರುಲಿಂಗ ಕಾಪಸೆ, ‘ಬಿ.ಎಂ.ಶ್ರೀ. ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂಗ್ಲಿಷ್ ಭಾಷೆಯ ಕುರಿತು ಆಳವಾದ ಜ್ಞಾನ ಹೊಂದಿದ್ದ ಅವರು ಕನ್ನಡದ ಮೇಲೆ ತೋರಿದ ಪ್ರೀತಿಯನ್ನು ಮರೆಯುವಂತಿಲ್ಲ. ನವೋದಯ ಸಾಹಿತ್ಯಕ್ಕೆ ಅವರು ತಮ್ಮದೆ ಆದ ಕೊಡುಗೆ ನೀಡಿದ್ದಾರೆ’ ಎಂದರು.

ಏಕಾಏಕಿ ವಜಾ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರೊಬೇಷನರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿ ವಿರುದ್ಧ ದುರ್ನಡತೆ ಆರೋಪ ಬಂದರೆ ತನಿಖೆ ನಡೆಸದೆ ಅವರನ್ನು ಏಕಾಏಕಿ ವಜಾ ಮಾಡುವಂತಿಲ್ಲ’ ಎಂದು ಹೈಕೋರ್ಟ್ ಆದೇಶ ನೀಡಿದೆ.

ಈ ಕುರಿತಂತೆ ರಮೇಶ್ ಮಲ್ಲಿ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಆದೇಶವನ್ನೂ ನ್ಯಾಯಾಲಯ ಇದೇ ವೇಳೆ ರದ್ದುಗೊಳಿಸಿದೆ.

‘ನಿಯಮದ ಪ್ರಕಾರ ಪ್ರೊಬೇಷನರಿ ಅವಧಿಯಲ್ಲಿ ಅರ್ಜಿದಾರರನ್ನು ವಜಾಗೊಳಿಸುವ ಅಧಿಕಾರ ಇದೆ. ಆದರೆ, ಈ ರೀತಿ ಸಿಬ್ಬಂದಿ ವಿರುದ್ಧ ದೂರುಗಳು ಬಂದಾಗ ಕರ್ನಾಟಕ ನಾಗರಿಕ ಸೇವೆಗಳು (ಪ್ರೊಬೇಷನ್) ನಿಯಮ 1977 ಕಾಯ್ದೆಯ ಸೆಕ್ಷನ್ 5ರ ಪ್ರಕಾರ ತನಿಖೆ ನಡೆಸುವುದು ಅಗತ್ಯ. ತನಿಖೆ ನಡೆಸದೆಯೇ ಏಕಾಏಕಿ ಸೇವೆಯಿಂದ ವಜಾ ಮಾಡಬಾರದು’ ಎಂದು ನ್ಯಾಯಪೀಠವು ಆದೇಶದಲ್ಲಿ ವಿವರಿಸಿದೆ.

Air Force School ASTE, Murugeshpalya
invites applications for the post of
COMPUTER LAB ASSISTANT

Details of basic qualification can be checked on **www.afsaste.edu.in.** Hard copies of resume with attested testimonials should be submitted / posted to:

Air Force School ASTE,
NAL Wind Tunnel Road, Murugeshpalya,Bengaluru–560017
(last date of receipt is 24 Feb 2022 upto 1000 hrs).
Soft copies will not be accepted.
Contact No.080-25272332/25276920

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in
ಆಜ಼ಾದೀ ಕಾ ಅಮೃತ ಮಹೋತ್ಸವ

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ1/018/2021–22 ದಿ :11/02/2022

ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಭಂದಕರು ಈ ಕೆಳಕಂಡ ಸಾಮಗ್ರಿಗಳನ್ನು ಪೂರೈಸಲು ಆಸಕ್ತ ಮಾರಾಟಗಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ನ್ನು ಭಾರತೀಯ ರೈಲ್ವೆಯ ಆನ್‌ಲೈನ್ ವೆಬ್‌ಸೈಟ್ www.ireps.gov.in ಮೂಲಕ ಆಹ್ವಾನಿಸಿದ್ದಾರೆ. ಟೆಂಡರ್‌ನ ದಾಖಲೆಗಳು ಮತು ಟೆಂಡರ್‌ಗೆ ಸಂಬಂದಿಸಿದ ಯಾವುದೇ ತಿದ್ದುಪಡಿಗಳಿದ್ದರೆ, ನಮ್ಮ ಆನ್‌ಲೈನ್ ವೆಬ್‌ಸೈಟ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಟೆಂಡರ್ ಸಂ	ಕೊ.ದಿನಾಂಕ	ಸಂಕ್ಷಿಪ್ತ ವಿವರಣೆ
P1221103	02-03-22	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆ ಅನುಸಾರ/ಫಿಯಟ್ ಬೋಗಿ ಗಾಲಿಗಳನ್ನು ನಿರ್ಮಿಸಲು ಬೇಕಾಗುವ ಸ್ಟೀಲ್ ಬ್ಲೂಮ್ಸ್ 300 ಚ.ಮೀ.ಮೀ **ಸಂಖ್ಯೆ:13742ಎಂ.ಟಿ**
P1211566B	28-03-22	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆ ಅನುಸಾರ ಪೂರ್ವನಿಗದಿತ ನಿಪ್ಪಲ್ ಜೊತೆ ಗ್ರಾಫೈಟ್ ಎಲೆಕ್ಟ್ರೋಡ್‌ಗಳು **ಸಂಖ್ಯೆ:412ಎಂ.ಟಿ**
P1211544A	28-03-22	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆ ಅನುಸಾರ ಗ್ರಾಫೈಟ್ ಪೌಡರ್ **ಸಂಖ್ಯೆ:955ಎಂ.ಟಿ**
ಜಾಗತಿಕ ಟೆಂಡರ್‌ಗಳು:–		
P3211041B	14-03-22	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆ ಅನುಸಾರ ಗ್ರಾಫೈಟ್ ಮೌಲ್ಡ್ ಬ್ಲಾಂಕ್‌ಗಳು (1) 1097ಮೀ.ಮೀ ಸುತ್ತಳತೆ X 575ಮೀ.ಮೀ ಎತ್ತರ–50 ಸಂಖ್ಯೆಗಳು, ಆರ್‌ಡಬ್ಲ್ಯೂಪಿ/ಬೆಲಾ–34 ಸಂಖ್ಯೆಗಳು (2)1224ಮೀ.ಮೀ ಸುತ್ತಳತೆ X 575ಮೀ.ಮೀ ಎತ್ತರ – 585 ಸಂಖ್ಯೆಗಳು, ಆರ್‌ಡಬ್ಲ್ಯೂಪಿ / ಬೆಲಾ – 116 ಸಂಖ್ಯೆಗಳು,

ಪ್ರಧಾನ ಮುಖ್ಯ ಸಾಮಗ್ರಿ ಪ್ರಭಂದಕರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ
ಮುಖ್ಯ ವೈದ್ಯಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂಖ್ಯೆ: ಸಾಆನೆ/18/2021–22 ದಿನಾಂಕ: 11–02–2022

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ ಇಲ್ಲಿಗೆ **2022–23ನೇ ಸಾಲಿಗೆ ನಾನ್‌ಕ್ಲಿನಿಕಲ್ ಮತ್ತು ಗ್ರೂಪ್ ‘ಡಿ’ ನೌಕರರ** ಹೊರಗುತ್ತಿಗೆ ಸೇವೆಯನ್ನು ಒದಗಿಸುವ ಸಂಬಂಧ ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ–ಲಕೋಟೆ ಪದ್ಧತಿ ಅನ್ವಯ ಕರ್ನಾಟಕ ಪಾರದರ್ಶಕ ನಿಯಮ 1999–2000 ರಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಹ ಅಧಿಕೃತ ಸಂಸ್ಥೆದಾರರು ಖಾಲಿ ಟೆಂಡರ್ ಫಾರಂಗಳನ್ನು ದಿನಾಂಕ: **11–02–2022 ರಿಂದ 11–03–2022ರ ಅಪರಾಹ್ನ 4.00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದ್ವಿ–ಲಕೋಟೆ ಪದ್ಧತಿಯಂತೆ ಸಲ್ಲಿಸುವುದು. ಅರ್ಹ ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **11–03–2022ರಂದು ಅಪರಾಹ್ನ 4.00 ಗಂಟೆಯೊಳಗಾಗಿ** ಅರ್ಜಿ ಸಲ್ಲಿಸಬಹುದಾಗಿದ್ದು (ಅಪ್‌ಲೋಡ್). ಟೆಂಡರ್ ಫಾರಂನ ಬೆಲೆ **ರೂ. 1,000/–** (ಹಿಂದಿರುಗಿಸುವುದಿಲ್ಲ). ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **15–03–2022ರ ಅಪರಾಹ್ನ 4.30 ಗಂಟೆಗೆ** ಮತ್ತು ಆರ್ಥಿಕ ಲಕೋಟೆ ತೆರೆಯುವ ದಿನಾಂಕ: **18–03–2022ರ ಅಪರಾಹ್ನ 12.00 ಗಂಟೆಗೆ.**

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **www.eproc.karnataka.gov.in** ರ ಮೂಲಕ ಅಥವಾ ಆಸ್ಪತ್ರೆಯ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ನೆಲಮಂಗಲ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/419/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸೇನೆಯಲ್ಲಿ ಕೆಲಸ ಕೊಡಿಸುವ ನೆಪದಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇನೆಯಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ನೆತಾಯಿಚಾಂದ್ ಜಾನ್ ಎಂಬಾತನನ್ನು ವಿವೇಕನಗರ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ನೆತಾಯಿಚಾಂದ್ ತಾನೊಬ್ಬ ಸೇನಾಧಿಕಾರಿ ಎಂಬುದಾಗಿ ಹೇಳಿಕೊಳ್ಳುತ್ತಿದ್ದ. ಸಮವಸ್ತ್ರ ಧರಿಸಿಕೊಂಡು ಓಡಾಡುತ್ತಿದ್ದ. ಅದನ್ನು ನೋಡಿಯೇ ಅಭ್ಯರ್ಥಿಗಳು ಆತನನ್ನು ನಂಬುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿರುವ ಸೇನೆಯ ಶಿಬಿರದ ಬಳಿ ಆರೋಪಿ ಸುತ್ತಾಡುತ್ತಿದ್ದ. ಸೇನೆ ಸೇರುವ ಆಸೆ ಇಟ್ಟುಕೊಂಡು ಅಭ್ಯರ್ಥಿಗಳು ಕ್ಯಾಂಪ್ ಬಳಿ ಸುತ್ತಾಡುತ್ತಿದ್ದರು. ಅಂಥವರನ್ನು ಮಾತನಾಡಿಸುತ್ತಿದ್ದ ಆರೋಪಿ, ‘ಸೇನೆಯ ಹಿರಿಯ ಅಧಿಕಾರಿಗಳು ನನಗೆ ಪರಿಚಯ. ಕೇಳಿದಷ್ಟು ಹಣ ಕೊಟ್ಟರೆ, ಸೇನೆಯಲ್ಲಿ ಕೆಲಸ ಕೊಡಿಸುತ್ತೇನೆ’ ಎನ್ನುತ್ತಿದ್ದ.’

‘ಆರೋಪಿ ಮಾತು ನಂಬುತ್ತಿದ್ದ ಅಭ್ಯರ್ಥಿಗಳು, ಹಂತ ಹಂತವಾಗಿ ಸಾವಿರಾರು ರೂಪಾಯಿ ಹಣ ನೀಡುತ್ತಿದ್ದರು. ಅದಾದ ನಂತರ, ಆರೋಪಿ ನಾಪತ್ತೆಯಾಗುತ್ತಿದ್ದ. ಆತನ ಕೃತ್ಯದಿಂದ ನೊಂದ ಅಭ್ಯರ್ಥಿಯೊಬ್ಬರು ಇತ್ತೀಚೆಗೆ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಆತನಿಂದ ವಂಚನೆಗೀಡಾದ ಅಭ್ಯರ್ಥಿಗಳು ಯಾರಾದರೂ ಇದ್ದರೆ ಠಾಣೆಗೆ ದೂರು ನೀಡಬಹುದು’ ಎಂದೂ ಅವರು ತಿಳಿಸಿದರು.

ಸೇನೆ ಕೆಲಸ ಬಿಟ್ಟಿದ್ದ: ‘ಆರೋಪಿ ನೆತಾಯಿಚಾಂದ್, 1993ರಲ್ಲಿ ಸೇನೆಗೆ ಸೇರಿದ್ದ ಮಾಹಿತಿ ಇದೆ. ಸೇನಾಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡದೇ ಕೆಲಸ ಬಿಟ್ಟು 2003ರಲ್ಲಿ ಆತ ಬೆಂಗಳೂರಿಗೆ ಬಂದಿದ್ದ. ವಂಚನೆಯಿಂದಲೇ ಹಣ ಗಳಿಸಿ ಬದುಕುತ್ತಿದ್ದ. ಈತನ ಬಗ್ಗೆ ಸೇನೆ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ’ ಎಂದು ಪೊಲೀಸರು ಹೇಳಿದರು.

ವಾಯು ಮಾಲಿನ್ಯ ನಿಯಂತ್ರಣ ಸಾಧನವನ್ನು ರೋಗನ್ ಪ್ರೇಮ್ ಸಾಗರ್ ಬಿಡುಗಡೆ ಮಾಡಿದರು. ಕಾಲೇಜಿನ ಕಾರ್ಯದರ್ಶಿ ಗಾಲಿಸ್ವಾಮಿ, ಪ್ರಾಂಶುಪಾಲ ಸಿಪಿಎಸ್ ಪ್ರಕಾಶ್ ಇದ್ದರು

ವಾಯುಮಾಲಿನ್ಯ ನಿಯಂತ್ರಣಾ ಸಾಧನ ಬಿಡುಗಡೆ

ಬೆಂಗಳೂರು: ವಾಯು ಮಾಲಿನ್ಯ ಕಡಿಮೆ ಮಾಡಲು ನಗರದ ದಯಾನಂದಸಾಗರ ಎಂಜಿನಿಯರಿಂಗ್ ಕಾಲೇಜಿನ ಆಟೊಮೊಬೈಲ್ ವಿಭಾಗ ಮಾಲಿನ್ಯ ನಿಯಂತ್ರಣ ಸಾಧನ ಅಭಿವೃದ್ಧಿಪಡಿಸಿದೆ. ಕಾಲೇಜಿನ ಆಡಳಿತ ಮಂಡಳಿ ಸದಸ್ಯ ರೋಹನ್ ಪ್ರೇಮ್ ಸಾಗರ್ ಅವರು ಸಾಧನವನ್ನು ಲೋಕಾರ್ಪಣೆ ಮಾಡಿದರು.

ಈ ಸಾಧನವು ಗಾಳಿಯಲ್ಲಿನ ಅಶುದ್ಧ ಹಾಗೂ ವಿಷಕಾರಿ ಕಣಗಳನ್ನು ಹೀರುತ್ತದೆ. ಶುದ್ಧ ಗಾಳಿ ಬಿಡುಗಡೆ ಮಾಡುತ್ತದೆ. ದಿನಕ್ಕೆ 6 ಸಾವಿರ ಘನ ಮೀಟರ್ ಗಾಳಿಯನ್ನು ಶುದ್ಧಗೊಳಿಸುವ ಸಾಮರ್ಥ್ಯವನ್ನು ಇದು ಹೊಂದಿದೆ. ಇದು 2.5 ರಿಂದ 1 ಸಾವಿರ ಮೈಕ್ರಾನ್‌ಗಳ ಕಣಗಳ ಗಾತ್ರವನ್ನು ಸೆರೆ ಹಿಡಿಯುವ ಸಾಮರ್ಥ್ಯವನ್ನು ಹೊಂದಿದೆ ಎಂದು ಕಾಲೇಜಿನ ಆಟೊಮೊಬೈಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಚ್.ಎನ್. ಸುರೇಶ್ ವಿವರಿಸಿದರು.

ಹಿಜಾಬ್ ವಿಚಾರದಿಂದ ವಿದ್ಯಾರ್ಥಿಗಳ ಇಬ್ಭಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಹಿಜಾಬ್ ವಿಚಾರದಲ್ಲಿ ಧರ್ಮದ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಇಬ್ಭಾಗ ಮಾಡುತ್ತಿದ್ದಾರೆ. ಈ ಸಣ್ಣ ಬಿರುಕು ಕೆಲವೇ ವರ್ಷಗಳಲ್ಲಿ ಕಂದಕವಾಗಿ ಬದಲಾಗಿ, ದೇಶದ ಏಕತೆಯನ್ನು ನಾಶ ಮಾಡಲಿದೆ’ ಎಂದು ಚಿಂತಕ ಪೀರ್ ಬಾಷಾ ಕಳವಳ ವ್ಯಕ್ತಪಡಿಸಿದರು.

ಡಿವೈಎಫ್ಐ, ಎಸ್ಎಫ್ಐ ಹಾಗೂ ಜೆಎಂಎಸ್ ಸಂಘಟನೆಗಳ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ‘ಶಿಕ್ಷಣದ ಹಕ್ಕು ಮತ್ತು ವಸ್ತ್ರ ಸಂಹಿತೆ’ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

‘ಹಿಜಾಬ್ ಮಹಿಳೆಯನ್ನು ನಿಯಂತ್ರಿಸುವ ಉಡುಗೆ ಎಂಬುದರಲ್ಲಿ ತಕರಾರಿಲ್ಲ. ಆದರೆ, ಒಂದು ಧಾರ್ಮಿಕ ಕಂದಾಚಾರದ ಉಡುಗೆಯಾಗಿ ಹಿಜಾಬ್ ಅನ್ನು ವಿರೋಧಿಸಬೇಕು. ಧಾರ್ಮಿಕ ಬಿಗಿ ನೀತಿಗಳ ಹೊರತಾಗಿಯೂ ಮುಸ್ಲಿಂ ಮಹಿಳೆಯರು ಹೊರಬರುವ ಪ್ರಯತ್ನ ಮಾಡುತ್ತಿದ್ದಾರೆ. ಕನಿಷ್ಠ ಪಕ್ಷ ಹಿಜಾಬ್ ಧರಿಸಿಯಾದರೂ ಉನ್ನತ ಶಿಕ್ಷಣ ಪಡೆಯುವ ಹಂಬಲ ವ್ಯಕ್ತಪಡಿಸಿದ್ದಾರೆ. ಅದನ್ನು ಗೌರವಿಸಿ, ಹಿಜಾಬ್‌ಗೆ ಅವಕಾಶ ಕಲ್ಪಿಸಬೇಕು’ ಎಂದರು.

‘ನಿಜವಾದ ಸಮಸ್ಯೆಗಳನ್ನು ಮರೆಮಾಚಿರುವ ಶಕ್ತಿಗಳು, ಹಿಜಾಬ್ ಮುಂದಿಟ್ಟುಕೊಂಡು ಕಾಲೇಜುಗಳಲ್ಲಿ ಧರ್ಮದ ಆಧಾರದಲ್ಲಿ ಧ್ರುವೀಕರಣ ಮಾಡುತ್ತಿವೆ. ಕೆಲವರು ಮಕ್ಕಳನ್ನು ಭಾವನಾತ್ಮಕವಾಗಿ ಧ್ರುವೀಕರಿಸಿ, ಪರೋಕ್ಷ ಸೈನ್ಯ ಕಟ್ಟುತ್ತಿದ್ದಾರೆ’ ಎಂದೂ ಎಚ್ಚರಿಸಿದರು.

ವಿದ್ವಾಂಸ ಪುರುಷೋತ್ತಮ ಬಿಳಿಮಲೆ,‘ಮುಸ್ಲಿಂ ಹೆಣ್ಣುಮಗಳು ಎಷ್ಟು ಕಷ್ಟದಿಂದ ಶಾಲೆಗೆ ಬರುತ್ತಾಳೆ ಎನ್ನುವುದನ್ನು ಕಣ್ಣಾರೆ ಕಂಡಿದ್ದೇನೆ. ಎಷ್ಟೋ ಶತಮಾನಗಳ ನಂತರ ಶಾಲೆಗೆ ಬರುತ್ತಿರುವ ಹೆಣ್ಣುಮಗಳನ್ನು ಮುಕ್ತ ಕಂಠದಿಂದ ಬರಮಾಡಿಕೊಳ್ಳುವ ಹೃದಯವಂತಿಕೆಯನ್ನು ಕಳೆದುಕೊಂಡಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕೆ.ಎಸ್.ವಿಮಲಾ, ಮೀನಾಕ್ಷಿ ಬಾಳಿ ಮಾತನಾಡಿದರು.

ದೊಡ್ಡಬಿದಿರಕಲ್ಲಿನಲ್ಲಿ ರಸ್ತೆ ಡಾಂಬರೀಕರಣಕ್ಕೆ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು. ಬಿಜೆಪಿ ಮುಖಂಡರಾದ ಹೊಸಹಳ್ಳಿ ಸತೀಶ್, ಜಿ.ಮಂಜುನಾಥ್ ಇದ್ದಾರೆ.

ಡಾಂಬರೀಕರಣ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ನಗರೋತ್ಥಾನ ಯೋಜನೆ ಅಡಿಯಲ್ಲಿ ದೊಡ್ಡಬಿದಿರಕಲ್ಲು, ತಿಪ್ಪೇನಹಳ್ಳಿ ವ್ಯಾಪ್ತಿಯ ಮುಖ್ಯರಸ್ತೆ ಮತ್ತು ಅಡ್ಡ ರಸ್ತೆಗಳಿಗೆ ₹40 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಡಾಂಬರೀಕರಣ ಕಾಮಗಾರಿಗೆ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವರು, ‘ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಕಾವೇರಿ ನೀರು ಪೈಪು ಅಳವಡಿಕೆ ಕಾಮಗಾರಿ ನಡೆಯುತ್ತಿದೆ.ದೊಡ್ಡಬಿದಿರಕಲ್ಲು ಕೆರೆ ಅಭಿವೃದ್ಧಿ ಪಡಿಸಲು ಜಿಂದಾಲ್ ಸಂಸ್ಥೆ ಒಪ್ಪಿಗೆ ಸೂಚಿಸಿದೆ’ ಎಂದು ತಿಳಿಸಿದರು.

‘ಬಿಬಿಎಂಪಿ ವ್ಯಾಪ್ತಿಯ ಎಲ್ಲ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸರ್ಕಾರದಿಂದ ಅನುಮತಿಗಾಗಿ ಕಾಯಲಾಗುತ್ತಿದೆ’ ಎಂದು ಹೇಳಿದರು.

‘ಖಾತಾ ಮಾಡಿಕೊಡಲು ₹1 ಲಕ್ಷ ಲಂಚಕ್ಕೆ ಬೇಡಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿರಾ ಗಾಂಧಿಯವರ ಅವಧಿಯಲ್ಲಿ ಗೊಟ್ಟಿಗೆರೆಯ ವೀವರ್ಸ್ ಕಾಲೊನಿಯಲ್ಲಿ ಬಡ ನೇಕಾರರ 840 ಕುಟುಂಬಗಳಿಗೆ ಉಚಿತ ನಿವೇಶನ ನೀಡಿ, ಹಕ್ಕುಪತ್ರ ವಿತರಿಸಲಾಗಿತ್ತು. ನಂತರ ಅದೇ ಕ್ಷೇತ್ರದಿಂದ ಏಳು ಬಾರಿ ಆಯ್ಕೆಯಾದ ಬಿಜೆಪಿ ಶಾಸಕರು ಫಲಾನುಭವಿಗಳಿಗೆ ಖಾತಾ ಮಾಡಿಸಿಕೊಡುವಲ್ಲಿ ವಿಫಲರಾಗಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಆರ್. ಕೆ.ರಮೇಶ್ ಆರೋಪಿಸಿದರು.

ಕೋಣನಕುಂಟೆ ಕ್ರಾಸ್‌ನಲ್ಲಿ ಶನಿವಾರ ಏರ್ಪಡಿಸಿದ್ದ ಗೊಟ್ಟಿಗೆರೆ ಮತ್ತು ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಸಭೆ ಮತ್ತು ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವೀವರ್ಸ್ ಕಾಲೊನಿಯ ಬಡಜನರಿಗೆ ಖಾತಾ ಮಾಡಿಕೊಡಲು ಬಿಬಿಎಂಪಿ ಅಧಿಕಾರಿಗಳು ತಲಾ ₹1 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಹಣ ನೀಡುವ ಸಾಮರ್ಥ್ಯವಿಲ್ಲ ಎಂದು ಫಲಾನುಭವಿಗಳು ಕಣ್ಣೀರು ಹಾಕುತ್ತಿದ್ದಾರೆ. ಅವರಿಗೆ ಶೀಘ್ರವಾಗಿ ಖಾತಾ ಮಾಡಿಕೊಡಬೇಕು’ ಎಂದು ಆಗ್ರಹಿಸಿದರು.

‘ಬೆಂಗಳೂರು ದಕ್ಷಿಣ ವ್ಯಾಪ್ತಿಯಲ್ಲಿ ಬಡವರು, ಶ್ರಮಿಕರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ನೆಮ್ಮದಿಯ ಜೀವನ ಸಾಗಿಸಲಿ ಎಂಬ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಉಚಿತವಾಗಿ ನಿವೇಶನಗಳನ್ನು ಮಂಜೂರು ಮಾಡಿತ್ತು. ಈವರೆಗೆ ಅವರಿಗೆ ಖಾತೆ ಮಾಡಿಕೊಟ್ಟಿಲ್ಲ. ಸರ್ಕಾರ ಒಂದು ತಿಂಗಳೊಳಗೆ ಹಕ್ಕುಪತ್ರ ಮತ್ತು ಖಾತಾ ಮಾಡಿಕೊಡದಿದ್ದರೆ, ಬಿಬಿಎಂಪಿ ಮುಖ್ಯ ಆಯುಕ್ತರ ಕಚೇರಿ ಮತ್ತು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು’ ಎಂದು ಎಚ್ಚರಿಸಿದರು.

‘ಎಂ.ಕೃಷ್ಣಪ್ಪ ಮೂರು ಬಾರಿ ಕ್ಷೇತ್ರದ ಶಾಸಕರಾಗಿದ್ದರೂ ಜನರಿಗೆ ಮೂಲ ಸೌಕರ್ಯಗಳು ಸಿಕ್ಕಿಲ್ಲ. ಜನ ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಮಸ್ಯೆಗಳ ಬಗ್ಗೆ ಜನರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಧ್ವನಿ ಎತ್ತಿದರೆ, ಸುಳ್ಳು ಪ್ರಕರಣ ದಾಖಲಿಸಿ ಬೆದರಿಸುವ ಕೆಲಸ ನಡೆಯುತ್ತಿದೆ’ ಎಂದು ಆರೋಪಿಸಿದರು.

ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀಧರ್ ಲಕ್ಷ್ಮಣ್, ಕೆ.ಕುಮಾರ್, ಸುಜಯ್, ಕೆ.ಈಶ್ವರ್, ಗುಂಡುಮಣಿ ಶ್ರೀನಿವಾಸ್, ವಿಜಯ್ ರಮೇಶ್ , ಬಿ.ಟಿ. ನಾಗರಾಜು, ವನಿತಾ, ರೇಖಾ ನವೀನ್ ಗೌಡ, ಸುಧಾಕರ್, ಚುಂಚಘಟ್ಟ ಬಾಬು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ,
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ.ರಾನವಿ.ಸಂ.ವಾ/3359:3360:3361/21–22 ದಿ. 11.02.2022

“ಇ–ಟೆಂಡರ್ ಪ್ರಕಟಣೆ ಸಂಖ್ಯೆ: 14 & ಸಂಧಾನ ಪ್ರಕಟಣೆ ಸಂಖ್ಯೆ: 15 & 16/2021–22”

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಮಾಗಡಿ, ಆನೇಕಲ್ ಹಾಗೂ ದೊಡ್ಡಮರಳವಾಡಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ: 08.03.2022 ರಂದು 11.00 ಗಂಟೆಗೆ ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗದಿಪಡಿಸಲಾಗಿರುತ್ತದೆ. ದಿ: 12.02.2021 ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 05.03.2022ರ 17.00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಚನ್ನಪಟ್ಟಣ, ಕೋಡಂಬಹಳ್ಳಿ, ಕನಕಪುರ, ಆನೇಕಲ್ ಹಾಗೂ ಕೋಡಿಹಳ್ಳಿ ಬಸ್ ನಿಲ್ದಾಣಗಲ್ಲಿ ಖಾಲಿ ಇರುವ, ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್/ಗ್ಲೋಸೈನ್/ಪ್ಲಾಟ್‌ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿ: 08.03.2022 ರಂದು 15:00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: 12.02.2022 ರಿಂದ ದಿನಾಂಕ: 07.03.2022ರ 15.00 ಗಂಟೆಗಳವರೆಗೆ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159 ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂ: 7760990981 ಹಾಗೂ 7760990852.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ, ರಾಮನಗರ

ವಾ.ಸಾ.ಸಂ.ಇ/ಬೆಂ.ನಗರ/3353/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೆರೆ ರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣದೊಂದಿಗೆ ದಂಧೆಕೋರರ ನಂಟು

ಕಲ್ಯಾಣ ಕರ್ನಾಟಕದಲ್ಲಿ ಗಾಂಜಾ ಅಮಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಜಿಲ್ಲೆಗಳು ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿರುವುದರಿಂದ ಆ ರಾಜ್ಯಗಳ ಮೂಲಕ ರಾಜ್ಯಕ್ಕೆ ಗಾಂಜಾ ಬರುತ್ತಿದೆ. ಇದರಿಂದಾಗಿ ಈ ಭಾಗದಲ್ಲಿ ಗಾಂಜಾ ಮಾರಾಟ ಹಾಗೂ ಸೇವನೆ ಎಗ್ಗಿಲ್ಲದೇ ಸಾಗಿದೆ.

ಇದರಲ್ಲಿ ಪ್ರಭಾವಿ ರಾಜಕೀಯ ಮುಖಂಡರು ಹಾಗೂ ಪೊಲೀಸ್ ಅಧಿಕಾರಿಗಳು ಶಾಮೀಲಾಗಿರುವ ಆರೋಪಗಳು ಕೇಳಿಬಂದಿವೆ.

ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನ ಲಕ್ಷ್ಮಣ ನಾಯಕ ತಾಂಡಾದಲ್ಲಿ ಕುರಿ ಶೆಡ್‌ನ ಆಳದ ಬಂಕರ್‌ನಲ್ಲಿ ಇಡಲಾಗಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ 1,352 ಕಿಲೋ ಗಾಂಜಾವನ್ನು ಬೆಂಗಳೂರು ಪೊಲೀಸರು 2020ರ ಸೆಪ್ಟೆಂಬರ್‌ನಲ್ಲಿ ದಾಳಿ ನಡೆಸಿ ವಶಪಡಿಸಿಕೊಂಡಿದ್ದರು. ದೊಡ್ಡ ಪ್ರಮಾಣದ ಜಾಲವನ್ನು ಬಯಲಿಗೆಳೆದಿದ್ದರು. ಬಳಿಕ, ಚಿಂಚೋಳಿ, ಚಿತ್ತಾಪುರ, ಜೇವರ್ಗಿ, ಕಮಲಾಪುರ ಸೇರಿದಂತೆ ಹಲವು ತಾಲ್ಲೂಕುಗಳಲ್ಲಿ ಗಾಂಜಾ ಗಿಡಗಳನ್ನು ರಹಸ್ಯವಾಗಿ ಬೆಳೆಯುವ ಹಾಗೂ ಮಹಾರಾಷ್ಟ್ರ, ತೆಲಂಗಾಣದಿಂದಲೂ ವಾಹನಗಳ ಮೂಲಕ ಕಲಬುರಗಿಗೆ ತಂದು ಇಲ್ಲಿಂದ ಬೆಂಗಳೂರು, ಗೋವಾಕ್ಕೆ ಪೂರೈಕೆ ಮಾಡುವ ಜಾಲಗಳೂ ಸಕ್ರಿಯವಾಗಿದ್ದನ್ನು ಪೊಲೀಸರು ಪತ್ತೆ ಹಚ್ಚಿದ್ದರು.

ಕಡಿಮೆ ಜಮೀನು ಹೊಂದಿರುವ ಬಡ ರೈತರು ದಿಢೀರ್ ಶ್ರೀಮಂತರಾಗುವ ಆಸೆಗೆ ಬಿದ್ದು ಹೊಲದ ಮಧ್ಯದಲ್ಲಿ ಗಾಂಜಾ ಗಿಡಗಳನ್ನು ಬೆಳೆದು ಪೊಲೀಸರಿಗೆ ಸಿಕ್ಕಿಬೀಳುತ್ತಿದ್ದಾರೆ.

ಬೀದರ್ ಜಿಲ್ಲೆಯಲ್ಲಿ ಆರು ಆರೋಪಿಗಳು ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ತೊಡಗಿರುವುದು ಹಿಂದಿನ ದಾಖಲೆಗಳಿಂದ ಸಾಬೀತಾಗಿದೆ. ಕೆಲವರು ಜಾಮೀನು ಪಡೆದು ಬಿಡುಗಡೆಯಾಗಿ ಮತ್ತೆ ಗಾಂಜಾ ಮಾರಾಟದಲ್ಲಿ ತೊಡಗುತ್ತಿದ್ದಾರೆ. ಬೀದರ್‌ನಿಂದ ಗೋವಾಕ್ಕೆ ಗಾಂಜಾ ಪೂರೈಕೆಯಾಗುತ್ತಿದೆ. ಕಳ್ಳಸಾಗಣೆದಾರರು ಶಾಲಾ ಬ್ಯಾಗ್‌ಗಳಲ್ಲೇ ಪ್ರಯಾಣಿಕರ ಸೋಗಿನಲ್ಲಿ ಸಾಗಣೆ ಮಾಡಿ ಅನೇಕ ಬಾರಿ ಸಿಕ್ಕಿ ಬಿದ್ದಿದ್ದಾರೆ. ರಾಷ್ಟ್ರೀಯ ಹೆದ್ದಾರಿಯ ಕೆಲ ಡಾಬಾಗಳಲ್ಲಿ ರಾಜಸ್ಥಾನದಿಂದ ಅಫೀಮು ತಂದು ಮಾರಾಟ ಮಾಡುವ ಜಾಲವೂ ಈಚೆಗೆ ಪತ್ತೆಯಾಗಿದೆ.

ಕಲಬುರಗಿ ಜಿಲ್ಲೆ ಕಾಳಗಿಯ ಲಕ್ಷ್ಮಣನಾಯಕ ತಾಂಡಾದಲ್ಲಿ ಕುರಿ ಸಾಕಾಣಿಕೆ ಶೆಡ್‌ನಲ್ಲಿ ₹ 6ಕೋಟಿ ಮೌಲ್ಯದ ಗಾಂಜಾ ವಶಪಡಿಸಿಕೊಂಡಿರುವುದು

ಬೀದರ್ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ 47 ಗಾಂಜಾ ಪ್ರಕರಣಗಳು ದಾಖಲಾಗಿವೆ. ಮಾದಕ ವಸ್ತುಗಳ ಕಳ್ಳ ಸಾಗಣೆಯ ಒಂದು ಜಾಲ ಇದೆ. ಬೀದರ್ ಜಿಲ್ಲೆಯ ವ್ಯಕ್ತಿಗಳನ್ನು ಸಾಗಣೆಗೆ ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ. ಇದೀಗ ಪೊಲೀಸರು ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಣೆ ತಡೆ (ಪಿಐಟಿ ಎನ್‌ಡಿಪಿಎಸ್ ಕಾಯ್ದೆ-1988) ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಲು ಮುಂದಾಗಿದ್ದಾರೆ.

ಈ ಜಾಲದ ಸೂತ್ರಧಾರಿಗಳನ್ನು ಪತ್ತೆ ಹಚ್ಚಲು ಪೊಲೀಸರಿಗೆ ಇಂದಿಗೂ ಸಾಧ್ಯವಾಗಿಲ್ಲ. ಹೀಗಾಗಿ ಬೀದರ್ ಜಿಲ್ಲೆ ಎರಡು ರಾಜ್ಯಗಳಿಗೆ ಹೊಂದಿಕೊಂಡಿರುವ ಕಾರಣ ನೆರೆಯ ರಾಜ್ಯದ ಜಿಲ್ಲೆಯ ಅಧಿಕಾರಿಗಳೊಂದಿಗೂ ನಿರಂತರ ಸಂಪರ್ಕ ಹೊಂದಿ, ಸಭೆಗಳನ್ನು ನಡೆಸುತ್ತಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಿಂದ ಕಳೆದ ವರ್ಷ ಮೂರು ಕಡೆ ದಾಳಿ ಮಾಡಿ ಪ್ರಕರಣ ದಾಖಲಿಸಲಾಗಿದೆ. 25 ಕೆ.ಜಿ. ಗಾಂಜಾ ಸಸಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ವರದಿ: ಚಂದ್ರಕಾಂತ ಮಸಾನಿ, ಮನೋಜಕುಮಾರ್ ಗುದ್ದಿ, ಬಿ.ಜಿ. ಪ್ರವೀಣಕುಮಾರ್

ಬೀದರ್ ಜಿಲ್ಲೆಯಲ್ಲಿ 2020ರಲ್ಲಿ 803 ಕೆಜಿ, 2021ರಲ್ಲಿ 1,512 ಕೆ.ಜಿ. ಹಾಗೂ 2022ರಲ್ಲಿ 640 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಈ ವರ್ಷದಲ್ಲಿ ಪೊಲೀಸರು ಒಂದೇ ತಿಂಗಳಲ್ಲಿ 640 ಕೆ.ಜಿ. ವಶ ಪಡಿಸಿಕೊಂಡಿದ್ದಾರೆ

ಡಿ. ಕಿಶೋರಬಾಬು, ಎಸ್ಪಿ, ಬೀದರ್

ಗಾಂಜಾ ಸೇವಿಸುವವರಿಗೆ ₹ 10 ಸಾವಿರದವರೆಗೆ ದಂಡ ವಿಧಿಸುವ ಅವಕಾಶ ಇದೆ. ಪೂರೈಸುವ ಮತ್ತು ಬಳಸುವವರ ವಿರುದ್ಧ ಕಾನೂನು ಕ್ರಮಕ್ಕೈಗೊಂಡರೆ ಹಾವಳಿ ನಿಯಂತ್ರಣಕ್ಕೆ ಬರಬಹುದು. ಮಾಹಿತಿ ಬಂದ ತಕ್ಷಣ ಪ್ರಕರಣ ದಾಖಲಿಸುತ್ತೇವೆ

ಇಶಾ ಪಂತ್ ಎಸ್ಪಿ, ಕಲಬುರಗಿ

ದಶಕದಿಂದ ಕಾಡಿದ ಡ್ರಗ್ಸ್ ದಂಧೆ

ಮಂಗಳೂರು: ಕಳೆದ ಒಂದು ದಶಕದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡ ಕರಾವಳಿಯಲ್ಲಿ ಮಾದಕ ವಸ್ತುಗಳ ದಂಧೆ ಅವ್ಯಾಹತವಾಗಿ ನಡೆದಿತ್ತು. ಕೋವಿಡ್–19 ನಿರ್ಬಂಧ, ಲಾಕ್‌ಡೌನ್‌ನ ಸಂದರ್ಭದಲ್ಲಿ ಇಳಿಮುಖವಾಗಿದೆ.

ಮಾದಕ ವಸ್ತು ದಂಧೆಯಲ್ಲಿ ನಟರು, ನಿರೂಪಕರು ಪಾಲ್ಗೊಂಡಿರುವುದು ಇತ್ತೀಚಿನ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು. ಅವರಿಂದ ದೊರೆತ ಮಾಹಿತಿಯ ಮೇಲೆ ನೈಜೀರಿಯಾದ ಪ್ರಜೆಗಳನ್ನೂ ನಗರದ ಪೊಲೀಸರು ಬಂಧಿಸಿದ್ದಾರೆ.

ಹೊರ ಜಿಲ್ಲೆ, ಹೊರ ರಾಜ್ಯದ ವಿದ್ಯಾರ್ಥಿಗಳನ್ನಷ್ಟೇ ಗುರಿಯಾಗಿಟ್ಟುಕೊಂಡು ಕರಾವಳಿ ಜಿಲ್ಲೆಯಲ್ಲಿ ಮಾದಕ ವಸ್ತುಗಳ ಜಾಲ ಸಕ್ರಿಯವಾಗಿದೆ. ಈ ಡ್ರಗ್ಸ್ ವಹಿವಾಟು ಗ್ರಾಮಾಂತರ ಪ್ರದೇಶಗಳ ಜತೆಗೆ ಶಾಲಾ-ಕಾಲೇಜು ಕ್ಯಾಂಪಸ್‌ಗಳನ್ನೂ ಆವರಿಸಿದೆ.

ನೆರೆಯ ಕೇರಳದ ಕಾಸರಗೋಡು, ಗೋವಾ, ಮಹಾರಾಷ್ಟ್ರದಿಂದ ರೈಲಿನಲ್ಲಿ ಮಂಗಳೂರಿಗೆ ಪ್ರಮುಖವಾಗಿ ಗಾಂಜಾ ಪೂರೈಕೆಯಾಗುತ್ತಿದೆ. ವೆಬ್‌ಸೈಟ್, ಇ-ಮೇಲ್, ವಾಟ್ಸ್‌ಆ್ಯಪ್‌ನಲ್ಲೂ ಡ್ರಗ್ಸ್ ಬುಕ್ಕಿಂಗ್ ದಂಧೆ ನಡೆಯುತ್ತಿದೆ.

ಮಂಗಳೂರಿನಲ್ಲಿ ಡ್ರಗ್ಸ್ ದಂಧೆ ಆಳವಾಗಿ ಬೇರೂರಿದ್ದು, 6 ವರ್ಷಗಳಲ್ಲಿ 850ಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. 1,200ಕ್ಕೂ ಅಧಿಕ ಮಂದಿ ಬಂಧಿತರಾಗಿದ್ದಾರೆ. ಕೋಟ್ಯಂತರ ಮೌಲ್ಯದ ಮಾದಕ ವಸ್ತುಗಳು ಮತ್ತು ಇತರ ವಸ್ತುಗಳು ಪತ್ತೆಯಾಗಿವೆ.

ವೃತ್ತಿ ಶಿಕ್ಷಣಕ್ಕೆ ಮಂಗಳೂರು ಹೆಸರಾಗಿದ್ದು, ಇಲ್ಲಿರುವ ದೇಶ, ವಿದೇಶಗಳ ವಿದ್ಯಾರ್ಥಿಗಳು ಮತ್ತು ಇತರ ಯುವಜನರು ಡ್ರಗ್ಸ್‌ನ ಪ್ರಮುಖ ಗ್ರಾಹಕರು. ಗಾಂಜಾ ಮತ್ತು ಸಿಂಥೆಟಿಕ್ ಡ್ರಗ್‌ಗಳಾದ ಎಂಡಿಎಂಎ, ಕೊಕೇನ್, ಚರಸ್, ಹಶೀಶ್ ಇತ್ಯಾದಿ ವಿವಿಧ ಭಾಗಗಳಿಂದ ಸರಬರಾಜಾಗುತ್ತಿವೆ. 2019ರಿಂದ ಸಿಂಥೆಟಿಕ್ ಡ್ರಗ್‌ಗಳು ಸಾಕಷ್ಟು ಪ್ರಮಾಣದಲ್ಲಿ ಪೂರೈಕೆ ಆಗುತ್ತಿರುವುದು ಪೊಲೀಸರ ಕಾರ್ಯಾಚರಣೆಯಿಂದ ಬೆಳಕಿಗೆ ಬಂದಿದೆ.

ಉಭಯ ಜಿಲ್ಲೆಗಳ ಪೊಲೀಸರು ವಶಪಡಿಸಿಕೊಂಡ ಸುಮಾರು ₹1.50 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಕಳೆದ ವರ್ಷ ನಾಶ ಮಾಡಲಾಗಿದೆ.

‘ಮಾಹಿತಿದಾರರ ಜಾಲ ಬಲಗೊಳ್ಳಲಿ’

• ಜಿ.ಶಿವಕುಮಾರ

ಅಶೋಕ್ ಕುಮಾರ್

ಬೆಂಗಳೂರು: ‘ಪೊಲೀಸರು ಮಾಹಿತಿದಾರರ ಜಾಲ ಬಲಗೊಳಿಸಬೇಕು. ಪೆಡ್ಲರ್‌ಗಳು ರಾಜ್ಯಕ್ಕೆ ಗಾಂಜಾ ತರಲು ರೈಲು ಮಾರ್ಗವನ್ನೇ ಹೆಚ್ಚಾಗಿ ಬಳಸುತ್ತಾರೆ. ಹೀಗಾಗಿ ಹೊರ ರಾಜ್ಯಗಳಿಂದ ಅದರಲ್ಲೂ ಮುಖ್ಯವಾಗಿ ವಿಶಾಖಪಟ್ಟಣದಿಂದ ಬರುವ ರೈಲುಗಳ ಮೇಲೆ ಹದ್ದಿನ ಕಣ್ಣು ಇಡಬೇಕು. ಪ್ರತಿಯೊಂದು ನಿಲ್ದಾಣದಲ್ಲೂ ಬೋಗಿಗಳ ತಪಾಸಣೆ ನಡೆಸಬೇಕು. ಹಾಗಾದಾಗ ಗಾಂಜಾ ಪಿಡುಗಿಗೆ ಕಡಿವಾಣ ಸಾಧ್ಯ’...

ಇದು ನಿವೃತ್ತ ಪೊಲೀಸ್ ಅಧಿಕಾರಿಗಳಾದ ಬಿ.ಕೆ.ಶಿವರಾಂ ಹಾಗೂ ಬಿ.ಬಿ.ಅಶೋಕ್‌ಕುಮಾರ್ (ಟೈಗರ್) ಅವರ ಅಭಿಪ್ರಾಯ.

ಬಿ.ಕೆ.ಶಿವರಾಂ

‘ಗಾಂಜಾ ಪತ್ತೆಗೆಂದೇ ಶ್ವಾನದಳಕ್ಕೆ ವಿಶೇಷ ತರಬೇತಿ ನೀಡಲಾಗುತ್ತಿದೆ. ಗಾಂಜಾ ಪತ್ತೆಗೆ ಬಳಸುವ ಶ್ವಾನಗಳ ಸಂಖ್ಯೆ ಹೆಚ್ಚಬೇಕು. ಪೊಲೀಸರ ನಿರ್ಲಕ್ಷ್ಯದಿಂದಾಗಿ ಮಾಹಿತಿದಾರರ ಜಾಲ ಛಿದ್ರವಾಗಿದೆ. ಅದನ್ನು ಬಲಪಡಿಸಲು ಒತ್ತು ನೀಡಬೇಕು. ಗಾಂಜಾ ಮಾರುವವರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಪತ್ತೆಯಾದರೆ ಅದಕ್ಕೆ ಅಲ್ಲಿನ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿಯನ್ನೇ ಹೊಣೆಗಾರರನ್ನಾಗಿ ಮಾಡಬೇಕು’ ಎಂದು ಬಿ.ಕೆ.ಶಿವರಾಂ ತಿಳಿಸಿದರು.

‘ನಾನು ಇಲಾಖೆಯಲ್ಲಿದ್ದಾಗ ಭಿಕ್ಷುಕನೊಬ್ಬ ನೀಡಿದ್ದ ಮಾಹಿತಿ ಆಧರಿಸಿ ಬ್ರಿಗೇಡ್ ರಸ್ತೆಯಲ್ಲಿ 5 ಕೆ.ಜಿ. ಓಪಿಎಂ ಜಪ್ತಿ ಮಾಡಿದ್ದೆ. ಹೀಗಾಗಿ ಪೊಲೀಸರು ಕೊಳೆಗೇರಿ ನಿವಾಸಿಗಳು, ಬೀದಿ ಬದಿ ವ್ಯಾಪಾರಿಗಳು, ವಿದ್ಯಾರ್ಥಿಗಳು, ಗುಮಾಸ್ತರು ಹೀಗೆ ಎಲ್ಲಾ ವರ್ಗದವರ ನಂಬಿಕೆ ಗಳಿಸಬೇಕು. ಮಾಹಿತಿ ಜಾಲವು ನೇಯ್ಗೆ ಇದ್ದಂತೆ. ಒಂದು ನೂಲು ಕಿತ್ತರೂ ಇಡೀ ಬಟ್ಟೆ ಹಾಳಾಗುತ್ತದೆ. ಇದನ್ನು ಅರಿತು ಕೆಲಸ ಮಾಡಬೇಕು’ ಎಂದರು.

ಪೆಡ್ಲರ್‌ಗಳ ಜೊತೆ ಪೊಲೀಸರ ಒಳ ಒಪ್ಪಂದ: ‘ಸ್ಥಳೀಯ ಪೊಲೀಸರು ಗಾಂಜಾ ಪೆಡ್ಲರ್‌ಗಳ ಜೊತೆ ಒಳ ಒಪ್ಪಂದ ಮಾಡಿಕೊಂಡಿರುತ್ತಾರೆ. ಗಾಂಜಾ ಮಾರಾಟದ ಬಗ್ಗೆ ಮಾಹಿತಿ ಬಂದರೂ ಕೆಲ ಅಧಿಕಾರಿಗಳು ಅದಕ್ಕೆ ಕಿವಿಗೊಡುವುದಿಲ್ಲ. ಅವರ ಅದಕ್ಷತನದಿಂದಲೇ ಈ ಜಾಲ ಸಕ್ರಿಯವಾಗಿದೆ’ ಎಂದು ಅಶೋಕ್‌ಕುಮಾರ್ ಹೇಳಿದರು.

‘ಅಧಿಕಾರಿಗಳು ಪ್ರಾಮಾಣಿಕರಾದರೆ ಗಾಂಜಾ ಮಾರಾಟ ಜಾಲ ಹತ್ತಿಕ್ಕುವುದು ಸುಲಭ. ಗಾಂಜಾ ಜಪ್ತಿಗೆ ನಿರ್ದಿಷ್ಟ ವಿಧಾನವಿದೆ. ಬಹಳ ಮಂದಿ ಪೊಲೀಸರಿಗೆ ಅದರ ಅರಿವಿಲ್ಲ. ಹೀಗಾಗಿ ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಗುತ್ತಿದೆ. ಗಾಂಜಾ ಅಡ್ಡೆಗಳ ಮೇಲೆ ಗೆಜೆಟೆಡ್ ಅಧಿಕಾರಿಗಳಷ್ಟೇ ದಾಳಿ ಮಾಡಬಹುದು. ನಮ್ಮಲ್ಲಿ ಕಾನ್‌ಸ್ಟೆಬಲ್‌ಗಳೂ ಹಣದ ಆಸೆಯಿಂದ ಅಡ್ಡೆಗಳ ಮೇಲೆ ದಾಳಿ ಮಾಡುತ್ತಾರೆ. ಅದು ತಪ್ಪು’ ಎಂದರು. ‘ಪೊಲೀಸರು ಮಾಹಿತಿದಾರರ ವಿಚಾರ ಗೋಪ್ಯವಾಗಿ ಇಡಬೇಕು. ಪೊಲೀಸ್, ಆರೋಗ್ಯ ಹಾಗೂ ಶಿಕ್ಷಣ ಇಲಾಖೆಗಳು ಒಂದಾಗಿ ಗಾಂಜಾ ಸೇವನೆಯಿಂದ ಆಗಬಹುದಾದ ತೊಂದರೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು’ ಎಂದರು.

‘ಗಾಂಜಾ ಸೇವನೆಯಿಂದ ನರಗಳಿಗೆ ಹಾನಿ’

ಗಾಂಜಾ ಸೇವನೆ ವ್ಯಸನಕ್ಕೆ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಒಳಪಡುತ್ತಿದ್ದಾರೆ. ಖುಷಿ, ಮನರಂಜನೆಗಾಗಿ ಹೆಚ್ಚಿನವರು ಇದನ್ನು ತೆಗೆದುಕೊಳ್ಳುತ್ತಾರೆ. ಇದು ದೇಹ ಹಾಗೂ ಮಿದುಳಿನ ಮೇಲೆ ಬಲವಾದ ಪರಿಣಾಮ ಬೀರುತ್ತದೆ. ಗಾಂಜಾ ಸೇದಿದಾಗ ಅದರಲ್ಲಿರುವ ಟಿ.ಎಚ್.ಸಿ. ರಾಸಾಯನಿಕ, ಶ್ವಾಸಕೋಶಗಳಿಂದ ರಕ್ತ ಸೇರುತ್ತದೆ. ರಕ್ತ ಮಿದುಳಿಗೆ ಹಾಗೂ ದೇಹದ ಇತರ ಭಾಗಗಳಿಗೆ ರಾಸಾಯನಿಕವನ್ನು ಒಯ್ಯುತ್ತದೆ. ಇದರಿಂದ ಮಿದುಳು ದುರ್ಬಲವಾಗುತ್ತದೆ. ಹೆಚ್ಚಿನವರಿಗೆ ಇದರ ಸೇವನೆಯಿಂದ ನರ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ವ್ಯಕ್ತಿ ಮಾನಸಿಕವಾಗಿಯೂ ಕುಗ್ಗುತ್ತಾ ಹೋಗುತ್ತಾನೆ.

ತಂಬಾಕು ಉತ್ಪನ್ನಗಳ ಸೇವೆಯನ್ನು ದೇಶದಲ್ಲಿ ಕಾನೂನುಬದ್ಧಗೊಳಿಸಲಾಗಿದೆ. ಇದರ ಪರಿಣಾಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 30 ರಷ್ಟು ಜನರು ವ್ಯಸನಗಳಿಗೆ ಒಳಗಾಗಿದ್ದಾರೆ. ಮಾದಕ ವ್ಯಸನಕ್ಕೆ ಗಾಂಜಾ ಪ್ರವೇಶ ಕಲ್ಪಿಸುತ್ತದೆ. ಇದನ್ನು ಒಮ್ಮೆ ಪಡೆದರೆ ಮತ್ತೆ ಮತ್ತೆ ಪಡೆಯಬೇಕೆಂದು ಅನಿಸುತ್ತದೆ. ಯೌವ್ವನದಲ್ಲಿ ಆರಂಭವಾಗುವ ಈ ವ್ಯಸನಗಳು, ಜೀವನದ ಉದ್ದಕ್ಕೂ ಮುಂದುವರಿಯುತ್ತದೆ.

ಉಸಿರಾಟದ ತೊಂದರೆ, ಧೂಮಪಾನದಿಂದ ಉಂಟಾಗುವ ಎಲ್ಲ ರೀತಿಯ ಶ್ವಾಸಕೋಶದ ತೊಂದರೆಗಳು ಗಾಂಜಾ ಸೇದುವುದರಿಂದಲೂ ಉಂಟಾಗಬಹುದು. ಕೆಮ್ಮು, ಶ್ವಾಸಕೋಶದ ಸೋಂಕು ರೋಗಗಳು ಕಾಣಿಸಿಕೊಳ್ಳಬಹುದು. ಯುವಜನರಿಗೆ ಗಾಂಜಾದಿಂದ ಉಂಟಾಗುವ ಅಪಾಯಗಳ ಬಗ್ಗೆ ಅರಿವು ನೀಡಬೇಕು. ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಿದರೆ, ಗಾಂಜಾ ಸೇವನೆಗೂ ತಡೆ ಒಡ್ಡಲು ಸಾಧ್ಯ.



ಡಾ. ವಿಶಾಲ್ ರಾವ್, ಎಚ್‌.ಸಿ.ಜಿ ಆಸ್ಪತ್ರೆ ಕ್ಯಾನ್ಸರ್ ತಜ್ಞ, ತಂಬಾಕು ನಿಯಂತ್ರಣ ಸಂಬಂಧಿತ ಉನ್ನತ ಮಟ್ಟದ ಸಮಿತಿ ಸದಸ್ಯ

ಸಿದ್ದಪ್ಪಾಜಿ, ಮಂಟೇಸ್ವಾಮಿ ಆರಾಧನೆಯಲ್ಲಿ ‘ಭಂಗಿ’ಗೆ ಮಹತ್ವ

ಗಾಂಜಾ ಬಳಕೆಗೆ ಜಾನಪದೀಯ ನಂಟು

ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲ್ಲೂರಿನಲ್ಲಿ ಭಕ್ತರು ಸಿದ್ದಪ್ಪಾಜಿ ಕಂಡಾಯಕ್ಕೆ ಎಡೆ ಅರ್ಪಿಸುತ್ತಿರುವುದು (ಸಂಗ್ರಹ ಚಿತ್ರ)

• ಸೂರ್ಯನಾರಾಯಣ ವಿ.

ಚಾಮರಾಜನಗರ: ಜಾನಪದ ಕಲೆ, ಕಾವ್ಯಗಳ ತವರು ಎಂದು ಗುರುತಿಸಿಕೊಂಡಿರುವ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಗಾಂಜಾಕ್ಕೂ ಜಾನಪದ ಸಂಸ್ಕೃತಿಗೂ ನಂಟಿರುವುದು ವಿಶೇಷ.

ಪವಾಡ ಪುರುಷರಾದ ಸಿದ್ದಪ್ಪಾಜಿ, ಮಂಟೇಸ್ವಾಮಿ ಮತ್ತು ಅವರ ಶಿಷ್ಯರ ಗದ್ದುಗೆಗಳಿಗೆ ಮಾಂಸಾಹಾರದ ಎಡೆ (ನೈವೇದ್ಯ) ಇಡುವಾಗ, ಕಂಡಾಯ ಉತ್ಸವಗಳಲ್ಲಿ, ದೇವಾಲಯಗಳಲ್ಲಿ ನಡೆಯುವ ಪಂಕ್ತಿಸೇವೆಗಳಲ್ಲಿ ಗಾಂಜಾ ಬಳಕೆಯಾಗುತ್ತದೆ.

‘ಎಡೆ, ಪಂಕ್ತಿಸೇವೆಗೆ ಸಿದ್ಧಪಡಿಸುವ ಆಹಾರ ಪದಾರ್ಥಗಳಿಗೆ ಗಾಂಜಾ ಸೇರಿಸುತ್ತಾರೆ. ಮೊದಲು ಜಾತ್ರೆಗಳಲ್ಲಿ ಭಂಗಿ ಸೇವಿಸುತ್ತಿದ್ದರು. ಈಗ ಕಡಿಮೆಯಾಗಿದೆ’ ಎಂದು ಹೇಳುತ್ತಾರೆ ಸಿದ್ದಪ್ಪಾಜಿ,ಮಂಟೇಸ್ವಾಮಿಒಕ್ಕಲಿನವರು.

ಧಾರ್ಮಿಕ ಉದ್ದೇಶಗಳಿಗಾಗಿಯೇ ಮನೆಯ ಹಿತ್ತಲಿನಲ್ಲಿ ಗಾಂಜಾ ಬೆಳೆಯುವವರಿದ್ದಾರೆ. ಅದಕ್ಕಾಗಿ ಗಾಂಜಾ ಪೂರೈಸುವವರು ಇದ್ದಾರೆ. ಎಲ್ಲಿ ಹೋಗಿ ಕೇಳಿದರೆ ಗಾಂಜಾ ಸಿಗುತ್ತದೆ ಎಂಬುದು ಜನರಿಗೆ ತಿಳಿದಿದೆ. ಆಚರಣೆಯ ನೆಪದಲ್ಲಿ ಗಾಂಜಾ ದಂಧೆಯನ್ನು ಮಾಡುವವರೂ ಇದ್ದಾರೆ.

‘ಚಿಕ್ಕಲ್ಲೂರು, ಕುರುಬನಕಟ್ಟೆ, ಕೆ.ಆರ್.ನಗರ ಸಮೀಪವಿರುವ ಕಪ್ಪಡಿ ಕ್ಷೇತ್ರಗಳಲ್ಲಿ ಗಾಂಜಾ ಬಳಕೆ ಜನಪದ ಆಚರಣೆಯ ಭಾಗ. ಶತಮಾನಗಳಿಂದ ನಡೆದಿದ್ದರೂ ವ್ಯಸನ ಅಥವಾ ಅಪರಾಧದ ರೂಪದಲ್ಲಿಲ್ಲ. ಶಾಸ್ತ್ರಕ್ಕಷ್ಟೇ ಸೀಮಿತ. ಗಾಂಜಾ ಸೇವನೆಯಿಂದ ಒಳ್ಳೆಯ ಮನಃಸ್ಥಿತಿ ಉಂಟಾಗುತ್ತದೆ ಎಂಬ ನಂಬಿಕೆ ಜನರದ್ದು’ ಎಂದು ಜಾನಪದ ತಜ್ಞ ಮಹಾದೇವ ಶಂಕನಪುರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಿದ್ದಪ್ಪಾಜಿ, ಮಂಟೇಸ್ವಾಮಿ ಭಂಗಿ ಸೇವಿಸುತ್ತಿದ್ದರು. ಭಂಗಿ ಸೇವೆ ನಮಗೆ ಆಗಲಿ, ಹರವರ ಸೇವೆ ನಿಮಗೆ ಆಗಲಿ, ಸಿದ್ದಪ್ಪಾಜಿ ಕಂಡಾಯ ಊರಿಗೆ ಬರಲಿ ಎಂಬ ಸಾಲು ಸಿದ್ದಪ್ಪಾಜಿ ಕಾವ್ಯದಲ್ಲಿದೆ. ಎಡೆಯಲ್ಲಿ ಗಾಂಜಾ ಹಾಕಿದರೆ ಪವಾಡ ಪುರುಷರು ಸೇವಿಸುತ್ತಾರೆ ಎಂಬುದು ಭಕ್ತರ ನಂಬಿಕೆ’ ಎಂದು ನೀಲಗಾರ ಕೈಲಾಸ ಮೂರ್ತಿ ಹೇಳಿದರು.

ಗಾಂಜಾ ಗಿಡಗಳು

ಕಾಡಂಚಿನಲ್ಲಿ ಬೆಳೆ: ಜಿಲ್ಲೆಯ ದಟ್ಟ ಅರಣ್ಯದ ಒಳಗೆ ಹಾಗೂ ಕಾಡಂಚಿನ ಪ್ರದೇಶದಲ್ಲಿ ತೋಟಗಳ ನಡುವೆ ಗಾಂಜಾ ಬೆಳೆಯಲಾಗುತ್ತದೆ. ಹನೂರು ತಾಲ್ಲೂಕು, ಚಾಮರಾಜನಗರ ತಾಲ್ಲೂಕಿನ ಪುಣಜನೂರು ವ್ಯಾಪ್ತಿಯಲ್ಲೇ ಹೆಚ್ಚು. ಒಣ ಗಾಂಜಾ ಸಂಗ್ರಹ, ಮಾರಾಟದ ಜಾಲ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ. ಕೆಲವು ಆದಿವಾಸಿಗಳೂ ಸಕ್ರಿಯವಾಗಿ ಭಾಗಿಯಾಗುತ್ತಾರೆ. ಬೆಂಗಳೂರು, ಆಂಧ್ರಕ್ಕೂ ಗಾಂಜಾ ಪೂರೈಕೆಯಾಗುತ್ತದೆ. ಕಳೆದ ವರ್ಷ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯದ ಬಳಿ ಭಾರಿ ಪ್ರಮಾಣದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದು ಪತ್ತೆಯಾಗಿತ್ತು.

ಹಾಸನ ಜಿಲ್ಲೆಯ ಹಳೇಬೀಡು, ಅರಸೀಕೆರೆ, ಬೇಲೂರು ಭಾಗದಲ್ಲಿ ಬೆಳೆಗಳ ಮಧ್ಯೆ ಗಾಂಜಾ ಬೆಳೆಯಲಾಗುತ್ತಿದೆ. ಕೇರಳ ಹಾಗೂ ತಮಿಳುನಾಡಿನವರು ರೈತರನ್ನು ಪ್ರಚೋದಿಸುತ್ತಿದ್ದಾರೆ.

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ, ಹುಣಸೂರು, ಸರಗೂರು, ಪಿರಿಯಾಪಟ್ಟಣ ಮತ್ತು ತಿ.ನರಸೀಪುರ ತಾಲ್ಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಗಾಂಜಾ ಬೆಳೆಯುತ್ತಿದ್ದಾರೆ. ಗ್ರಾಮೀಣ ಭಾಗಗಳಲ್ಲಿ ಗಾಂಜಾ ಸೇವನೆ ಚಟಕ್ಕೆ ಬೀಳುತ್ತಿರುವವರೂ ಹೆಚ್ಚಾಗಿದ್ದಾರೆ. ಗಾಂಜಾ ಗಿಡಗಳ ವಶ, ಸಾಗಾಟ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯಲ್ಲಿ ತಿಂಗಳಿಗೆ ಒಂದೆರಡು ಪ್ರಕರಣಗಳು ವರದಿಯಾಗುತ್ತಿವೆ.

ಕೊಡಗಿನಲ್ಲಿ ಶುಂಠಿ ಹಾಗೂ ಕಾಫಿ ತೋಟಗಳ ನಡುವೆ ಗಾಂಜಾ ಬೆಳೆಯುತ್ತಿದ್ದು, ಹೋಂ ಸ್ಟೇಗಳಿಗೆ ಪೂರೈಕೆ ಮಾಡುತ್ತಿರುವ ಆರೋಪಗಳಿವೆ. ಪೊಲೀಸರು, ಅಬಕಾರಿ ಇಲಾಖೆ, ಅರಣ್ಯ ಇಲಾಖೆಗಳು ಗಾಂಜಾ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದರೂ, ಸಣ್ಣ ಪ್ರಮಾಣದ ಪ್ರಕರಣಗಳಷ್ಟೇ ಪತ್ತೆಯಾಗುತ್ತಿವೆ.

ಪೂರಕ ಮಾಹಿತಿ: ಮಹಮ್ಮದ್ ನೂಮಾನ್, ಕೆ.ಎಸ್. ಸುನಿಲ್, ಆದಿತ್ಯ ಕೆ.ಎ

ನಿಯಂತ್ರಣಕ್ಕೆ ಬಿಗಿ ಕ್ರಮ

ಗಾಂಜಾ ಬೆಳೆ, ಸಂಗ್ರಹ, ಮಾರಾಟದ ಮೇಲೆ ನಿಗಾ ಇರಿಸಲಾಗಿದೆ. ಮಾಹಿತಿ ಸಿಕ್ಕಿದ ತಕ್ಷಣ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅರಣ್ಯದ ಅಂಚು, ಗಡಿ ಪ್ರದೇಶಗಳಲ್ಲಿ ಗಾಂಜಾ ಪ್ರಕರಣಗಳು ವರದಿಯಾಗುತ್ತಿರುವುದು ಗಮನಕ್ಕೆ ಬಂದಿವೆ. ಎಲ್ಲ ಮಾಹಿತಿಗಳನ್ನು ಕಲೆ ಹಾಕಲಾಗುತ್ತಿದೆ. ವಿಶೇಷ ತಂಡ ರಚಿಸಿ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಬಿಗಿಗೊಳಿಸಿ ಜಿಲ್ಲೆಯಲ್ಲಿ ಮಾದಕ ವಸ್ತುಗಳ ಸಂಗ್ರಹ, ಮಾರಾಟಕ್ಕೆ ಕಡಿವಾಣ ಹಾಕಲಾಗುವುದು

–ಟಿ.ಪಿ.ಶಿವಕುಮಾರ್, ಚಾಮರಾಜನಗರ ಎಸ್‌ಪಿ

ಗಾಂಜಾ ಗಮ್ಮತ್ತಿನ ಆಪತ್ತು...

ಒಂದನೇ ಪುಟದಿಂದ

‘ಒಡಿಶಾ, ತ್ರಿಪುರಾ, ಬಿಹಾರ, ಮಧ್ಯಪ್ರದೇಶ, ಕೇರಳ ಹಾಗೂ ಆಂಧ್ರಪ್ರದೇಶದಿಂದ ರಾಜ್ಯಕ್ಕೆ ಗಾಂಜಾ ಬರುತ್ತದೆ. ಅದನ್ನೇ ಕೆ.ಜಿ.ಗೆ ₹ 10 ಸಾವಿರದಿಂದ ₹ 20 ಸಾವಿರ ಕೊಟ್ಟು ಪೆಡ್ಲರ್‌ಗಳು ಖರೀದಿಸುತ್ತಾರೆ. ಹಣ್ಣು, ತರಕಾರಿ, ವಿವಿಧ ಕೃಷಿ ಉತ್ಪನ್ನಗಳು, ಬಟ್ಟೆ, ದಿನಸಿ, ದಿನೋಪಯೋಗಿ ವಸ್ತುಗಳ ಸಾಗಣೆ ನೆಪದಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಮೂಲಕ ರಾಜ್ಯಕ್ಕೆ ಗಾಂಜಾ ಪ್ರವೇಶಿಸುತ್ತದೆ. ಬಸ್, ರೈಲು ಮೂಲಕವೇ ಸರಬರಾಜಾಗುತ್ತದೆ’ ಎಂದೂ ತಿಳಿಸಿದರು.

ಗಲ್ಲಿ ಗಲ್ಲಿಗೂ ಪೂರೈಕೆ: ‘ರಾಜ್ಯಕ್ಕೆ ಬರುವ ಗಾಂಜಾ, ಪೆಡ್ಲರ್‌ಗಳ ಅಡ್ಡೆ ಸೇರುತ್ತದೆ. ನಂತರ, ಪ್ರತಿ ಕೆ.ಜಿ.ಗೆ ₹ 50 ಸಾವಿರದಿಂದ ₹ 60 ಸಾವಿರವರೆಗೆ ಉಪಪೆಡ್ಲರ್‌ಗಳಿಗೆ ಮಾರಲಾಗುತ್ತದೆ. ಅವರ ಮೂಲಕ ಗಲ್ಲಿ ಗಲ್ಲಿಗೂ ತಲುಪುತ್ತದೆ. ಆರಂಭದಲ್ಲಿ ಪರಿಚಯಸ್ಥರಿಗೆ ಮಾತ್ರ ಗಾಂಜಾ ಮಾರುತ್ತಾರೆ. ನಂತರ, ಅವರಿಂದ ಸಂಪರ್ಕಕ್ಕೆ ಸಿಗುವವರಿಗೂ ಗಾಂಜಾ ಮಾರಾಟ ಮಾಡುತ್ತಾರೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ತಳ್ಳುಗಾಡಿ, ಗೂಡಂಗಡಿ, ಬೇಕರಿ, ಪಾನ್ ಶಾಪ್, ತಿನಿಸು ಅಂಗಡಿ, ತರಕಾರಿ, ಹಣ್ಣು ಮಾರಾಟ ಮಳಿಗೆ ಹಾಗೂ ಯುವಕರು ಹೆಚ್ಚು ಸೇರುವ ಸ್ಥಳಗಳಲ್ಲಿ ಗಾಂಜಾ ಮಾರಾಟ ಜೋರಾಗಿರುತ್ತದೆ. ಸಿಗರೇಟ್ ಹಾಗೂ ತಂಬಾಕು ಉತ್ಪನ್ನ ಮಾರಾಟ ಮಾಡುವ ಸ್ಥಳದಲ್ಲೂ ಗಾಂಜಾ ಹೆಚ್ಚಾಗಿ ಸಿಗುತ್ತದೆ. 10 ಗ್ರಾಂ ಗಾಂಜಾಕ್ಕೆ ₹ 200ರಿಂದ ₹250 ದರ ಇರುತ್ತದೆ. 10 ಗ್ರಾಂ, 50 ಗ್ರಾಂ, 100 ಗ್ರಾಂ, 250 ಗ್ರಾಂ ಪೊಟ್ಟಣದಲ್ಲಿ ವ್ಯಸನಿಗಳು ಗಾಂಜಾ ಖರೀದಿಸುತ್ತಾರೆ. ಗಾಂಜಾ ಚಿಗುರೆಲೆ, ಹೂವು, ಹಣ್ಣು, ಬೀಜ, ಸೊಪ್ಪು, ಎಲೆ, ಮೊಗ್ಗು, ಚರಸ್, ಹಶೀಷ್‌ಗೆ (ಎಣ್ಣೆ) ಬೇಡಿಕೆ ಇದೆ.’

‘ಒಬ್ಬ ವ್ಯಸನಿ, ಒಂದು ಬಾರಿಗೆ ಕನಿಷ್ಠ 10 ಗ್ರಾಂ ಗಾಂಜಾ ತೆಗೆದುಕೊಳ್ಳುತ್ತಾನೆ. ಆತನ ಸಾಮರ್ಥ್ಯಕ್ಕೆ ತಕ್ಕಂತೆ ಗರಿಷ್ಠ ಗಾಂಜಾ ಸೇದುತ್ತಾನೆ. ಯುವಕರೇ ಹೆಚ್ಚು ಗಾಂಜಾ ವ್ಯಸನಿಗಳಾಗುತ್ತಿದ್ದಾರೆ. ಆ ಪೈಕಿ ಹಲವರು, ಸುಲಿಗೆ, ದರೋಡೆ, ಹಲ್ಲೆ, ಕೊಲೆ ಯತ್ನದಂಥ ಅಪರಾಧ ಕೃತ್ಯ ಎಸಗುತ್ತಿದ್ದಾರೆ’ ಎಂದೂ ಅಧಿಕಾರಿ ಮಾಹಿತಿ ನೀಡಿದರು.

ವಿದ್ಯಾವಂತರೇ ಹೆಚ್ಚು: ‘ಕೆಲ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳು, ಕೆಲ ಸಾಫ್ಟ್‌ವೇರ್ ಕಂಪನಿಗಳ ಉದ್ಯೋಗಿಗಳೇ ಹೆಚ್ಚಾಗಿ ಗಾಂಜಾ ಸೇವಿಸುತ್ತಿದ್ದಾರೆ. ಹಲವು ಪ್ರಕರಣಗಳಲ್ಲಿ ಅಂಥವರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಎಂಜಿನಿಯರಿಂಗ್, ವೈದ್ಯಕೀಯ ಹಾಗೂ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಒತ್ತಡ ಹೆಚ್ಚು. ಅದರಿಂದ ಹೊರಬರಲು ಹಲವರು ಗಾಂಜಾ ಸೇವಿಸುತ್ತಾರೆ. ಇವರೇ ನಮಗೆ ಕಾಯಂ ಗ್ರಾಹಕರು’ ಎಂಬುದಾಗಿ ಪ್ರಕರಣವೊಂದರಲ್ಲಿ ಸೆರೆಸಿಕ್ಕ ಪೆಡ್ಲರ್ ಹೇಳಿಕೆ ನೀಡಿದ್ದ’ ಎಂದೂ ತಿಳಿಸಿದರು.

ಪೆಡ್ಲರ್‌ಗಳಿಗೆ ‘ಖಾಕಿ’, ‘ಖಾದಿ’ ರಕ್ಷಣೆ: ‘ರಾಜ್ಯದಲ್ಲಿ ಹೆಮ್ಮರವಾಗಿ ಬೆಳೆದಿರುವ ಗಾಂಜಾ ಜಾಲವನ್ನು ಕೆಲ ಪೊಲೀಸರು ಹಾಗೂ ಕೆಲ ರಾಜಕಾರಣಿಗಳೇ ರಕ್ಷಿಸುತ್ತಿದ್ದಾರೆ. ಪೆಡ್ಲರ್ ಜೊತೆ ಶಾಮೀಲಾಗಿರುವ ಅವರೆಲ್ಲ, ಜನರನ್ನು ಗಾಂಜಾ ಮತ್ತಿನಲ್ಲಿ ತೇಲಿಸಿ ದುಡ್ಡು ಮಾಡುತ್ತಿದ್ದಾರೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

‘ಠಾಣೆ ವ್ಯಾಪ್ತಿಯಲ್ಲಿ ನಡೆಯುವ ಬೆಳವಣಿಗೆಯನ್ನು ತಿಳಿಯಲು ಕೆಲವರನ್ನು ಭಾತ್ಮಿದಾರರೆಂದು ಪೊಲೀಸರು ನೇಮಿಸಿಕೊಂಡಿರುತ್ತಾರೆ. ಅಕಮಗಳ ಬಗೆ ಕೆಲ ದಿನ ಮಾಹಿತಿ ನೀಡುವ ಭಾತ್ಮಿದಾರ, ಕ್ರಮೇಣ ಗಾಂಜಾ ಪೆಡ್ಲರ್ ಜೊತೆ ಕೈ ಜೋಡಿಸುತ್ತಾನೆ. ಹಣ ಸಂಪಾದಿಸಿ, ಐಷಾರಾಮಿ ಜೀವನ ನಡೆಸುತ್ತಾನೆ. ಆತನೇ ಕೆಲ ಪೊಲೀಸರಿಗೂ ‘ಮಾಮೂಲಿ’ ಕೊಡಿಸಿ, ಗಾಂಜಾ ಮಾರಾಟಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಾನೆ. ಕಾಮಾಕ್ಷಿಪಾಳ್ಯದಲ್ಲಿ ಸಿಕ್ಕಿಬಿದ್ದ ಭಾತ್ಮಿದಾರನೇ ಇದಕ್ಕೆ ನಿದರ್ಶನ’ ಎಂದೂ ತಿಳಿಸಿದರು.

‘ಪೆಡ್ಲರ್ ಹಾಗೂ ಉಪಪೆಡ್ಲರ್‌ಗಳನ್ನು ಆಗಾಗ ಬಂಧಿಸುವ ಕೆಲ ಪೊಲೀಸರು, ಅವರ ಜೊತೆ ಕೈ ಜೋಡಿಸಿ ತಮ್ಮ ಪಾಲು ಪಡೆಯುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್‌.ಟಿ.ನಗರದ ಮನೆ ಭದ್ರತೆಯಲ್ಲಿದ್ದ ಪೊಲೀಸರಿಬ್ಬರು ಗಾಂಜಾ ಸಮೇತ ಸಿಕ್ಕಿಬಿದ್ದಿದ್ದರು. ಇಂಥ ಹಲವು ಪೊಲೀಸರಿಗೆ ಮೊದಲು ಮೂಗುದಾರ ಹಾಕಬೇಕಿದೆ’ ಎಂದೂ ಹೇಳಿದರು.

ರಾಜ್ಯದಲ್ಲಿ ಗಾಂಜಾ ವಿರುದ್ಧ ಎನ್‌ಸಿಬಿ ಕಾರ್ಯಾಚರಣೆ

ವರ್ಷ	ಪ್ರಕರಣ	ಜಪ್ತಿ ಮಾಡಲಾದ ಗಾಂಜಾ (ಕೆ.ಜಿ.ಗಳಲ್ಲಿ)	ಬಂಧಿತ ಆರೋಪಿಗಳು
2016	4	1,553	12
2017	6	232	17
2018	14	4,916	23
2019	4	2,058	8
2020	4	1,980	10
2021	12	7,565	47

ಪೆಡ್ಲರ್‌ನ ₹ 1.68 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಗಾಂಜಾ ಪೆಡ್ಲರ್ ಬಿಹಾರದ ಅಂಜಯ್ ಕುಮಾರ್ ಸಿಂಗ್ (54) ಎಂಬಾತನಿಗೆ ಸೇರಿದ್ದ ₹ 1.68 ಕೋಟಿ ಮೌಲ್ಯದ ಆಸ್ತಿಯನ್ನು ಪೊಲೀಸರು ಜಪ್ತಿ ಮಾಡಿದ್ದರು. ಎನ್‌ಡಿಪಿಎಸ್ ಕಾಯ್ದೆಯಡಿ ಪೆಡ್ಲರ್ ಆಸ್ತಿಯನ್ನು ಜಪ್ತಿ ಮಾಡಿದ ರಾಜ್ಯದ ಮೊದಲ ಪ್ರಕರಣ ಇದಾಗಿತ್ತು.

'2016ರಲ್ಲಿ ಬೆಂಗಳೂರಿಗೆ ಬಂದಿದ್ದ ಅಂಜಯ್ , ಒಡಿಶಾ ಹಾಗೂ ಆಂಧ್ರಪ್ರದೇಶದಿಂದ ಡ್ರಗ್ಸ್ ತಂದು ಮಾರುತ್ತಿದ್ದ. ಅದರಿಂದಲೇ ಆಸ್ತಿ ಗಳಿಸಿದ್ದ. ಆತನನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯದ ಆದೇಶ ಪಡೆದು, ಆರೋಪಿ ಹಾಗೂ ಪತ್ನಿ ಶೀಲಾದೇವಿ ಹೆಸರಿನಲ್ಲಿ ಆಸ್ತಿ ಜಪ್ತಿ ಮಾಡಿದ್ದೇವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಎನ್‌ಡಿಪಿಎಸ್: ಕನಿಷ್ಠ 1 ವರ್ಷ, ಗರಿಷ್ಠ 20 ವರ್ಷ ಶಿಕ್ಷೆ

ನಾರ್ಕೋಟಿಕ್ ಆ್ಯಂಡ್ ಸೈಕೋಟ್ರೋಪಿಕ್ ಸಬ್‌ಸ್ಟ್ಯಾನ್ಸಸ್ ಕಾಯ್ದೆ (ಎನ್‌ಡಿಪಿಎಸ್) ಅನ್ವಯ ಮಾದಕ ಔಷಧ ಹಾಗೂ ನಿದ್ರಾಜನ್ಯ ವಸ್ತಗಳನ್ನು ನಿಷೇಧಿಸಲಾಗಿದೆ.

ಗಾಂಜಾ ಅಥವಾ ಭಂಗಿಸೊಪ್ಪು ನಿಷೇಧದ ಬಗ್ಗೆ ಕಾಯ್ದೆಯ ಕಲಂ 2ರಲ್ಲಿ ಉಲ್ಲೇಖಿಸಲಾಗಿದೆ.

ಗಾಂಜಾ ಹಾಗೂ ಅದರ ಉತ್ಪನ್ನಗಳ ಪ್ರಕರಣ ಗಳಲ್ಲಿ ಆರೋಪ ಸಾಬೀತಾದರೆ, ಕಾಯ್ದೆಯ ಕಲಂ 20ರಡಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗುತ್ತದೆ.

- ಗಾಂಜಾ ಸಸ್ಯ ಬೆಳೆಸಿದರೆ, ಉತ್ಪಾದಿಸಿದರೆ, ಸಿದ್ಧಪಡಿಸಿದರೆ, ಸ್ವಾಧೀನದಲ್ಲಿಟ್ಟುಕೊಂಡರೆ, ಮಾರಿದರೆ, ಖರೀದಿಸಿದರೆ, ಸಾಗಿಸಿದರೆ, ಆಮದು ಮಾಡಿಕೊಂಡರೆ, ರಫ್ತು ಮಾಡಿದರೆ ಗರಿಷ್ಠ ಹತ್ತು ವರ್ಷ ಕಠಿಣ ಸೆರೆವಾಸ ಹಾಗೂ ಗರಿಷ್ಠ ₹ 1 ಲಕ್ಷ ದಂಡ. (ಜಾಮೀನುರಹಿತ)
- ಸಣ್ಣ ಪ್ರಮಾಣದಲ್ಲಿ (1 ಕೆ.ಜಿ ಹಾಗೂ ಅದಕ್ಕಿಂತ ಕಡಿಮೆ) ಗಾಂಜಾ ಒಳಗೊಂಡಿದ್ದರೆ, ಗರಿಷ್ಠ 1 ವರ್ಷ ಕಠಿಣ ಸೆರೆವಾಸ ಹಾಗೂ ಗರಿಷ್ಠ ಹತ್ತು ಸಾವಿರ ದಂಡ. (ಜಾಮೀನು ಸಹಿತ)
- ಮಧ್ಯಮ ಪ್ರಮಾಣದಲ್ಲಿ (1 ಕೆ.ಜಿ.ಯಿಂದ 20 ಕೆ.ಜಿ) ಗಾಂಜಾ ಒಳಗೊಂಡಿದ್ದರೆ, ಗರಿಷ್ಠ 10 ವರ್ಷ ಕಠಿಣ ಶಿಕ್ಷೆ ಹಾಗೂ ಗರಿಷ್ಠ 1 ಲಕ್ಷ ದಂಡ. (ಜಾಮೀನು ರಹಿತ)
- ವಾಣಿಜ್ಯ ಪ್ರಮಾಣದಲ್ಲಿ (20 ಕೆ.ಜಿ ಹಾಗೂ ಅದಕ್ಕಿಂತ ಹೆಚ್ಚು) ಗಾಂಜಾ ಒಳಗೊಂಡಿದ್ದರೆ, ಕನಿಷ್ಠ ಹತ್ತು ವರ್ಷ ಹಾಗೂ ಗರಿಷ್ಠ ಇಪ್ಪತ್ತು ವರ್ಷ ಕಠಿಣ ಸೆರೆವಾಸ. ಕನಿಷ್ಠ 1 ಲಕ್ಷ ಹಾಗೂ ಗರಿಷ್ಠ 2 ಲಕ್ಷ ದಂಡ (ಜಾಮೀನು ರಹಿತ)
- ರಾಂಜಾ ರಾಳದ ಉತ್ಪನ್ನಗಳಾದ ಚರಸ್, ಹಶೀಷ್ ಹಾಗೂ ಅದರ ಉತ್ಪನ್ನ. ಸಣ್ಣ ಪ್ರಮಾಣ (100 ಗ್ರಾಂ–ಅದಕ್ಕಿಂತ ಕಡಿಮೆ), ಮಧ್ಯಮ ಪ್ರಮಾಣ (100 ಗ್ರಾಂ. ನಿಂದ 1 ಕೆ.ಜಿ.ವರೆಗೆ) ಹಾಗೂ ವಾಣಿಜ್ಯ ಪ್ರಮಾಣ (1 ಕೆ.ಜಿ.ಗಿಂತ ಹೆಚ್ಚು) ಒಳಗೊಂಡಿದ್ದರೆ ಕಠಿಣ ಶಿಕ್ಷೆ.
- ಡ್ರಗ್ಸ್ ಸಾಗಣೆ ಹಾಗೂ ಮಾರಾಟದಲ್ಲಿ ಪದೇ ಪದೇ ಭಾಗಿಯಾಗುವವರನ್ನು ‘ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್)’ ಕಾಯ್ದೆಯಡಿ ಬಂಧಿಸಲು ಅವಕಾಶವಿದೆ. ಆರೋಪಿಗೆ ಶಿಕ್ಷೆ ವಿಧಿಸಲು ಪೊಲೀಸ್ ಮುಖ್ಯಸ್ಥರಿಗೆ ಅಧಿಕಾರವಿದ್ದು, ಇದು ಜಾಮೀನು ರಹಿತ ಅಪರಾಧ.
- ನ್ಯಾಯಾಲಯವು ತೀರ್ಪಿನಲ್ಲಿ ಉಲ್ಲೇಖಿಸಬಹುದಾದ ಕಾರಣಗಳಿಗಾಗಿ ಹೆಚ್ಚಿನ ಶಿಕ್ಷೆ ಹಾಗೂ ದಂಡವನ್ನೂ ವಿಧಿಸಬಹುದು

ಮಲೆನಾಡಿನ ಹೊಲಗಳಲ್ಲೂ ಸಮೃದ್ಧ ಗಾಂಜಾ ಬೆಳೆ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಹಲವು ದಶಕಗಳಿಂದ ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಗಾಂಜಾ ಬಳಕೆಯಲ್ಲಿದೆ. ದಟ್ಟ ಕಾಡು, ಮನೆಗಳ ಹಿತ್ತಲು, ಹೊಲ–ಗದ್ದೆಗಳ ಮಧ್ಯೆ ಯಾರಿಗೂ ತಿಳಿಯದಂತೆ, ಸೀಮಿತವಾಗಿ ಬೆಳೆಯಲಾಗುತ್ತಿದ್ದ ಈ ದಂಧೆ ಕೆಲವು ವರ್ಷಗಳಿಂದ ಈಚೆಗೆ ವಾಣಿಜ್ಯ ಸ್ವರೂಪ ಪಡೆದಿದೆ. ಹಣದಾಸೆಗೆ ಈ ಜಾಲದಲ್ಲಿ ಸಿಲುಕಿ ಮಲೆನಾಡಿನ ರೈತರು ಅಪರಾಧಿಗಳಾಗುತ್ತಿದ್ದಾರೆ.

ಪ್ರಸ್ತುತ ಮಲೆನಾಡಿನ ಹೊಲ, ತೋಟಗಳಲ್ಲಿ ಉಪ ಬೆಳೆಯಂತೆ ಗಾಂಜಾ ಬೆಳೆಯಲಾಗುತ್ತಿದೆ. ಮಲೆನಾಡಿನ ಕಾಡಿನಂಚಿನಲ್ಲಿರುವ, ಬಡ ರೈತರನ್ನು ಗುರುತಿಸುವ ಕೆಲವು ಮಧ್ಯವರ್ತಿಗಳು ಗಾಂಜಾ ಬೀಜಗಳನ್ನು ನೀಡುತ್ತಿದ್ದಾರೆ. ಗಾಂಜಾ ಬೆಳೆದ ಬಳಿಕ ತಾವೇ ಖರೀದಿಸುತ್ತಿದ್ದಾರೆ. ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಯೋಚಿಸದ ಕೆಲವು ರೈತರು ಹಣದಾಸೆಗೆ ಗುಡ್ಡ ಪ್ರದೇಶಗಳಲ್ಲಿ, ಶುಂಠಿ ಹೊಲಗಳಲ್ಲಿ, ಮೆಕ್ಕೆಜೋಳದ ಮಧ್ಯೆ ಗುಟ್ಟಾಗಿ ಬೆಳೆಯುತ್ತಿದ್ದಾರೆ. ಯಾರ ಕಣ್ಣಿಗೂ ಸಿಗದೇ ವ್ಯವಹಾರ ಪೂರೈಸಿಕೊಂಡು ಹಣ ಸಂಪಾದಿಸುವ ಮಂದಿ ಸಾಕಷ್ಟು ಇದ್ದಾರೆ.

ಗಾಂಜಾ ಪತ್ತೆಗೆ ಡ್ರೋನ್ ಬಳಕೆ: ಗಾಂಜಾ ಬೆಳೆ ವಿರುದ್ಧ ಪೊಲೀಸರು, ಅಬಕಾರಿ ಇಲಾಖೆ ಎಷ್ಟೇ ಕ್ರಮ ಕೈಗೊಂಡರೂ ನಿಯಂತ್ರಣಕ್ಕೆ ಬಂದಿರಲಿಲ್ಲ. ಪತ್ತೆಹಚ್ಚುವ ಪ್ರಯತ್ನಗಳು ಜಿಲ್ಲೆಯಲ್ಲಿ ನಿರಂತರವಾಗಿ ನಡೆದಿತ್ತು. ಆದರೂ ದಂಧೆಗೆ ಸಂಪೂರ್ಣ ಕಡಿವಾಣ ಬಿದ್ದಿರಲಿಲ್ಲ. ಇಂತಹ ಸಮಯದಲ್ಲಿ ಡ್ರೋನ್ ಬಳಸಿ ಗಾಂಜಾ ಪತ್ತೆಹಚ್ಚಲಾಗುತ್ತಿದೆ. ಸ್ವಲ್ಪ ಮಟ್ಟಿಗೆ ಇದು ಯಶಸ್ವಿಯೂ ಆಗಿದೆ.

ವಿಶಾಖಪಟ್ಟಣವೇ ಮೂಲ: ಜಿಲ್ಲೆಯ ಮಾದಕ ವ್ಯಸನಿಗಳು ಬಳಸುವ ಗಾಂಜಾದ ಶೇ 20ರಷ್ಟನ್ನು ಮಾತ್ರ ಮಲೆನಾಡು ಪೂರೈಸಿದರೆ ಶೇ 80ರಷ್ಟು ಆಂಧ್ರಪ್ರದೇಶದಿಂದ ಸರಬರಾಜಾಗುತ್ತಿದೆ. ಜಿಲ್ಲಾ ಪೊಲೀಸರು ಜಿಲ್ಲೆಗೆ ಗಾಂಜಾ ಪೂರೈಸುವ ಆಂಧ್ರಪ್ರದೇಶದ ಜಾಲಗಳನ್ನು ಭೇದಿಸುತ್ತಿದ್ದಾರೆ.

ವಿಶೇಷ ತಂಡ ರಚನೆ: ಗಾಂಜಾ ಸೇವನೆ, ವಿತರಣೆ, ಬೆಳೆ ಕ್ಷೇತ್ರ, ಪೂರೈಕೆ ಜಾಲಗಳ ಮೇಲೆ ನಿರಂತರ ನಿಗಾ ಇಟ್ಟು ನಿಯಂತ್ರಿಸಲು ಪ್ರತ್ಯೇಕ ತಂಡಗಳನ್ನೇ ರಚಿಸಲಾಗಿದೆ. ಈ ತಂಡಗಳು ಹೊರ ಜಿಲ್ಲೆ, ರಾಜ್ಯಗಳಿಂದ ಶಿವಮೊಗ್ಗ ನಗರ, ಜಿಲ್ಲೆಯ ಇತರ ಪಟ್ಟಣಗಳು, ಗ್ರಾಮಾಂತರ ಪ್ರದೇಶಗಳಿಗೆ ಬರುವ ಹಸಿ ಮತ್ತು ಒಣ ಗಾಂಜಾಗಳನ್ನು ನಿರಂತರವಾಗಿ ಪತ್ತೆ ಮಾಡಿ, ವಶಕ್ಕೆ ಪಡೆಯುತ್ತಿವೆ. ಎರಡು ತಿಂಗಳಲ್ಲಿ ₹ 50 ಲಕ್ಷ ಮೌಲ್ಯದ ಗಾಂಜಾ ವಶಕ್ಕೆ ಪಡೆಯಲಾಗಿದೆ.

ಇದುವರೆಗೂ ಬೆಳೆಗಾರರು, ಸ್ಥಳೀಯ ವಿತರಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಪೂರೈಕೆಯ ಮೂಲಗಳನ್ನು ಪತ್ತೆ ಮಾಡಲಾಗುತ್ತಿದೆ. ಗಾಂಜಾ ವ್ಯಸನಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತಿದೆ.

ಗಾಂಜಾ ಆಂಧ್ರದಿಂದ ಬರುತ್ತಿದೆ

ಎರಡು ತಿಂಗಳಲ್ಲಿ ಲಕ್ಷಾಂತರ ಮೌಲ್ಯದ ಗಾಂಜಾ ವಶಕ್ಕೆ ಪಡೆಯಲಾಗಿದೆ. ಶೇ 80ರಷ್ಟು ದಂಧೆಗೆ ಕಡಿವಾಣ ಬಿದ್ದಿದೆ. ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಶೇ 80ರಷ್ಟು ಗಾಂಜಾ ಆಂಧ್ರದ ವಿಶಾಖಪಟ್ಟಣ ಸುತ್ತಮುತ್ತಲಿನಿಂದ ಬರುತ್ತದೆ. ಅಲ್ಲಿನ ಪೊಲೀಸ್ ಮೂಲಗಳ ಪ್ರಕಾರ 12 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ. ಶಿವಮೊಗ್ಗ ಸೇರಿ ರಾಜ್ಯದ ಪೊಲೀಸರ ಮಾಹಿತಿ ನಂತರ ಅಲ್ಲಿನ ಸರ್ಕಾರ ‘ಆಪರೇಷನ್ ಪರಿವರ್ತನ್’ ಆರಂಭಿಸಿದೆ. 5,500 ಹೆಕ್ಟೇರ್ ನಾಶ ಮಾಡಲಾಗಿದೆ.

ಶಾಲೆ–ಕಾಲೇಜು ತೊರೆದವರು, ರೌಡಿ ನಡವಳಿಕೆ ರೂಢಿಸಿಕೊಂಡವರು, ಕೂಲಿ ಕೆಲಸ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಜಾಗೃತಿ ಮೂಡಿಸಲು ಪ್ರತಿ ಕಾಲೇಜಿನಲ್ಲೂ ವಾಟ್ಸ್‌ಆ್ಯಪ್ ಗ್ರೂಪ್ ಮಾಡಲಾಗಿದೆ. ವಿದ್ಯಾರ್ಥಿಗಳ ನಡವಳಿಕೆ, ಹಣದ ಬಳಕೆ ಮೇಲೆ ನಿಗಾವಹಿಸಲಾಗಿದೆ.

–ಬಿ.ಎಂ.ಲಕ್ಷ್ಮೀ ಪ್ರಸಾದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ದಲಿತ ಪದವೀಧರರ ಸಂಘ ಮತ್ತು 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 362 ಹುದ್ದೆಗಳ ಹೋರಾಟ ಸಮಿತಿಯ ವತಿಯಿಂದ ಬೆಂಗಳೂರಿನ ಮೌರ್ಯ ವೃತ್ತದ ಬಳಿ ಶನಿವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಮರು ಪರೀಕ್ಷೆಗೆ ಆಗ್ರಹಿಸಿ ಪ್ರತಿಭಟನೆ

362 ಮಂದಿ ನೇಮಕಾತಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್, ಸುಪ್ರೀಂ ಕೋರ್ಟ್ ರದ್ದುಪಡಿಸಿದ್ದ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪಟ್ಟಿಗೆ ಮರುಜೀವ ನೀಡಿ, ಅಕ್ರಮವಾಗಿ ಆಯ್ಕೆಯಾದವರಿಗೆ ನೇಮಕಾತಿ ಆದೇಶ ನೀಡಲು ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ರಾಜ್ಯ ದಲಿತ ಪದವೀಧರರ ಸಂಘ ಮತ್ತು ಈ ಸಾಲಿನಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳ ಹೋರಾಟ ಸಮಿತಿಯ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಿತು.

ಮೌರ್ಯ ವೃತ್ತದಲ್ಲಿ ನಡೆದ ಈ ಪ್ರತಿಭಟನೆಗೆ ಆಮ್ ಆದ್ಮಿ ಮತ್ತು ಕೆಆರ್‌ಎಸ್ ಪಕ್ಷ ಬೆಂಬಲ ನೀಡಿದೆ. 2011ನೇ ಸಾಲಿನಲ್ಲಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಪರೀಕ್ಷೆ ಬರೆದಿದ್ದ ಹಲವು ಅಭ್ಯರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿ, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಪಾರದರ್ಶಕವಾಗಿ ನೇಮಕಾತಿ ನಡೆಸಿ ಹುದ್ದೆ ನೀಡುವಂತೆ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ದಲಿತ ಪದವೀಧರ ಸಂಘದ ಅಧ್ಯಕ್ಷ ಲೋಕೇಶ್, 'ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿದ್ದ ಹೈಕೋರ್ಟ್ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಗಳನ್ನು ಕೂಡಾ ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಈ ಎಲ್ಲ ಅಂಶಗಳ ನಂತರವೂ ಕಾಯ್ದೆ ರೂಪಿಸಿ 362 ಅಭ್ಯರ್ಥಿಗಳಿಗೆ ನೇಮಕ ಮಾಡಲು ಸರ್ಕಾರ ಮುಂದಾಗಿರುವುದನ್ನು ನೋಡಿದರೆ ನ್ಯಾಯಾಲಯದ ತೀರ್ಪುಗಳಿಗೆ ಬೆಲೆಯೇ ಇಲ್ಲದಂತಾಗಿದೆ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

'ಸರ್ಕಾರ ತನ್ನ ತೀರ್ಮಾನವನ್ನು ಮರುಪರಿಶೀಲಿಸಬೇಕು. ಅಲ್ಲದೆ, ಆ ಸಾಲಿನಲ್ಲಿ ಪರೀಕ್ಷೆ ಬರೆದವರಿಗೆ ಮಾತ್ರ ಅವಕಾಶ ನೀಡಿ 362 ಹುದ್ದೆಗಳಿಗೆ ನೇಮಕ ಮಾಡಲು ಮರು ಪರೀಕ್ಷೆ ನಡೆಸಬೇಕು. ಕಾಯ್ದೆ ರೂಪಿಸಲು ಸರ್ಕಾರ ಮುಂದಾದರೆ ಮುಖ್ಯಮಂತ್ರಿ ಮತ್ತು ಕಾನೂನು ಸಚಿವರ ಮನೆಯ ಎದುರು ಧರಣಿ ಕುಳಿತುಕೊಳ್ಳುತ್ತೇವೆ. ಜೊತೆಗೆ ಹಂತ, ಹಂತವಾಗಿ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ. ಸರ್ಕಾರ ತೀರ್ಮಾನವನ್ನು ಪ್ರಶ್ನಿಸಿ ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲೇರುತ್ತೇವೆ. ಪ್ರಧಾನಿ, ರಾಷ್ಟ್ರಪತಿ, ರಾಜ್ಯಪಾಲರು, ಎಐಸಿಸಿಗೆ ದೂರು ಪತ್ರ ಚಳುವಳಿಯನ್ನೂ ಹಮ್ಮಿಕೊಳ್ಳುತ್ತೇವೆ' ಎಂದು ಎಚ್ಚರಿಕೆ ನೀಡಿದರು.

'ಈ ಪಟ್ಟಿಯಲ್ಲಿ ಅಕ್ರಮವಾಗಿ ಸ್ಥಾನ ಪಡೆದವರಲ್ಲಿ ಕೆಎಎಸ್, ಐಎಎಸ್, ಐಪಿಎಸ್, ಕೆಪಿಎಎಸ್‌ಸಿ ಅಧಿಕಾರಿಗಳು ಮತ್ತು ಹಲವು ರಾಜಕಾರಣಿಗಳ ಮಕ್ಕಳು ಇದ್ದಾರೆ. ಅಂಥವರ ಪಟ್ಟಿಯನ್ನು ಶೀಘ್ರದಲ್ಲಿ ಪಟ್ಟಿ ಬಿಡುಗಡೆ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಆಯ್ಕೆ ಪಟ್ಟಿಗೆ ಮರುಜೀವ ಕೊಡಬಾರದು' ಎಂದೂ ಅವರು ಆಗ್ರಹಿಸಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ

'ಪರಿಷತ್ ಸದಸ್ಯರ ಆಯ್ಕೆ ಸಮರ್ಪಕವಾಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯರ ಆಯ್ಕೆ ಸಮರ್ಪಕವಾಗಿ ನಡೆಯುತ್ತಿಲ್ಲ. ಕಲೆ, ಸಾಹಿತ್ಯ, ರಂಗಭೂಮಿ ಮತ್ತಿತರ ಕ್ಷೇತ್ರಗಳ ಸಾಧಕರಿಗೆ ಮೀಸಲಾಗಿದ್ದ ಸ್ಥಾನಗಳನ್ನೂ ಚುನಾವಣೆಗಳಲ್ಲಿ ಸೋತ ರಾಜಕಾರಣಿಗಳಿಗೆ ನೀಡಲಾಗುತ್ತಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಹಿತಿ ಎಂದು ಹೇಳಿಕೊಂಡು ಪುಸ್ತಕ ಬರೆದ ರಾಜಕಾರಣಿಯನ್ನು ಪರಿಷತ್‌ಗೆ ತಂದು ಕೂರಿಸುತ್ತಾರೆ. ಚುನಾವಣೆಯಲ್ಲಿ ಸೋತವರನ್ನು ಇಲ್ಲಿ ನಾಯಕರನ್ನಾಗಿ ಮಾಡಲಾಗುತ್ತಿದೆ. ಇದರಿಂದಾಗಿ ಮೇಲ್ಮನೆಯ ಕುರಿತು ಟೀಕೆಗಳು ಬರುವಂತಾಗಿದೆ' ಎಂದರು.

'ಡಿ.ವಿ. ಗುಂಡಪ್ಪ, ಸಿದ್ದಲಿಂಗಯ್ಯ, ಖಾದ್ರಿ ಶಾಮಣ್ಣ, ಎ.ಕೆ. ಸುಬ್ಬಯ್ಯ ಅವರಂತಹ ಮಹಾನ್ ವ್ಯಕ್ತಿಗಳು ಸದಸ್ಯರಾಗಿದ್ದ ಸದನ ಇದು. ಬೆಳಿಗ್ಗೆ 9.30ಕ್ಕೆ ಆರಂಭವಾಗುವ ಕಲಾಪ ರಾತ್ರಿಯವರೆಗೂ ನಡೆಯುತ್ತಿತ್ತು. ಈಗ ಚುನಾವಣೆಗಳಲ್ಲಿ ಸೋತವರು ಮೇಲ್ಮನೆ ಸದಸ್ಯರಾಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ' ಎಂದು ಹೇಳಿದರು.

ಆಯಾ ಕ್ಷೇತ್ರಗಳಿಗೆ ಮೀಸಲಾದ ಸ್ಥಾನಗಳನ್ನು ಅದೇ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ನೀಡಬೇಕು. ಯಾವುದೇ ಪಕ್ಷದ ಸರ್ಕಾರ ಇದ್ದರೂ ಈ ನೀತಿ ಪಾಲಿಸಬೇಕು. ಆಗ ಮೇಲ್ಮನೆಯ ಗೌರವ ಹೆಚ್ಚಿಸಬಹುದು. ಈ ದಿಸೆಯಲ್ಲಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಎಂದು ಸಲಹೆ ನೀಡಿದರು.


ಬಸವರಾಜ ಹೊರಟ್ಟಿ

60 ದಿನ ಕಲಾಪ ಅಗತ್ಯ: ವರ್ಷಕ್ಕೆ 60 ದಿನಗಳ ಕಾಲ ವಿಧಾನಮಂಡಲ ಕಲಾಪ ನಡೆಯಬೇಕು ಎಂಬುದು ತಮ್ಮ ನಿಲುವು. ಆದರೆ, ಸರ್ಕಾರದ ನಿರ್ಧಾರಕ್ಕೆ ತಕ್ಕಂತೆ ಕಲಾಪ ನಡೆಸಬೇಕಾಗುತ್ತದೆ. 2017ರಲ್ಲಿ 40 ದಿನ, 2018ರಲ್ಲಿ 29 ದಿನ, 2019ರಲ್ಲಿ 20 ದಿನ, 2020ರಲ್ಲಿ 33 ದಿನ ಮತ್ತು 2021ರಲ್ಲಿ 42 ದಿನಗಳ ಕಾಲ ಮಾತ್ರ ಕಲಾಪ ನಡೆಸಲಾಗಿದೆ ಎಂದರು.

ಇದೇ 14ರಿಂದ ಆರಂಭವಾಗುವ ವಿಧಾನ ಪರಿಷತ್ ಅಧಿವೇಶನದಲ್ಲಿ ಸಾರ್ವಜನಿಕರ ಸಮಸ್ಯೆಗಳ ಕುರಿತು ಚರ್ಚೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಸದನದ ಒಳಗೆ ಭಿತ್ತಿಪತ್ರ ಮತ್ತಿತರ ಸಾಧನಗಳನ್ನು ಬಳಸಿ ಪ್ರತಿಭಟನೆ ನಡೆಸಲು ಅವಕಾಶ ನೀಡುವುದಿಲ್ಲ. ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಹೊರಟ್ಟಿ ತಿಳಿಸಿದರು.

ಚುನಾವಣಾ ಸುಧಾರಣೆ ಕುರಿತು ಚರ್ಚೆ: ಚುನಾವಣೆಗಳಲ್ಲಿ ಸುಧಾರಣೆ ತರುವ ಕುರಿತು ಚರ್ಚೆ ನಡೆಸಲು ಚಿಂತನೆ ನಡೆದಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೊಂದಿಗೆ ಚರ್ಚಿಸಿ ನಿರ್ಧಾರಕ್ಕೆ ಬರಲಾಗುವುದು. ಸಾಧ್ಯವಾದರೆ ಈ ಅಧಿವೇಶನದಲ್ಲೇ ಅರ್ಧ ದಿನ ಚರ್ಚೆಗೆ ಅವಕಾಶ ಕಲ್ಪಿಸಲಾಗುವುದು ಎಂದರು.

'ಚುನಾವಣಾ ಸುಧಾರಣೆ ಕುರಿತು ಚರ್ಚೆಗೆ ಸಿದ್ಧತೆ'

ಬೆಂಗಳೂರು: ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರುವ ಕುರಿತು ವಿಧಾನಮಂಡಲದ ಪ್ರಸಕ್ತ ಅಧಿವೇಶನದಲ್ಲೇ ಚರ್ಚೆ ಆರಂಭಿಸುವ ಸಿದ್ಧತೆ ನಡೆದಿದೆ ಎಂದು ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.


ವಿಶ್ವೇಶ್ವರ ಹೆಗಡೆ ಕಾಗೇರಿ

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಧಾನಮಂಡಲದ ದೈನಂದಿನ ಕಲಾಪಗಳ ಜತೆಯಲ್ಲೇ ಚುನಾವಣಾ ಸುಧಾರಣೆ ಕುರಿತು ಚರ್ಚೆ ಆರಂಭಿಸುವ ಯೋಚನೆ ಇದೆ. ಕಲಾಪ ಸಲಹಾ ಸಮಿತಿಯಲ್ಲಿ ವಿಷಯ ಪ್ರಸ್ತಾಪಿಸಿ, ಒಪ್ಪಿಗೆ ದೊರೆತರೆ ಚರ್ಚೆಗೆ ಚಾಲನೆ ನೀಡಲಾಗುವುದು' ಎಂದರು.

ಚುನಾವಣಾ ವಿಧಾನದಲ್ಲಿ ಸುಧಾರಣೆ ತರಬೇಕು ಎಂಬ ವಿಷಯದಲ್ಲಿ ಹಲವರಿಗೆ ಪತ್ರ ಬರೆಯಲಾಗಿತ್ತು. ಎಲ್ಲರಿಗೂ ಮನವರಿಕೆಯಾಗಿದೆ. ವಿಧಾನಮಂಡಲದಲ್ಲಿ ಚರ್ಚಿಸಿ, ನಿರ್ಣಯ ಕೈಗೊಂಡು ಸಾಂವಿಧಾನಿಕ ಸಂಸ್ಥೆಗಳ ಮುಖ್ಯಸ್ಥರಿಗೆ ಕಳುಹಿಸುವ ಯೋಚನೆ ಇದೆ. ಅವಕಾಶ ಲಭಿಸಿದರೆ ಕನಿಷ್ಠ ಎರಡು ದಿನಗಳ ಕಾಲ ಚರ್ಚಿಸುವ ಯೋಚನೆ ಇದೆ ಎಂದು ಹೇಳಿದರು.

ಸೋಮವಾರ ರಾಜ್ಯಪಾಲರ ಭಾಷಣದೊಂದಿಗೆ ಅಧಿವೇಶನ ಆರಂಭವಾಗಲಿದೆ. 2,062 ಪ್ರಶ್ನೆಗಳು ಬಂದಿವೆ. ಕರ್ನಾಟಕ ಮುದ್ರಾಂಕ (ಎರಡನೇ ತಿದ್ದುಪಡಿ) ಮಸೂದೆ–2021 ಮತ್ತು ದಂಡಪ್ರಕ್ರಿಯಾ ಕಾನೂನು ತಿದ್ದುಪಡಿ ಕಾಯ್ದೆ–1994 (ಕರ್ನಾಟಕ ತಿದ್ದುಪಡಿ) ಮಸೂದೆ–2021 ತಮ್ಮ ಕಚೇರಿಯನ್ನು ತಲುಪಿವೆ ಎಂದು ವಿವರ ನೀಡಿದರು.

ಈ ಬಾರಿ ಪ್ರಶ್ನೋತ್ತರದ ಮಾಹಿತಿಯನ್ನು ಆನ್‌ಲೈನ್ ಮೂಲಕ ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಕಾಗದ ಬಳಕೆ ರಹಿತವಾಗಿ ಅಧಿವೇಶನ ನಡೆಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದರು.

ಸಾರ್ವಜನಿಕರಿಗೆ ವೀಕ್ಷಣೆಗೆ ಅವಕಾಶ: ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸಿಕೊಂಡು ಅಧಿವೇಶನ ನಡೆಸಲಾಗುವುದು. ಈ ಬಾರಿ ವಿಧಾನಮಂಡಲ ಕಲಾಪ ವೀಕ್ಷಣೆಗೆ ಸಾರ್ವಜನಿಕರಿಗೂ ಅವಕಾಶ ನೀಡಲಾಗುವುದು ಎಂದರು.

ಭಾವುಕರಾದ ಕಾಗೇರಿ

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕುರಿತು ಪ್ರಸ್ತಾಪಿಸಿದ ವಿಶ್ವೇಶ್ವರ ಹೆಗಡೆ ಕಾಗೇರಿ, 'ಬ್ರಿಟಿಷ್ ಶಿಕ್ಷಣ ಪದ್ಧತಿಯಿಂದ ನಮ್ಮ ಜೀವನದಲ್ಲಿ ನಂಬಿಕೆಗಳೇ ಇಲ್ಲದಂತಾಗಿದೆ. ನಂಬಿಕೆ ಮತ್ತು ವಿಶ್ವಾಸ ಇಲ್ಲದಿದ್ದರೆ ಈ ವ್ಯವಸ್ಥೆಯನ್ನು ಚೆನ್ನಾಗಿ ನಡೆಸಲು ಸಾಧ್ಯವಿಲ್ಲ. ವ್ಯವಸ್ಥೆ ಸರಿ ಆಗಬೇಕಾದರೆ ನಮ್ಮ ಜ್ಞಾನವನ್ನು ವಿಸ್ತಾರಗೊಳಿಸುವ ಪ್ರಯತ್ನ ಆಗಬೇಕು' ಎಂದು ಭಾವುಕರಾದರು.

ವಿದ್ಯುತ್ ದರ ಪರಿಷ್ಕರಣೆ: 14ರಿಂದ ಅಹವಾಲು ಸ್ವೀಕಾರ

ಬೆಂಗಳೂರು: ವಿದ್ಯುತ್ ದರ ಪರಿಷ್ಕರಣೆ ಕುರಿತು ಇದೇ 14ರಿಂದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಗ್ರಾಹಕರಿಂದ ಅಹವಾಲು ಸ್ವೀಕರಿಸಲಿದೆ.

ವಿದ್ಯುತ್ ದರ ಪರಿಷ್ಕರಿಸುವಂತೆ ಕೆಇಆರ್‌ಸಿಗೆ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಪ್ರಸ್ತಾವ ಸಲ್ಲಿಸಿವೆ. ಇದೇ 28ರವರೆಗೆ ಗ್ರಾಹಕರಿಂದ ಅಹವಾಲು ಸ್ವೀಕರಿಸುವ ಕಾರ್ಯ ಮುಂದುವರಿಯಲಿದೆ. ಎಲ್ಲ ಎಸ್ಕಾಂಗಳು ಮತ್ತು ಕೆಪಿಟಿಸಿಎಲ್‌ಗೆ ಸಂಬಂಧಿಸಿದ ವಾರ್ಷಿಕ ಆದಾಯದ ವಿವರಗಳನ್ನು ಕೆಇಆರ್‌ಸಿ ಪರಾಮರ್ಶೆ ನಡೆಸಲಿದೆ.

ಆರ್ಥಿಕವಾಗಿ ನಷ್ಟವಾಗುತ್ತಿರುವುದರಿಂದ ಪ್ರತಿ ಯೂನಿಟ್‌ಗೆ ₹1.58 ಹೆಚ್ಚಿಸುವಂತೆ ಬೆಸ್ಕಾಂ ಕೋರಿಕೆ ಸಲ್ಲಿಸಿದೆ. ಎಲ್ಲ ಎಸ್ಕಾಂಗಳ ಪ್ರಸ್ತಾವಗಳನ್ನು ಕೆಇಆರ್‌ಸಿ ಪರಿಶೀಲಿಸಿ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ದರ ಪರಿಷ್ಕರಿಸಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷ ಬೆಸ್ಕಾಂ ಪ್ರತಿ ಯೂನಿಟ್ ವಿದ್ಯುತ್‌ಗೆ ₹1.35 ಹೆಚ್ಚಿಸುವಂತೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಕೆಇಆರ್‌ಸಿ ಪ್ರತಿ ಯೂನಿಟ್ ವಿದ್ಯುತ್‌ಗೆ 30 ಪೈಸೆ ಮಾತ್ರ ಹೆಚ್ಚಿಸಿತ್ತು.

ಒಬಿಸಿ ಮೀಸಲಾತಿ: ಸ್ಥಿತಿಗತಿ ಚರ್ಚಿಸಲು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗದವರಿಗೆ ಶೇ 27ರಷ್ಟು ಸ್ಥಾನಗಳನ್ನು ಮೀಸಲಿಡುವ ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನ ಬಗ್ಗೆ ಚರ್ಚಿಸಲು ಶೀಘ್ರದಲ್ಲಿ ಸಭೆ ಕರೆಯಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಇತರ ಹಿಂದುಳಿದ ವರ್ಗದವರಿಗೆ (ಒಬಿಸಿ) ಮೀಸಲಾತಿ ವಿಚಾರದಲ್ಲಿ ಏನೇನು ಪರಿಣಾಮಗಳಾಗುತ್ತವೆ ಎನ್ನುವ ಬಗ್ಗೆ ಚರ್ಚಿಸಲಾಗುವುದು' ಎಂದರು.


ಬಸವರಾಜ ಬೊಮ್ಮಾಯಿ

'ಈ ಆದೇಶ ಎಲ್ಲ ರಾಜ್ಯಗಳಿಗೂ ಅನ್ವಯವಾಗುತ್ತದೆ. ನಮ್ಮ ರಾಜ್ಯದ ಸ್ಥಿತಿಗತಿ, ಒಬಿಸಿ ವರ್ಗಕ್ಕೆ ಇದುವರೆಗೆ ಯಾವ ರೀತಿ ಮೀಸಲಾತಿ ಕೊಡುತ್ತಾ ಬರಲಾಗಿದೆ ಮತ್ತು ಆ ಮೀಸಲಾತಿಯನ್ನು ಉಳಿಸಿಕೊಂಡು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯನ್ನು ಯಾವ ರೀತಿ ನಡೆಸಬೇಕು ಎಂಬ ಬಗ್ಗೆ ಸಮಾಲೋಚನೆ ನಡೆಸುತ್ತೇನೆ' ಎಂದರು.

ಹಿಂದುಳಿದ ವರ್ಗಗಳ ರಾಜಕೀಯ ಪ್ರಾತನಿಧ್ಯದ ನಿಖರ ಮಾಹಿತಿ ಇದ್ದರಷ್ಟೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೀಸಲಾತಿ ನೀಡಬಹುದು. ಇಲ್ಲದಿದ್ದರೆ ಸಾಮಾನ್ಯ ವರ್ಗದ ಸ್ಥಾನಗಳೆಂದು ಗುರುತಿಸಿ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಈ ಬಗ್ಗೆ 'ಪ್ರಜಾವಾಣಿ'ಯ ಫೆ. 12ರ ಸಂಚಿಕೆಯಲ್ಲಿ 'ಒಬಿಸಿ: ರಾಜಕೀಯ ಮೀಸಲಿಗೆ ತೂಗುಗತ್ತಿ' ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಬೃಹತ್ ಡ್ರಗ್ಸ್ ಜಾಲ ಭೇದಿಸಿದ ಎನ್‌ಸಿಬಿ

ಬೆಂಗಳೂರಿನ ವೈದ್ಯ ವಿದ್ಯಾರ್ಥಿ ಸೇರಿ 22 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಡಾರ್ಕ್‌ನೆಟ್' ಹಾಗೂ ಕ್ರಿಪ್ಟೊಕರೆನ್ಸಿ ನೆರವಿನಿಂದ ಕೊರಿಯರ್ ಮೂಲಕ ದೇಶದಾದ್ಯಂತ ಮನೆಗಳಿಗೆ ಡ್ರಗ್ಸ್ ತಲುಪಿಸುತ್ತಿದ್ದ ಜಾಲವನ್ನು ಭೇದಿಸಿರುವ ಎನ್‌ಸಿಬಿ, ಬೆಂಗಳೂರಿನ ಎಂಬಿಬಿಎಸ್ ವಿದ್ಯಾರ್ಥಿ ಸೇರಿದಂತೆ 22 ಮಂದಿಯನ್ನು ಬಂಧಿಸಿದೆ.

ಬಂಧಿತರ ಪೈಕಿ ಫ್ರೀಲಾನ್ಸ್ ಫ್ಯಾಷನ್ ಡಿಸೈನರ್, ಮನೋವೈದ್ಯ, ಯೂಟ್ಯೂಬರ್ ಹಾಗೂ ಹಣಕಾಸು ತಜ್ಞ, ಎನ್‌ಸಿಬಿಯ ಸಿಬ್ಬಂದಿಯೂ ಆಗಿರುವ ಎಂಬಿಎ ಪದವೀಧರ, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸಹ ಇದ್ದಾರೆ ಎಂದು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಎಂಬಿಬಿಎಸ್ ವಿದ್ಯಾರ್ಥಿ ಆದಿತ್ಯ ರೆಡ್ಡಿ, 'ಎಲ್‌ಎಸ್‌ಡಿ ಕಿಂಗ್' ಎಂದೇ ಕರೆಯಲಾಗುತ್ತಿರುವ ರಘುನಾಥಕುಮಾರ್ ಹಾಗೂ ಡ್ರಗ್ಸ್ ಮಾರಾಟ ಜಾಲದ ಮಾಸ್ಟರ್ ಮೈಂಡ್ ಎಂದೇ ಗುರುತಿಸಲಾದ ಮೊಹ್ಮದ್ ಅಸ್ಲಾಂ ಎಂಬ ಆರೋಪಿಗಳನ್ನು ಬಂಧಿಸಲಾಗಿದೆ.

ಡ್ರಗ್ಸ್‌ಗೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಕರ್ನಾಟಕ ಪೊಲೀಸರು ರಘುನಾಥಕುಮಾರ್ ಅವರನ್ನು ಈಗಾಗಲೇ ಬಂಧಿಸಿದ್ದರು ಎಂದು ಎನ್‌ಸಿಬಿ ಮೂಲಗಳು ಹೇಳಿವೆ.

'ಡಾರ್ಕ್‌ನೆಟ್' ಮೂಲಕ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಡಿಎನ್‌ಎಂ ಇಂಡಿಯಾ, ಡಿಆರ್‌ಇಡಿ ಹಾಗೂ ದಿ ಓರಿಯಂಟ್ ಎಕ್ಸ್‌ಪ್ರೆಸ್ ಎಂಬ ಮಾರುಕಟ್ಟೆಗಳನ್ನು ಸಹ ಪತ್ತೆ ಹಚ್ಚಲಾಗಿದೆ ಎಂದು ಎನ್‌ಸಿಬಿಯ ಮಹಾ ನಿರ್ದೇಶಕ (ಉತ್ತರ ವಲಯ) ಜ್ಞಾನೇಶ್ವರ ಸಿಂಗ್ ತಿಳಿಸಿದ್ದಾರೆ.

'ಆರೋಪಿಗಳು 20–35 ವರ್ಷ ವಯೋಮಾನದವರಾಗಿದ್ದಾರೆ. ಕೆಲವರು ಶಾಲೆ ಬಿಟ್ಟವರೂ ಇದ್ದಾರೆ. ಕೆಲವರು ಕೌಟುಂಬಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದವರಾಗಿದ್ದರೆ, ಮತ್ತೆ ಕೆಲವರು ಅಪರಾಧ ಕೃತ್ಯಗಳನ್ನೆಸಗಿ ಪೊಲೀಸರಿಂದ ತಪ್ಪಿಸಿಕೊಳ್ಳುವುದರಲ್ಲಿ ರೋಮಾಂಚನಗೊಳ್ಳುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ' ಎಂದೂ ಅವರು ತಿಳಿಸಿದ್ದಾರೆ.

ಸೂರತ್, ಪುಣೆ, ಬೆಂಗಳೂರು, ಕೋಲ್ಕತ್ತ, ಡಾರ್ಜಿಲಿಂಗ್, ದೆಹಲಿ, ಗಾಜಿಯಾಬಾದ್, ರಾಂಚಿ ಹಾಗೂ ಗುವಾಹಟಿಗಳಲ್ಲಿ ನಾಲ್ಕು ತಿಂಗಳ ಕಾಲ ಕಾರ್ಯಾಚರಣೆ ನಡೆಸಲಾಗಿತ್ತು. ಎನ್‌ಸಿಬಿಯ ಕೋಲ್ಕತ್ತ ಹಾಗೂ ದೆಹಲಿ ವಲಯಕ್ಕೆ ಲಭಿಸಿದ್ದ ಮಾಹಿತಿ ಮೇರೆಗೆ ಈ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಬಂಧಿಸಲಾಗಿರುವ ಮತ್ತೊಬ್ಬ ಆರೋಪಿ ಶ್ರದ್ಧಾ ಸುರಾನಾ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಫೈನಾನ್ಸಿಯಲ್ ಕನ್ಸಲ್ಟೆಂಟ್ ಆಗಿದ್ದಾರೆ. ಡಾರ್ಕ್‌ನೆಟ್ ಮೂಲಕ ವಿದೇಶಗಳಿಂದ ಡ್ರಗ್ಸ್ ಆಮದು ಮಾಡಿಕೊಳ್ಳುವುದು ಹಾಗೂ ಹಣಕಾಸು ವ್ಯವಹಾರ ನಿರ್ವಹಣೆ ಕಾರ್ಯದಲ್ಲಿ ಆಕೆ ಮತ್ತೊಬ್ಬ ಆರೋಪಿ ಜಸ್ಬೀರ್ ಎಂಬಾತನಿಗೆ ಸಹಕರಿಸುತ್ತಿದ್ದ ಆರೋಪ ಎದುರಿಸುತ್ತಿದ್ದಾರೆ.

ವಾಲ್ಮೀಕಿ ಶ್ರೀಗಳ ಧರಣಿಗೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಶನಿವಾರ ಮೂರನೇ ದಿನಕ್ಕೆ ಕಾಲಿರಿಸಿದೆ.

ಶ್ರೀಗಳಿಗೆ ಬೆಂಬಲ ವ್ಯಕ್ತಪಡಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ರಾಜ್ಯಾಧ್ಯಕ್ಷ ಡಾ. ಎಂ ವೆಂಕಟಸ್ವಾಮಿ ಧರಣಿ ಸ್ಥಳಕ್ಕೆ ಭೇಟಿ ನೀಡಿದರು.

'ಸಮುದಾಯದ ಒಳಿತಿಗಾಗಿ ಸ್ವಾಮೀಜಿ ಅವರು ಸತ್ಯಾಗ್ರಹ ಕೈಗೊಂಡಿದ್ದಾರೆ. ಸ್ವಾಮೀಜಿ ಅವರು, ಕೇವಲ ವಾಲ್ಮೀಕಿ ಸಮಾಜಕ್ಕಾಗಿ ಸೀಮಿತವಾಗಿ ಹೋರಾಟ ಮಾಡುತ್ತಿಲ್ಲ. ಪರಿಶಿಷ್ಟ ಜಾತಿಯ 101 ಜಾತಿಗಳು ಪರಿಶಿಷ್ಟ ಪಂಗಡದ 51 ಜಾತಿಗಳ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸುತ್ತಿದ್ದಾರೆ' ಎಂದು ವೆಂಕಟಸ್ವಾಮಿ ಹೇಳಿದರು.

'ಸ್ವಾಮೀಜಿ ಕರೆ ಕೊಟ್ಟರೆ ನಾವು ಲಕ್ಷ, ಲಕ್ಷ ಜನ ಸೇರಿಸಿ ಬೆಂಬಲ ನೀಡುತ್ತೇವೆ. ಸರ್ಕಾರ ನಿರ್ಲಕ್ಷ್ಯ ಮಾಡದೆ ಕೂಡಲೇ ನಮ್ಮ ಸಮುದಾಯಗಳ ಬೇಡಿಕೆ ಈಡೇರಿಸಬೇಕು' ಎಂದು ಒತ್ತಾಯಿಸಿದರು. ಮುಖಂಡರಾದ ಕೆ.ಎನ್. ರಾಜೇಂದ್ರ, ವಕೀಲ ಅನಂತ ನಾಯಕ್ ಇದ್ದರು.

ವಿಧಾನಸೌಧದ ಎದುರು ನಿರ್ಣಾಯಕ ಹೋರಾಟಕ್ಕೆ ನಿರ್ಧಾರ

ದಾವಣಗೆರೆ: ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಬೆಂಬಲಿಸಿ ವಿಧಾನಸೌಧದ ಎದುರು ನಿರ್ಣಾಯಕ ಹೋರಾಟ ಕೈಗೊಳ್ಳಲು ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ ನಿರ್ಧರಿಸಿದೆ.

'ಈ ಹಿಂದೆ ಹಲವು ಬಗೆಯಲ್ಲಿ ಹೋರಾಟ ಮಾಡಲಾಗಿದೆ. ಆದರೆ, ಆ ಹೋರಾಟಗಳು ಫಲ ಕೊಟ್ಟಿಲ್ಲ. ಸರ್ಕಾರ ಯಾವುದೇ ಸಕಾರಾತ್ಮಕ ಕ್ರಮ ಕೈಗೊಳ್ಳದೇ ಮೀನಮೇಷ ಎಣಿಸುತ್ತಿದೆ. ಈ ನಿರ್ಣಾಯಕ ಹೋರಾಟ ತಾರ್ಕಿಕ ಅಂತ್ಯ ಕಾಣುವವರೆಗೂ ನಿಲ್ಲಿಸುವುದಿಲ್ಲ' ಎಂದು ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರೊ.ಎ.ಬಿ. ರಾಮಚಂದ್ರಪ್ಪ ಮಾತನಾಡಿ 'ಸರ್ಕಾರಕ್ಕೆ ಫೆ.15ರವರೆಗೆ ಗಡುವು ನೀಡುತ್ತೇವೆ. ಬೇಡಿಕೆ ಈಡೇರದಿದ್ದರೆ, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಜನರನ್ನು ಸಂಘಟಿಸಿ ವಿಧಾನಸೌಧದ ಎದುರು ಅನಿರ್ದಿಷ್ಟಾವಧಿ ಧರಣಿ ಕೈಗೊಳ್ಳಲಾಗುವುದು. ಅಲ್ಲಿಯೇ ಡೇರೆ ಹಾಕಿ ಅಡುಗೆ ಮಾಡಿ ಪ್ರತಿಭಟಿಸಲಾಗುವುದು' ಎಂದು ಎಚ್ಚರಿಸಿದರು.

ಆರತಕ್ಷತೆಯಲ್ಲಿ ಕುಸಿದುಬಿದ್ದು ಸಾವು: ವಧುವಿನ ಅಂಗಾಂಗ ದಾನ

ಶ್ರೀನಿವಾಸಪುರ: ಶ್ರೀನಿವಾಸಪುರ ತಾಲ್ಲೂಕಿನ ಕೊಡಿಚೆರುವು ಗ್ರಾಮದಲ್ಲಿ ಆರು ದಿನಗಳ ಹಿಂದೆ ಆರತಕ್ಷತೆ ವೇಳೆ ವೇದಿಕೆಯಲ್ಲಿಯೇ ಕುಸಿದುಬಿದ್ದಿದ್ದ ಮದುಮಗಳು ಮಿದುಳು ನಿಷ್ಕ್ರಿಯಗೊಂಡ ಕಾರಣ ಶುಕ್ರವಾರ ಕೊನೆಯುಸಿರೆಳೆದಿದ್ದಾಳೆ. ಪೋಷಕರು ಆಕೆಯ ಅಂಗಾಂಗಗಳನ್ನು ದಾನ ಮಾಡಿದ್ದಾರೆ.

ಕೆ.ಆರ್.ಚೈತ್ರಾ

ಕೈವಾರ ಸಮೀಪ ಬಿಜಿಎಸ್ ಕಾಲೇಜಿನ ಉಪನ್ಯಾಸಕಿಯಾಗಿದ್ದ 26 ವರ್ಷದ ಎಂ.ಎಸ್ಸಿ ಪದವೀಧರೆ ಕೆ.ಆರ್. ಚೈತ್ರಾ ಅವರ ಮದುವೆ ಹೊಸಕೋಟೆಯ ಯುವಕನೊಂದಿಗೆ ಫೆ.7ರಂದು ಇಲ್ಲಿಯ ಮಾರುತಿ ಸಭಾ ಭವನದಲ್ಲಿ ನಡೆಯಬೇಕಾಗಿತ್ತು. ಆದರ ಹಿಂದಿನ ದಿನ (ಫೆ. 6ರಂದು) ನಡೆದ ಆರತಕ್ಷತೆ ವೇಳೆ ಚೈತ್ರಾ ಏಕಾಏಕಿ ನಿಂತಲ್ಲೇ ಕುಸಿದು ಬಿದ್ದಿದ್ದರು.

ಸುಸ್ತಿನಿಂದ ತಲೆಸುತ್ತಿ ಬಿದ್ದಿರಬಹುದೆಂದು ತಿಳಿದ ಕುಟುಂಬ ಸದಸ್ಯರು ನೀರು ಕುಡಿಸಿ, ಗಾಳಿ ಬೀಸಿದರು. ಚೈತ್ರಾ ಕಣ್ಣು ತೆರೆಯದ ಕಾರಣ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿತ್ತು. ನಂತರ ವೈದ್ಯರ ಸಲಹೆಯಂತೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಸಾಗಿಸಲಾಗಿತ್ತು.

'ಚೈತ್ರಾ ಅವರನ್ನು ಪರೀಕ್ಷಿಸಿದ ನಿಮ್ಹಾನ್ಸ್ ವೈದ್ಯರು ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ತಿಳಿಸಿದರು. ನಮ್ಮ ಸಂಬಂಧಿಯಾದ ಡಾ.ರಾಜೇಶ್ ಮತ್ತು ಡಾ.ವೈ.ವಿ.ವೆಂಕಟಾಚಲ ಅವರು ಕುಟುಂಬದ ಸದಸ್ಯರ ಜತೆ ಚರ್ಚಿಸಿ ಅಂಗಾಂಗ ದಾನಕ್ಕೆ ಎಲ್ಲರನ್ನು ಒಪ್ಪಿಸಿದರು' ಎಂದು ಯುವತಿಯ ದೊಡ್ಡಪ್ಪ ನಾರಾಯಣಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ಶುಕ್ರವಾರ ಚೈತ್ರಾ ಅವರ ಕಣ್ಣು, ಮೂತ್ರಪಿಂಡ, ಹೃದಯ ಕವಾಟಗಳನ್ನು ವೈದ್ಯರು ಪಡೆದರು. ಅಕ್ಕಮ್ಮ ಮತ್ತು ಕೆ.ವಿ.ರಾಮಪ್ಪ ಅವರ ಒಬ್ಬಳೇ ಮಗಳಾಗಿದ್ದ ಚೈತ್ರಾ ಅವರ ಅಂತ್ಯಕ್ರಿಯೆ ಶನಿವಾರ ಕೊಡಿಚೆರುವ ಗ್ರಾಮದಲ್ಲಿ ನಡೆಯಿತು.

'ಚೈತ್ರಾ ಅವರ ಅಂಗಾಂಗಗಳನ್ನು ದಾನ ಮಾಡಿರುವುದು ಸ್ಫೂರ್ತಿ ನೀಡುವ ಘಟನೆಯಾಗಿದ್ದು, ಇದು ಇಡೀ ಸಮಾಜಕ್ಕೆ ಉತ್ತಮ ನಿದರ್ಶನ. ಆಕೆಯು ವೈವಾಹಿಕ ಜೀವನದ ಸಂಭ್ರಮದ ಹೊಸ ಹೆಜ್ಜೆಯನ್ನು ಇರಿಸುವ ವೇಳೆಯಲ್ಲೇ ಇಂತಹ ಘಟನೆ ನಡೆದಿರುವುದು ವಿಷಾದನೀಯ. ನೋವಿನಲ್ಲಿಯೂ ಕುಟುಂಬದವರು ಆಕೆಯ ಅಂಗಾಂಗಗಳನ್ನು ದಾನ ಮಾಡಲು ಮುಂದಾಗಿರುವುದಕ್ಕೆ ಅವರಿಗೆ ಧನ್ಯವಾದ ಸಮರ್ಪಿಸುತ್ತೇನೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಟ್ವೀಟ್ ಮಾಡಿದ್ದಾರೆ.

'ಐದು ರಾಜ್ಯಗಳ ಫಲಿತಾಂಶ ಬಳಿಕ ಬದಲಾವಣೆ ಗಾಳಿ'

ಪ್ರಾದೇಶಿಕ ಪಕ್ಷಗಳಿಗೆ ಮಹತ್ವ: ಎಚ್.ಡಿ. ದೇವೇಗೌಡ

ಮಂಗಳೂರು: 'ಐದು ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ದೇಶದ ರಾಜಕಾರಣದಲ್ಲಿ ಬದಲಾವಣೆಯ ಸಾಧ್ಯತೆ ಇದೆ. ಪ್ರಾದೇಶಿಕ ಪಕ್ಷಗಳ ಬೆಂಬಲವಿಲ್ಲದೆ ರಾಷ್ಟ್ರೀಯ ಪಕ್ಷಗಳು ಅಧಿಕಾರ ನಡೆಸುವುದು ಕಷ್ಟ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ತಿಳಿಸಿದರು.

ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್, ಬಿಜೆಪಿ ಪಕ್ಷಗಳ ನಡುವೆ ಜೆಡಿಎಸ್ ಸಣ್ಣ ಪಕ್ಷ. ಹೋರಾಟ ಮುಂದುವರಿಯುತ್ತದೆ' ಎಂದರು.

'ರಾಜ್ಯದಲ್ಲಿ ಹಿಜಾಬ್ ಎಲ್ಲಿಂದ ಆರಂಭ ಆಯಿತು? ಹೇಗೆ ಆರಂಭ ಆಯಿತು ಎನ್ನುವುದು ನನಗೆ ಗೊತ್ತು. ಈ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ ಆರೋಪ, ಪ್ರತ್ಯಾರೋಪದಲ್ಲಿ ತೊಡಗಿವೆ. ಈ ಬಗ್ಗೆ ನಾನೇನೂ ಹೇಳಲಾರೆ. ಕರಾವಳಿ ಭಾಗದಲ್ಲಿ ಸಮಸ್ಯೆಗಳನ್ನು ಹುಟ್ಟು ಹಾಕುವಂತಹ ಶಕ್ತಿಗಳು ಇವೆ' ಎಂದು ತಿಳಿಸಿದರು.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಶನಿವಾರ ಎಚ್.ಡಿ. ದೇವೇಗೌಡ ಹಾಗೂ ಚೆನ್ನಮ್ಮ ಅವರು ಅಕ್ಕಿ, ಬೆಲ್ಲ ಹಾಗೂ ತೆಂಗಿನಕಾಯಿಗಳೊಂದಿಗೆ ತುಲಾಭಾರ ಸೇವೆ ನೆರವೇರಿಸಿದರು.

ಕೆಡಿಪಿ ಸಭೆಯಲ್ಲಿ ಶಿಷ್ಟಾಚಾರ ಉಲ್ಲಂಘನೆ: ಆಕ್ರೋಶ

ಚಿಕ್ಕಮಗಳೂರು: 'ಪ್ರಗತಿ ಪರಿಶೀಲನೆ ತ್ರೈಮಾಸಿಕ ಸಭೆ ವೇದಿಕೆಯಲ್ಲಿ ನಿವೃತ್ತ ಕೆಎಎಸ್ ಅಧಿಕಾರಿಗೆ ಆಸೀನರಾಗಲು ಅವಕಾಶ ನೀಡಿ ಶಿಷ್ಟಾಚಾರ ಉಲ್ಲಂಘಿಸಲಾಗಿದೆ' ಎಂದು ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ಶನಿವಾರ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ ಮಧ್ಯಪ್ರವೇಶಿಸಿ, 'ಅವರು ನಿವೃತ್ತ ಅಧಿಕಾರಿ ಜಯರಾಂ. ಎಲ್ಲ ವಿಚಾರದಲ್ಲೂ ಅವರು ನನಗೆ ಮಾರ್ಗದರ್ಶನ ನೀಡುತ್ತಾರೆ. ಈ ವೇದಿಕೆಯಲ್ಲಿ ಅವರು ಕುಳಿತುಕೊಳ್ಳಬಹುದೋ, ಇಲ್ಲವೋ ಗೊತ್ತಿಲ್ಲ. ಈ ವಿಷಯವನ್ನು ಇಲ್ಲಿಗೆ ಮುಗಿಸೋಣ. ಮುಂದೆ ಹೀಗೆ ಆಗದಂತೆ ನೋಡಿಕೊಳ್ಳೋಣ' ಎಂದರು.

ಕೆ.ಎಸ್.ಈಶ್ವರಪ್ಪ

ಆಯನೂರು

'ಅವರು ನಿಮ್ಮ ನೆರವಿಗೆ ಇದ್ದರೆ ನಿಮ್ಮ ಹಿಂದೆ ಕೂರಬೇಕು. ಅವರನ್ನು ಸಿಇಒ ಸ್ವಾಗತ ಮಾಡಿದ್ದು ಏಕೆ ಎಂದು ಸ್ಪಷ್ಟೀಕರಣ ನೀಡಬೇಕು' ಎಂದು ಮಂಜುನಾಥ್ ಪಟ್ಟು ಹಿಡಿದರು. 'ಉದ್ದೇಶಪೂರ್ವಕವಾಗಿ ಮಾಡಿಲ್ಲ. ಕ್ಷಮೆಯಾಚಿಸುತ್ತೇನೆ. ಮುಂದೆ ಹೀಗಾಗದಂತೆ ಎಚ್ಚರ ವಹಿಸುತ್ತೇನೆ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಜಿ.ಪ್ರಭು ಹೇಳಿದರು.

'ಮುಂದಿನ ನಡೆಯ ಘೋಷಣೆ ದಿನ ಮುಂದೂಡಿದ್ದೇನೆ'

ಭದ್ರಾವತಿ: 'ನನ್ನ ಮುಂದಿನ ರಾಜಕೀಯ ನಡೆಯ ನಿರ್ಧಾರವನ್ನು ಫೆ. 14ಕ್ಕೆ ಘೋಷಿಸುತ್ತೇನೆ ಎಂದು ಹೇಳಿದ್ದೆ. ಆ ದಿನವನ್ನು ತಾತ್ಕಾಲಿಕವಾಗಿ ಮುಂದೂಡಿದ್ದೇನೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದರು.

ಸಿ.ಎಂ.ಇಬ್ರಾಹಿಂ

ಇಲ್ಲಿ ಶನಿವಾರ 'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಕೆಲವು ಸ್ನೇಹಿತರು, ಹಿತೈಷಿಗಳ ಸಲಹೆ, ಸೂಚನೆ ಮಾರ್ಗದರ್ಶನದ ಆಧಾರದಲ್ಲಿ ಮೇಲಿನ ನಿರ್ಧಾರಕ್ಕೆ ಬಂದಿದ್ದೇನೆ' ಎಂದು ಹೇಳಿದರು.

ನಿಧನ ವಾರ್ತೆ

ಕಸ್ತೂರಿ ಬಾಯರಿ

ಬಾದಾಮಿ (ಬಾಗಲಕೋಟೆ ಜಿಲ್ಲೆ): ಹಿರಿಯ ಲೇಖಕಿ, ಕತೆಗಾರ್ತಿ ಕಸ್ತೂರಿ ಬಾಯರಿ (67) ಶುಕ್ರವಾರ ತಡರಾತ್ರಿ ಬಾಗಲಕೋಟೆಯ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಇಬ್ಬರು ಸಹೋದರರು, ಒಬ್ಬರು ಸಹೋದರಿ ಇದ್ದಾರೆ.

ಉಡುಪಿ ಜಿಲ್ಲೆಯ ಸಾಸ್ತಾನ ಗ್ರಾಮ ಕಸ್ತೂರಿ ಬಾಯರಿ ಹುಟ್ಟೂರು. ಆದರೆ ಬಾದಾಮಿಯಲ್ಲಿ ಶಿಕ್ಷಣ ಪಡೆದಿದ್ದರು. ಕೆಲಕಾಲ ಖಾಸಗಿ ಶಾಲೆಯಲ್ಲಿ ಕೆಲಸ ಮಾಡಿದ್ದ ಅವರು, ನಂತರ ಕೆಲಸ ಬಿಟ್ಟು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕಸ್ತೂರಿ ಅವರ 10 ಕಾವ್ಯ ಸಂಕಲನ, 10 ಕಥಾ ಸಂಕಲನ, ನಾಲ್ಕು ಅಂಕಣ ಕೃತಿಗಳು ಮತ್ತು ಎರಡು ಅನುವಾದ ಕೃತಿಗಳು ಪ್ರಕಟವಾಗಿವೆ.

ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆ, ಮುಂಬೈನ ಕರ್ನಾಟಕ ಸಂಘದ ಅಖಿಲ ಭಾರತ ಮಟ್ಟದ ಕಾವ್ಯ ಪ್ರಶಸ್ತಿ, ಕನ್ನಡ ಹಂಪಿ ವಿವಿ ಕಥಾ ಕಮ್ಮಟ, ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬಾದಾಮಿ ಸಮೀಪದ ಬೇಲೂರು ಗ್ರಾಮದಲ್ಲಿ ಜರುಗಿದ ತಾಲ್ಲೂಕು ಮಟ್ಟದ 5ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬಾದಾಮಿ ಪಟ್ಟಣದಲ್ಲಿ ಶನಿವಾರ ಸಂಜೆ ಅಂತಿಮ ಸಂಸ್ಕಾರ ನಡೆಯಿತು.

ಸರ್ಕಾರದ ಬೇಜವಾಬ್ದಾರಿ ನಡೆ: ಶ್ರೀನಿವಾಸಪ್ರಸಾದ್

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಯಚೂರು ಜಿಲ್ಲಾ ನ್ಯಾಯಾಲಯದಲ್ಲಿ ಅಂಬೇಡ್ಕರ್ ಭಾವಚಿತ್ರ ತೆರವು ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸಿದೆ' ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ದೂರಿದರು.

ಶನಿವಾರ ಇಲ್ಲಿ 'ಅಬ್ರಹಾಂ ಲಿಂಕನ್ ಹಾಗೂ ಡಾ.ಬಾಬಾಸಾಹೇಬ್ ಅಂಬೇಡ್ಕರ್; ಮಹಾನ್ ಸಾಧಕರ ಹೋರಾಟದ ಮಜಲುಗಳು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, 'ಇದು ಗಂಭೀರ ಸ್ವರೂಪದ ಪ್ರಕರಣವಾಗಿದ್ದು, ಸರ್ಕಾರ ಕಣ್ಣುಮುಚ್ಚಿ ಕುಳಿತಿರುವುದು ಸರಿಯಲ್ಲ. ಜಿಲ್ಲಾಡಳಿತದಿಂದ ವರದಿ ತರಿಸಿಕೊಂಡು ಕಾನೂನು ಸಚಿವರು ಮತ್ತು ಮುಖ್ಯಮಂತ್ರಿ ಚರ್ಚಿಸಿ ಹೈಕೋರ್ಟ್ ಗಮನಕ್ಕೆ ತರಬೇಕಿತ್ತು. ಸರ್ಕಾರದ ನಡೆಯ ಬಗ್ಗೆ ನಾನು ಈ ಹಿಂದೆಯೇ ಅಸಮಾಧಾನ ವ್ಯಕ್ತಪಡಿಸಿದ್ದೆ. ಆದರೂ ಎಚ್ಚೆತ್ತುಕೊಂಡಿಲ್ಲ' ಎಂದು ಟೀಕಿಸಿದರು.

ವಿ.ಶ್ರೀನಿವಾಸ ಪ್ರಸಾದ್

'ಜಿಲ್ಲಾ ನ್ಯಾಯಾಧೀಶರೊಬ್ಬರು ತಾನೇ ಸ್ವತಃ ನಿಂತುಕೊಂಡು ಅಂಬೇಡ್ಕರ್ ಭಾವಚಿತ್ರ ತೆಗೆಸುವುದಾದರೆ, ಅವರ ಮನಃಸ್ಥಿತಿ ಹೇಗಿರಬೇಡ? ಅಂಬೇಡ್ಕರ್ ಕುರಿತು ಜನರ ಮನೋಭಾವ ಇನ್ನೂ ಬದಲಾಗಿಲ್ಲ ಎಂಬುದಕ್ಕೆ ಈ ಘಟನೆ ಸಾಕ್ಷಿ' ಎಂದು ಕಳವಳ ವ್ಯಕ್ತಪಡಿಸಿದರು.

ಅಕ್ರಮ ಮರಳು ದಂಧೆ ಆರೋಪ –ಪ್ರತ್ಯಾರೋಪ ಪ್ರಕರಣ

ಧರ್ಮಸ್ಥಳದಲ್ಲಿ ಹಾಲಪ್ಪ, ಬೇಳೂರು ಆಣೆ– ಪ್ರಮಾಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಕ್ರಮ ಮರಳು ದಂಧೆ ಆರೋಪ-ಪ್ರತ್ಯಾರೋಪ
- 'ಪುರಾವೆಗಳಿದ್ದರೆ, ಪ್ರಕರಣ ದಾಖಲಿಸಿ'
- ನನ್ನ ಮಿತ್ರರೂ ಲಂಚ ಪಡೆದಿಲ್ಲ: ಹಾಲಪ್ಪ

ಉಜಿರೆ: ಅಕ್ರಮ ಮರಳು ದಂಧೆ ಆರೋಪ-ಪ್ರತ್ಯಾರೋಪಕ್ಕೆ ಸಂಬಂಧಿಸಿ ಶಾಸಕ ಹರತಾಳು ಹಾಲಪ್ಪ ಹಾಗೂ ಕಾಂಗ್ರೆಸ್ ಮುಖಂಡ ಬೇಳೂರು ಗೋಪಾಲಕೃಷ್ಣ ಅವರು ಪ್ರತ್ಯೇಕವಾಗಿ ಧರ್ಮಸ್ಥಳಕ್ಕೆ ಬಂದು ಆಣೆ-ಪ್ರಮಾಣ ಮಾಡಿದರು.

ಶಾಸಕ ಹರತಾಳು ಹಾಲಪ್ಪ ಶನಿವಾರ ಬೆಳಿಗ್ಗೆ 8 ಗಂಟೆಗೆ ಧರ್ಮಸ್ಥಳಕ್ಕೆ ಬಂದು, ದೇವರ ದರ್ಶನ ಪಡೆದರು. ಬಳಿಕ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಬೀಡಿನಲ್ಲಿ ಭೇಟಿಯಾದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಹಾಲಪ್ಪ, 'ಸಾಗರ ಮತ್ತು ಹೊಸನಗರ ತಾಲ್ಲೂಕಿನಲ್ಲಿ ಮರಳು ಗಣಿಗಾರಿಕೆ ದಂಧೆಯಲ್ಲಿ ನಾನು ಯಾರಿಂದಲೂ ಲಂಚ ಪಡೆದಿಲ್ಲ ಎಂದು ಸತ್ಯ, ಧರ್ಮ, ನ್ಯಾಯ, ನೀತಿಯಲ್ಲಿ ನಂಬಿಕೆಯಿಂದ ಮಂಜುನಾಥ ಸ್ವಾಮಿಯ ಮುಂದೆ ಪ್ರಮಾಣ ಮಾಡಿದ್ದೇನೆ' ಎಂದು ಹೇಳಿದರು.

'ಮಾಜಿ ಶಾಸಕ ಬೇಳೂರು ಗೋಪಾಲಕೃಷ್ಣ ಅವರಿಗೆ ಶನಿವಾರ ಆಣೆ-ಪ್ರಮಾಣಕ್ಕೆ ಧರ್ಮಸ್ಥಳಕ್ಕೆ ಬರುವಂತೆ ತಿಳಿಸಿದ್ದೆ. ಆದರೆ ಗೋವಾ ಚುನಾವಣೆಯ ನೆಪ ಹೇಳಿ ಬರಲಿಲ್ಲ. ಗೋವಾ ಚುನಾವಣೆ ಇಂದಿಗೆ ಮುಕ್ತಾಯ ಆಗುವುದರಿಂದ ಗೋವಾಕ್ಕೆ ಹೋಗುವ ಔಚಿತ್ಯವೇನು' ಎಂದು ಪ್ರಶ್ನಿಸಿದರು.

'ನನ್ನ ಮಿತ್ರ ವಿನಾಯಕ ರಾವ್ ಮತ್ತು ಹತ್ತಿರದ ಸಂಬಂಧಿ ರವೀಂದ್ರ ಕೂಡಾ ಹಣ ಪಡೆದಿದ್ದಾರೆ ಎಂದು ಬೇಳೂರು ಗೋಪಾಲಕೃಷ್ಣ ಆರೋಪಿಸಿದ್ದರು. ಅವರಿಬ್ಬರೂ ನನ್ನ ಜೊತೆ ದೇವಸ್ಥಾನದಲ್ಲಿ ತಾವು ಲಂಚ ಪಡೆದಿಲ್ಲ ಎಂದು ಪ್ರಮಾಣ ಮಾಡಿದ್ದಾರೆ' ಎಂದು ತಿಳಿಸಿದರು.

'ಲಂಚ ಪಡೆದ ಬಗ್ಗೆ ದಾಖಲೆಗಳಿವೆ ಎಂದು ಹೇಳುವ ಬೇಳೂರು ಗೋಪಾಲಕೃಷ್ಣ ಪುರಾವೆಗಳಿದ್ದರೆ, ಪ್ರಕರಣ ದಾಖಲಿಸಿ ಪ್ರಯತ್ನಿಸಲಿ' ಎಂದು ಸವಾಲು ಹಾಕಿದರು.

10.30 ಗಂಟೆಗೆ ಬಂದ ಮಾಜಿ ಶಾಸಕ ಬೇಳೂರು ಗೋಪಾಲಕೃಷ್ಣ ಮಾತನಾಡಿ, 'ತಾಕತ್ತಿದ್ದರೆ ಹಾಲಪ್ಪನವರು ಮುಖಾಮುಖಿಯಾಗಿ ದೇವಸ್ಥಾನದಲ್ಲಿ ಆಣೆ-ಪ್ರಮಾಣ ಮಾಡಲಿ' ಎಂದರು.

'ಲಾರಿ ಮಾಲಕರಿಂದ ಅವರು ಲಂಚ ಪಡೆದಿದ್ದಾರೆ. ಅವರೇ ಶನಿವಾರ ಮಧ್ಯಾಹ್ನ 12 ಗಂಟೆಗೆ ಆಣೆ-ಪ್ರಮಾಣಕ್ಕಾಗಿ ಸಮಯ ನಿಗದಿಪಡಿಸಿ, ಈಗ ಬೇಗ ಬಂದು ಹೋಗಿರುವ ಬಗ್ಗೆ ಸಂಶಯ ಕಾಡುತ್ತಿದೆ. ಧೈರ್ಯವಿದ್ದರೆ ಅವರು ಮುಖಾಮುಖಿಯಾಗಿ ದೇವಸ್ಥಾನದಲ್ಲಿ ಪ್ರಮಾಣ ಮಾಡಬೇಕು' ಎಂದು ಸವಾಲು ಹಾಕಿದರು.

ಗೋಪಾಲಕೃಷ್ಣ ಸಹ ದೇವಸ್ಥಾನಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸಿ, ಮನದಾಳದ ಸತ್ಯವನ್ನು ನಿವೇದನೆ ಮಾಡಿಕೊಂಡರು.

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. 080–23413125/ 9480433818
ಇ–ಮೇಲ್ : ifablimited@gmail.com, Website :-www.ifabindia.org
NO:KSHD/2021-22/AUCTION3428 Date:12.02.2022
ಹಣವನ್ನು ಹೂಡಿಕೆ ಮಾಡುವ ನಿಟ್ಟಿನಲ್ಲಿ E-Tender Cum E-Bidding ಅಧಿಸೂಚನೆ ಹೊರಡಿಸಿದ್ದು, ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಹರಾಜು ಬಿಡ್‌ನ್ನು ಆಹ್ವಾನಿಸಿರುವ ಬಗ್ಗೆ
ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ಸಂಸ್ಥೆಯಲ್ಲಿನ ಹಣವನ್ನು ಹೂಡಿಕೆ ಮಾಡುವ ನಿಟ್ಟಿನಲ್ಲಿ E-Tender Cum E-Bidding ಅಧಿಸೂಚನೆ ಹೊರಡಿಸಿದ್ದು, ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಹರಾಜು ಬಿಡ್‌ನ್ನು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರ ಮತ್ತು ದಾಖಲೆಗಳು 11.02.2022 ರಿಂದ ಲಭ್ಯವಿರುತ್ತದೆ ಮತ್ತು ಕೊನೆಯ ದಿನಾಂಕ: 25.02.2022 ರ ಸಂಜೆ 4.00 ಗಂಟೆ. ಹೆಚ್ಚಿನ ವಿವರಗಳನ್ನು ಸಂಸ್ಥೆಯ ಕಛೇರಿಯ ಕೆಲಸದ ವೇಳೆ ಮತ್ತು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂ.ನಗರ/ಶಿರಡಿ ಸಾಯಿ/3351/2021–22
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಇಂಟರ್‌ನೆಟ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಶಾಸಕರಿಗೆ ಕರೆ • ಗೃಹಸಚಿವರಿಗೆ ಮೌಖಿಕವಾಗಿ ಮಾಹಿತಿ

ಹಿಜಾಬ್ ವಿವಾದ: ರಘುಪತಿ ಭಟ್‌ಗೆ ಬೆದರಿಕೆ ಕರೆ

ಪ್ರಜಾವಾಣಿ ವಾರ್ತೆ


ರಘುಪತಿ ಭಟ್

ಉಡುಪಿ: ಹಿಜಾಬ್ ವಿವಾದದಲ್ಲಿ ಹಸ್ತಕ್ಷೇಪ ಮಾಡದಂತೆ ಕಿಡಿಗೇಡಿಗಳಿಂದ ಇಂಟರ್‌ನೆಟ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಕರೆಗಳು ಬರುತ್ತಿವೆ ಎಂದು ಶಾಸಕ ಕೆ.ರಘುಪತಿ ಭಟ್ ತಿಳಿಸಿದರು.

ಶನಿವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ವ್ಯಕ್ತಿ ಅಥವಾ ನಿರ್ದಿಷ್ಟ ಸಂಘಟನೆಗಳಿಂದ ಬೆದರಿಕೆ ಕರೆ ಬಂದಿಲ್ಲ. ಹೈದರಾಬಾದ್‌ನಿಂದ ವ್ಯಕ್ತಿಯೊಬ್ಬ ಇಂಟರ್‌ನೆಟ್ ಕರೆ ಮಾಡಿ ಜೀವ ಬೆದರಿಕೆ ಹಾಕಿದ್ದಾನೆ. ಸ್ಥಳೀಯವಾಗಿ ಎರಡು ಕರೆಗಳು ಬಂದಿವೆ. ಈ ಸಂಬಂಧ ಗೃಹ ಸಚಿವರಿಗೆ ಮೌಖಿಕವಾಗಿ ತಿಳಿಸಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಗತ್ಯ ಭದ್ರತೆ ಒದಗಿಸುವುದಾಗಿ ತಿಳಿಸಿದ್ದಾರೆ' ಎಂದರು.

'ಬೆದರಿಕೆ ಕರೆಗಳು ಹೊಸದಲ್ಲ; ಅವುಗಳಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಪೊಲೀಸ್ ಭದ್ರತೆಯ ಅವಶ್ಯಕತೆಯೂ ಸದ್ಯಕ್ಕಿಲ್ಲ. ದೇವರು ಹಾಗೂ ಉಡುಪಿ ಕ್ಷೇತ್ರದ ಜನರೇ ನನಗೆ ಭದ್ರತೆ ನೀಡುತ್ತಾರೆ' ಎಂದು ಅವರು ಹೇಳಿದರು.

'ಹಿಜಾಬ್ ವಿಚಾರದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಉಡುಪಿಯ ಮುಸ್ಲಿಂ ಮುಖಂಡರಿಂದ ಪ್ರತಿರೋಧ ಬಂದಿಲ್ಲ. ಬಹುತೇಕರು ಬೆಂಬಲಿಸಿದ್ದಾರೆ. ರಾಜಕೀಯವಾಗಿ ವಿರೋಧಿಸುವವರು ಮಾತ್ರ ಟೀಕಿಸುತ್ತಿದ್ದಾರೆ. ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಹಿಜಾಬ್ ವಿವಾದವನ್ನು ನಕಾರಾತ್ಮಕವಾಗಿ ಬಿಂಬಿಸಲಾಗುತ್ತಿದ್ದು, ಉಡುಪಿಯಲ್ಲಿ ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುವಂತೆಯೇ ಇಲ್ಲ ಎಂದು ಅಪಪ್ರಚಾರ ಮಾಡಲಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಬೆದರಿಕೆ ಕರೆ ಮಾಡುವವರು ಹೇಡಿಗಳು'

'ಬೆದರಿಕೆ ಕರೆ ಮಾಡುವವರು ಹೇಡಿಗಳು. ತಾಕತ್ತು ಇದ್ದರೆ ಎದುರು ಮಾತನಾಡಬೇಕು. ಹೇಡಿಗಳಿಗೆ ಹೆದರಲ್ಲ' ಎಂದು ಸಚಿವ ಈಶ್ವರಪ್ಪ ಚಿಕ್ಕಮಗಳೂರಿನಲ್ಲಿ ಪ್ರತಿಕ್ರಿಯಿಸಿದರು.

ಶಾಸಕ ರಘುಪತಿ ಭಟ್‌ರಿಗೆ ಬೆದರಿಕೆ ಕರೆ ಬಂದಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ಬೆದರಿಕೆ ಕರೆಗಳು ನನಗೂ ಬಹಳ ಬಂದಿದ್ದವು. ಈ ಫೀಲ್ಡಿಗೆ ಇಳಿಯುವ ಸಂದರ್ಭದಲ್ಲಿ ಇದೆಲ್ಲವನ್ನು ಎದುರಿಸಲು ಸಿದ್ಧರಿರಬೇಕು. ಪೊಲೀಸ್ ಇಲಾಖೆ, ಸಮಾಜ ನಮ್ಮೊಂದಿಗೆ ಇದೆ. ಆ ಧೈರ್ಯದಲ್ಲೇ ಸಾಗುತ್ತಿದ್ದೇವೆ' ಎಂದರು.

ಹರಿಹರದಲ್ಲಿ ದಾಂದಲೆ: ಐವರ ಬಂಧನ

ಹರಿಹರ: ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಮುಂಭಾಗದಲ್ಲಿ ಹಿಜಾಬ್ ಹಾಗೂ ಕೇಸರಿ ಶಾಲು ಧಾರಣೆಗೆ ಸಂಬಂಧಿಸಿ ಫೆ.8ರಂದು ನಡೆದಿದ್ದ ದಾಂದಲೆ ಪ್ರಕರಣದಲ್ಲಿ ಮೂವರು ಬಾಲಕರು ಸೇರಿ ಐವರನ್ನು ನಗರ ಠಾಣೆ ಪೊಲೀಸರು ಶುಕ್ರವಾರ ತಡರಾತ್ರಿ ಬಂಧಿಸಿದ್ದಾರೆ.

ಮೂವರು ಬಾಲಾರೋಪಿಗಳನ್ನು ಪುನರ್ವಸತಿ ಕೇಂದ್ರಕ್ಕೆ ಒಪ್ಪಿಸಲಾಗಿದ್ದು, ಉಳಿದ ಇಬ್ಬರನ್ನು ನ್ಯಾಯಾಂಗ ಬಂಧನದಲ್ಲಿರಿಸಲಾಗಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿ ಫೆ.10ರಂದು ಐವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಈ ಪ್ರಕರಣದಲ್ಲಿ ಇದುವರೆಗೆ ಒಟ್ಟು 10 ಜನರನ್ನು ಬಂಧಿಸಿದಂತಾಗಿದೆ. ಇಬ್ಬರನ್ನು ಮುಚ್ಚಳಿಕೆ ಬರೆಸಿಕೊಂಡು, ಎಚ್ಚರಿಕೆ ನೀಡಿ ಬಿಡುಗಡೆ ಮಾಡಲಾಗಿದೆ. ಈ ಪ್ರಕರಣದಲ್ಲಿ ಬಂಧನದ ಭೀತಿಯಿಂದಾಗಿ ಎರಡೂ ಗುಂಪುಗಳ ಹಲವರು ಊರು ಬಿಟ್ಟಿದ್ದಾರೆ ಎಂದು ತಿಳಿದುಬಂದಿದೆ.

ವಕೀಲರ ಶುಲ್ಕ ತುಂಬುವಷ್ಟು ಸಬಲರಿದ್ದಾರೆಯೇ?– ಸಿ.ಸಿ. ಪಾಟೀಲ

ಬಾಗಲಕೋಟೆ: ಹಿಜಾಬ್ ನಿಷೇಧ ವಿರೋಧಿಸಿ ಹೈಕೋರ್ಟ್ ಮೆಟ್ಟಿಲು ಏರಿದ ಉಡುಪಿ ಕಾಲೇಜಿನ ನಾಲ್ವರು ವಿದ್ಯಾರ್ಥಿನಿಯರು ವಕೀಲರ ಶುಲ್ಕ ಕೊಡುವಷ್ಟು ಆರ್ಥಿಕವಾಗಿ ಸಬಲರಿದ್ದಾರೆಯೇ? ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದನ್ನೆಲ್ಲ ಗಮನಿಸಿದರೆ ಚುನಾವಣೆ ಹೊತ್ತಿನಲ್ಲಿ ಇದೊಂದು ಷಡ್ಯಂತ್ರ ಅನ್ನಿಸುತ್ತಿದೆ. ಅನ್ನ, ನೀರು ಹಿಂದೂಸ್ತಾನದ್ದು, ನಿಷ್ಠೆ ಪಾಕಿಸ್ತಾನಕ್ಕೆ ಎಂಬುದೆಲ್ಲ ಇನ್ನು ನಡೆಯೊಲ್ಲ' ಎಂದರು.

'ಶ್ರೀಮಂತರ ಮಕ್ಕಳು ಸೂಟು-ಬೂಟು, ಬಡವರ ಮಕ್ಕಳು ಹರಿದ ಚಣ್ಣ (ಚಡ್ಡಿ) ಹಾಕಿಕೊಂಡು ಶಾಲೆಗೆ ಬರುತ್ತಾರೆ. ಆ ತಾರತಮ್ಯ ತಪ್ಪಿಸಲು ಸಮವಸ್ತ್ರ ಕಡ್ಡಾಯ ಮಾಡಲಾಗಿದೆ. ಅದನ್ನು ಎಲ್ಲರೂ ಪಾಲಿಸಬೇಕು' ಎಂದು ಹೇಳಿದರು.

'ಶಾಲೆಗೆ ಹೋಗಿ ಮಕ್ಕಳು ನಮಾಜ್ ಮಾಡುವುದಾದರೆ ಅವರನ್ನು ಅಲ್ಲಿಗೆ ಏಕೆ ಕಳುಹಿಸಬೇಕು. ಮಸೀದಿಗೆ ಕಳುಹಿಸಬೇಕು. ನಾಳೆ ಇನ್ನೊಬ್ಬರು ಬಂದು ಭಜನೆ ಮಾಡುತ್ತಾರೆ. ಇದರಲ್ಲಿ ಸಣ್ಣ ಮಕ್ಕಳ ತಪ್ಪು ಎಂಬುದಕ್ಕಿಂತ ನಮಾಜ್ ಮಾಡಲು ಹಚ್ಚಿದವರು, ಪ್ರೇರಣೆ ಕೊಟ್ಟವರು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಮಕ್ಕಳು ಹಿಜಾಬ್ ಅಥವಾ ಮತ್ತೊಂದು ಧಾರ್ಮಿಕ ಗುರುತು ಹಾಕಿಕೊಂಡು ಧರ್ಮಾಂಧತೆಯ ಕಡೆಗೆ ಹೋಗಬೇಕೇ? ಇಲ್ಲವೇ ಶಾಲೆ ಕಲಿತು ಉತ್ತಮ ಸ್ಥಾನಮಾನ ಪಡೆಯಬೇಕೇ? ಎಂಬುದನ್ನು ಪಾಲಕರು ಯೋಚಿಸಬೇಕು' ಎಂದರು.

'ಸರ್ವ ಜನಾಂಗದ ಶಾಂತಿಯ ತೋಟ ಎಂದು ನಾಡಗೀತೆ ಹಾಡುತ್ತೇವೆ. ಅದರಂತೆ ನಡೆದುಕೊಂಡು ಮಕ್ಕಳಲ್ಲಿ ರಾಷ್ಟ್ರೀಯತೆ ಬೆಳೆಸಿ ಅವರನ್ನು ಆಸ್ತಿ ಮಾಡಬೇಕೇ ಹೊರತು ಹೊರೆ ಮಾಡಬಾರದು ಎಂದು ಪೋಷಕರಿಗೆ ಮನವಿ ಮಾಡಿದರು.

ಅಂಕತ್ತಡ್ಕ ಶಾಲೆಯಲ್ಲಿ ನಮಾಜ್: ವಿವಾದಕ್ಕೆ ತೆರೆ

ಪುತ್ತೂರು: ಕಡಬ ತಾಲ್ಲೂಕಿನ ಪಾಲ್ತಾಡಿ ಗ್ರಾಮದ ಅಂಕತ್ತಡ್ಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲವು ಮುಸ್ಲಿಂ ವಿದ್ಯಾರ್ಥಿಗಳು ತರಗತಿ ಕೊಠಡಿಯಲ್ಲಿ ನಮಾಜ್ ಮಾಡಿರುವ ಪ್ರಕರಣ ಇತ್ಯರ್ಥಗೊಂಡಿದೆ.

ನಮಾಜ್ ಮಾಡಿರುವ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ವಿವಾದ ಸೃಷ್ಟಿ ಯಾಗಿತ್ತು. ಈ ಹಿನ್ನೆಲೆಯಲ್ಲಿ ಶನಿವಾರ ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ ಸಿ. ನೇತೃತ್ವದಲ್ಲಿ, ಜನಪ್ರತಿನಿಧಿಗಳು ಹಾಗೂ ನಮಾಜ್ ಮಾಡಿದ ಮಕ್ಕಳ ಪೋಷಕರ ಸಭೆ ನಡೆಸಲಾಯಿತು. 'ಸೌಹಾರ್ದ ವಾತಾವರಣ ನಿರ್ಮಿಸಲು ಬದ್ಧ' ಎನ್ನುವ ಎಸ್‌ಡಿಎಂಸಿ ನಿರ್ಣಯದಿಂದಾಗಿ ವಿವಾದಕ್ಕೆ ತೆರೆಬಿದ್ದಿದೆ.

ಎಸ್‌ಡಿಎಂಸಿ ಪದಾಧಿಕಾರಿಗಳು, ಹಿಂದಿನ ಪದಾಧಿಕಾರಿಗಳು, ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಮಾತ್ರ ಸಭೆಯಲ್ಲಿ ಅವಕಾಶ ನೀಡಲಾಗಿತ್ತು. ಗೋಪ್ಯತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸಭೆಯಲ್ಲಿ ಭಾಗವಹಿಸಿದ್ದವರಿಗೆ ಮೊಬೈಲ್ ಬಳಕೆ ಮಾಡದಂತೆ ಸೂಚಿಸಲಾಗಿತ್ತು. ಶಾಲಾ ಅವರಣದಲ್ಲಿ ಸಾರ್ವಜನಿಕರ ಓಡಾಟ ನಿಷೇಧಿಸಲಾಗಿತ್ತು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್. ಮಧ್ಯಾಹ್ನ 3 ವೈದ್ಯಮಿತ್ರ, ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

ನಾಳೆ

ಯೋಗಿ–ಪಿಣರಾಯಿ: ವಾಗ್ವಾದದ ಮರ್ಮವೇನು?
ಭಾಗವಹಿಸುವವರು:
ರಾಮಕೃಷ್ಣ ಉಪಾಧ್ಯ, ಪತ್ರಕರ್ತರು, ರಾಜಕೀಯ ವಿಶ್ಲೇಷಕರು
ಎ. ನಾರಾಯಣ, ಪ್ರಾಧ್ಯಾಪಕರು, ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ
ಕೆ.ಎಸ್.ವಿಮಲಾ, ಉಪಾಧ್ಯಕ್ಷರು, ಜನವಾದಿ ಮಹಿಳಾ ಸಂಘಟನೆ
ಗೋ. ಮಧುಸೂದನ್, ಬಿಜೆಪಿ ಮುಖಂಡರು
ಸಂವಾದ
14.02.2022 ರಂದು ಮಧ್ಯಾಹ್ನ 12ರಿಂದ 1

'ಪರಿಸ್ಥಿತಿ ಆಧರಿಸಿ ಕಾಲೇಜ್ ಆರಂಭ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಹಿಜಾಬ್ ವಿವಾದದಿಂದಾಗಿ ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಅಹಿತಕರ ಘಟನೆಗಳು ಸಂಭವಿಸಿದ್ದರಿಂದ ಕಾಲೇಜು, ವಿಶ್ವವಿದ್ಯಾಲಯಗಳಿಗೆ ರಜೆ ಘೋಷಿಸಲಾಗಿದೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ನೋಡಿಕೊಂಡು ಕಾಲೇಜುಗಳನ್ನು ಪುನರಾರಂಭಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಗೃಹ ಇಲಾಖೆಯ ಸಲಹೆ ಪಡೆದುಕೊಂಡು ಕಾಲೇಜುಗಳನ್ನು ಶೀಘ್ರ ಆರಂಭಿಸುವ ಚಿಂತನೆ ಇದೆ. ಪಾಠ, ಪ್ರವಚನಕ್ಕೆ ತೊಂದರೆಯಾಗದಂತೆ ಆನ್‌ಲೈನ್ ತರಗತಿಗಳನ್ನು ನಡೆಸಲಾಗುತ್ತಿದೆ' ಎಂದರು.

ಸಿ.ಎನ್. ಅಶ್ವತ್ಥ ನಾರಾಯಣ

'ಕಾಲೇಜುಗಳು ಆರಂಭವಾದ ಬಳಿಕವೂ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳು ಹೈಕೋರ್ಟ್ ಮಧ್ಯಂತರ ಆಜ್ಞೆ ಹಾಗೂ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಹೇಳಿದರು.

ವಿದ್ಯಾರ್ಥಿನಿಯರಿಗೆ ಹಿಜಾಬ್ ತೆಗೆಯಲು ಒತ್ತಾಯ– ಆರೋಪ

'ಕೆಎಲ್‌ಎಸ್' ಪದ ಬಳಸಿ ನಿಂದನೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತರಗತಿ ಫಲಕದ ಮೇಲೆ 'ಕೆಎಲ್‌ಎಸ್' ಪದ ಬರೆದು ಮುಸ್ಲಿಂ ವಿದ್ಯಾರ್ಥಿನಿಯರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಶಿಕ್ಷಕಿ ಶಶಿಕಲಾ ಜೀವ ಬೆದರಿಕೆಯೊಡ್ಡಿದ್ದಾರೆ' ಎಂದು ಆರೋಪಿಸಿ ನಗರದ 'ವಿದ್ಯಾಸಾಗರ್ ಇಂಗ್ಲಿಷ್ ಪಬ್ಲಿಕ್ ಸ್ಕೂಲ್' ವಿದ್ಯಾರ್ಥಿಗಳ ಪೋಷಕರು ಶನಿವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದರು.

ಚಂದ್ರಾಲೇಔಟ್ 2ನೇ ಹಂತದ ಬಿಸಿಸಿ ಬಡಾವಣೆಯ 4ನೇ ಅಡ್ಡರಸ್ತೆಯಲ್ಲಿರುವ ಶಾಲೆಗೆ ಬಂದಿದ್ದ ಪೋಷಕರು ಹಾಗೂ ಸಂಬಂಧಿಕರು, 'ಶಿಕ್ಷಕಿ ಅವರನ್ನು ಅಮಾನತು ಮಾಡಬೇಕು' ಎಂದು ಒತ್ತಾಯಿಸಿದರು. ಪ್ರತಿಭಟನೆ ವೇಳೆ ಮಾತಿನ ಚಕಮಕಿ ನಡೆದು, ಗಲಾಟೆ ಆಯಿತು.

'ಮುಸ್ಲಿಂ ಸಮುದಾಯದ ಮಕ್ಕಳೇ ಶಾಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಿಜಾಬ್ ಧರಿಸಿ ಶಾಲೆಗೆ ಹೋಗಿ ಬರುತ್ತಾರೆ. 7ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಶುಕ್ರವಾರ ತರಗತಿ ತೆಗೆದುಕೊಂಡಿದ್ದ ಗಣಿತ ಶಿಕ್ಷಕಿ ಶಶಿಕಲಾ ಅವಮಾನಕರವಾಗಿ ಮಾತನಾಡಿದ್ದಾರೆ' ಎಂದು ಪ್ರತಿಭಟನೆ ನಡೆಸಿದ ಪೋಷಕರು ಹೇಳಿದರು.

'ಮುಸ್ಲಿಂ ಸಮುದಾಯದ ಮೂವರು ವಿದ್ಯಾರ್ಥಿನಿಯರ ಹೆಸರಿನ ಮೊದಲ ಅಕ್ಷರಗಳನ್ನು ಸೇರಿಸಿ, 'ಕೆಎಲ್‌ಎಸ್' ಎಂದು ಶಿಕ್ಷಕಿ ಫಲಕದ ಮೇಲೆ ಬರೆದಿದ್ದರು. ವಿದ್ಯಾರ್ಥಿನಿಯರ ನಡತೆಯನ್ನೂ ಉಲ್ಲೇಖಿಸಿ ಬೈದಿದ್ದರು. ಸಮುದಾಯದ ಬಗ್ಗೆಯೂ ಕೆಟ್ಟದಾಗಿ ಮಾತನಾಡಿದ್ದರು. ಅದಕ್ಕೆ ಆಕ್ಷೇಪಿಸಿದ್ದ ವಿದ್ಯಾರ್ಥಿನಿ, ಪದ ಅಳಿಸುವಂತೆ ಒತ್ತಾಯಿಸಿದ್ದರು. ಸಿಟ್ಟಾದ ಶಿಕ್ಷಕಿ, ವಿದ್ಯಾರ್ಥಿನಿಯನ್ನೇ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಹಿಜಾಬ್ ವಿಷಯ ಪ್ರಸ್ತಾಪಿಸಿ ಬೈದಿದ್ದಾರೆ' ಎಂದೂ ಆರೋಪಿಸಿದರು. 'ಮನೆಗೆ ಬಂದಿದ್ದ ವಿದ್ಯಾರ್ಥಿಗಳು, ಶಾಲೆಯಲ್ಲಿ ನಡೆದ ಸಂಗತಿಯನ್ನು ಪೋಷಕರಿಗೆ ತಿಳಿಸಿದ್ದರು. ಈ ಬಗ್ಗೆ ವಿಚಾರಿಸಲು ಶಾಲೆ ಆಡಳಿತ ಮಂಡಳಿ ಸದಸ್ಯರನ್ನು ಸಂಪರ್ಕಿಸಿದರೂ ಪ್ರಯೋಜನವಾಗಲಿಲ್ಲ. ಹೀಗಾಗಿ, ಶಾಲೆ ಬಳಿ ಪ್ರತಿಭಟಿಸುತ್ತಿದ್ದೇವೆ' ಎಂದರು.

ದೂರು: ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರು ನಡುವೆ ಮಾತಿನ ಚಕಮಕಿ ನಡೆಯಿತು. ಕೆಲವರು, 'ಹಿಜಾಬ್' ವಿಷಯ ಪ್ರಸ್ತಾಪಿಸಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಸ್ಥಳಕ್ಕೆ ಬಂದ ಚಂದ್ರಾಲೇಔಟ್ ಪೊಲೀಸರು, ಗುಂಪು ಚದುರಿಸಿದರು.

'ಶಿಕ್ಷಕಿ ಹಾಗೂ ಇತರರ ವಿರುದ್ಧ ವಿದ್ಯಾರ್ಥಿನಿಯೊಬ್ಬರ ಮೂಲಕ ಪೋಷಕರು ದೂರು ಕೊಡಿಸಿದ್ದಾರೆ. ಪ್ರಕರಣ ದಾಖಲಿಸುವ ಸಂಬಂಧ ಕಾನೂನು ತಜ್ಞರ ಸಲಹೆ ಪಡೆಯುತ್ತಿದ್ದೇವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. ಶಿಕ್ಷಣ ಸಚಿವ ಬಿ.ಸಿ.ನಾಗೇಶ್‌ಗೆ ದೂರು ನೀಡಿರುವ ಪೋಷಕರು, 'ಶಿಕ್ಷಕಿ ಶಶಿಕಲಾ, ಹಿಜಾಬ್ ಹಾಕದಂತೆ ವಿದ್ಯಾರ್ಥಿನಿಯರನ್ನು ಒತ್ತಾಯಿಸಿದ್ದಾರೆ. ಅದನ್ನು ಪ್ರಶ್ನಿಸಿದ್ದಕ್ಕೆ ಫಲಕದ ಮೇಲೆ ಅವಾಚ್ಯ ಶಬ್ದ ಬರೆದು, ಮುಸ್ಲಿಂ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ' ಎಂದಿದ್ದಾರೆ.

ಶಾಲೆಯೊಳಗಿದ್ದ ವಿದ್ಯಾರ್ಥಿಗಳನ್ನು ಪೊಲೀಸರು ಸುರಕ್ಷಿತವಾಗಿ ಹೊರಗೆ ಕಳುಹಿಸಿದರು – ಪ್ರಜಾವಾಣಿ ಚಿತ್ರ

ಶಾಲಾ ಶಿಕ್ಷಕಿ ಅಮಾನತು

ಶಾಲೆಗೆ ಭೇಟಿ ನೀಡಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬೈಲಾಂಜನಪ್ಪ, ಶಿಕ್ಷಕಿ ಶಶಿಕಲಾ ಅವರನ್ನು ಅಮಾನತು ಮಾಡುವಂತೆ ವಿದ್ಯಾಸಾಗರ್ ಶಾಲೆ ಆಡಳಿತ ಮಂಡಳಿಗೆ ಸೂಚನೆ ನೀಡಿದರು.

'ಶಿಕ್ಷಣ ಇಲಾಖೆ ಅಧಿಕಾರಿಗಳ ಸೂಚನೆಯಂತೆ ಶಿಕ್ಷಕಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಘಟನೆ ಬಗ್ಗೆ ಅಧಿಕಾರಿಗಳ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದೆ' ಎಂದು ಪ್ರಾಂಶುಪಾಲ ಶಿವಕುಮಾರ್ ಹೇಳಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ತಪ್ಪುಗ್ರಹಿಕೆಯೇ ಗಲಾಟೆಗೆ ಕಾರಣ'

'ಶಿಕ್ಷಕಿಯೊಬ್ಬರು ವಿದ್ಯಾರ್ಥಿಗಳನ್ನು ನಿಂದಿಸಿದರೆಂಬ ಕಾರಣಕ್ಕೆ ಕೆಲವರು ಪ್ರತಿಭಟನೆ ಮಾಡಿದ್ದು, ಅವರಲ್ಲಿ ಬಹುತೇಕರು ನಮ್ಮ ವಿದ್ಯಾರ್ಥಿಗಳ ಪೋಷಕರಲ್ಲ' ಎಂದು ಶಾಲೆಯ ಪ್ರಾಂಶುಪಾಲ ಸಿ.ಎಸ್. ಶಿವಕುಮಾರ್ ಹೇಳಿದರು.

'ತರಗತಿಯಲ್ಲಿ ವಿದ್ಯಾರ್ಥಿಗಳು ಗಲಾಟೆ ಮಾಡುತ್ತಿದ್ದರು. 'ಕೀಪ್ ಲರ್ನಿಂಗ್ ಸೈಲೆನ್ಸ್' ಎಂಬುದನ್ನೇ 'ಕೆಎಲ್‌ಎಸ್' ಎಂಬುದಾಗಿ ಸಂಕ್ಷಿಪ್ತವಾಗಿ ಶಿಕ್ಷಕಿ ಬರೆದಿದ್ದರು. ಅದನ್ನೇ ಕೆಲ ವಿದ್ಯಾರ್ಥಿನಿಯರು ತಪ್ಪಾಗಿ ಗ್ರಹಿಸಿದ್ದರಿಂದ ಈ ರೀತಿ ಆಗಿದೆ. ಹಿಜಾಬ್‌ಗೆ ನಮ್ಮ ಶಾಲೆಯಲ್ಲಿ ಯಾವುದೇ ನಿರ್ಬಂಧ ವಿಧಿಸಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಧಾರ್ಮಿಕ ದ್ವೇಷ ಕುರಿತು ತನಿಖೆಗೆ ಆಗ್ರಹಿಸಿ ಸಿ.ಎಂಗೆ ಮೊಯಿಲಿ ಪತ್ರ

ಬೆಂಗಳೂರು: 'ಉಡುಪಿಯ ಪದವಿ ಪೂರ್ವ ಕಾಲೇಜಿನಲ್ಲಿ ಆರಂಭಗೊಂಡು ಇಡೀ ರಾಜ್ಯದಲ್ಲಿ ಧಾರ್ಮಿಕ ದ್ವೇಷದ ಜ್ವಾಲೆ ಹರಡಲು ಕಾರಣವಾದ ಘಟನೆಯ ಬಗ್ಗೆ ತಕ್ಷಣ ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಪತ್ರ ಬರೆದಿದ್ದಾರೆ.

'ಈ ಬೆಳವಣಿಗೆ ಯಾಕಾಯಿತು? ಅದರ ಮೂಲವೇನು? ಯಾವ ವ್ಯಕ್ತಿ, ಸಂಘ ಇದರಲ್ಲಿ ಭಾಗಿ ಆಗಿವೆ ಎನ್ನುವುದನ್ನು ತನಿಖೆ ಮಾಡಬೇಕು. ಬಳಿಕ ತನಿಖಾ ವರದಿಯ ಬಗ್ಗೆ ಶಿಕ್ಷಣ ತಜ್ಞರು, ಚಿಂತಕರ ಸಭೆ ನಡೆಸಿ, ಇನ್ನು ಮುಂದೆ ಶೈಕ್ಷಣಿಕ ಕ್ಷೇತ್ರದಲ್ಲಿ ಇಂಥ ಕ್ಷೋಭೆಯ ಪ್ರಸಂಗ ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದೂ ಒತ್ತಾಯಿಸಿದ್ದಾರೆ.

'ಈ ಕ್ಷೋಭೆಯ ಬೆಂಕಿ ಆರಿಸಲು ಶೈಕ್ಷಣಿಕ, ಸಾಂಸ್ಕೃತಿಕ ಚಿಂತಕರ ಸಭೆ ಸಭೆ ಕರೆಯಬೇಕು. ವಿರೋಧ ಪಕ್ಷದವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಾಮರಸ್ಯದ ವಾತಾವರಣ ಪುನರುತ್ಥಾನ ಮಾಡಲು ಕ್ರಮ ತೆಗೆದುಕೊಳ್ಳಬೇಕು' ಎಂದೂ ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಗೊಮ್ಮಟೇಶ್ವರ ಮೂರ್ತಿಗೆ ಅವಹೇಳನ: ಬಂಧನ

ಮೈಸೂರು: ಗೊಮ್ಮಟೇಶ್ವರ ಮೂರ್ತಿ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂಬ ಆರೋಪದ ಮೇರೆಗೆ ದಿ ನ್ಯೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಅಯೂಬ್‌ಖಾನ್ ಅವರನ್ನು ಇಲ್ಲಿನ ಉದಯಗಿರಿ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

5–15 ವರ್ಷದವರಿಗೆ ಕೋವಿಡ್ ಲಸಿಕೆ: ತಜ್ಞರ ಶಿಫಾರಸಿನಂತೆ ಕ್ರಮ

ಶೇ 67ರಷ್ಟು ಮಕ್ಕಳಲ್ಲಿ ಪ್ರತಿಕಾಯ ಸೃಷ್ಟಿ– ಸರ್ವೆ ವರದಿ

ಮನ್ಸುಖ್ ಮಾಂಡವಿಯಾ

ಗಾಂಧಿನಗರ (ಪಿಟಿಐ): 5–15 ವರ್ಷ ವಯೋಮಾನದವರಿಗೆ ಕೋವಿಡ್ ಲಸಿಕೆ ನೀಡುವ ಕುರಿತು ತಜ್ಞರು ಈ ವರೆಗೆ ಯಾವುದೇ ಶಿಫಾರಸು ಮಾಡಿಲ್ಲ. ಅವರಿಂದ ಶಿಫಾರಸು ಸ್ವೀಕರಿಸಿದ ಕೂಡಲೇ ಲಸಿಕೆ ನೀಡಲು ಆರಂಭಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಶನಿವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರಿಗೆ, ಆರೋಗ್ಯ ಕಾರ್ಯಕರ್ತರಿಗೆ ಮೊದಲು ಲಸಿಕೆ ನೀಡುವಂತೆ ತಜ್ಞರು ಮಾಡಿದ್ದ ಶಿಫಾರಸನ್ನು ಒಂದು ವಾರದೊಳಗೆ ಅನುಷ್ಠಾನಗೊಳಿಸಲಾಗಿತ್ತು. ಅದೇ ರೀತಿ, 5–15 ವರ್ಷದವರಿಗೆ ಸಂಬಂಧಿಸಿದ ಶಿಫಾರಸನ್ನೂ ಜಾರಿಗೊಳಿಸಲಾಗುವುದು' ಎಂದರು.

'ಸದ್ಯ, ಲಸಿಕೆಯ ಸಮಸ್ಯೆ ಇಲ್ಲ. ಅಗತ್ಯದಷ್ಟು ಡೋಸ್‌ಗಳ ಸಂಗ್ರಹ ಇದೆ' ಎಂದೂ ಹೇಳಿದರು.

'ಕಳೆದ ವರ್ಷ ಜುಲೈ–ಆಗಸ್ಟ್‌ನಲ್ಲಿ ಸೆರೊ ಸರ್ವೆ (ರಕ್ತದ್ರವದ ಮಾದರಿಯನ್ನು ಬಳಸಿ ನಡೆಸಿರುವ ಸಮೀಕ್ಷೆ) ನಡೆಸಲಾಗಿತ್ತು. ದೇಶದಲ್ಲಿ ಶೇಕಡಾ 67ರಷ್ಟು ಮಕ್ಕಳಲ್ಲಿ ಪ್ರತಿಕಾಯಗಳು ಸೃಷ್ಟಿಯಾಗಿರುವುದು ಈ ಸರ್ವೆಯಲ್ಲಿ ಕಂಡು ಬಂದಿದೆ. ಈ ಮಕ್ಕಳೆಲ್ಲಾ ಲಕ್ಷಣರಹಿತರಾಗಿಯೇ ಇದ್ದರು' ಎಂದು ಮನ್ಸುಖ್ ಮಾಂಡವಿಯಾ ಹೇಳಿದರು.

50,407 ಹೊಸ ಪ್ರಕರಣ, 804 ಮಂದಿ ಸಾವು

ನವದೆಹಲಿ: ಶನಿವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ ಕೋವಿಡ್‌ನ 50,407 ಹೊಸ ಪ್ರಕರಣಗಳು ದೃಢಪಟ್ಟಿದ್ದು, 804 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 6,10,443ಕ್ಕೆ ಏರಿದಂತಾಗಿದೆ. ಒಟ್ಟು ಪ್ರಕರಣಗಳ ಪೈಕಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 1.43ರಷ್ಟು ರಷ್ಟು ಇದೆ.

ದೈನಂದಿನ ಕೋವಿಡ್ ದೃಢ ದರ ಶೇ 3.48ರಷ್ಟಿದೆ. ದೇಶದಲ್ಲಿ ಈವರೆಗೆ 172 ಕೋಟಿಗೂ ಅಧಿಕ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಕಿರಿಬಾಟಿಗೆ ವೈದ್ಯಕೀಯ ಸಾಮಗ್ರಿ ರವಾನೆ

ನವದೆಹಲಿ (ಪಿಟಿಐ): ಕೋವಿಡ್ ಎದುರಿಸಲು ತನಗೆ ನೆರವು ನೀಡಬೇಕು ಎಂಬ ಕೋರಿಕೆಯ ಮೇರೆಗೆ ಪೆಸಿಫಿಕ್ ದ್ವೀಪ ರಾಷ್ಟ್ರ ಕಿರಿಬಾಟಿಗೆ ಭಾರತವು ಶನಿವಾರ ವೈದ್ಯಕೀಯ ನೆರವು ಕಳುಹಿಸಿಕೊಟ್ಟಿದೆ.

ಪಲ್ಸ್ ಆಕ್ಸಿಮೀಟರ್, ಪಿಪಿಇ ಕಿಟ್ ಗಳು ಮತ್ತು ತುರ್ತು ಕೋವಿಡ್ ಔಷಧೀಯ ಸಾಮಗ್ರಿಗಳನ್ನು ಭಾರತವು ರವಾನಿಸಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ನಾರ್ವೆ: ಮಾಸ್ಕ್, ಅಂತರ ಕಾಯ್ದುಕೊಳ್ಳುವಿಕೆ ನಿಯಮ ವಾಪಸ್

ಓಸ್ಲೊ (ಎಎಫ್‌ಪಿ): ಓಮೈಕ್ರಾನ್ ಸೋಂಕಿನ ಉಲ್ಬಣದ ಹೊರತಾಗಿಯೂ ನಾರ್ವೆಯಲ್ಲಿ ಶನಿವಾರದಿಂದ ಮಾಸ್ಕ್ ಧರಿಸುವುದು, ವೈಯಕ್ತಿಕ ಅಂತರ ಕಾಯ್ದುಕೊಳ್ಳುವುದೂ ಸೇರಿದಂತೆ ಇತರ ಕೋವಿಡ್ ನಿರ್ಬಂಧಗಳನ್ನು ರದ್ದುಗೊಳಿಸಲಾಗಿದೆ.

'ನಾವು ವೈಯಕ್ತಿಕ ಅಂತರ ಕಾಯ್ದುಕೊಳ್ಳುವ ನಿಯಮವನ್ನು ತೆಗೆದುಹಾಕಿದ್ದೇವೆ. ಈ ಹಿಂದಿನಂತೆ ನೈಟ್‌ಲೈಫ್, ಸಾಂಸ್ಕೃತಿಕ ಕಾರ್ಯಕ್ರಮ ಇತರ ಸಂದರ್ಭಗಳಲ್ಲಿ ನಾವು ಬೆರೆಯಬಹುದಾಗಿದೆ' ಎಂದು ಪ್ರಧಾನಿ ಜೋನಾಸ್ ಗಹರ್ ಸ್ಟೋರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 13-2-1997

• **ಸರ್ಕಾರ ರಾಜೀನಾಮೆಗೆ ಪ್ರತಿಪಕ್ಷ ಒತ್ತಾಯ, ಸಭಾತ್ಯಾಗ**

ಬೆಂಗಳೂರು, ಫೆ. 12– ರಾಮನಗರ ತಾಲ್ಲೂಕಿನ ಹೆಜ್ಜಾಲ ಪ್ರಕರಣ ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಗೋಲಿಬಾರ್ ಮತ್ತು ಲಾಕಪ್ ಸಾವುಗಳು ನಡೆದಿರುವ ಘಟನೆಗಳು ವಿಧಾನಮಂಡಲದ ಉಭಯ ಸದನಗಳಲ್ಲಿ ಇಂದು ಪ್ರತಿಧ್ವನಿಸಿ ಕಾನೂನು ಸುವ್ಯವಸ್ಥೆ ವೈಫಲ್ಯತೆಯ ನೈತಿಕ ಹೊಣೆ ಹೊತ್ತು ಗೃಹ ಖಾತೆ ಹೊಂದಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ರಾಜೀನಾಮೆ ನೀಡಬೇಕೆಂದು ವಿಧಾನಸಭೆಯಲ್ಲಿ ವಿರೋಧ ಪಕ್ಷಗಳು ಒತ್ತಾಯಿಸಿದರೆ, ವಿಧಾನಪರಿಷತ್ತಿನಲ್ಲಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ನಡೆಯಿತು.

50 ವರ್ಷಗಳ ಹಿಂದೆ

ಭಾನುವಾರ, 13-2-1972

• **ಉದ್ಯೋಗ ಹೆಚ್ಚಿಸಲು ಆದಾಯ– ಕಂಪೆನಿ ತೆರಿಗೆಗೆ ವಿಶೇಷ ಶುಲ್ಕ**

ನವದೆಹಲಿ, ಫೆ. 12– ಉದ್ಯೋಗ ಕಲ್ಪಿಸುವ ಯೋಜನೆಗಳಿಗೆ ಹಣ ಪೂರೈಸಲು ಆದಾಯ ಮತ್ತು ಕಂಪೆನಿ ತೆರಿಗೆಗಳ ಮೇಲೆ ಹೆಚ್ಚುವರಿ ವಿಶೇಷ ಶುಲ್ಕ ವಿಧಿಸಬೇಕೆಂದು ನಿರುದ್ಯೋಗ ಕುರಿತ ಭಗವತಿ ಸಮಿತಿ ಸಲಹೆ ಮಾಡಿದೆ.

ಕೇಂದ್ರ ಕಾರ್ಮಿಕ ಖಾತೆ ಕಳೆದ ಅಕ್ಟೋಬರ್ ತಿಂಗಳಲ್ಲಿ ನೇಮಿಸಿದ ಈ ಸಮಿತಿಯು ಇಂದು ಹಂಗಾಮಿ ವರದಿಯೊಂದನ್ನು ಸಲ್ಲಿಸಿತು. ಮುಂದಿನ ಎರಡು ವರ್ಷಗಳಲ್ಲಿ ಗ್ರಾಮಾಂತರ ಗೃಹ ನಿರ್ಮಾಣ, ನೀರು ಸರಬರಾಜು ಮತ್ತಿತರ ಸೌಲಭ್ಯಗಳ ಯೋಜನೆಗಳನ್ನು ಸಮಿತಿ ಸೂಚಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 13, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 01ನೇ ದಿನ
ತಿಥಿ: (ಮಾಘ ಶುಕ್ಲ) ದ್ವಾದಶಿ ಗಂ. 18-42 ನಕ್ಷತ್ರ: ಆದ್ರಾ ಗಂ. 09-27 ಯೋಗ: ಪ್ರೀತಿ ಗಂ. 21-14, ಕರಣ: ಬಾಲವ ಗಂ. 18-42. ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-58 ಸೂರ್ಯಾಸ್ತ: 06-32
ಮುಸ್ಲಿಂ ದಿನಾಂಕ: 11 ರಜಬ್
ದಿನ ವಿಶೇಷ: ಭೀಷ್ಮದ್ವಾದಶಿ, ಸೆಪ್ಟುಗೇಶಿಯಾ ಸಂಡೆ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ: 5, 8

ಮೇಷ: ಈ ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಆತ್ಮವಿಶ್ವಾಸದಿಂದಾಗಿ ಕೆಲಸ ಅತಿಯಾದ ಯಶಸ್ಸು ಹೊಂದುವಿರಿ. ಅತಿಯಾದ ಆತ್ಮವಿಶ್ವಾಸವೂ ತೊಂದರೆ ಮಾಡಬಹುದು.

ವೃಷಭ: ಕಾರ್ಯಸಾಧನೆಗೆ ಅಕ್ಕ-ಪಕ್ಕದವರ ಅಡ್ಡಗಾಲು ಅಥವಾ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ. ಆದ್ದರಿಂದ ಸೂಕ್ಷ್ಮವಾಗಿ ಯೋಚಿಸಿ ಸ್ವಂತ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು.

ಮಿಥುನ: ಇನ್ನೊಬ್ಬರಿಗೆ ಮೋಸ ಮಾಡಲು ಪ್ರೇರೇಪಣೆ ಸಿಗಲಿದೆ. ಆದರೆ ನಿಮ್ಮ ಬುದ್ಧಿಯನ್ನು ಸ್ಥಿಮಿತದಲ್ಲಿರಿಸಿಕೊಳ್ಳಿ. ಬೆಲೆಬಾಳುವ ವಸ್ತುಗಳನ್ನು ಖರೀದಿಸುವಿರಿ. ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಜಯ.

ಕರ್ಕಾಟಕ: ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳುವ ಸನ್ನಿವೇಶಗಳು ಈ ದಿನ ನಿಮಗೆ ಎದುರಾಗಲಿದೆ. ಯಾವ ಪರಿಸ್ಥಿತಿಯಲ್ಲಿಯೂ ಧೈರ್ಯಗೆಡುವುದು ಸರಿಯಲ್ಲ. ರೈತರಿಗೆ ಉತ್ತಮ ತಳಿಯ ಬೆಳೆಯಿಂದ ಹೆಚ್ಚಿನ ಸಂತೋಷ

ಸಿಂಹ: ಹಣಕಾಸಿನ ವಿಚಾರದಲ್ಲಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದರಲ್ಲಿ ವ್ಯತ್ಯಾಸವಾಗಬಹುದು. ನಿಮ್ಮ ಶ್ರಮದ ಫಲವು ಇನ್ನೊಬ್ಬರ ಪಾಲಾಗಲಿದೆ. ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರಿಗೆ ನೆಮ್ಮದಿ

ಕನ್ಯಾ: ಸಂಗೀತ ಶಾಸ್ತ್ರದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಅಧಿಕ ಸಮಯ ಸಿಗುವುದು. ವಿಶ್ರಾಂತಿಯಿಲ್ಲದ ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಪ್ರಯತ್ನಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ.

ತುಲಾ: ಮಾರ್ಗದರ್ಶಕರ ಸಲಹೆ ಸೂಚನೆ ಪಡೆದು ಆರಂಭಿಸಿದ ಯೋಜನಾಬದ್ಧ ಕೆಲಸಗಳಲ್ಲಿ ಹೆಚ್ಚಿನ ಅನುಕೂಲ. ಶುಭ ಕಾರ್ಯಗಳಿಗಾಗಿ ಖರ್ಚಿನ ಸಂಭವ. ಮಕ್ಕಳ ಓದಿನ ಕಡೆ ಹೆಚ್ಚು ನಿಗಾವಹಿಸುವಿರಿ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಓದಿನಿಂದಾಗಿ ಬೇಸರಗೊಂಡು ಬದಲಾವಣೆಯನ್ನು ಬಯಸುವಂತಾಗಲಿದೆ. ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸುವುದರಿಂದ ಶುಭವಾಗುವುದು. ತೈಲ ಉತ್ಪನ್ನಗಳ ಮಾರಾಟದಿಂದ ಲಾಭ.

ಧನು: ಸಾಂಸಾರಿಕವಾಗಿ ಮುಖ್ಯ ವಿಷಯದಲ್ಲಿ ಶುಭವಾರ್ತೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಇಂದಿನಿಂದ ವಿಶೇಷ ಆಸಕ್ತಿ ಮೂಡುವುದು. ಇದುವರೆಗೂ ಬಾಕಿಯಿದ್ದ ವ್ಯಾಜ್ಯಗಳು ಒಡಹುಟ್ಟಿದವರ ಸಹಾಯದಿಂದ ಬಗೆಹರಿಯುವವು.

ಮಕರ: ಸಂದಿಗ್ಧ ಪರಿಸ್ಥಿತಿಯಲ್ಲಿರುವ ನೀವು ಪರಿಸ್ಥಿತಿಯನ್ನು ಅವಲೋಕಿಸಿ ನಿಮ್ಮ ಇಷ್ಟದೇವರನ್ನು ಪ್ರಾರ್ಥಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ. ಅನಗತ್ಯದ ಅಲೆದಾಟ ತಪ್ಪಿಸಿ ಸಮಯವನ್ನು ಸಾರ್ಥಕಗೊಳಿಸಿಕೊಳ್ಳಿ.

ಕುಂಭ: ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಎದುರಾಗುವುದು. ನಿವೇಶನ ಕೊಳ್ಳುವ ನಿಮ್ಮ ಕನಸು ನನಸಾಗಲಿದೆ. ಮನೆಯ ಖರ್ಚಿನಲ್ಲಿ ಹಿಡಿತವಿರಲಿ.

ಮೀನ: ವೈಯಕ್ತಿಕ ಕೆಲಸಗಳಿಗೆ ಅಡಚಣೆ ಇರುವುದಿಲ್ಲ. ಅಧಿಕಾರಿಗಳ ವಿಶ್ವಾಸಗಳಿಸಲು ಪ್ರಯತ್ನಿಸಿ. ಜವಾಬ್ದಾರಿಯುಕ್ತವಾದ ನಡೆ, ದಿಟ್ಟತನದ ಜೊತೆಗೆ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯಬಹುದು

ಪದಬಂಧ 4868

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನಾಡಿನಲ್ಲಿರುವ ಲೋಕೋಕ್ತಿ! (3)
4.ಈತ ಬಲು ದುಷ್ಟ (3)
5.ಸೂಕ್ಷ್ಮವಾಗಿ ನೋಡುವವನು (4)
6.ಅತಿಯಾದ ಬಾಯಾರಿಕೆ (4)
8.ತಿರುವು ಮುರುವಾದ ದುಡ್ಡು (2)
10.ನೇಸರನ ಇನ್ನೊಂದು ಹೆಸರು (2)
13.ತಾಯಿಯ ಮನೆ ಕಿಟಕಿ! (4)
14.ಕಂದಾಯ ನಿಗದಿ ಪಡಿಸುವ ವ್ಯವಸ್ಥೆ (4)
15.ಬೇಡುವವ ಇಲ್ಲಿದ್ದಾನೆ (3)
16.ಸಮತಟ್ಟಾದ ನೆಲ (3)

ಮೇಲಿಂದ ಕೆಳಕ್ಕೆ
1.ನಾನು ಮುಂದು ತಾನು ಮುಂದು ಎಂದು ನುಗ್ಗುವುದು (6)
2.ಹೆಸರಿಡುವ ಶಾಸ್ತ್ರ (5)
3.ಇದು ಕ್ಷಮಿಸಲಾಗದ್ದು! (3)
5.ಸರದೊಳಗಿರುವ ನೆರವು! (4)
9.ಈತ ಬಲು ಮೊಂಡ! (4)
11.ಲೋಹದ ಹಕ್ಕಿಯಲ್ಲಿನ ಪಯಣ (5)
12.ಮಾನಿನಿಗೆ ಬಂದಿರುವ ಸಂದೇಹ! (3)

1	■	2			■	■	3	■
4			■	■	5			
	■	6				■		■
	■		■	■		■	■	7
	■	8	9	■	10	11	■	
	■	■		■	■		■	
■	12	■	13				■	
14				■	■	15		
■		■	■	16			■	

4867ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖುಜುತೆ 4.ಗತ್ಯಂತರ
6.ವಿನಿಮಯ 8.ಕೆಸರು
11.ಉಬ್ಧಕ 13.ವನಸುಮ
17.ತಟವಟ 18.ಕಗ್ಗಂಟು
ಮೇಲಿಂದ ಕೆಳಕ್ಕೆ:
1.ಖುತ್ವಿಕ್ಕು 2.ತೆಗಳಿಕೆ
3.ಗುಲಾಮ 5.ರವಿ
7.ಯವನಿ 9.ರುಮಾಲು
10.ಗಡವ 12.ಕರ್ನಾಟಕ
14.ನಸುಕು 15.ಮತ
16.ಸಪಾಟು

ಸುಡೊಕು 5254

	5	4		7			3	
7			2		3	6		8
8				4			2	
4		3		1		8		6
			9		4		7	
9		8		3		4		1
1		9	3		5		8	7
	6			9				
5		7	4		1	9		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5253 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಉತ್ತರ ಪ್ರದೇಶ ಚುನಾವಣೆ: ಅಲ್ಪಸಂಖ್ಯಾತರ ಮತಗಳ ಮೇಲೆ ಎಸ್‌ಪಿ ಕಣ್ಣು, ಬಿಜೆಪಿಯಿಂದ ಧ್ರುವೀಕರಣ ಯತ್ನ

ಎರಡನೇ ಹಂತ: ಮುಸ್ಲಿಂ, ದಲಿತರು ನಿರ್ಣಾಯಕ

• ಸಂಜಯ ಪಾಂಡೆ

ಲಖನೌ: ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 55 ವಿಧಾನಸಭಾ ಕ್ಷೇತ್ರಗಳಲ್ಲಿ ದಲಿತ ಮತ್ತು ಮುಸ್ಲಿಂ ಸಮುದಾಯದ ಮತಗಳೇ ನಿರ್ಣಾಯಕ. 2017ರಲ್ಲಿ ಗೆದ್ದದ್ದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಉಮೇದಿನಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಇದೆ. ದಲಿತ ಮತ್ತು ಮುಸ್ಲಿಂ ಸಮುದಾಯಗಳು ನಿರ್ಣಾಯಕ ಆಗಿರುವ ಕಾರಣ ಧ್ರುವೀಕರಣವು ಗೆಲುವಿಗೆ ಸಹಕಾರಿ ಆಗಬಹುದು ಎಂಬ ಲೆಕ್ಕಾಚಾರದಲ್ಲಿ ಬಿಜೆಪಿ ಇದೆ.

ಉತ್ತರ ಪ್ರದೇಶದಲ್ಲಿ ಅಧಿಕಾರಕ್ಕೆ ಏರಬೇಕಿದ್ದರೆ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಹೆಚ್ಚಿನವುಗಳನ್ನು ಗೆಲ್ಲುವುದು ಎಸ್‌ಪಿಗೆ ಅನಿವಾರ್ಯ. 2017ರಲ್ಲಿ ಈ ಭಾಗದಲ್ಲಿ ಬಿಜೆಪಿ ಪರವಾದ ಸ್ಪಷ್ಟ ಅಲೆ ಇದೆ ಎಂಬ ಭಾವನೆ ಇದ್ದರೂ 55 ಕ್ಷೇತ್ರಗಳ ಪೈಕಿ 27ರಲ್ಲಿ ಎಸ್‌ಪಿಗೆ ಗೆದ್ದಿತ್ತು. ಬಿಜೆಪಿಗೆ ಗೆಲ್ಲಲು ಸಾಧ್ಯವಾಗಿದ್ದು 11 ಕ್ಷೇತ್ರಗಳಲ್ಲಿ ಮಾತ್ರ. 13 ಕ್ಷೇತ್ರಗಳಲ್ಲಿ ಬಿಎಸ್‌ಪಿ ಗೆದ್ದಿತ್ತು.

ಸಂಭಾಲ್, ಮೊರಾದಾಬಾದ್, ಸಹರನ್‌ಪುರ, ಬಿಜ್ನೋರ್, ರಾಂಪುರ ಸೇರಿ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಂ ಮತದಾರರ ಸಂಖ್ಯೆ ಗಣನೀಯವಾಗಿದೆ. 25 ಕ್ಷೇತ್ರಗಳಲ್ಲಿ ಮುಸ್ಲಿಮರೇ ನಿರ್ಣಾಯಕ. ಈ ಭಾಗದಲ್ಲಿ ದಲಿತರ ಜನಸಂಖ್ಯೆಯೂ ಹೆಚ್ಚು. ಇಲ್ಲಿನ ಕನಿಷ್ಠ 20 ಕ್ಷೇತ್ರಗಳಲ್ಲಿ ದಲಿತರ ಮತಗಳು ನಿರ್ಣಾಯಕ.

ಯೋಗಿ ಆದಿತ್ಯನಾಥ ನೇತೃತ್ವದ ಸಚಿವ ಸಂಪುಟದ ನಾಲ್ವರು ಸಚಿವರು ಕಣದಲ್ಲಿದ್ದಾರೆ. ಎಸ್‌ಪಿಯ ಮುಖಂಡ ಆಜಂ ಖಾನ್ ಅವರ ಭವಿಷ್ಯವೂ ಎರಡನೇ ಹಂತದಲ್ಲಿ ನಿರ್ಧಾರ ಆಗಲಿದೆ. ಭೂಕಬಳಿಕೆ ಮತ್ತು ಇತರ ಆರೋಪಗಳಲ್ಲಿ ಬಂಧಿತರಾಗಿ ಜೈಲಿನಲ್ಲಿರುವ ಆಜಂ ಖಾನ್ ಅವರು ರಾಂಪುರದಿಂದ ಸ್ಪರ್ಧಿಸಿದ್ದಾರೆ.

ಕೇಂದ್ರವು ಜಾರಿಗೆ ತಂದಿದ್ದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸಿದ ಪ್ರತಿಭಟನೆಗೆ ಈ ಭಾಗದಲ್ಲಿ ಭಾರಿ ಬೆಂಬಲ ವ್ಯಕ್ತವಾಗಿತ್ತು. ಬಿಜೆಪಿ ಅಭ್ಯರ್ಥಿಗಳ ವಿರುದ್ಧ ಹಲವೆಡೆ ಪ್ರತಿಭಟನೆಗಳೂ ನಡೆದಿವೆ. 'ಈ ಬಾರಿ ಯಾವುದೇ ಅಲೆ ಕಾಣಿಸುತ್ತಿಲ್ಲ. ರೈತರ ಆಕ್ರೋಶ ಮತ್ತು ಇತರ ಕಾರಣಗಳಿಂದಾಗಿ ಬಿಜೆಪಿಗೆ ಈ ಬಾರಿ ಕಷ್ಟವಾಗಬಹುದು. ಮುಸ್ಲಿಂ ಮತಗಳು ವಿಭಜನೆ ಆಗದೇ ಇದ್ದರೆ ಎಸ್‌ಪಿಗೆ ಅನುಕೂಲ ಆಗಬಹುದು' ಎಂದು ಬಿಜ್ನೋರ್‌ನ ಪತ್ರಕರ್ತರೊಬ್ಬರು ವಿಶ್ಲೇಷಿಸಿದ್ದಾರೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಬದೌನ್‌ನಲ್ಲಿ ಶನಿವಾರ ನಡೆಸಿದ ಚುನಾವಣಾ ಪ್ರಚಾರ ಸಭೆಯಲ್ಲಿ ಕಾರ್ಯಕರ್ತರು ಪಕ್ಷದ ಧ್ವಜ ಮತ್ತು ಅಂಬೇಡ್ಕರ್ ಚಿತ್ರಗಳನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

ಕಾಣಿಸದ ಕೋಮು ಧ್ರುವೀಕರಣ

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಜಿಲ್ಲೆಗಳು 2013ರಲ್ಲಿ ಕೋಮು ಗಲಭೆ ನಡೆದ ಮುಜಫ್ಫರ್‌ನಗರದ ಸಮೀಪದಲ್ಲಿವೆ. ಗಲಭೆಯಲ್ಲಿ 63 ಮಂದಿ ಹತ್ಯೆಯಾಗಿದ್ದರು ಮತ್ತು ಸಾವಿರಾರು ಮಂದಿ ನಿರಾಶ್ರಿತರಾಗಿದ್ದರು. ಈ ಗಲಭೆಯು ಕೋಮು ನೆಲೆಯಲ್ಲಿ ತೀವ್ರ ಧ್ರುವೀಕರಣಕ್ಕೆ ಕಾರಣವಾಗಿತ್ತು. ಪರಿಣಾಮವಾಗಿ ರಾಜ್ಯದ ಪಶ್ಚಿಮ ಭಾಗದಲ್ಲಿ ಬಿಜೆಪಿಗೆ ಭಾರಿ ಗೆಲುವು ದಕ್ಕಿತ್ತು.

ಈ ಬಾರಿ ಅಂತಹ ಧ್ರುವೀಕರಣ ಕಾಣಿಸುತ್ತಿಲ್ಲ. ಹಾಗಾಗಿಯೇ, 2017ರಲ್ಲಿ ಗೆದ್ದ ಕ್ಷೇತ್ರಗಳನ್ನು ಉಳಿಸಿಕೊಳ್ಳುವುದು ಬಿಜೆಪಿಗೆ ದೊಡ್ಡ ಸವಾಲಾಗಿದೆ. ಬಿಜೆಪಿಯ ಧ್ರುವೀಕರಣ ಯತ್ನ ಎದ್ದು ಕಾಣುತ್ತಿದೆ. ಬಿಜೆಪಿಯ ಪ್ರಮುಖ ಪ್ರಚಾರಕ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ತಮ್ಮ ಪ್ರಚಾರ ರ‍್ಯಾಲಿಗಳಲ್ಲಿ ಮುಜಫ್ಫರ್‌ನಗರ ಕೋಮು ಗಲಭೆಯನ್ನು ಪದೇ ಪದೇ ಉಲ್ಲೇಖಿಸಿದ್ದಾರೆ. ಅಧಿಕಾರಕ್ಕೆ ಬಂದರೆ, ರಾಜ್ಯವನ್ನು ಗಲಭೆ ಮುಕ್ತ ಮಾಡುವುದಾಗಿ ಬಿಜೆಪಿ ಭರವಸೆ ಕೊಟ್ಟಿದೆ.

ಗೋವಾದ ಮೇಲೆ ಗಮನ ಕೇಂದ್ರೀಕರಣ: ಆದಿತ್ಯ ಠಾಕ್ರೆ

ಪಣಜಿ (ಪಿಟಿಐ): ಬಿಜೆಪಿ ಜತೆಗೆ ಇದ್ದ ಸಖ್ಯದಿಂದಾಗಿ ಗೋವಾದ ಮೇಲೆ ಗಮನ ಕೇಂದ್ರೀಕರಿಸಲು ಸಾಧ್ಯವಾಗಿರಲಿಲ್ಲ. ಆದರೆ, ಬಿಜೆಪಿ ಬೆನ್ನಿಗೆ ಇರಿಯಿತು. ಹಾಗಾಗಿ, ಇನ್ನು ಮುಂದೆ ಗೋವಾದ ಎಲ್ಲ ಚುನಾವಣೆಗಳಲ್ಲಿಯೂ ಶಿವಸೇನಾ ಸ್ಪರ್ಧಿಸಲಿದೆ. ಪಂಚಾಯಿತಿಯಿಂದ ಲೋಕಸಭೆವರೆಗೆ ಎಲ್ಲ ಚುನಾವಣೆಗಳಲ್ಲಿಯೂ ಕಣಕ್ಕೆ ಇಳಿಯಲಿದೆ ಎಂದು ಪಕ್ಷದ ಮುಖಂಡ ಆದಿತ್ಯ ಠಾಕ್ರೆ ಅವರು ಶನಿವಾರ ಹೇಳಿದ್ದಾರೆ.

ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದ್ದರೂ ಗೋವಾದ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಿಲ್ಲ. ಗೋವಾ ಅಭಿವೃದ್ಧಿ ಆಗಲು ಶಿವಸೇನಾ ಅಧಿಕಾರದಲ್ಲಿ ಇರಬೇಕು ಎಂದು ಹೇಳಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಗೆ 2019ರಲ್ಲಿ ನಡೆದ ಚುನಾವಣೆಯ ಬಳಿಕ ಶಿವಸೇನಾ ಮತ್ತು ಬಿಜೆಪಿಯ ಮೈತ್ರಿ ಮುರಿದುಬಿತ್ತು. ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡಿರುವ ಶಿವಸೇನಾ, ಮಹಾರಾಷ್ಟ್ರದಲ್ಲಿ ಸರ್ಕಾರ ನಡೆಸುತ್ತಿದೆ.

ಗೋವಾ ವಿಧಾನಸಭಾ ಚುನಾವಣೆಯಲ್ಲಿ ಎನ್‌ಸಿಪಿ ಜತೆಗೆ ಮೈತ್ರಿ ಮಾಡಿಕೊಂಡು ಸೇನಾ ಸ್ಪರ್ಧಿಸುತ್ತಿದೆ. ಈ ಬಾರಿ 10 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಗೋವಾದ ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಮಗ ಉತ್ಪಲ್ ಪರಿಕ್ಕರ್ ಅವರು ಪಣಜಿ ಕ್ಷೇತ್ರದಲ್ಲಿ ಪಕ್ಷೇತರರಾಗಿ ಕಣಕ್ಕೆ ಇಳಿದಿರುವ ಕಾರಣ ಈ ಕ್ಷೇತ್ರದ ಸೇನಾ ಅಭ್ಯರ್ಥಿಯು ಉಮೇದುವಾರಿಕೆ ಹಿಂದಕ್ಕೆ ಪಡೆದಿದ್ದಾರೆ.

ಮಹಾರಾಷ್ಟ್ರದ ಹೊರಗೆಯೂ ಶಿವಸೇನಾವು ಇತ್ತೀಚಿನ ದಿನಗಳಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಗೋವಾದಲ್ಲಿ ಸೇನಾದ ಪ್ರಚಾರಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಈ ಚುನಾವಣೆಯು ಸೇನಾದ ಭವಿಷ್ಯಕ್ಕೆ ಸಂಬಂಧಿಸಿದ್ದಲ್ಲ, ಬದಲಿಗೆ ಇಲ್ಲಿನ ಜನರು ಮತ್ತು ಅವರ ಭವಿಷ್ಯಕ್ಕೆ ಸಂಬಂಧಿಸಿದ್ದು ಎಂದು ಮಹಾರಾಷ್ಟ್ರದ ಸಚಿವರೂ ಆಗಿರುವ ಆದಿತ್ಯ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

- **ಪ್ರಚಾರ ಅಂತ್ಯ:** ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಉತ್ತರ ಪ್ರದೇಶದ 55 ಕ್ಷೇತ್ರಗಳು, ಒಂದೇ ಹಂತದಲ್ಲಿ ಮತದಾನ ಪೂರ್ಣಗೊಳ್ಳಲಿರುವ ಗೋವಾ ಮತ್ತು ಉತ್ತರಾಖಂಡದಲ್ಲಿ ಬಹಿರಂಗ ಪ್ರಚಾರವು ಶನಿವಾರ ಸಂಜೆ ಕೊನೆಗೊಂಡಿದೆ. ಗೋವಾದಲ್ಲಿ 40 ಮತ್ತು ಉತ್ತರಾಖಂಡದಲ್ಲಿ 70 ವಿಧಾನಸಭಾ ಕ್ಷೇತ್ರಗಳಿವೆ. ಸೋಮವಾರ (ಫೆ. 14) ಇಲ್ಲಿ ಮತದಾನ ನಡೆಯಲಿದೆ.
- **ಪ್ರಿಯಾಂಕಾ ಭೇಟಿ:** ಉತ್ತರ ಪ್ರದೇಶದ ಎಸ್‌ಪಿ ಮುಖಂಡನ ಹೊಲದಲ್ಲಿ ಮೃತ ದೇಹ ಪತ್ತೆಯಾದ ದಲಿತ ಯುವತಿಯ ತಾಯಿಯನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶನಿವಾರ ಭೇಟಿಯಾಗಿದ್ದಾರೆ. ನ್ಯಾಯ ದೊರಕಿಸಲು ನೆರವಾಗುವುದಾಗಿ ಪ್ರಿಯಾಂಕಾ ಭರವಸೆ ಕೊಟ್ಟಿದ್ದಾರೆ. ಎರಡು ತಿಂಗಳ ಹಿಂದೆ ನಾಪತ್ತೆಯಾಗಿದ್ದ ಯುವತಿಯ ಮೃತದೇಹ ಶುಕ್ರವಾರ ಪತ್ತೆಯಾಗಿತ್ತು. ಎಸ್‌ಪಿ ಮುಖಂಡರಾಗಿದ್ದ ಫತೇಹ್ ಬಹದೂರ್ ಸಿಂಗ್ ಅವರು ಸ್ಥಾಪಿಸಿದ ಆಶ್ರಮದ ಸಮೀಪ ದೇಹ ಪತ್ತೆಯಾಗಿತ್ತು. ಫತೇಹ್ ಅವರ ಮಗ ರಾಜೋಲ್ ಸಿಂಗ್ ಅವರು ಪ್ರಕರಣದ ಪ್ರಮುಖ ಆರೋಪಿ.
- **ಪ್ರಕರಣ ದಾಖಲು:** ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಇಬ್ಬರು ಅಭ್ಯರ್ಥಿಗಳು ತಮ್ಮ ಪ್ರಮಾಣಪತ್ರದಲ್ಲಿ ತಪ್ಪು ಮಾಹಿತಿ ನೀಡಿದ ಕಾರಣ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಎಎಪಿಯಿಂದ ಸ್ಪರ್ಧಿಸಿರುವ ಹರ್ಮೀತ್ ಸಿಂಗ್ ಪಠಣಮಜ್ರ ಹಾಗೂ ಪಕ್ಷೇತರ ಅಭ್ಯರ್ಥಿ ಮಹಮ್ಮದ್ ಶಕೀಲ್ ಅವರು ಘೋಷಿತ ಅಪರಾಧಿಗಳು ಎಂದು ನ್ಯಾಯಾಲಯ ಪ್ರಕಟಿಸಿತ್ತು. ಈ ಅಂಶವನ್ನು ಈ ಇಬ್ಬರೂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ಕೊಟ್ಟಿದ್ದ ಪ್ರಮಾಣಪತ್ರದಲ್ಲಿ ಮರೆಮಾಚಿದ್ದರು ಎಂದು ಆರೋಪಿಸಲಾಗಿದೆ
- **ಬಿಜೆಪಿ ಪ್ರಣಾಳಿಕೆ ಬಿಡುಗಡೆ:** ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಪಂಜಾಬ್ ವಿಧಾನಸಭೆ ಚುನಾವಣೆಗಾಗಿ ಪ್ರಣಾಳಿಕೆ ಶನಿವಾರ ಬಿಡುಗಡೆ ಮಾಡಿದೆ. ಪಂಜಾಬ್‌ನಲ್ಲಿ ಬಿಜೆಪಿ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ, ಯುವ ಜನರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ 75ರಷ್ಟು ಮೀಸಲಾತಿ ಮತ್ತು ಖಾಸಗಿ ಉದ್ಯೋಗದಲ್ಲಿ ಶೇ 50ರಷ್ಟು ಮೀಸಲಾತಿಯನ್ನು ನೀಡುವುದಾಗಿ ಭರವಸೆ ನೀಡಿದೆ.'ಸಂಕಲ್ಪ' ಎಂಬ ಹೆಸರಿನ ಈ ಪ್ರಣಾಳಿಕೆಯನ್ನು ಕೇಂದ್ರ ಸಚಿವರಾದ ಹರ್‌ದೀಪ್ ಸಿಂಗ್ ಪುರಿ ಮತ್ತು ಸೋಮ್ ಪ್ರಕಾಶ್, ಬಿಜೆಪಿ ನಾಯಕರಾದ ದುಷ್ಯಂತ್ ಗೌತಮ್ ಮತ್ತಿತರರು ಜಲಂಧರ್‌ನಲ್ಲಿ ಬಿಡುಗಡೆ ಮಾಡಿದರು.

ಕಣದಲ್ಲಿರುವ 114 ಅಭ್ಯರ್ಥಿಗಳು ಪ್ರೌಢಶಾಲೆ ಮೆಟ್ಟಿಲು ಹತ್ತಿಲ್ಲ

ನೊಯಿಡಾ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ 12 ಮಂದಿ ಅನಕ್ಷರಸ್ಥರಿದ್ದರೆ, 114 ಮಂದಿ ಪ್ರೌಢಶಾಲೆಯ ಮೆಟ್ಟಿಲನ್ನೂ ಹತ್ತಿಲ್ಲ.

ಕಣದಲ್ಲಿ 102 ಜನರು ಸ್ನಾತಕೋತ್ತರ ಪದವೀಧರರಿದ್ದು, 6 ಮಂದಿ ಪಿಎಚ್‌.ಡಿ ಪದವಿ ಪಡೆದಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಯ ವಿಶ್ಲೇಷಣಾ ವರದಿ ತಿಳಿಸಿದೆ. 584 ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣಪತ್ರವನ್ನು ಆಧರಿಸಿ ಎಡಿಆರ್ ಈ ವಿಶ್ಲೇಷಣಾ ವರದಿಯನ್ನು ತಯಾರಿಸಿದೆ.

12 ಅಭ್ಯರ್ಥಿಗಳು 5ನೇ ತರಗತಿ, 58 ಅಭ್ಯರ್ಥಿಗಳು 10ನೇ ತರಗತಿ, 88 ಅಭ್ಯರ್ಥಿಗಳು 12ನೇ ತರಗತಿವರೆಗೆ ಓದಿದ್ದಾರೆ. 108 ಮಂದಿ ಪದವಿ ಪಡೆದಿದ್ದಾರೆ. 102 ಜನರು ಸ್ನಾತಕೋತ್ತರ ಪದವಿ, ಐವರು ಡಿಪ್ಲೊಮಾ ಪದವಿ ಪಡೆದಿದ್ದಾರೆ.

56 ಅಭ್ಯರ್ಥಿಗಳ ವಯಸ್ಸು 25–30 ವರ್ಷದ ಒಳಗಿದೆ. 150 ಅಭ್ಯರ್ಥಿಗಳ ವಯಸ್ಸು 31–40 ವರ್ಷ, 179 ಅಭ್ಯರ್ಥಿಗಳು 41–50 ವರ್ಷದೊಳಗಿದ್ದಾರೆ. 130 ಅಭ್ಯರ್ಥಿಗಳು 51–60 ವರ್ಷದವರು. 61–70 ವರ್ಷ ವಯಸ್ಸಿನ 62 ಮಂದಿ ಕಣದಲ್ಲಿದ್ದರೆ, 71–80 ವರ್ಷ ವಯೋಮಾನದ 6 ಜನರು ಸ್ಪರ್ಧೆಗಿಳಿದಿದ್ದಾರೆ. 80 ವರ್ಷ ಮೀರಿದ ಒಬ್ಬ ಅಭ್ಯರ್ಥಿ ಅದೃಷ್ಟ ಪರೀಕ್ಷೆಗೆ ಒಡ್ಡಿಕೊಂಡಿದ್ದಾರೆ ಎಂದು ವರದಿ ತಿಳಿಸಿದೆ. ಅಭ್ಯರ್ಥಿಗಳ ಪೈಕಿ ಶೇ 88.2ರಷ್ಟು ಪುರುಷರು ಹಾಗೂ ಶೇ 11.8ರಷ್ಟು ಮಹಿಳೆಯರಿದ್ದಾರೆ.

ಏಕರೂಪ ನಾಗರಿಕ ಸಂಹಿತೆಗೆ ಸಮಿತಿ ರಚನೆ: ಧಾಮಿ ಭರವಸೆ

ಪುಷ್ಕರ್ ಧಾಮಿ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೇರಿದರೆ ಏಕರೂಪದ ನಾಗರಿಕ ಸಂಹಿತೆ ರೂಪಿಸಲು ಸಮಿತಿಯನ್ನು ರಚಿಸಲಾಗುವುದು ಎಂದು ರಾಜ್ಯದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶನಿವಾರ ಹೇಳಿದರು.

ಈ ಸಮಿತಿಯಲ್ಲಿ ಕಾನೂನು ತಜ್ಞರು, ನಿವೃತ್ತ ಅಧಿಕಾರಿಗಳು, ಚಿಂತಕರು ಇರಲಿದ್ದಾರೆ ಎಂದು ಚುನಾವಣಾ ಪ್ರಚಾರದ ಕೊನೆಯ ದಿನ ವಿಡಿಯೊ ಸಂದೇಶದಲ್ಲಿ ಘೋಷಿಸಿದರು.

ಮದುವೆ, ವಿಚ್ಛೇದನ, ಭೂಮಿಯ ಹಕ್ಕು ಮುಂತಾದ ವಿಚಾರಗಳ ಬಗ್ಗೆ ಸಮಿತಿಯು ಸಮಾಲೋಚನೆ ನಡೆಸಲಿದೆ ಎಂದಿದ್ದಾರೆ.

ಭಾರತದ ಸಂವಿಧಾನ ರಚಿಸಿದವರ ಕನಸು ನನಸಾಗಿಸಲು ಇರಿಸುವ ಹೆಜ್ಜೆ ಇದು. ಧರ್ಮದ ಹೊರತಾಗಿ ಸಮಾಜದ ಎಲ್ಲರಿಗೂ ಒಂದೇ ರೀತಿಯ ಕಾನೂನು ಅನ್ವಯವಾಗಬೇಕು ಎಂದು ಭಾರತೀಯ ಸಂವಿಧಾನದ ವಿಧಿ 44 ಹೇಳುತ್ತದೆ. ಈ ಕ್ರಮವು ವಿಧಿ 44ರ ಕಡೆಗೆ ಇರಿಸಿರುವ ಪ್ರಬಲ ಹೆಜ್ಜೆ ಎಂದು ಅವರು ಹೇಳಿದ್ದಾರೆ.

'ಧಾಮಿಗೆ ಕಾನೂನು ಸಲಹೆ ಅಗತ್ಯವಿದೆ'

ನವದೆಹಲಿ (ಪಿಟಿಐ): ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಏಕರೂಪ ನಾಗರಿಕ ಸಂಹಿತೆ ಕುರಿತು ನೀಡಿರುವ ಹೇಳಿಕೆಯನ್ನು ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ಅವರು ಟೀಕಿಸಿದ್ದಾರೆ. ಉತ್ತರಾಖಂಡದಲ್ಲಿ ಬಿಜೆಪಿ ಸೋಲುತ್ತಿರುವುದು ಧಾಮಿ ಹೇಳಿಕೆಯಿಂದ ತಿಳಿಯುತ್ತಿದೆ. ಅವರಿಗೆ ಕಾನೂನು ಸಲಹೆಯ ಅಗತ್ಯವಿದೆ ಎಂದು ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಸಿಬಲ್ 'ಉತ್ತರಾಖಂಡದಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಿದರೆ ಏಕರೂಪ ನಾಗರಿಕ ಸಂಹಿತೆ ರೂಪಿಸಲು ಸಮಿತಿ ರಚಿಸಲಾಗುವುದು ಎಂಬಂಥ ಹೇಳಿಕೆಗಳನ್ನು ನೀಡಿ ನಿಮ್ಮ ಪಕ್ಷ ಮತ್ತು ನಿಮ್ಮನ್ನು ಮುಜುಗರಕ್ಕೀಡು ಮಾಡಿಕೊಳ್ಳಬೇಡಿ' ಎಂದು ಹೇಳಿದ್ದಾರೆ.

ರಾಹುಲ್ ಕುರಿತು ಅವಹೇಳನಕಾರಿ ಹೇಳಿಕೆ: ಹಿಮಂತ್ ವಿರುದ್ಧ ಆಕ್ರೋಶ

ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ವಿದ್ಯಾರ್ಥಿ ವಿಭಾಗವಾದ ಎನ್‌ಎಸ್‌ಯುಐನ ಸದಸ್ಯರು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ವಿರುದ್ಧ ಶನಿವಾರ ಪ್ರತಿಭಟನೆ ನಡೆಸಿದ್ದಾರೆ. 'ರಾಹುಲ್ ಗಾಂಧಿ ಅವರು ರಾಜೀವ್ ಗಾಂಧಿಯ ಮಗ ಎಂಬುದನ್ನು ಸಾಬೀತು ಮಾಡಬೇಕು ಎಂದು ಬಿಜೆಪಿ ಕೇಳಿದೆಯೇ' ಎಂದು ಶರ್ಮಾ ಅವರು ಶುಕ್ರವಾರ ಹೇಳಿದ್ದರು.

ಶರ್ಮಾ ವಿರುದ್ಧ ಘೋಷಣೆ ಕೂಗಿ, ಅವರ ಪ್ರತಿಕೃತಿಗೆ ಮಸಿ ಹಚ್ಚಲಾಯಿತು. ಶರ್ಮಾ ತಕ್ಷಣ ರಾಜೀನಾಮೆ ನೀಡಬೇಕು ಮತ್ತು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ.

ಉತ್ತರಾಖಂಡದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಶರ್ಮಾ ಅವರು ಮಾತನಾಡಿದ್ದರು. 2016ರಲ್ಲಿ ನಡೆದ ನಿರ್ದಿಷ್ಟ ದಾಳಿ ಮತ್ತು ಕೋವಿಡ್–19 ಲಸಿಕೆಯ ಪರಿಣಾಮಕಾರಿತ್ವವನ್ನು ರಾಹುಲ್ ಪ್ರಶ್ನಿಸಿದ್ದಾರೆ ಎಂದು ಶರ್ಮಾ ಹೇಳಿದ್ದರು. ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಶರ್ಮಾ ಹೇಳಿಕೆಗೆ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

'ಮುಖ್ಯಮಂತ್ರಿಯು ಅತ್ಯಂತ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಭಾರತದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಮಾಡಿದ ಅವಮಾನ ಇದು. ಮುಖ್ಯಮಂತ್ರಿ ಸ್ಥಾನದಲ್ಲಿರುವ ವ್ಯಕ್ತಿಗೆ ತಕ್ಕದಾದ ನಡವಳಿಕೆ ಅಲ್ಲ ಇದು. ಶರ್ಮಾ ಅವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು' ಎಂದು ಎನ್‌ಎಸ್‌ಯುಐ ರಾಷ್ಟ್ರೀಯ ಕಾರ್ಯದರ್ಶಿ ನಿತೀಶ್ ಗೌರ್ ಅವರು ಒತ್ತಾಯಿಸಿದ್ದಾರೆ.

ಶರ್ಮಾ ಅವರು ವಿವಾದಾತ್ಮಕ ಹೇಳಿಕೆಯ ಮೂಲಕ ಅಸ್ಸಾಂನ ವರ್ಚಸ್ಸಿಗೆ ಮಸಿ ಬಳಿದಿದ್ದಾರೆ ಎಂದು ಅಸ್ಸಾಂ ಕಾಂಗ್ರೆಸ್ ಘಟಕವು ಹೇಳಿದೆ.

ಟಿಎಂಸಿಯಲ್ಲಿ ಆಂತರಿಕ ಬಿಕ್ಕಟ್ಟು?

ಪಕ್ಷದಲ್ಲಿ ಒಬ್ಬರಿಗೆ ಒಂದು ಹುದ್ದೆ: ಮಮತಾ–ಅಭಿಷೇಕ್ ನಡುವೆ ಭಿನ್ನಮತದ ವದಂತಿ

ಪ್ರಜಾವಾಣಿ ವಾರ್ತೆ

ಮಮತಾ ಬ್ಯಾನರ್ಜಿ

ಅಭಿಷೇಕ್ ಬ್ಯಾನರ್ಜಿ

ಕೋಲ್ಕತ್ತ: ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಹಾಗೂ ಅವರ ಸೋದರಳಿಯ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ನಡುವೆ ಭಿನ್ನಮತ ಶುರುವಾಗಿದೆ ಎಂಬ ಊಹಾಪೋಹಗಳು ಎದ್ದಿವೆ.

'ಪಕ್ಷದಲ್ಲಿ ಒಬ್ಬರಿಗೆ ಒಂದು ಹುದ್ದೆ' ಎಂಬ ವಿಚಾರವು ಬಿಕ್ಕಟ್ಟು ಸೃಷ್ಟಿಸಿದೆ. ಅಭಿಷೇಕ್ ಅವರು ಇದಕ್ಕೆ ಬೆಂಬಲವಾಗಿ ನಿಂತಿದ್ದಾರೆ ಎನ್ನಲಾಗಿದೆ. ಟಿಎಂಸಿ ಪಕ್ಷದ ಅಗ್ರ ನಾಯಕರಲ್ಲಿ ಮಮತಾ ನಂತರ ಅಭಿಷೇಕ್ ಇದ್ದಾರೆ. ಪಕ್ಷದ ಹಿರಿಯರು ಹಾಗೂ ಹೊಸ ತಲೆಮಾರಿನವರ ನಡುವೆ ಅಧಿಕಾರ ಹಂಚಿಕೆ ವಿಚಾರವಾಗಿ ಬಿಕ್ಕಟ್ಟು ಇದೆ ಎನ್ನಲಾಗಿದೆ.

ಕಳೆದ ವಿಧಾನಸಭಾ ಚುನಾವಣೆ ಸಮಯದಿಂದ ಟಿಎಂಸಿ ಜತೆ ಕೆಲಸ ಮಾಡುತ್ತಿರುವ ಪ್ರಶಾಂತ್ ಕಿಶೋರ್ ಅವರ ಐಪ್ಯಾಕ್ ಸಂಘಟನೆಯೂ ವಿವಾದದ ಕೇಂದ್ರವಾಗಿದೆ. ಪಕ್ಷದ ನಾಯಕಿ ಚಂದ್ರಿಮಾ ಭಟ್ಟಾಚಾರ್ಯ ಅವರ ಟ್ವಿಟರ್ ಖಾತೆಯಲ್ಲಿ 'ಒಬ್ಬರಿಗೆ ಒಂದು ಹುದ್ದೆ' ವಿಚಾರ ಪ್ರಸ್ತಾಪವಾಗಿದೆ. ಇದರ ಹಿಂದೆ ಐಪ್ಯಾಕ್ ಇದೆ ಎಂದು ಅವರು ಆರೋಪಿಸಿದ್ದಾರೆ. ಇದನ್ನು ಐಪ್ಯಾಕ್ ನಿರಾಕರಿಸಿದೆ. ಪಕ್ಷದ ಯಾವುದೇ ನಾಯಕರ ಟ್ವಿಟರ್ ಖಾತೆಗಳನ್ನು ತಾನು ನಿರ್ವಹಿಸುತ್ತಿಲ್ಲ ಎಂದು ಸ್ಪಷ್ಟನೆ ನೀಡಿದೆ.

ಸ್ಥಳೀಯ ಸಂಸ್ಥೆ ಚುನಾವಣೆಗೆ ಪಕ್ಷದ ಎರಡು ಪಟ್ಟಿಗಳು ಬಿಡುಗಡೆಯಾಗಿ ಗೊಂದಲ ಮೂಡಿಸಿದ್ದವು. ಸಹಿ ಮಾಡಿರದ ಒಂದು ಪಟ್ಟಿಯು ಪಕ್ಷದ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾಗಿತ್ತು. ಇದನ್ನು ಪ್ರತಿಭಟಿಸಿ ರಾಜ್ಯದಲ್ಲಿ ಪ್ರತಿಭಟನೆಗಳು ನಡೆದಿದ್ದವು. ಪಟ್ಟಿ ಪ್ರಕಟಣೆಯ ಹಿಂದೆಯೂ ಐಪ್ಯಾಕ್ ಇದೆ ಎಂಬ ಆರೋಪ ಮಾಡಲಾಗಿತ್ತು. ಆದರೆ ಸಂಸ್ಥೆಯು ಇದನ್ನು ಅಲ್ಲಗಳೆದಿದೆ.

ಅಸಮಾಧಾನ: ಒಬ್ಬರಿಗೆ ಒಂದು ಹುದ್ದೆ ವಿಚಾರವು ಪಕ್ಷದ ಹಿರಿಯ ಮುಖಂಡರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಈ ರೀತಿ ಬಹಿರಂಗವಾಗಿ ಪ್ರಸ್ತಾಪ ಮಾಡುವುದು ಪಕ್ಷದ ಶಿಸ್ತಿನ ಉಲ್ಲಂಘನೆ ಎಂದು ಹಿರಿಯ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೋಲ್ಕತ್ತ ಮೇಯರ್ ಫಿರ್ಹಾದ್ ಹಕೀಮ್, 'ಪಕ್ಷವು ಇಂತಹ ಯಾವುದೇ ಸಿದ್ಧಾಂತವನ್ನು ಅನುಮೋದಿಸುವುದಿಲ್ಲ. ಕೆಲವು ನಾಯಕರು ಇಂತಹ ದಾರಿ ತಪ್ಪಿಸುವ ಹೇಳಿಕೆ ನೀಡುತ್ತಿದ್ದಾರೆ' ಎಂದು ಹೇಳಿದ್ದರು.

ಪಕ್ಷದಲ್ಲಿ ಆಂತರಿಕ ಬಿಕ್ಕಟ್ಟು ಇದೆ ಎಂಬುದಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಸುಳ್ಳುಗಳನ್ನು ಹೆಣೆಯಲು ಯತ್ನಿಸುತ್ತಿವೆ ಎಂದು ಟಿಎಂಸಿ ಶಾಸಕ ಮದನ್ ಮಿತ್ರಾ ಹೇಳಿದ್ದಾರೆ. 'ತಮ್ಮ ಹೇಳಿಕೆಯನ್ನು ಮಾಧ್ಯಮಗಳು ತಪ್ಪಾಗಿ ಅರ್ಥ ಮಾಡಿಕೊಂಡಿವೆ. ಮಮತಾ ಅವರೇ ಪಕ್ಷದ ಅಧಿನಾಯಕಿ. ಅಭಿಷೇಕ್ ಅವರು ಮುಂಚೂಣಿಯಲ್ಲಿರುವ ಯುವ ನಾಯಕ' ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಭವಿಷ್ಯದಲ್ಲಿ ಅಭಿಷೇಕ್ ಅವರು ಮಮತಾ ಅವರನ್ನು ಬದಿಗೊತ್ತಿ ಪಕ್ಷವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದು ಎಂದು ಮದನ್ ಮಿತ್ರಾ ಹೇಳಿದ್ದರು ಎಂದು ವರದಿಯಾಗಿತ್ತು.

20 ಸದಸ್ಯರ ಕಾರ್ಯಕಾರಿ ಸಮಿತಿ ರಚನೆ

ಪಕ್ಷದಲ್ಲಿ ಭಿನ್ನಮತವಿದೆ ಎಂಬ ವಿಚಾರದ ನಡುವೆಯೇ, 20 ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಟಿಎಂಸಿ ಶನಿವಾರ ಪ್ರಕಟಿಸಿದೆ. ಇದೇ ತಿಂಗಳ ಆರಂಭದಲ್ಲಿ ನಡೆದಿದ್ದ ಪಕ್ಷದ ಸಂಘಟನಾ ಸಭೆಯಲ್ಲಿ ಮಮತಾ ಬ್ಯಾನರ್ಜಿ ಅವರು ಪಕ್ಷದ ಮುಖ್ಯಸ್ಥೆಯಾಗಿ ಪುನರಾಯ್ಕೆಯಾಗಿದ್ದರು.

ಈಗ ರಚಿಸಿರುವ ಸಮಿತಿಯಲ್ಲಿ ಅಮಿತ್ ಮಿತ್ರಾ, ಸುದೀಪ್ ಬಂದೋಪಾಧ್ಯಾಯ, ಸುಖೇಂದು ಶೇಖರ್ ರಾಯ್, ಅಭಿಷೇಕ್ ಬ್ಯಾನರ್ಜಿ ಇದ್ದಾರೆ. ಪಕ್ಷದ ಏಳು ಪ್ರಮುಖ ನಾಯಕರು ಈ ಸಭೆಯಲ್ಲಿ ಹಾಜರಿದ್ದರು.

ಒಬ್ಬರಿಗೆ ಒಂದು ಹುದ್ದೆ ವಿಚಾರ ಹಾಗೂ ಪಕ್ಷದ ನೀತಿಗಳಲ್ಲಿ ಐ-ಪ್ಯಾಕ್ ಮೂಗು ತೂರಿಸುತ್ತಿದೆ ಎಂಬ ವಿಚಾರಗಳು ಸಭೆಯಲ್ಲಿ ಚರ್ಚೆಯಾಗಬಹುದೇ ಎಂಬ ಕುತೂಹಲ ಇತ್ತು.

ನುಡಿ–ಕಿಡಿ

ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಸೋಲಿಸಲು ಎಸ್‌ಪಿ ಯತ್ನಿಸುತ್ತಿದೆ. ಆದರೆ, ಒಂದು ಪಕ್ಷವು (ಬಿಎಸ್‌ಪಿ) ಎಸ್‌ಪಿಯನ್ನು ತಡೆಯಲು ಯತ್ನಿಸುತ್ತಿದೆ. ದಲಿತರ ಕಣ್ಮಣಿ ಬಿ.ಆರ್.ಅಂಬೇಡ್ಕರ್ ಅವರ ಸಿದ್ಧಾಂತಗಳಿಂದ ದೂರ ಹೋಗಿರುವ ಆ ಪಕ್ಷವು ಗೆಲ್ಲುವುದಕ್ಕಾಗಿ ಸ್ಪರ್ಧಿಸಿಲ್ಲ. ಬದಲಿಗೆ ಬಿಜೆಪಿ ಗೆಲುವಿಗೆ ನೆರವಾಗುವುದಕ್ಕಾಗಿ ಸ್ಪರ್ಧಿಸುತ್ತಿದೆ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ



ಉತ್ತರ ಪ್ರದೇಶದ ಮೊದಲ ಹಂತದ ಮತದಾನದ ಬಳಿಕ ವಂಶಾಡಳಿತ ನಂಬಿಕೊಂಡಿರುವ ಜನರಿಗೆ ನಿದ್ದೆ ಬರುತ್ತಿಲ್ಲ. ಅವರು ಕನಸು ಕಾಣುವುದನ್ನು ಬಿಟ್ಟಿದ್ದಾರೆ. ಈಗಾಗಲೇ ದೇಶದ ಹಲವು ರಾಜ್ಯಗಳಲ್ಲಿ ಜನರು ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ್ದಾರೆ. ಕಾಂಗ್ರೆಸ್ ಅನ್ನು ಸಂಪೂರ್ಣವಾಗಿ ಮನೆಗೆ ಕಳುಹಿಸಲು ಈ ಚುನಾವಣೆಯು ಜನರಿಗೆ ದೊಡ್ಡ ಅವಕಾಶ ನೀಡಿದೆ. ಉತ್ತರಾಖಂಡದಲ್ಲಿ ಮುಸ್ಲಿಂ ವಿಶ್ವವಿದ್ಯಾನಿಲಯ ಸ್ಥಾಪಿಸಲು ಕಾಂಗ್ರೆಸ್ ಯೋಜನೆ ರೂಪಿಸಿದೆ. ದೇವಭೂಮಿಗೆ ಆಗುವ ಈ ಅವಮಾನವನ್ನು ನೀವು ಸಹಿಸಿಕೊಳ್ಳುತ್ತೀರಾ?

ನರೇಂದ್ರ ಮೋದಿ, ಪ್ರಧಾನಿ

ಬಿಜೆಪಿಯನ್ನು ಸೋಲಿಸುವ ವಿಚಾರದಲ್ಲಿ ಸಂಪೂರ್ಣ ಗಮನ ಕೇಂದ್ರೀಕರಿಸಿರುವ ಏಕೈಕ ರಾಜಕೀಯ ಪಕ್ಷ ನಮ್ಮದು. ಬೇರೆ ಒಳ ಒಪ್ಪಂದಗಳ ಬಗ್ಗೆ ನಮಗೆ ಯಾವುದೇ ಆಸಕ್ತಿ ಇಲ್ಲ. ಗೋವಾದಿಂದ ಬಿಜೆಪಿಯನ್ನು ಹೊರಕ್ಕೆ ದಬ್ಬಬೇಕು ಎಂಬುದು ಮಾತ್ರ ನಮ್ಮ ಇಚ್ಛೆ. ಪಶ್ಚಿಮ ಬಂಗಾಳದಲ್ಲಿ ನಾವು ಬಿಜೆಪಿಯನ್ನು ಸೋಲಿಸಿದ್ದೇವೆ. 2024ರ ಸಾರ್ವತ್ರಿಕ ಚುನಾವಣೆಯಲ್ಲಿ ರಾಷ್ಟ್ರಮಟ್ಟದಲ್ಲಿಯೂ ಬಿಜೆಪಿಯನ್ನು ಸೋಲಿಸುತ್ತೇವೆ

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

'ಹಿಜಾಬ್ ವಿವಾದ: ಪ್ರಚೋದಿತ ಹೇಳಿಕೆಗಳು ಸ್ವೀಕಾರಾರ್ಹವಲ್ಲ'

ನವದೆಹಲಿ (ಪಿಟಿಐ): ಕರ್ನಾಟಕದ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರಕ್ಕೆ ಸಂಬಂಧಿಸಿ ಉಂಟಾಗಿರುವ ವಿವಾದ ಕುರಿತು ಹಲವು ದೇಶಗಳಿಂದ ವ್ಯಕ್ತವಾಗಿರುವ ಟೀಕೆಗಳನ್ನು ಭಾರತ ಶನಿವಾರ ತಿರಸ್ಕರಿಸಿದೆ.

'ದೇಶದ ಆಂತರಿಕ ವಿಷಯಗಳ ಬಗ್ಗೆ ನೀಡಿರುವ ಪ್ರಚೋದನಾತ್ಮಕ ಹೇಳಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿರುಗೇಟು ನೀಡಿದ್ದಾರೆ.

'ಭಾರತದ ಬಗ್ಗೆ ಸರಿಯಾದ ಅರಿವು ಹೊಂದಿರುವವರು ಸದ್ಯ ವಾಸ್ತವ ಸ್ಥಿತಿಯ ಬಗ್ಗೆಯೂ ಸಮರ್ಪಕವಾಗಿ ತಿಳಿದುಕೊಂಡಿರುತ್ತಾರೆ. ಸಮವಸ್ತ್ರದ ವಿಷಯ ಕುರಿತು ಕರ್ನಾಟಕದ ಹೈಕೋರ್ಟ್‌ನಲ್ಲಿ ವಿಚಾರಣೆಯೂ ನಡೆಯುತ್ತಿದೆ' ಎಂದೂ ಅವರು ಹೇಳಿದ್ದಾರೆ.

ಹಿಜಾಬ್–ಕೇಸರಿ ಶಾಲು ವಿವಾದ ಕುರಿತು ಪ್ರತಿಕ್ರಿಯಿಸಿದ್ದ ಅಮೆರಿಕದ 'ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ'ದ (ಐಆರ್‌ಎಸ್) ರಾಯಭಾರಿ ರಶಾದ್ ಹುಸೇನ್, 'ಶಾಲೆಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿರುವುದು ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ' ಎಂದಿದ್ದರು.

ಪಾಕಿಸ್ತಾನ ಸಹ ಇದೇ ಧಾಟಿಯಲ್ಲಿ ಮಾತನಾಡಿತ್ತಲ್ಲದೇ, ಇಸ್ಲಾಮಾಬಾದ್‌ನಲ್ಲಿರುವ ಭಾರತದ ರಾಜತಾಂತ್ರಿಕ ಅಧಿಕಾರಿಗೆ ತನ್ನ ಕಳವಳ ವ್ಯಕ್ತಪಡಿಸಿತ್ತು.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಭಾರತದಿಂದ ಈ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಏಕರೂಪ ವಸ್ತ್ರ ಸಂಹಿತೆ : 'ಸುಪ್ರೀಂ'ಗೆ ಪಿಐಎಲ್

ನವದೆಹಲಿ (ಪಿಟಿಐ): ನೋಂದಾಯಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಏಕರೂಪ ವಸ್ತ್ರಸಂಹಿತೆ ಜಾರಿಗೊಳಿಸಲು ಕೇಂದ್ರ ಸರ್ಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಶನಿವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ಕರ್ನಾಟಕದಲ್ಲಿ ಹಿಜಾಬ್–ಕೇಸರಿ ಶಾಲು ವಿವಾದ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ನಿಖಿಲ್ ಉಪಾಧ್ಯಾಯ ಎಂಬುವವರು ಈ ಪಿಐಎಲ್ ಸಲ್ಲಿಸಿದ್ದಾರೆ.

'ಸಮಾನತೆ, ಭ್ರಾತೃತ್ವ ಹಾಗೂ ರಾಷ್ಟ್ರೀಯ ಏಕತೆಯನ್ನು ಸಾಧಿಸಲು ಏಕರೂಪ ವಸ್ತ್ರ ಸಂಹಿತೆ ಜಾರಿಗೊಳಿಸುವುದು ಅಗತ್ಯ' ಎಂದು ವಕೀಲರಾದ ಅಶ್ವಿನಿ ಉಪಾಧ್ಯಾಯ ಹಾಗೂ ಅಶ್ವನಿ ದುಬೆ ಮೂಲಕ ಸಲ್ಲಿಸಿರುವ ಪಿಐಎಲ್‌ನಲ್ಲಿ ಪ್ರತಿಪಾದಿಸಲಾಗಿದೆ. ಸೋಮವಾರ (ಫೆ.14) ಈ ಅರ್ಜಿ ವಿಚಾರಣೆ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ರಾಮಾನುಜರ ಚಿನ್ನದ ಮೂರ್ತಿ: ಇಂದು ಅನಾವರಣ

ಹೈದರಾಬಾದ್ (ಪಿಟಿಐ): ಇಲ್ಲಿನ 'ಸಮಾನತೆಯ ಪ್ರತಿಮೆ' ಆವರಣದಲ್ಲಿ ಸ್ಥಾಪಿಸಲಾಗಿರುವ ಧಾರ್ಮಿಕ ಸುಧಾರಕ ರಾಮಾನುಜಾಚಾರ್ಯರ ಚಿನ್ನದ ಮೂರ್ತಿಯನ್ನು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಭಾನುವಾರ ಅನಾವರಣಗೊಳಿಸಲಿದ್ದಾರೆ. 54 ಇಂಚು ಎತ್ತರವಿರುವ ಈ ಮೂರ್ತಿಯನ್ನು 120 ಕೆ.ಜಿ ಚಿನ್ನದಿಂದ ನಿರ್ಮಿಸಲಾಗಿದೆ.

'ಜೀವಾ' ಆಶ್ರಮವನ್ನು ಭಾನುವಾರ ಮಧ್ಯಾಹ್ನ 3.30ಕ್ಕೆ ತಲುಪಲಿರುವ ರಾಷ್ಟ್ರಪತಿ ಅವರು, ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಮಾನತೆಯ ಪ್ರತಿಮೆ' ಎಂದು ಗುರುತಿಸಲಾಗಿರುವ ರಾಮಾನುಜಾಚಾರ್ಯರ 216 ಅಡಿ ಎತ್ತರದ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಫೆ.5ರಂದು ಅನಾವರಣಗೊಳಿಸಿದ್ದರು.

ನಾಲ್ವರು ಅಲ್–ಬದರ್ ಉಗ್ರರ ಸೆರೆ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಶನಿವಾರ ಉಗ್ರರ ದಾಳಿಯನ್ನು ವಿಫಲಗೊಳಿಸಿರುವ ಭದ್ರತಾಪಡೆಗಳು, ಅಲ್–ಬದರ್ ಸಂಘಟನೆಯ ನಾಲ್ವರು ಉಗ್ರರು ಹಾಗೂ ಮೂವರು ತಳಮಟ್ಟದ ಕಾರ್ಯಕರ್ತರನ್ನು ಬಂಧಿಸಿವೆ.

₹ 2,000 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ನವದೆಹಲಿ (ಪಿಟಿಐ): ನೌಕಾಪಡೆಯೊಂದಿಗೆ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಸಮುದ್ರದ ಮೂಲಕ ಸಾಗಿಸುತ್ತಿದ್ದ 763 ಕೆ.ಜಿಗೂ ಅಧಿಕ ತೂಕದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ (ಎನ್‌ಸಿಬಿ) ಶನಿವಾರ ಹೇಳಿದೆ.

ವಶಪಡಿಸಿಕೊಂಡಿರುವ ಡ್ರಗ್ಸ್‌ನ ಮೌಲ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹ 2,000 ಕೋಟಿ ಎಂದು ಅಂದಾಜಿಸಲಾಗಿದೆ. ವಶಪಡಿಸಿಕೊಳ್ಳಲಾದ ಡ್ರಗ್ಸ್ ಇರುವ ಚೀಲಗಳನ್ನು ಗುಜರಾತ್‌ನ ಪೋರಬಂದರ್‌ಗೆ ತರಲಾಗಿದೆ ಎಂದು ಎನ್‌ಸಿಬಿ ಅಧಿಕಾರಿಗಳು ಹೇಳಿದ್ದಾರೆ.

ಗುಂಡಿನ ಚಕಮಕಿ, ಸಿಆರ್‌ಪಿಎಫ್ ಅಧಿಕಾರಿ ಹುತಾತ್ಮ

ರಾಯಪುರ (ಪಿಟಿಐ): ಛತ್ತೀಸ್‌ಗಡದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರೊಡನೆ ನಡೆದ ಗುಂಡಿನ ಕಾಳಗದಲ್ಲಿ ಶನಿವಾರ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಅಧಿಕಾರಿಯೊಬ್ಬರು ಮೃತಪಟ್ಟಿದ್ದು, ಯೋಧರೊಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪೋಲೆಂಡ್‌ನತ್ತ ಅಮೆರಿಕದ 3 ಸಾವಿರ ಯೋಧರು

ವಾಷಿಂಗ್ಟನ್ (ಎಪಿ): ಉಕ್ರೇನ್ ಮೇಲೆ ರಷ್ಯಾ ಪಡೆಗಳು ದಾಳಿ ನಡೆಸುವ ಸಾಧ್ಯತೆಗಳು ಹೆಚ್ಚುತ್ತಿರುವ ನಡುವೆಯೇ, ಅಮೆರಿಕ 3,000 ಯೋಧರನ್ನು ಒಳಗೊಂಡ ಮತ್ತೊಂದು ತುಕಡಿಯನ್ನು ಪೋಲೆಂಡ್‌ಗೆ ಕಳಿಸುವುದಾಗಿ ಘೋಷಿಸಿದೆ.

ನ್ಯಾಟೊ ಮಿತ್ರರಾಷ್ಟ್ರಗಳಿಗೆ ತನ್ನ ಬೆಂಬಲ ಸೂಚಿಸುವ ಭಾಗವಾಗಿ ಯೋಧರನ್ನು ಕಳುಹಿಸಲಾಗುತ್ತಿದೆ. ಈಗಾಗಲೇ, ಪೋಲೆಂಡ್‌ನಲ್ಲಿ 1,700 ಯೋಧರನ್ನು ನಿಯೋಜಿಸಲಾಗಿದೆ. ಈಗ ಹೆಚ್ಚುವರಿಯಾಗಿ 3,000 ಯೋಧರನ್ನು ಕಳುಹಿಸುತ್ತಿರುವುದಾಗಿ ಅಮೆರಿಕ ರಕ್ಷಣಾ ಇಲಾಖೆ (ಪೆಂಟಗನ್) ತಿಳಿಸಿದೆ.

ಈ ಯೋಧರು ಇನ್ನೆರಡು ದಿನಗಳಲ್ಲಿ ನಾರ್ತ್ ಕೆರೋಲಿನಾದಲ್ಲಿರುವ ಫೋರ್ಟ್ ಬ್ರ್ಯಾಗ್ ಸೇನಾನೆಲೆಯಿಂದ ಇನ್ನೆರಡು ದಿನಗಳಲ್ಲಿ ಪೋಲೆಂಡ್‌ನತ್ತ ಪ್ರಯಾಣಿಸುವರು. ಈ ಯೋಧರು ಉಕ್ರೇನ್ ಪಡೆಗಳಿಗೆ ತರಬೇತಿ ನೀಡಲಿದ್ದು, ಯುದ್ಧದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಪೆಂಟಗನ್ ಮೂಲಗಳು ಹೇಳಿವೆ.

ಉಕ್ರೇನ್ ತೊರೆಯಲು ಸೂಚನೆ: ರಷ್ಯಾ ಪಡೆಗಳು ಉಕ್ರೇನ್ ಮೇಲೆ ದಾಳಿ ನಡೆಸುವ ಸಾಧ್ಯತೆಗಳು ಹೆಚ್ಚುತ್ತಿರುವ ಕಾರಣ, ಉಕ್ರೇನ್ ತೊರೆಯುವಂತೆ ಹಲವು ದೇಶಗಳು ತಮ್ಮ ಪ್ರಜೆಗಳಿಗೆ ಶನಿವಾರ ಸೂಚನೆ ನೀಡಿವೆ.

'ಉಕ್ರೇನ್‌ನಲ್ಲಿರುವುದು ತೀರ ಅಗತ್ಯ ಎನಿಸಿದರೆ ಮಾತ್ರ ಉಳಿದುಕೊಳ್ಳಬೇಕು. ಇಲ್ಲದಿದ್ದರೆ ಕೂಡಲೇ ದೇಶ ತೊರೆಯಬೇಕು' ಎಂದು ಜರ್ಮನಿಯ ವಿದೇಶಾಂಗ ಸಚಿವಾಲಯ ಟ್ವೀಟ್ ಮೂಲಕ ತನ್ನ ಪ್ರಜೆಗಳಿಗೆ ಸೂಚಿಸಿದೆ.

ನೆದರ್ಲೆಂಡ್ ಸಹ ತನ್ನ ಪ್ರಜೆಗಳಿಗೆ ಉಕ್ರೇನ್ ತೊರೆಯುವಂತೆ ಸೂಚಿಸಿದೆ. ಕೀವ್‌ನಲ್ಲಿರುವ ರಾಯಭಾರಿಯ ಕಚೇರಿಯ ಸಿಬ್ಬಂದಿ ಪೈಕಿ, ತುರ್ತು ಸೇವೆ ಹೊರತುಪಡಿಸಿ ಉಳಿದವರು ಹಿಂತಿರುಗುವಂತೆ ಅಮೆರಿಕ ಆದೇಶಿಸಿದೆ.

ಭಾರತದ ವಿದೇಶಾಂಗ ಸಚಿವ ಜೈಶಂಕರ್, ಆಸ್ಟ್ರೇಲಿಯಾದ ಪೇನ್ ಮಾತುಕತೆ

ಜಾಗತಿಕ ಶಾಂತಿ ಕದಡಲು ಸೈಬರ್ ತಂತ್ರಜ್ಞಾನ ಬಳಕೆಗೆ ಖಂಡನೆ

ಮೆಲ್ಬರ್ನ್ (ಪಿಟಿಐ): ಜಾಗತಿಕ ಶಾಂತಿ ಹಾಗೂ ಸ್ಥಿರತೆಯನ್ನು ದುರ್ಬಲಗೊಳಿಸುವ ಸಲುವಾಗಿ ಸೈಬರ್‌ಸ್ಪೇಸ್ ಹಾಗೂ ಸೈಬರ್ ಆಧಾರಿತ ತಂತ್ರಜ್ಞಾನಗಳನ್ನು ಬಳಕೆ ಮಾಡುವ ಯತ್ನಗಳನ್ನು ಭಾರತ ಹಾಗೂ ಆಸ್ಟ್ರೇಲಿಯಾ ಶನಿವಾರ ಖಂಡಿಸಿವೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ಆಸ್ಟ್ರೇಲಿಯಾದ ಮರೈಸ್ ಪೇನ್ ಅವರ ನಡುವೆ ದ್ವಿಪಕ್ಷೀಯ ಸಭೆ ಮುಗಿದ ನಂತರ, ಈ ಕುರಿತು ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ.

ಸೈಬರ್ ಸ್ಪೇಸ್ ಹಾಗೂ ತಂತ್ರಜ್ಞಾನಗಳ ಬಳಕೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಈ ತಂತ್ರಜ್ಞಾನಗಳ ಮುಕ್ತ, ಸುರಕ್ಷಿತ ಹಾಗೂ ಶಾಂತಿಯುತ ಬಳಕೆಗೆ ಬದ್ಧರಾಗಿರುವುದಾಗಿ ಉಭಯ ನಾಯಕರು ಸ್ಪಷ್ಟಪಡಿಸಿದರು.

ಆಡಳಿತದಲ್ಲಿ ಸೈಬರ್ ತಂತ್ರಜ್ಞಾನ ಬಳಕೆ, ಸಾಮರ್ಥ್ಯ ವೃದ್ಧಿ, ಡಿಜಿಟಲ್ ಆರ್ಥಿಕತೆ ಹಾಗೂ ಈ ತಂತ್ರಜ್ಞಾನಗಳಲ್ಲಿನ ನಾವೀನ್ಯವೇ ಉಭಯ ದೇಶಗಳ ಬಾಂಧವ್ಯವನ್ನು ಮತ್ತಷ್ಟು ದೃಢಗೊಳಿಸುವ ಆಧಾರಸ್ತಂಭಗಳಾಗಿವೆ ಎಂದು ಅವರು ಈ ಸಭೆಯಲ್ಲಿ ಹೇಳಿದರು ಎಂದೂ ಪ್ರಕಟಣೆ ತಿಳಿಸಿದೆ.

ಮೆಲ್ಬರ್ನ್‌ನಲ್ಲಿ ಶನಿವಾರ ವಿದೇಶಾಂಗ ಸಚಿವ ಎಸ್.ಜೈಶಂಕರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಆಸ್ಟ್ರೇಲಿಯಾ ವಿದೇಶಾಂಗ ಸಚಿವೆ ಮರೈಸ್ ಪೇನ್ ಇದ್ದರು – ರಾಯಿಟರ್ಸ್ ಚಿತ್ರ

'ಚೀನಾ ಲಿಖಿತ ಒಪ್ಪಂದ ನಿರ್ಲಕ್ಷಿಸಿದ್ದರಿಂದ ಪ್ರಕ್ಷುಬ್ಧ ಪರಿಸ್ಥಿತಿ'

ಮೆಲ್ಬರ್ನ್: ಗಡಿಯಲ್ಲಿ ಸೈನಿಕರ ಜಮಾವಣೆ ಮಾಡಬಾರದು ಎಂಬ ಲಿಖಿತ ಒಪ್ಪಂದವನ್ನು ಚೀನಾ ನಿರ್ಲಕ್ಷಿಸಿದ್ದರಿಂದ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಪ್ರಕ್ಷುಬ್ಧ ಪರಿಸ್ಥಿತಿ ಉದ್ಭವಿಸಿದೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಹೇಳಿದ್ದಾರೆ.

'ಚೀನಾದ ಇಂಥ ನಡೆಗೆ ಜಾಗತಿಕ ಸಮುದಾಯವೇ ಕಳವಳ ವ್ಯಕ್ತಪಡಿಸುವಂತಾಗಿದೆ' ಎಂದು ಹೇಳಿದರು.

ಮುಂಬೈ ಧಾರಣೆ

ಶೇಂಗಾ

12-2-2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1335)
ಒಂದು ವಾರದ ಡೆಲಿವರಿ	1335 (1330)
ಸೋಯಾ ಕಚ್ಚಾ	1262 (1250)
ಪಾಮ್ ವಾರದ ಡೆಲಿವರಿ	1270 (1250)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1235)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	49,725 (48,700)
ಬೆಳ್ಳಿ ಕೆ.ಜಿ	63,750 (62,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಂತರ ಕಾಯ್ದುಕೊಳ್ಳಿ

ಒಎನ್‌ಜಿಸಿ ನಿವ್ವಳ ಲಾಭ ₹ 8,764 ಕೋಟಿಗೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ (ಒಎನ್‌ಜಿಸಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 8,764 ಕೋಟಿಗಳಷ್ಟಾಗಿದೆ.

ಹಿಂದಿನ ಹಣಕಾಸು ವರ್ಷ ಇದೇ ಅವಧಿಯಲ್ಲಿ ಇದ್ದ ₹1,258 ಕೋಟಿ ನಿವ್ವಳ ಲಾಭಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 596.7ರಷ್ಟು ಏರಿಕೆ ಆಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ತೈಲ ಮತ್ತು ಅನಿಲ ದರಗಳಲ್ಲಿ ಆಗಿರುವ ಹೆಚ್ಚಳವನ್ನು ಉತ್ಪಾದನೆಯಲ್ಲಿ ಆಗಿರುವ ಕುಸಿತದೊಂದಿಗೆ ಸರಿದೂಗಿಸಿದ ಬಳಿಕ ಈ ಪ್ರಮಾಣದ ಲಾಭ ಆಗಿದೆ ಎಂದು ಕಂಪನಿಯು ಹೇಳಿದೆ.

ಕಂಪನಿಯ ವರಮಾನ ಶೇ 67.3ರಷ್ಟು ಹೆಚ್ಚಾಗಿದ್ದು ₹ 28,474 ಕೋಟಿಗಳಿಗೆ ತಲುಪಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ಒಂಭತ್ತು ತಿಂಗಳುಗಳಲ್ಲಿ ನಿವ್ವಳ ಲಾಭವು ₹ 4,512 ಕೋಟಿಗಳಿಂದ ₹ 31,446 ಕೋಟಿಗಳಿಗೆ ಏರಿಕೆ ಕಂಡಿದೆ. ಇದೇ ಅವಧಿಯಲ್ಲಿ ವರಮಾನವು ಶೇ 61.5ರಷ್ಟು ಹೆಚ್ಚಾಗಿ ₹ 75,849 ಕೋಟಿಗಳಿಗೆ ತಲುಪಿದೆ.

ಪ್ರತಿ ಷೇರಿಗೆ ₹ 1.75ರಷ್ಟು ಎರಡನೇ ಮಧ್ಯಂತರ ಲಾಭಾಂಶ ನೀಡಲು ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ ಎಂದು ಕಂಪನಿಯು ಹೇಳಿದೆ. ಮೊದಲ ಮಧ್ಯಂತರ ಲಾಭಾಂಶವಾಗಿ ಪ್ರತಿ ಷೇರಿಗೆ ₹ 5.50 ರಷ್ಟು ನೀಡುವುದಾಗಿ ಕಂಪನಿಯು 2021ರ ನವೆಂಬರ್‌ನಲ್ಲಿ ಘೋಷಿಸಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಎಸ್‌ಬಿಐ ದೂರು ಆಧರಿಸಿ ಸಿಬಿಐನಿಂದ ಎಫ್‌ಐಆರ್

₹22,842 ಕೋಟಿ ವಂಚನೆ ಎಬಿಜಿ ವಿರುದ್ಧ ಪ್ರಕರಣ

ಮುಖ್ಯಾಂಶಗಳು

- ಸಿಬಿಐ ದಾಖಲಿಸಿರುವ ಅತಿದೊಡ್ಡ ಬ್ಯಾಂಕಿಂಗ್ ವಂಚನೆ ಪ್ರಕರಣ
- 13 ಕಡೆಗಳಲ್ಲಿ ಶೋಧ, ದಾಖಲೆಗಳ ವಶ

ನವದೆಹಲಿ (ಪಿಟಿಐ): ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟಕ್ಕೆ ₹ 22,842 ಕೋಟಿ ಮೊತ್ತದ ವಂಚನೆ ಎಸಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್, ಅದರ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಿಶಿ ಕಮಲೇಶ್ ಅಗರ್ವಾಲ್ ಸೇರಿದಂತೆ ಇತರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಈ ಹಿಂದೆ, ಕಾರ್ಯನಿರ್ವಾಹಕ ನಿರ್ದೇಶಕ ಆಗಿದ್ದ ಸಂತಾನಂ ಮುತ್ತಸ್ವಾಮಿ, ನಿರ್ದೇಶಕ ಅಶ್ವನಿ ಕುಮಾರ್, ಸುಶೀಲ್ ಕುಮಾರ್ ಅಗರ್ವಾಲ್ ಮತ್ತು ರವಿ ವಿಮಲ್ ನವೇಟಿಯಾ ಮತ್ತು ಎಬಿಜಿ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್‌ಅನ್ನು ಪ್ರಕರಣದಲ್ಲಿ ಹೆಸರಿಸಲಾಗಿದೆ ಎಂದು ಹೇಳಿದ್ದಾರೆ.

ಐಪಿಸಿ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯಲ್ಲಿ ಅಪರಾಧಕ್ಕೆ ಪಿತೂರಿ, ವಂಚನೆ, ನಂಬಿಕೆ ದ್ರೋಹ ಮತ್ತು ಅಧಿಕಾರದ ದುರ್ಬಳಕೆಗೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಸೂರತ್, ಭರೂಚ್, ಮುಂಬೈ, ಪುಣೆ ಸೇರಿದಂತೆ 13 ಸ್ಥಳಗಳಲ್ಲಿ ಶನಿವಾರ ಶೋಧ ನಡೆಸಲಾಗಿದ್ದು, ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ವಂಚನೆಯ ಬಗ್ಗೆ ಎಸ್‌ಬಿಐ 2019ರ ನವೆಂಬರ್ 8ರಂದು ಸಿಬಿಐಗೆ ದೂರು ನೀಡಿತ್ತು. ಆ ಕುರಿತು ಕೆಲವು ಸ್ಪಷ್ಟನೆಗಳನ್ನು ನೀಡುವಂತೆ ಸಿಬಿಐ 2020ರ ಮಾರ್ಚ್12ರಂದು ಬ್ಯಾಂಕ್‌ಗೆ ಕೇಳಿತ್ತು. ನಂತರ ಆಗಸ್ಟ್‌ನಲ್ಲಿ ಬ್ಯಾಂಕ್ ಹೊಸದಾಗಿ ದೂರು ದಾಖಲಿಸಿತು. ಒಂದೂವರೆಗೆ ವರ್ಷಗಳಿಗೂ ಹೆಚ್ಚಿನ ಸಮಯದವರೆಗೆ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದ ಬಳಿಕ 2022ರ ಫೆಬ್ರುವರಿ 7ರಂದು ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡಿತು.

ಒಟ್ಟು 28 ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಕಂಪನಿಗೆ ಸಾಲ ನೀಡಿವೆ. ಇದರಲ್ಲಿ ಎಸ್‌ಬಿಐ ನೀಡಿರುವ ಸಾಲದ ಮೊತ್ತವೇ ₹ 2,468.51 ಕೋಟಿ ಇದೆ. ಲೆಕ್ಕಪತ್ರ ಪರಿಶೋಧನೆಯಲ್ಲಿ ಇರುವ ಮಾಹಿತಿಯ ಪ್ರಕಾರ, 2012–17ರ ಅವಧಿಯಲ್ಲಿ ಅಕ್ರಮ ಚಟುವಟಿಕೆ ನಡೆದಿದೆ.

ಸಿಬಿಐ ದಾಖಲಿಸಿಕೊಂಡಿರುವ ಅತಿದೊಡ್ಡ ಬ್ಯಾಂಕ್ ವಂಚನೆ ಪ್ರಕರಣ ಇದಾಗಿದೆ. ಬ್ಯಾಂಕ್‌ನಿಂದ ಬಿಡುಗಡೆ ಆದ ಹಣವನ್ನು ಅನ್ಯ ಉದ್ದೇಶಕ್ಕೆ ಬಳಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2015ರಲ್ಲಿ ಉದ್ಯಮವು ಕುಸಿತವನ್ನು ಅನುಭವಿಸಿದ್ದರಿಂದ ವಾಣಿಜ್ಯ ಹಡಗುಗಳಿಗೆ ಬೇಡಿಕೆ ತಗ್ಗಿತು. ಇದರಿಂದಾಗಿ ಕಂಪನಿಗೆ ಸಾಲ ಮರುಪಾವತಿ ಕಷ್ಟಕರವಾಯಿತು ಎಂದು ಎಸ್‌ಬಿಐ ಹೇಳಿದೆ.

'ರಿಲಯನ್ಸ್ ಹೋಮ್ ಫೈನಾನ್ಸ್, ಅನಿಲ್ ಅಂಬಾನಿಗೆ ಮಾರುಕಟ್ಟೆಯಿಂದ ನಿಷೇಧ'

ನವದೆಹಲಿ (ಪಿಟಿಐ): ಕಂಪನಿಯ ಹಣ ದುರ್ಬಳಕೆ ಮಾಡಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ರಿಲಯನ್ಸ್ ಹೋಮ್ ಫೈನಾನ್ಸ್ (ಆರ್‌ಎಚ್‌ಎಫ್‌ಎಲ್), ಉದ್ಯಮಿ ಅನಿಲ್ ಅಂಬಾನಿ ಮತ್ತು ಇತರ ಮೂವರನ್ನು ಸಾಲಪತ್ರ ಮಾರುಕಟ್ಟೆಯಿಂದ ನಿಷೇಧಿಸಿರುವುದಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ತಿಳಿಸಿದೆ.

ಅಮಿತ್ ಬಾಪ್ನಾ, ರವೀಂದ್ರ ಸುಧಾಕರ್ ಮತ್ತು ಪಿಂಕೇಶ್ ಆರ್. ಶಾ ಅವರು ನಿಷೇಧಿಕ್ಕೆ ಒಳಗಾಗಿರುವ ಇನ್ನುಳಿದ ಮೂವರಾಗಿದ್ದಾರೆ.

ಸೆಬಿಯಲ್ಲಿ ನೋಂದಾಯಿತ ಯಾವುದೇ ಮಧ್ಯವರ್ತಿಗಳ ಜೊತೆ ವ್ಯವಹರಿಸುವಂತಿಲ್ಲ. ಅಲ್ಲದೆ, ಸಾರ್ವಜನಿಕರಿಂದ ಹಣ ಸಂಗ್ರಹಿಸುವ ಉದ್ದೇಶ ಇಟ್ಟುಕೊಂಡಿರುವ ಯಾವುದೇ ಸಾರ್ವಜನಿಕ ಕಂಪನಿ ಅಥವಾ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರು/ಪ್ರವರ್ತಕರೊಂದಿಗೆ ತನ್ನ ಮುಂದಿನ ಆದೇಶದವರೆಗೆ ವ್ಯವಹರಿಸುವಂತೆ ಇಲ್ಲ ಎಂದು ಮಧ್ಯಂತರ ಆದೇಶದಲ್ಲಿ ಸೆಬಿ ತಿಳಿಸಿದೆ.

2018–19ರಲ್ಲಿ ರಿಲಯನ್ಸ್ ಹೋಮ್ ಫೈನಾನ್ಸ್‌ನಿಂದ ಹಲವು ಸಂಸ್ಥೆಗಳಿಗೆ ಯಾವ ರೀತಿಯಲ್ಲಿ ಸಾಲ ನೀಡಲಾಗಿದೆ ಎನ್ನುವ ಕುರಿತು ಸೆಬಿ ತನಿಖೆ ನಡೆಸುತ್ತಿದೆ.

ಕಂಪನಿಯು ಸಾಮಾನ್ಯ ಉದ್ದೇಶದ ಕಾರ್ಪೊರೇಟ್ ಸಾಲದ ಅಡಿಯಲ್ಲಿ ನೀಡಿರುವ ಸಾಲದ ಮೊತ್ತವು 2018ರ ಮಾರ್ಚ್ 31ರಂದು ₹ 900 ಕೋಟಿ ಇತ್ತು. ಇದು 2019ರ ಮಾರ್ಚ್ 31ಕ್ಕೆ ₹ 7,900 ಕೋಟಿಗಳಿಗೆ ಭಾರಿ ಏರಿಕೆ ಕಂಡಿದೆ ಎಂದು ಸೆಬಿ ತನ್ನ ಆದೇಶದಲ್ಲಿ ಹೇಳಿದೆ.

ಏರ್ ಇಂಡಿಯಾ–ಏರ್ ಏಷ್ಯಾ ಒಪ್ಪಂದ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಮತ್ತು ಏರ್ ಏಷ್ಯಾ ಇಂಡಿಯಾ ಕಂಪನಿಗಳು ಒಪ್ಪಂದಕ್ಕೆ ಬಂದಿದ್ದು, ಅದರಂತೆ ಒಂದು ಕಂಪನಿಯ ವಿಮಾನ ಸೇವೆಯಲ್ಲಿ ವ್ಯತ್ಯಯ ಉಂಟಾದರೆ ಇನ್ನೊಂದು ಕಂಪನಿಯ ವಿಮಾನವು ಆ ಪ್ರಯಾಣಿಕರನ್ನು ಕರೆದೊಯ್ಯಲಿದೆ.

ಈ ಎರಡೂ ವಿಮಾನಯಾನ ಕಂಪನಿಗಳು ಟಾಟಾ ಸಮೂಹದ ಭಾಗವಾಗಿವೆ.

ಈ ಒಪ್ಪಂದವು ಫೆಬ್ರುವರಿ ತಿಂಗಳಿನಿಂದ ಮುಂದಿನ ಎರಡು ವರ್ಷಗಳವರೆಗೆ ಜಾರಿಯಲ್ಲಿ ಇರಲಿದೆ. ವಿಮಾನ ನಿಲ್ದಾಣದಲ್ಲಿರುವ ಎರಡೂ ಕಂಪನಿಗಳ ತಂಡಗಳು ಪ್ರಯಾಣಿಕರಿಗೆ ಪರ್ಯಾಯವಾಗಿ ಲಭ್ಯವಿರುವ ಮೊದಲ ವಿಮಾನಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಿವೆ. ಇದರಿಂದ ಪ್ರಯಾಣಿಕರಿಗೆ ಆಗುವ ಅನಾನುಕೂಲ ಸಾಕಷ್ಟು ಕಡಿಮೆಯಾಗಲಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಇತರೆ ವಿಮಾನಯಾನ ಸಂಸ್ಥೆಗಳೊಂದಿಗೂ ಇದೇ ರೀತಿಯ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಏರ್‌ಏಷ್ಯಾದ ವಕ್ತಾರರೊಬ್ಬರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ತಿಂಗಳು, ಟಾಟಾ ಸಮೂಹವು ಏರ್ ಇಂಡಿಯಾ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹430

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1325)
ಸೋಯಾ (ರಿಫೈನ್ಡ್)	₹1312 (1297)
ಸೂರ್ಯಕಾಂತಿ (ರಿಫೈನ್ಡ್)	₹1315 (1310)
ಪಾಮೋಲಿನ್	₹1272 (1252)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510

ಅಡಿಕೆ
ಕುಂದಾಪುರ

ಹಳೆಚಾಲಿ	51500-52500
ಹೊಸಚಾಲಿ	43500-44500

ರಾಮನಗರ ರೇಷ್ಮೆ

ಮಿಶ್ರತಳಿ	400-759
ದ್ವಿತಳಿ	210-958

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16050	16100	16250	255.20 ಸೆಂಟ್ಸ್
ಎಸಿ	7810	7400	7650	
ಆರ್‌ಪಿ	7650	7400	7800	ಲಂಡನ್
ಆರ್‌ಸಿ	4155	3900	4025	2279 ಡಾಲರ್ಸ್

ವೈಕುಂಠ ಸಮಾರಾಧನೆ

ಶ್ರೀ ಗೋವಿಂದರೆಡ್ಡಿ (ತುಬರಹಳ್ಳಿ) ಇವರು ದಿನಾಂಕ : 04-02-2022ನೇ ಶುಕ್ರವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ : 14-02-2022ನೇ ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಶ್ರೀ ಗೋವಿಂದರೆಡ್ಡಿಯವರ ನಿವಾಸದಲ್ಲಿ ಏರ್ಪಡಿಸಲಾಗಿದೆ. ತಾವುಗಳೆಲ್ಲ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಶ್ರೀ ಗೋವಿಂದರೆಡ್ಡಿ

ಇಂತಿ ದುಃಖತಪ್ತರು : ಪತ್ನಿ ಶ್ರೀಮತಿ ನಂಜಮ್ಮ, ಸಹೋದರರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬಸ್ಥರು.

10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಆರ್. ಕೃಷ್ಣಪ್ಪ (ಐಟಿಐ)
ಕೋಡಿಹಳ್ಳಿ, ಬೆಂಗಳೂರು

ನಿಮ್ಮ ಪ್ರೀತಿ, ಆದರ್ಶ ನಮಗೆ ಎಂದಿಗೂ ದಾರಿದೀಪವಾಗಿರಲಿ. ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುವ

ಪತ್ನಿ – ರಾಜಮ್ಮ, ಕೆ. ಗಜೇಂದ್ರ ವಾಸು, ಮಂಜುಳ, ನಿಶಿತ, ಶೌರ್ಯ, ಕೆ. ಚಂದ್ರಮೋಹನ್, ಡಾ. ನಿವೇದಿತ, ಚಿನ್ಮಯಿ, ಯುವತೇಜ್ ಹಾಗೂ ಕುಟುಂಬವರ್ಗ

6ನೇ ವರ್ಷದ ಪುಣ್ಯ ಸ್ಮರಣೆ

ಶ್ರೀಮತಿ ಎನ್. ಭಾರತಿ

ಮರಣ: 13–2–2016 ರಂದು ನಿಧನರಾಗಿದ್ದು ಇಂದಿಗೆ ಆರು ವರ್ಷವಾಯಿತು.
ನಿಮ್ಮ ನೆನಪಿನಲ್ಲಿರುವ ಇಂತಿ

ಪತಿ: ಸಿದ್ಧರಾಮು (KMF)
ಮಗ: ಎಸ್. ತೇಜಸ್ (HAL)
ಸೊಸೆ: ವಿದ್ಯಾ ತೇಜಸ್
ಮಗಳು: ಎಸ್. ಅಪೂರ್ವ–ಅರ್ಜುನ್
ಅಳಿಯ: ಅರ್ಜುನ್
ಅಣ್ಣ: ಎನ್. ಶಿವಕುಮಾರ್– ಎ. ಸಿ. ಚೆಲುವಮ್ಮಾ
ತಾಯಿ: ಕಮಲಮ್ಮ

ದುಃಖತಪ್ತರು : ಮೊಮ್ಮಗಳು ಮತ್ತು ಕುಟುಂಬದವರು.

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Manager

ಹೋಂನರ್ಸ್/ ಮನೆಕೆಲಸಕ್ಕೆ, ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. (12,000-18,000) ಉಚಿತ ಊಟ-ವಸತಿ. ಉಡುಪಿ: 9845276452, 0820-2557676.

WANTED SHRIRAM City — MONEY WHEN YOU NEED IT MOST

Shriram City Union Finance Ltd.

India's Premier NBFC Specialized in TWO WHEELER, MSME LOANS, and GOLD LOAN FINANCE invites applications for the following positions for its operations across 58 Branches in Karnataka including Bangalore Branches.

Divisional Managers / Branch Managers / Recovery Managers

Minimum Qualification: Any Degree
Experience: Minimum 1 ½ years and above.
Age Limit: 21 Yrs to 45 Yrs.
Salary will not be constraint for the right eligible candidates

Management Trainees

Fresher or with less than 1 ½ Years Experience

Please send your CV to E-mail: hrscufkar@gmail.com
Date of interview will be informed to the short-listed candidates
For more details Pl. Contact:
9071776589/ 7892255379 / 9663542775

REQUIRED EXPERIENCED Civil Engineer (Diploma/ BE) for our works at Shivamoga District. Contact: Santhosh 9945221773

Call Centre

ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ. ತಮಿಳು ಅಥವಾ ತೆಲುಗುನಲ್ಲಿ ನಿರರ್ಗಳವಾಗಿ ಮಾತನಾಡುವಂತಿರಬೇಕು (ಮನೆಯಿಂದಲೇ ಕೆಲಸ) ಉತ್ತಮ ಸಂಬಳ + ಇನ್ಸೆಂಟಿವ್ ಸಂಪರ್ಕಿಸಿ : 9943046899

Situation Required

ಬ್ಯಾಂಕ್ ಮಿತ್ರ ಮೇಲ್ವಿಚಾರಕರಿಗೆ, 35 ವರ್ಷಗಳವರೆಗೆ ಕಂಪ್ಯೂಟರ್ ಜ್ಞಾನದೊಂದಿಗೆ ಕನಿಷ್ಠ 12 ನೇ ಉತ್ತೀರ್ಣರಾಗಿರಬೇಕು. ಸಮೀಪದ ಜಿಲ್ಲೆಯಲ್ಲಿ ಪೋಸ್ಟ್ ಮಾಡಲಾಗುತ್ತಿದೆ. ಸಂಬಳ ತಿಂಗಳಿಗೆ 13000 to 17000. 20/02/2022 ರೊಳಗೆ admin@relisec.in ನಲ್ಲಿ ಅನ್ವಯಿಸಿ. www.relisec.in RCSPL ನವದೆಹಲಿಯಲ್ಲಿ ವಿವರಗಳನ್ನು ವೀಕ್ಷಿಸಿ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು, ಯುವಕರು ಬೇಕಾಗಿದ್ದಾರೆ. ತಕ್ಷಣ ವಸತಿಯೂಟದೊಂದಿಗೆ ಸಂಬಳ 16,000 - 23,000. 6366324863, 9663196788

General

MULTIPLE STAFF REQUIRED, ITI, DIPLOMA, BE, Experienced ELECTRICAL, ELECTRONICS & FITTERS Contact: 9066662685/ 86/ 99

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಅನುಭವವುಳ್ಳ ದ್ವಿ ಚಕ್ರ ವಾಹನ ಮೆಕ್ಯಾನಿಕ್ ಬೇಕಾಗಿದ್ದಾರೆ . ಇಂದಿರಾನಗರ , ಬೆಂಗಳೂರು. ಸಂಪರ್ಕಿಸಿ : 91102 66403 .

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

Skilled Labour

DELIVERY PERSON and Electrician Age: 20 to 35 for Reputed Co Contact: 9845054158

Walk-in

Engg/ Production Technical

URGENT REQUIREMENT: LED-TECHNICIAN, Looking For Candidates From any ITI/ Diploma, Freshers Can Apply. 9739320044.

SENIOR DESIGN Engineer, Experience in designing machinery for furnace sheet metal fabrication company in Malleshwaram must join immediately. CTC: 30K- 50K :9844520035

SENIOR PROJECT Manager Required, Manufacturing company in Nelamangala for sheet metal fabrication of furnaces. Must join immediately. CTC: 35k-50K :9844520055

LIASOINING OFFICER Full-time Employee required for manufacturing company in Nelamangala for land, labour, pollution board related issues. :9741165652

FITTERS AND Welders required for factory at Nelamangala, Must join immediately. Salary: 20k- 25k, with accommodation :9003755930

PURCHASE OFFICER for manufacturing company at Malleshwaram Need to join immediately. Contact: 9844520044

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Sites

Vishweshwariah Layout

WANTED BDA Site Anjanapura, Banashankari 6th Stage, Vishweshwaraiah layout & Mysore MUDA Site, any BDA Katha or MUDA Katha, Immediate settlement. Genuine Sellers Contact: 9902038118

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

General

33,000 SQ ft commercial building on 30 cents land for sale part or full. Suitable for Hotel Hospital Hostel Apartments offices mega marts shops schools offices in Mangalore NH 66 contact +918150825093

Flat

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

Residential/ Commercial

Peenya

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

Sites

Anjanapura

VACANT SITE 40*60 BDA Site At Anjanapura Further Extension For Sale At Rs. 8000 Per Sq Ft. Contact 7829674398.

ರೆಂಟಲ್ ಪ್ರಾಪರ್ಟೀಸ್

Accommodation Available

Flats

3BHK 1340 sqft Hosapalya ITI layout HSR 7 family 20K 9441124742

ವೈವಾಹಿಕ

Brides Wanted

Hindu

ವಧು ಬೇಕಾಗಿದೆ
ವಯಸ್ಸು– 32 ಡಿಪ್ಲೊಮೋ ಓದಿರುವ ಆದಿಕರ್ನಾಟಕ (ಬಲಗೈ) ಬೆಂಗಳೂರಿನಲ್ಲಿ ಬಿಸಿನೆಸ್ ಮಾಡಿಕೊಂಡಿರುವ ವರನಿಗೆ ವಧು ಬೇಕಾಗಿದೆ
ಸಂಪರ್ಕಿಸಿ:
9986948807

ವಾಲ್ಮೀಕಿ - ನಾಯಕ. ವಯಸ್ಸು 45 ವರ್ಷ (ಸುಂದರವಾದ ಅವಿವಾಹಿತ ಹುಡುಗ), ವಿದ್ಯಾಭ್ಯಾಸ ಎಂ.ಎ, ಸುಂದರವಾದ ಅದೇ ಜಾತಿಯ ಅವಿವಾಹಿತ ಕನ್ಯೆ (30-40 ವರ್ಷ) ಬೇಕಾಗಿದ್ದಾರೆ. 8792366579

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per annum) Required DSA & Agents, 55000/- Salary & 4% Commission: 7404326304

Dealers And Stockists

ELECTRIC MOPED dealers wanted through out Karnataka. 6-8 lakhs of investment with a showroom area of 250- 400 sqft. Contact 9379794873/ 9740449955 /sales@urbanelectrek.com

ಪ್ರವಾಸ

Travel

ಆನಂದ್ ವಿಹಾರಿಯಿಂದ ಸುಸಜ್ಜಿತ ವ್ಯವಸ್ಥೆಗಳೊದಿಗೆ 04.03.2022, 25.03.2022 ರಿಂದ 7 ದಿನಗಳ ಶಿರಡಿ, ಪಂಡರಾಪುರ, ಬಾದಾಮಿ. 18.03.2022 ರಿಂದ 8/17 ದಿನಗಳ ಗುಜರಾತ್, ರಾಜಸ್ಥಾನ್. 21.03.2022, 03.04.2022 ರಿಂದ 7/13 ದಿನಗಳ ಕಾಶಿ,ಗಯಾ, ಹರಿದ್ವಾರ. 12.05.2022, 26.05.2022 ರಿಂದ 13/15 ದಿನಗಳ ಚಾರ್‌-ಧಾಮ್‌-ಯಾತ್ರೆ. 03.04.2022, 08.04.2022 ರಿಂದ 11/17 ದಿನಗಳ ಪುರಿ.ಕಲ್ಕತ್ತ,ಕಾಶಿ, ನೇಪಾಳ. 03.04.2022, 25.04.2022 ರಿಂದ 12 ದಿನಗಳ ಶಿಮ್ಲಾ,ಮನಾಲಿ, ವೈಷ್ಣೋದೇವಿ ಪ್ರವಾಸಗಳಿಗೆ ಸಂಪರ್ಕಿಸಿ: 080-23385837, 8088887677

★ಶ್ರೇಯಸ್ ಟೂರ್ಸ್★ ದಿನಾಂಕ:15.04.2022, 08.05.2022 23/15/12/06ದಿನಗಳು ಈಶಾನ್ಯ ಭಾರತ ರಾಜ್ಯಗಳ (ಸೆವೆನ್ ಸಿಸ್ಟರ್ಸ್)ಪ್ರವಾಸ.ಅಸ್ಸಾಂ, ಅರುಣಾಚಲ,ಮೇಘಾಲಯ, ಮಣಿಪುರ,ತ್ರಿಪುರ,ನಾಗಲ್ಯಾಂಡ್, ಮಿಝೋರಾಂ,02.06.2022, 12.06.2022 8ದಿನಗಳು ಗ್ಯಾಂಗಟಕ್,ಡಾರ್ಜಲಿಂಗ್, ನಾಂಚಿ,ಮಿರಿಕ್,ಚಾಂಗುಲೇಖ, ಬಾಬಾಮಂದಿರ,ಲಾಚೆನ್. 9743351212, 9206979202, 6366322639

★ಶ್ರೇಯಸ್ ಟೂರ್ಸ್★ 21.03.2022 10ದಿನಗಳು (ಎಲ್ಲಾ ವಿಮಾನದಲ್ಲಿ) ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥ ಸಹಿತ).,21.03.2022, 21.04.2022 11ದಿನಗಳು ಕಾಶಿ,ನೈಮಿಷ್ಯಾರಣ್ಯ,ಚಿತ್ರಕೂಟ, ಅಲಹಾಬಾದ್, ವಿಂದ್ಯಾವಾಸಿನಿ, ಗಯಾ,ರಾಜ್‌ಗಿರ್,ದೇವಘರ್. 9743351212, 9206979202, 6366322639

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

★॥ಶ್ರೀಶಕ್ತಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್_ಕಛೇರಿ, ಸಾಲಬಾಧೆ, ಯಾವುದೇ_ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9591588881

★॥ನಂ.1 ಸ್ತ್ರೀಪುರುಷ॥★ ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಪಾಂಡುರಂಗ ಗುರೂಜಿ. 9972033162

"ಶ್ರೀಆದಿಶಕ್ತಿ ಜ್ಯೋತಿಷ್ಯಂ" ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

★॥ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ_ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ_ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

HEALTH SPECIAL

ಕಪಿಲಾ ಆರೋಗ್ಯಧಾಮ
KAPILA AROGYA DHAMA
TYAVARE KOPPA, SHIMOGA- ತ್ಯಾವರೆಕೊಪ್ಪ, ಶಿವಮೊಗ್ಗ

AYURVEDIC CENTRE	ಆಯುರ್ವೇದ ಕೇಂದ್ರ
Cancer Diabetes Infertility	ಕ್ಯಾನ್ಸರ್ ಡಯಾಬಿಟಿಸ್ ಸಂತಾನ ಹೀನತೆ
Contact ಸಂಪರ್ಕಿಸಿ: + 91 76195 53245 + 91 82771 96659 + 91 94490 79052	www.dalhana.com

DH DECCAN HERALD — ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in
condition apply*

ಐಪಿಎಲ್ ಮೆಗಾ ಹರಾಜು: ಇಶಾನ್ ಕಿಶನ್, ಹರ್ಷಲ್, ದೀಪಕ್‌ಗೆ ಡಬಲ್ ಸಂಭ್ರಮ • ಡೆಲ್ಲಿಗೆ ವಾರ್ನರ್

ಯುವ ಪ್ರತಿಭೆಗಳದ್ದೇ ಪಾರಮ್ಯ

ಪ್ರಸಿದ್ಧ ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾರ್ಖಂಡ್ ಹುಡುಗ ಇಶಾನ್ ಕಿಶನ್‌ಗೆ ಶನಿವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೆಗಾ ಹರಾಜಿನಲ್ಲಿ ಡಬಲ್ ಸಂಭ್ರಮ.

₹ 15.25 ಕೋಟಿ ಮೌಲ್ಯ ಗಿಟ್ಟಿಸಿದ ವಿಕೆಟ್‌ಕೀಪರ್, ಎಡಗೈ ಬ್ಯಾಟರ್ ಇಶಾನ್ ದಿನದ ಲಿಲಾವು ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೌಲ್ಯ ಗಳಿಸಿದ ಆಟಗಾರನಾದರು. ಅಲ್ಲದೇ ತಾವು ಈ ಹಿಂದೆ ಆಡುತ್ತಿದ್ದ ಮುಂಬೈ ಇಂಡಿಯನ್ಸ್ ತಂಡದಲ್ಲಿಯೇ ಉಳಿದರು.

'ಮುಂಬೈ ತಂಡಕ್ಕೆ ಮರಳುತ್ತಿರುವುದು ಬಹಳ ಸಂತಸವಾಗುತ್ತಿದೆ. ತಂಡದ ಪರ ಆಡಲು ತವಕಗೊಂಡಿದ್ದೇನೆ. ಆ ತಂಡದಲ್ಲಿರುವ ಎಲ್ಲರೂ ನನ್ನನ್ನು ಕುಟುಂಬದ ಸದಸ್ಯನಂತೆಯೇ ಪ್ರೀತಿಸಿದ್ದಾರೆ. ಉತ್ತಮ ಕಾಣಿಕೆ ನೀಡುವುದನ್ನು ಮುಂದುವರಿಸುತ್ತೇನೆ' ಎಂದು 23 ವರ್ಷದ ಇಶಾನ್ ಪ್ರತಿಕ್ರಿಯಿಸಿದರು.

ಚೆನ್ನೈ ಸೂಪರ್ ಕಿಂಗ್ಸ್ ತಂಡವೂ ಮುಂಬೈನ ಹಾದಿಯಲ್ಲಿಯೇ ನಡೆಯಿತು. ತನ್ನ ಪ್ರಮುಖ ಆಲ್‌ರೌಂಡರ್ ದೀಪಕ್ ಚಾಹರ್ ಅವರಿಗೆ ₹ 14 ಕೋಟಿ ಕೊಟ್ಟು ಉಳಿಸಿಕೊಂಡಿತು.

ಬೆಳಗಿನ ಅವಧಿಯಲ್ಲಿ ಮುಂಬೈನ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ₹12.25 ಕೋಟಿಗೆ ಖರೀದಿಸಿತ್ತು. ಮಧ್ಯಾಹ್ನದವರೆಗೂ ಅವರೇ ಅಗ್ರಸ್ಥಾನದಲ್ಲಿದ್ದರು. ಅವರ ದಾಖಲೆಯನ್ನು ಇಶಾನ್ ಮತ್ತು ದೀಪಕ್ ಮೀರಿದರು.

ತಮ್ಮ ತಂಡಗಳನ್ನು ಬಲಿಷ್ಠವಾಗಿ ಕಟ್ಟುವತ್ತ ಚಿತ್ತ ನೆಟ್ಟ ಫ್ರ್ಯಾಂಚೈಸಿ ಮಾಲೀಕರು ಆಟಗಾರರ ಖರೀದಿಗೆ ತುರುಸಿನ ಪೈಪೋಟಿಯೊಡ್ಡಿದರು. ಇದರಿಂದಾಗಿ ಕಳೆದ ಒಂದೂವರೆ ವರ್ಷದಲ್ಲಿ ವಿವಿಧ ಮಾದರಿಗಳಲ್ಲಿ ಮಿಂಚಿದ್ದ ಆಲ್‌ರೌಂಡರ್‌ಗಳು, ಅನುಭವಿ ಆಟಗಾರರು ದೊಡ್ಡ ಮೊತ್ತ ಪಡೆಯುವಂತಾಯಿತು. 30 ವರ್ಷದೊಳಗಿನ ಆಟಗಾರರ ಆಯ್ಕೆಗೆ ಹೆಚ್ಚು ಮಹತ್ವ ನೀಡಿದರು. ಇದರಿಂದಾಗಿ ಕೆಲವು ಫ್ರ್ಯಾಂಚೈಸಿಗಳು ತಾವು ಈಚೆಗೆ ಬಿಡುಗಡೆ ಮಾಡಿದ್ದ ಆಟಗಾರರನ್ನು ಖರೀದಿಸಲು ಒತ್ತು ನೀಡಿದವು.

ಚೆನ್ನೈ ಸೂಪರ್ ಕಿಂಗ್ಸ್ ತಂಡವು ವಿಂಡೀಸ್ ಆಟಗಾರ ಡ್ವೇನ್ ಬ್ರಾವೊ, ಅನುಭವಿ ಅಂಬಟಿ ರಾಯುಡು ಮತ್ತು ಕನ್ನಡಿಗ ರಾಬಿನ್ ಉತ್ತಪ್ಪ (₹ 2 ಕೋಟಿ, ಮೂಲಬೆಲೆ) ಅವರನ್ನು ಮರಳಿ ಪಡೆದುಕೊಂಡಿತು.

ಯಜುವೇಂದ್ರ ಚಾಹಲ್, ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಶಾರ್ದೂಲ್ ಠಾಕೂರ್, ರಿಷಭ್ ಪಂತ್ ಮತ್ತು ಸೂರ್ಯಕುಮಾರ್ ಯಾದವ್ ಅವರು ಶನಿವಾರ ಹೋಟೆಲ್ ಕೋಣೆಯಲ್ಲಿ ಕುಳಿತು ಐಪಿಎಲ್ ಮೆಗಾ ಹರಾಜು ವೀಕ್ಷಿಸಿದ ಚಿತ್ರವನ್ನು ಭಾರತ ತಂಡದ ನಾಯಕ ರೋಹಿತ್ ಶರ್ಮಾ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಹಾಕಿದ್ದಾರೆ

ಪಂಜಾಬ್ ಸೇರಿದ ಶಿಖರ್

ಭಾರತ ತಂಡದ ಆರಂಭಿಕ ಬ್ಯಾಟರ್ ಶಿಖರ್ ಧವನ್ ಅವರನ್ನು ಪಂಜಾಬ್ ಕಿಂಗ್ಸ್ ತಂಡವು ₹ 8.25 ಕೋಟಿ ಕೊಟ್ಟು ಖರೀದಿಸಿತು. ತಂಡದ ಮುಖ್ಯ ಕೋಚ್ ಅನಿಲ್ ಕುಂಬ್ಳೆ ಮತ್ತಿತರರ ನಿಯೋಗವು ಎಚ್ಚರಿಕೆಯಿಂದ ಆಟಗಾರರನ್ನು ಆಯ್ಕೆ ಮಾಡಿಕೊಂಡರು. ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ, ಇಂಗ್ಲೆಂಡ್ ಬ್ಯಾಟರ್ ಜಾನಿ ಬೆಸ್ಟೊ ಮತ್ತು ಭಾರತದ ಯುವ ಆಲ್‌ರೌಂಡರ್ ರಾಹುಲ್ ಚಾಹರ್ ಅವರನ್ನು ಖರೀದಿಸಿದರು.

ಲಖನೌ ತೆಕ್ಕೆಗೆ ಹೋಲ್ಡರ್

ವೆಸ್ಟ್ ಇಂಡೀಸ್ ತಂಡದ ಆಲ್‌ರೌಂಡರ್ ಜೇಸನ್ ಹೋಲ್ಡರ್ ಅವರನ್ನು ಪಡೆಯುವಲ್ಲಿ ಹೊಸ ತಂಡ ಲಖನೌ ಸೂಪರ್ ಜೈಂಟ್ಸ್ ಯಶಸ್ವಿಯಾಯಿತು. ಈ ತಂಡವು ಯುವ ಮತ್ತು ಅನುಭವಿ ಆಟಗಾರರನ್ನು ಸಮಸಂಖ್ಯೆಯಲ್ಲಿ ಖರೀದಿಸುವತ್ತ ಚಿತ್ತ ನೆಟ್ಟಿತು. ಇದರಿಂದಾಗಿ ಕೃಣಾಲ್ ಪಾಂಡ್ಯ, ದೀಪಕ್ ಹೂಡಾ ಉತ್ತಮ ಬೆಲೆ ಪಡೆದರು.

ಕರ್ನಾಟಕದ ಮನೀಷ್ ಪಾಂಡೆಗೂ ಈ ತಂಡದಲ್ಲಿ ಸ್ಥಾನ ಲಭಿಸಿತು. ಈ ಹಿಂದೆ ಅವರು ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿದ್ದರು.

ರಾಯಲ್ಸ್‌ಗೆ ಅಶ್ವಿನ್

ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಮತ್ತು ಕನ್ನಡಿಗ ದೇವದತ್ತ ಪಡಿಕ್ಕಲ್ ಅವರನ್ನು ರಾಜಸ್ಥಾನ್ ರಾಯಲ್ಸ್ ತಂಡವು ದಿನದ ಆರಂಭದಲ್ಲಿಯೇ ತನ್ನ ತೆಕ್ಕೆಗೆ ಎಳೆದುಕೊಂಡಿತು. ಅನುಭವಿ ಅಶ್ವಿನ್ ಐದು ಕೋಟಿ ಮತ್ತು ಪಡಿಕ್ಕಲ್ 7.75 ಕೋಟಿ ರೂಪಾಯಿ ಜೇಬಿಗಿಳಿಸಿದರು.

ಹೋದ ಆವೃತ್ತಿಯಲ್ಲಿ ದೇವದತ್ತ ಆರ್‌ಸಿಬಿಯಲ್ಲಿ ಅಮೋಘ ಆಟವಾಡಿದ್ದರು.

ನಿಕೋಲಸ್‌ಗೆ ಬಂಪರ್

ವಿಂಡೀಸ್‌ನ ವಿಕೆಟ್‌ಕೀಪರ್-ಬ್ಯಾಟರ್ ನಿಕೋಲಸ್ ಪೂರನ್ ಸನ್‌ರೈಸರ್ಸ್ ಹೈದರಾಬಾದ್ ತಂಡದ ಪಾಲಾದರು. ₹10.75 ಕೋಟಿ ಮೌಲ್ಯ ಗಳಿಸುವ ಮೂಲಕ ಈ ಹರಾಜಿನಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ವಿದೇಶಿ ಆಟಗಾರನಾದರು.

ಲಾಕಿ ಫರ್ಗ್ಯುಸನ್

ಗರಿಷ್ಠ ಮೌಲ್ಯ ಪಡೆದ ಅಗ್ರ 10 ಮಂದಿ (₹ ಕೋಟಿ)

ಆಟಗಾರ	ಮೊತ್ತ	ತಂಡ
ಇಶಾನ್ ಕಿಶನ್	15.25	ಮುಂಬೈ
ದೀಪಕ್ ಚಾಹರ್	14	ಚೆನ್ನೈ
ಶ್ರೇಯಸ್ ಅಯ್ಯರ್	12.25	ಕೋಲ್ಕತ್ತ
ಶಾರ್ದೂಲ್ ಠಾಕೂರ್	10.75	ಡೆಲ್ಲಿ
ವಣಿಂದು ಹಸರಂಗ	10.75	ಬೆಂಗಳೂರು
ಹರ್ಷಲ್ ಪಟೇಲ್	10.75	ಬೆಂಗಳೂರು
ನಿಕೊಲಸ್ ಪೂರನ್	10.75	ಹೈದರಾಬಾದ್
ಲಾಕಿ ಫರ್ಗ್ಯುಸನ್	10	ಗುಜರಾತ್ ಟೈಟನ್ಸ್
ಪ್ರಸಿದ್ಧ ಕೃಷ್ಣ	10	ರಾಜಸ್ತಾನ ರಾಯಲ್ಸ್
ಆವೇಶ್ ಖಾನ್	10	ಲಖನೌ ಸೂಪರ್ ಜೈಂಟ್ಸ್

ಆಟಗಾರ	ದೇಶ	ಮೊತ್ತ (₹ ಕೋಟಿ)
ಚೆನ್ನೈ ಸೂಪರ್ ಕಿಂಗ್ಸ್		
ದೀಪಕ್ ಚಾಹರ್	ಭಾರತ	14
ಅಂಬಟಿ ರಾಯುಡು	ಭಾರತ	6.75
ಡ್ವೇನ್ ಬ್ರಾವೊ	ವಿಂಡೀಸ್	4.40
ರಾಬಿನ್ ಉತ್ತಪ್ಪ	ಭಾರತ	2
ಡೆಲ್ಲಿ ಕ್ಯಾಪಿಟಲ್ಸ್		
ಶಾರ್ದೂಲ್ ಠಾಕೂರ್	ಭಾರತ	10.75
ಮಿಚೆಲ್ ಮಾರ್ಷ್	ಆಸ್ಟ್ರೇಲಿಯಾ	6.50
ಡೇವಿಡ್ ವಾರ್ನರ್	ಆಸ್ಟ್ರೇಲಿಯಾ	6.25
ಕುಲದೀಪ್ ಯಾದವ್	ಭಾರತ	2
ಮುಸ್ತಫಿಜುರ್ ರೆಹಮಾನ್	ಬಾಂಗ್ಲಾದೇಶ	2
ಕೆ.ಎಸ್ ಭರತ್	ಭಾರತ	2
ಗುಜರಾತ್ ಟೈಟನ್ಸ್		
ಲಾಕಿ ಫರ್ಗ್ಯುಸನ್	ನ್ಯೂಜಿಲೆಂಡ್	10
ರಾಹುಲ್ ತೆವಾಟಿಯಾ	ಭಾರತ	9
ಶಮಿ	ಭಾರತ	6.25
ಜೇಸನ್ ರಾಯ್	ಇಂಗ್ಲೆಂಡ್	2
ಕೋಲ್ಕತ್ತ ನೈಟ್ ರೈಡರ್ಸ್		
ಶ್ರೇಯಸ್ ಅಯ್ಯರ್	ಭಾರತ	12.25
ನಿತೀಶ್ ರಾಣಾ	ಭಾರತ	8
ಪ್ಯಾಟ್ ಕಮಿನ್ಸ್	ಆಸ್ಟ್ರೇಲಿಯಾ	7.25
ಲಖನೌ ಸೂಪರ್ ಜೈಂಟ್ಸ್		
ಆವೇಶ್ ಖಾನ್	ಭಾರತ	10
ಹೋಲ್ಡರ್	ವಿಂಡೀಸ್	8.75
ಕೃಣಾಲ್ ಪಾಂಡ್ಯ	ಭಾರತ	8.25
ಮಾರ್ಕ್ ವುಡ್	ಇಂಗ್ಲೆಂಡ್	7.50
ಕ್ವಿಂಟನ್ ಡಿಕಾಕ್	ದ.ಆಫ್ರಿಕಾ	6.75
ದೀಪಕ್ ಹೂಡಾ	ಭಾರತ	5.75
ಮನೀಷ್ ಪಾಂಡೆ	ಭಾರತ	4.60
ಮುಂಬೈ ಇಂಡಿಯನ್ಸ್		
ಇಶಾನ್ ಕಿಶನ್	ಭಾರತ	15.25
ಪಂಜಾಬ್ ಕಿಂಗ್ಸ್		
ಶಾರೂಖ್ ಖಾನ್	ಭಾರತ	9
ಶಿಖರ್ ಧವನ್	ಭಾರತ	8.25
ಕಗಿಸೊ ರಬಾಡ	ದ.ಆಫ್ರಿಕಾ	9.25
ಜಾನಿ ಬೇಸ್ಟೊ	ಇಂಗ್ಲೆಂಡ್	6.75
ರಾಹುಲ್ ಚಾಹರ್	ಭಾರತ	5.25
ರಾಜಸ್ಥಾನ್ ರಾಯಲ್ಸ್		
ಪ್ರಸಿದ್ಧ ಕೃಷ್ಣ	ಭಾರತ	10
ಹೆಟ್ಮೆಯರ್	ವಿಂಡೀಸ್	8.50
ಟ್ರೆಂಟ್ ಬೌಲ್ಟ್	ನ್ಯೂಜಿಲೆಂಡ್	8
ಪಡಿಕ್ಕಲ್	ಭಾರತ	7.75
ಯಜುವೇಂದ್ರ ಚಾಹಲ್	ಭಾರತ	6.50
ಆರ್. ಅಶ್ವಿನ್	ಭಾರತ	5
ಟ್ರೆಂಟ್ ಬೌಲ್ಟ್	ನ್ಯೂಜಿಲೆಂಡ್	8
ರಾಯಲ್ ಚಾಲೆಂಜರ್ಸ್ ಬೆಂಗಳೂರು		
ವಣಿಂದು ಹಸರಂಗಾ	ಶ್ರೀಲಂಕಾ	10.75
ಹರ್ಷಲ್ ಪಟೇಲ್	ಭಾರತ	10.75
ಫಾಫ್ ಡುಪ್ಲೆಸಿ	ದ. ಆಫ್ರಿಕಾ	7
ದಿನೇಶ್ ಕಾರ್ತಿಕ್	ಭಾರತ	5.50
ಹ್ಯಾಜಲ್‌ವುಡ್	ಆಸ್ಟ್ರೇಲಿಯಾ	7.75
ಸನ್‌ರೈಸರ್ಸ್ ಹೈದರಾಬಾದ್		
ನಿಕೋಲಸ್ ಪೂರನ್	ವಿಂಡೀಸ್	10.75
ವಾಷಿಂಗ್ಟನ್ ಸುಂದರ್	ಭಾರತ	8.75
ರಾಹುಲ್ ತ್ರಿಪಾಟಿ	ಭಾರತ	8
ಭುವನೇಶ್ವರ ಕುಮಾರ್	ಭಾರತ	4.20
ಟಿ. ನಟರಾಜನ್	ಭಾರತ	4

ಇಂದು ಬಿಕರಿಯಾಗದವರು ಅಗ್ರ10 ಮಂದಿ

ಆಟಗಾರ	ದೇಶ
ಸುರೇಶ್ ರೈನಾ	ಭಾರತ
ಸ್ಟೀವ್ ಸ್ಮಿತ್	ಆಸ್ಟ್ರೇಲಿಯಾ
ಶಕೀಬ್ ಅಲ್ ಹಸನ್	ಬಾಂಗ್ಲಾದೇಶ
ಇಮ್ರಾನ್ ತಾಹಿರ್	ದ. ಆಫ್ರಿಕಾ
ಆ್ಯಡಂ ಜಂಪಾ	ಆಸ್ಟ್ರೇಲಿಯಾ
ಉಮೇಶ್ ಯಾದವ್	ಭಾರತ
ಡೇವಿಡ್ ಮಿಲ್ಲರ್	ದ. ಆಫ್ರಿಕಾ
ಮೊಹಮ್ಮದ್ ನಬಿ	ಅಫ್ಘಾನಿಸ್ತಾನ
ಆದಿಲ್ ರಶೀದ್	ಇಂಗ್ಲೆಂಡ್
ಸ್ಯಾಮ್ ಬಿಲಿಂಗ್ಸ್	ಇಂಗ್ಲೆಂಡ್

ಕುಸಿದು ಬಿದ್ದ ಹಾಗ್

ಬೆಂಗಳೂರು: ಮೆಗಾ ಹರಾಜು ಪ್ರಕ್ರಿಯೆಯ ನಿರೂಪಣೆ ಮಾಡುತ್ತಿದ್ದ ಹಾಗ್ ಎಡ್ಮಿಡಸ್ ಅವರು ಮಧ್ಯಾಹ್ನ ಕುಸಿದು ಬಿದ್ದರು. ಇದರಿಂದಾಗಿ ಸುಮಾರು ಒಂದು ಗಂಟೆ ಕಾರ್ಯಕ್ರಮವನ್ನು ತಾತ್ಕಾಲಿವಾಗಿ ಸ್ಥಗಿತಗೊಳಿಸಲಾಯಿತು.

ಕೂಡಲೇ ಅವರಿಗೆ ಚಿಕಿತ್ಸೆ ನೀಡಲಾಯಿತು. ಕಡಿಮೆ ರಕ್ತದೊತ್ತಡದ ಕಾರಣಕ್ಕೆ ಅವರು ತಲೆಸುತ್ತು ಬಂದು ಬಿದ್ದರು ಎಂದು ಹೇಳಲಾಗಿದೆ. ನಂತರ ಅವರು ಚೇತರಿಸಿಕೊಂಡು, ವಿಶ್ರಾಂತಿ ಪಡೆದರು.

ಮಧ್ಯಾಹ್ನ 3.30ಕ್ಕೆ ಪುನರಾರಂಭವಾದ ಬಿಡ್ ಪ್ರಕ್ರಿಯೆಯನ್ನು ಚಾರು ಶರ್ಮಾ ನಿರೂಪಿಸಿದರು. ರಾತ್ರಿ 9.30ರವರೆಗೂ ಬಿಡ್ ನಡೆಯಿತು.

94 ಆಟಗಾರರು ಬಿಕರಿ

ಬಿಡ್ ಪ್ರಕ್ರಿಯೆಯ ಮೊದಲ ದಿನ ಭಾರತದ 74 ಮತ್ತು ವಿದೇಶ 20 ಆಟಗಾರರು ವಿವಿಧ ಫ್ರ್ಯಾಂಚೈಸಿಗಳಿಂದ ಖರೀದಿಯಾದರು. ಬಿಡ್ ಅಂತಿಮ ಪಟ್ಟಿಯಲ್ಲಿ 590 ಆಟಗಾರರು ಸ್ಥಾನ ಪಡೆದಿದ್ದಾರೆ. ಒಟ್ಟು 217 ಸ್ಥಾನಗಳಿಗೆ ಆಯ್ಕೆ ನಡೆಯಲಿದೆ.

ಫ್ರ್ಯಾಂಚೈಸಿಗಳ ಹಣದ ಥೈಲಿ

ತಂಡ	ಮೊತ್ತ (₹ ಕೋಟಿ)
ಚೆನ್ನೈ ಸೂಪರ್‌ಕಿಂಗ್ಸ್	20.45
ಡೆಲ್ಲಿ ಕ್ಯಾಪಿಟಲ್ಸ್	16.50
ಗುಜರಾತ್ ಟೈಟನ್ಸ್	18.85
ಕೋಲ್ಕತ್ತ ನೈಟ್‌ರೈಡರ್ಸ	12.65
ಲಖನೌ ಸೂಪರ್ ಜೈಂಟ್ಸ್	6.90
ಮುಂಬೈ ಇಂಡಿಯನ್ಸ್	27.85
ಪಂಜಾಬ್ ಕಿಂಗ್ಸ್	28.65
ರಾಜಸ್ಥಾನ್ ರಾಯಲ್ಸ್	12.15
ರಾಯಲ್ ಚಾಲೆಂಜರ್ಸ್ ಬೆಂಗಳೂರು	9.25
ಸನ್‌ರೈಸರ್ಸ್ ಹೈದರಾಬಾದ್	20.15

ಗೌತಮ್, ಕರುಣ್ ಸಿಗುವುದೇ ಬೆಲೆ?

ಬೆಂಗಳೂರು: ಕರ್ನಾಟಕದ ಪ್ರಮುಖ ಆಟಗಾರರಾದ ಕರುಣ್ ನಾಯರ್ ಮತ್ತು ಕೃಷ್ಣಪ್ಪ ಗೌತಮ್ ಅವರಿಗೆ ಈ ಬಾರಿ ಐಪಿಎಲ್‌ನಲ್ಲಿ ಯಾವ ತಂಡ ಖರೀದಿಸಲಿದೆ ಎಂಬ ಕುತೂಹಲ ಇನ್ನೂ ಬಾಕಿ ಇದೆ.

ಹರಾಜಿನ ಕೊನೆಯ ದಿನವಾದ ಭಾನುವಾರ ಇನ್ನೂ ಹಲವು ಆಟಗಾರರನ್ನು ಬಿಡ್ ಮಾಡಲಾಗುತ್ತಿದೆ. ಅದರಲ್ಲಿ ಬ್ಯಾಟರ್ ಕರುಣ್ ಮತ್ತು ಆಲ್‌ರೌಂಡರ್ ಗೌತಮ್ ಕೂಡ ಇದ್ದಾರೆ. ಹೋದ ಋತುವಿನಲ್ಲಿ ಇಬ್ಬರೂ ಪಂಜಾಬ್ ಕಿಂಗ್ಸ್ ತಂಡದಲ್ಲಿದ್ದರು. ಈ ಬಾರಿ ಅವರಿಬ್ಬರಿಗೂ ತಲಾ ₹ 50 ಲಕ್ಷ ನಿಗದಿ ಮಾಡಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಕ್ರಿಕೆಟ್‌ಪ್ರೇಮಿಗಳ ಅಸಮಾಧಾನ • ತಂಡಕ್ಕೆ ದಿನೇಶ್, ಡು ಪ್ಲೆಸಿ

ಕನ್ನಡಿಗರಿಗೆ ಮಣೆ ಹಾಕದ ಆರ್‌ಸಿಬಿ

• ಗಿರೀಶ ದೊಡ್ಡಮನಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ತಂಡವು ಮತ್ತೊಮ್ಮೆ ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿದೆ. ಟ್ವಿಟರ್, ಫೇಸ್‌ಬುಕ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳ ಮಳೆಯನ್ನೇ ಸುರಿಸಿದ್ದಾರೆ.

ಶನಿವಾರ ಆರಂಭವಾದ ಐಪಿಎಲ್ ಮೆಗಾ ಹರಾಜಿನಲ್ಲಿ ಬೇರೆ ಬೇರೆ ತಂಡಗಳು ಕರ್ನಾಟಕದ ಪ್ರತಿಭೆಗಳನ್ನು ಭಾರಿ ಮೊತ್ತ ಕೊಟ್ಟು ತಮ್ಮದಾಗಿಸಿಕೊಂಡವು. ಆದರೆ, ಕಣದಲ್ಲಿ ಕರ್ನಾಟಕದ 28 ಆಟಗಾರರಿದ್ದರೂ ಬೆಂಗಳೂರು ತಂಡವು ಆಸಕ್ತಿ ತೋರಲಿಲ್ಲ ಎಂದು ಆರೋಪಿಸಿದ್ದಾರೆ.

'ಕರ್ನಾಟಕದ ಆಟಗಾರರನ್ನು ಆರ್‌ಸಿಬಿಯು ಬೇಕೆಂತಲೇ ಆಯ್ಕೆ ಮಾಡಿಲ್ಲ. ಮನೀಷ್, ಮನೋಹರ್ ಮತ್ತು ಪ್ರಸಿದ್ಧ ಆಟಗಾರರನ್ನು ಬಿಡ್ ಮಾಡಲು ಆಸಕ್ತಿ ತೋರುತ್ತಿಲ್ಲವೆಂದರೆ ಆರ್‌ಸಿಬಿಯು ನಿಜಕ್ಕೂ ದೊಡ್ಡ ಅವಕಾಶವನ್ನು ಕಳೆದುಕೊಳ್ಳುತ್ತಿದ್ದಾರೆ. ಇದು ದಶಕದಿಂದ ನಡೆಯುತ್ತಿದೆ. ವಿಪರ್ಯಾಸ' ಎಂದು ಮಣಿಪುರ ರಣಜಿ ತಂಡದ ಕೋಚ್, ಕರ್ನಾಟಕದ ಕ್ರಿಕೆಟಿಗ ದೊಡ್ಡಗಣೇಶ್ ಟ್ವೀಟ್ ಮಾಡಿದ್ದಾರೆ.

ಬಿಡ್ ಪ್ರಕ್ರಿಯೆಯಲ್ಲಿ ಕರ್ನಾಟಕದ ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಮತ್ತು ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರನ್ನು ರಾಜಸ್ಥಾನ್ ರಾಯಲ್ಸ್ ತಂಡವು ಜಿದ್ದಿಗೆ ಬಿದ್ದು ಖರೀದಿಸಿತು. ವೆಸ್ಟ್ ಇಂಡೀಸ್ ಎದುರಿನ ಏಕದಿನ ಸರಣಿಯಲ್ಲಿ ಶ್ರೇಷ್ಠ ಬೌಲರ್ ಎನಿಸಿದ್ದ ಪ್ರಸಿದ್ಧ ಹತ್ತು ಕೋಟಿ ಮತ್ತು ಹೋದ ಬಾರಿಯ ಐಪಿಎಲ್ ಹಾಗೂ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ರನ್ ಹೊಳೆ ಹರಿಸಿದ್ದ ಪಡಿಕ್ಕಲ್ ಅವರನ್ನು ಆರ್‌ಸಿಬಿಯು ಈಚೆಗೆ ಬಿಡುಗಡೆ ಮಾಡಿತ್ತು. ಅವರಿಗೆ ರಾಜಸ್ಥಾನದಿಂದ 7.75 ಕೋಟಿ ರೂಪಾಯಿ ಲಭಿಸಿತು. ಇದೇ ತಂಡಕ್ಕೆ ಕೆ.ಸಿ. ಕಾರ್ಯಪ್ಪ (₹ 30 ಲಕ್ಷ) ಸೇರ್ಪಡೆಯಾದರು.

ಮನೀಷ್ ಪಾಂಡೆಗೆ ನೂತನ ತಂಡವಾದ ಲಖನೌ ಸೂಪರ್ ಜೈಂಟ್ಸ್ ಮಣೆ ಹಾಕಿತು. ಈ ತಂಡಕ್ಕೆ ಕನ್ನಡಿಗ ಕೆ.ಎಲ್.ರಾಹುಲ್ ನಾಯಕರಾಗಿದ್ದಾರೆ.

ದಿನೇಶ್ ಕಾರ್ತಿಕ್

ಫಾಫ್ ಡು ಪ್ಲೆಸಿ

ದಿನೇಶ್ ಕಾರ್ತಿಕ್‌ಗೆ ಸ್ಥಾನ: ಅನುಭವಿ ವಿಕೆಟ್‌ಕೀಪರ್-ಬ್ಯಾಟ್ಸ್‌ಮನ್ ದಿನೇಶ್ ಕಾರ್ತಿಕ್ ಮತ್ತು ದಕ್ಷಿಣ ಆಫ್ರಿಕಾದ ಫಾಫ್ ಡು ಪ್ಲೆಸಿ ಅವರನ್ನು ಆರ್‌ಸಿಬಿ ಆಯ್ಕೆ ಮಾಡಿದೆ. ಕಳೆದ ಐಪಿಎಲ್ ನಂತರ ಆರ್‌ಸಿಬಿಯ ನಾಯಕತ್ವವನ್ನು ವಿರಾಟ್ ಕೊಹ್ಲಿ ಬಿಟ್ಟುಕೊಟ್ಟಿರುವುದಾಗಿ ಹೇಳಿದ್ದರು. ತಂಡದ ಮ್ಯಾನೇಜ್‌ಮೆಂಟ್ ವಿರಾಟ್ ಅವರನ್ನೇ ಮುಂದುವರಿಸುವ ಉಮೇದಿನಲ್ಲಿದೆ. ಈ ಕುರಿತ ಮಾತುಕತೆಯೂ ನಡೆದಿದೆಯೆನ್ನಲಾಗಿದೆ. ಆದರೆ, ವಿರಾಟ್ ತಮ್ಮ ನಿರ್ಧಾರ ಬದಲಿಸುವುದಿಲ್ಲ ಎಂದೂ ಹೇಳಲಾಗುತ್ತಿದೆ.

ಒಂದೊಮ್ಮೆ ವಿರಾಟ್ ಮುಂದುವರಿಯದಿದ್ದರೆ ದಿನೇಶ್ ಅಥವಾ ಡುಪ್ಲೆಸಿ ಅವರಲ್ಲಿ ಒಬ್ಬರಿಗೆ ನಾಯಕಪಟ್ಟ ಸಿಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಐಎಸ್‌ಎಲ್ ಫುಟ್‌ಬಾಲ್ ಟೂರ್ನಿ: ನಾರ್ತ್‌ಈಸ್ಟ್‌ಗೆ ನಿರಾಸೆ

ಎಟಿಕೆಎಂಬಿಗೆ ಭರ್ಜರಿ ಗೆಲುವು

ಫತೋರ್ಡ (ಪಿಟಿಐ): ಆರಂಭದಲ್ಲಿ ಸ್ವಲ್ಪ ಹಿನ್ನಡೆ ಅನುಭವಿಸಿದರೂ ಚೇತರಿಸಿಕೊಂಡ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಎಟಿಕೆಎಂಬಿ 3–1ರ ಗೆಲುವು ದಾಖಲಿಸಿತು.

17ನೇ ನಿಮಿಷದಲ್ಲಿ ಸುಹೇರ್ ಗಳಿಸಿದ ಗೋಲಿನೊಂದಿಗೆ ನಾರ್ತ್ ಈಸ್ಟ್ ಯುನೈಟೆಡ್ ಮುನ್ನಡೆ ಸಾಧಿಸಿತ್ತು. 22ನೇ ನಿಮಿಷದಲ್ಲಿ ಕೌಕೊ ಗಳಿಸಿದ ಗೋಲಿನೊಂದಿಗೆ ಎಟಿಕೆಎಂಬಿ ಸಮಬಲ ಸಾಧಿಸಿತು. ಲಿಸ್ಟನ್ ಕೊಲ್ಯಾಕೊ (45ನೇ ನಿಮಿಷ) ಮತ್ತು ಮನ್ವೀರ್ ಸಿಂಗ್ (52ನೇ ನಿ) ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು.

ಚಾಂಪಿಯನ್ನರಿಗೆ ಒಡಿಶಾ ಎದುರಾಳಿ: ಒಡಿಶಾ ಎಫ್‌ಸಿ ತಂಡ ಭಾನುವಾರ ಮಡಗಾಂವ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಎದುರಿಸಲಿದೆ.

ಎಟಿಕೆ ಎಂಬಿ ತಂಡದ ಜಾನಿ ಕೌಕೊ ಗೋಲು ಗಳಿಸಿದ ನಂತರ ಆಶುತೋಷ್ ಮೆಹ್ತಾ ಜೊತೆ ಸಂಭ್ರಮ ಹಂಚಿಕೊಂಡರು

ಕ್ರಿಕೆಟ್: ಭಾರತದ ಮಹಿಳೆಯರಿಗೆ ಸೋಲು

ಕ್ವೀನ್ಸ್‌ಟೌನ್ (ಪಿಟಿಐ): ಸುಜಿ ಬೇಟ್ಸ್ (106) ಅವರ ಶತಕದ ಬಲದಿಂದ ನ್ಯೂಜಿಲೆಂಡ್ ತಂಡವು ಮೊದಲ ಮಹಿಳಾ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವನ್ನು 62 ರನ್‌ಗಳಿಂದ ಸೋಲಿಸಿತು.ಭಾರತ ತಂಡದ ನಾಯಕಿ ಮಿಥಾಲಿ ರಾಜ್ (59) ಅವರ ಅರ್ಧಶತಕ ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 48.1 ಓವರ್‌ಗಳಲ್ಲಿ 275 (ಸುಜಿ ಬೇಟ್ಸ್ 106, ಆ್ಯಮಿ ಸದರ್‌ವೈಟ್ 63, ಅಮೇಲಿಯಾ ಕೆರ್ 33; ರಾಜೇಶ್ವರಿ ಗಾಯಕ್ವಾಡ್ 28ಕ್ಕೆ 2, ದೀಪ್ತಿ ಶರ್ಮಾ 42ಕ್ಕೆ 2, ಪೂಜಾ ವಸ್ತ್ರಕಾರ್ 55ಕ್ಕೆ 2). ಭಾರತ: 49.4 ಓವರ್‌ಗಳಲ್ಲಿ 213 (ಮಿಥಾಲಿ ರಾಜ್ 59, ಯಷ್ಟಿಕಾ ಭಾಟಿಯಾ 41; ಜೆಸ್ ಕೆರ್ 35ಕ್ಕೆ 4). ಫಲಿತಾಂಶ: ನ್ಯೂಜಿಲೆಂಡ್‌ಗೆ 62 ರನ್‌ಗಳ ಜಯ

ಬೆಂಗಳೂರಿನಲ್ಲಿ ಹಾಕಿ ಶಿಬಿರ

ಬೆಂಗಳೂರು: ಜೂನಿಯರ್ ಪುರುಷ ಹಾಕಿಪಟುಗಳ ರಾಷ್ಟ್ರೀಯ ಶಿಬಿರ ನಗರದಲ್ಲಿ ಇದೇ 14ರಿಂದ 25ರ ವರೆಗೆ ನಡೆಯಲಿದ್ದು ಇದಕ್ಕಾಗಿ 65 ಮಂದಿಯ ಹೆಸರನ್ನು ಹಾಕಿ ಇಂಡಿಯಾ ಶನಿವಾರ ಘೋಷಿಸಿದೆ.

ಭಾರತೀಯ ಕ್ರೀಡಾ ಪ್ರಾಧಿಕಾರದ ಆವರಣದಲ್ಲಿ ಶಿಬಿರ ನಡೆಯಲಿದ್ದು ಭುವನೇಶ್ವರದಲ್ಲಿ ಕಳೆದ ಬಾರಿ ನಡೆದ ಎಫ್‌ಐಎಚ್ ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ತೋರಿದ ಪ್ರದರ್ಶನದ ಆಧಾರದಲ್ಲಿ ಆಟಗಾರರ ಆಯ್ಕೆ ನಡೆದಿದೆ ಎಂದು ಹಾಕಿ ಇಂಡಿಯಾ ತಿಳಿಸಿದೆ.

ಶಿಬಿರದಿಂದ ಒಟ್ಟು 33 ಆಟಗಾರರನ್ನು ಆಯ್ಕೆ ಮಾಡಿ ಸಂಭಾವ್ಯರ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ನಂತರ ಮುಂದಿನ ಟೂರ್ನಿಗಳಿಗೆ ತಂಡವನ್ನು ಆರಿಸಲಾಗುವುದು.

ಶಿಬಿರಕ್ಕೆ ಆಯ್ಕೆಯಾದವರು: ಗೋಲ್‌ಕೀಪರ್‌ಗಳು: ಅಮೃತ್‌ಪಾಲ್ ಸಿಂಗ್, ಬಿಕ್ರಂಜಿತ್ ಸಿಂಗ್, ದೀಪಕ್, ಹಿಮವಾನ್ ಸಿಹಾಗ್, ಮೋಹಿತ್ ಎಚ್.ಎಸ್, ಸಾಹಿಲ್, ಪ್ರತೀಕ್ ನಿಗಮ್, ಅಂಕಿತ್ ಮಲಿಕ್; ಡಿಫೆಂಡರ್‌ಗಳು: ಶ್ರದ್ಧಾನಂದ ತಿವಾರಿ, ನೀರಜ್ ಕುಮಾರ್ ಸಿಂಗ್, ಆಕಾಶ್‌ದೀಪ್ ಸಿಂಗ್, ಸುನಿಲ್ ಜೋಜೊ, ಸಿರಿಲ್ ಲುಗುನ್, ಆಲ್ಬರ್ಟ್ ಡುಂಗ್‌ಡುಂಗ್, ಅಮನ್‌ದೀಪ್ ಲಾಕ್ರಾ, ಅರವಿಂದ್, ಅತೀಶ್ ದೊದ್ರಾಯ್, ಗುಜೋತ್ ಸಿಂಗ್, ಕವಿಯರಸನ್ ಆರ್, ನವಜೋತ್ ಸಿಂಗ್, ಪ್ರೀತಮ್ ಟೊಪ್ಪೊ, ರವನೀತ್ ಸಿಂಗ್, ರೋಹಿತ್, ಸಚಿನ್ ಡುಂಗ್‌ಡುಂಗ್; ಮಿಡ್‌ಫೀಲ್ಡರ್ಸ್: ವಿಷ್ಣುಕಾಂತ್ ಸಿಂಗ್, ಅಂಕಿತ್ ಪಾಲ್, ಅಬ್ದುಲ್ ಅಹದ್, ಆಕಾಶ್, ಅಂಕುಶ್, ಆಶಿಮ್ ಟರ್ಕಿ, ಡೆನಿಸ್ ಕೆರ್ಕೆಟಾ, ದಿಪೀಪನ್, ಜಸ್ವಿಂದರ್ ಸಿಂಗ್, ಪಂಕಜ್, ಪ್ರದೀಪ್ ಸಿಂಗ್, ಪ್ರಸೇನ್‌ಜಿತ್ ದೇವ್, ರಾಜ್‌ಬೀರ್ ಸಿಂಗ್, ರಾಜಿಂದರ್ ಸಿಂಗ್, ಟರ್ಟಾನ್ ಮಿನೆಜ್, ಸಮೀರ್ ಸುರೀನ್, ಜಾನ್ಸನ್ ಪುರ್ತಿ, ಅಮೀರ್ ಅಲಿ, ಸೌರಭ್ ಆನಂದ್ ಖುಶ್ವಾ, ಫಾರ್ವರ್ಡರ್‌ಗಳು: ಉತ್ತಮ್ ಸಿಂಗ್, ಅರೈಜೀತ್ ಸಿಂಗ್ ಹುಂಡಾಲ್, ಸುದೀಪ್ ಚಿರ್ಮಾಕೊ, ಅಮನ್‌ದೀಪ್, ಬಾಬಿ ಸಿಂಗ್ ಧಾಮಿ, ಅದಿತ್ಯ ಲಾಲಾಗೆ, ಅಗಂದ್‌ಬೀರ್ ಸಿಂಗ್, ಅರುಣ್ ಸಹಾನಿ, ಭವಿನ್ ಕುಶಾಲಪ್ಪ ಕೆ.ಆರ್, ಬಿರ್ಸಾ ಒರೆಯಾ, ಚಿರನ್ ಮೇದಪ್ಪ, ದೀಪಕ್, ಹಿಮಾಂಶು ಸಾನಿಕ್, ಲೆಕ್ಕಲ ಹಿತೇಶ್ ರಾವ್, ಮೋಹಿತ್ ಕರ್ಮಾ, ಪೂವಣ್ಣ ಸಿ.ಬಿ, ಆರ್.ನಿಶಿ ದೇವ ಅರುಳ್, ಅಕ್ಷಯ್ ಅವಧ್, ಸತೀಶ್ ಬಿ, ತಲೇಬ್ ಶಾ, ಪ್ರತಾಪ್ ಕಿಶನ್‌ರಾವ್ ಶಿಂಧೆ, ಅಭಿಷೇಕ್ ಪ್ರತಾಪ್ ಸಿಂಗ್.

ಚಳಿಗಾಲದ ಒಲಿಂಪಿಕ್ಸ್ ಸ್ಪೀಡ್ ಸ್ಕೇಟಿಂಗ್: ಚೀನಾಗೆ ಚಿನ್ನ

ಒಲಿಂಪಿಕ್ಸ್ ದಾಖಲೆ ಬರೆದ ಗಾವೊ

ಬೀಜಿಂಗ್ (ರಾಯಿಟರ್ಸ್): ಚೀನಾದ ಗಾವೊ ಥಿಂಗ್ಯು ಅವರು ಒಲಿಂಪಿಕ್ಸ್ ದಾಖಲೆಯೊಂದಿಗೆ ಚಳಿಗಾಲದ ಒಲಿಂಪಿಕ್ಸ್‌ನ ಪುರುಷರ ಸ್ಪೀಡ್ ಸ್ಕೇಟಿಂಗ್‌ನಲ್ಲಿ ಚೀನಾಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟರು.

ತವರಿನ ಪ್ರೇಕ್ಷಕರ ಬೆಂಬಲದೊಂದಿಗೆ ಮುನ್ನುಗ್ಗಿದ ಅವರು ಶನಿವಾರ 500 ಮೀಟರ್ಸ್ ವಿಭಾಗದಲ್ಲಿ 34.32 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ನಾಲ್ಕು ವರ್ಷಗಳ ಹಿಂದೆ ಕೂಟದ ಇದೇ ವಿಭಾಗದಲ್ಲಿ ಕಂಚು ಜಯಿಸಿದ್ದ ಗಾವೊ, ಒಲಿಂಪಿಕ್ಸ್‌ನ ಸ್ಪೀಡ್ ಸ್ಕೇಟಿಂಗ್‌ನಲ್ಲಿ ಪದಕವೊಂದನ್ನು ಗಳಿಸಿದ ಚೀನಾದ ಮೊದಲ ಅಥ್ಲೀಟ್ ಎನಿಸಿಕೊಂಡಿದ್ದರು.

ದಕ್ಷಿಣ ಕೊರಿಯಾದ ಚಾ ಮಿನ್ ಕ್ಯು (34.39 ಸೆ) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರೆ, ಜಪಾನ್‌ನ ವಟಾರು ಮೊರ್ಷಿಗೆ 34.49 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕಂಚು ಗೆದ್ದರು.

ಗಾವೊ ಥಿಂಗ್ಯು– ರಾಯಿಟರ್ಸ್ ಚಿತ್ರ

ಆರ್ಚರಿ ಚಾಂಪಿಯನ್‌ಷಿಪ್: 20ರಂದು ಟ್ರಯಲ್ಸ್

ಬೆಂಗಳೂರು: ಜಮ್ಮು ಮತ್ತು ಕಾಶ್ಮೀರದಲ್ಲಿ ಮಾರ್ಚ್ 18ರಿಂದ 27ರ ವರೆಗೆ ನಡೆಯಲಿರುವ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆ ಪ್ರಕ್ರಿಯೆ ಇದೇ 20ರಂದು ನಡೆಯಲಿದೆ.ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ಬೆಳಿಗ್ಗೆ 8.30ರಿಂದ ಪ್ರಕ್ರಿಯೆ ನಡೆಯಲಿದೆ. ಆರ್ಚರಿ ಸಂಸ್ಥೆಯಲ್ಲಿ ನೋಂದಾಯಿತ ಆರ್ಚರ್‌ಗಳು ಗೌರವ ಕಾರ್ಯದರ್ಶಿ ಟಿ.ಅನಂತರಾಜು ಅವರ ಬಳಿ ಇದೇ 18ರ ಮೊದಲು ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ 08022275656 ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 13 ಫೆಬ್ರುವರಿ 2022


ನನ್ನಜ್ಜ ಲಾಂಗುಲಾಚಾರ್ಯ 12

ಆಹಾ ಪ್ರೀತಿ! 13

ಸಲಾಂ ಮಾಡ್ತೇವಿ ಭಾವೈಕ್ಯದ ವಾಣೀಗೆ

ನಿಂಗಪ್ಪ ಮುದೇನೂರು

‘ಹಳ್ಳಿಗಳು ಭಾರತದ ಆತ್ಮ, ಭಾರತದ ಭವಿಷ್ಯ ಹಳ್ಳಿಗಳಲ್ಲಿ ಅಡಗಿದೆ’ ಎಂದು ಹೇಳಿದ ಗಾಂಧೀಜಿಯವರ ಮಾತು ಮಹಾಲಿಂಗಪುರವೆಂಬ ದೇವರ ಹೆಸರಿನ ನಾಡಿಗೆ ಹೆಚ್ಚು ಅನ್ವಯಿಸುತ್ತದೆ. ಅದಕ್ಕೆ ತಕ್ಕಂತೆ ಇಲ್ಲಿ ಸಾಮರಸ್ಯವೊಂದು ತಲೆತಲಾಂತರಗಳಿಂದ ಹಬ್ಬಿ ನಿಂತಿದೆ. ಈ ಊರಿನ ಸಾರ್ಥಕ ಬದುಕಿನ ಕುರಿತು, ಹಸನಾದ ಏಕತೆಯ ಬಾಳಿನ ಕುರಿತು ಆಧುನಿಕ ಸಂತರು ಹಾಡಿದ್ದನ್ನೇ, ನುಡಿದಿದ್ದನ್ನೇ ಕವಿಯೊಬ್ಬರು ಪದ್ಯದ ಸಾಲುಗಳಲ್ಲಿ ಹೇಳಿದ್ಹಿಂಗೆ

‘ಹಿಂದೂ ಮುಸ್ಲಿಂ ಕ್ರೈಸ್ತರೆಲ್ಲ ಒಂದೇ ಎಂದು
ಇಬ್ರಾಹಿಂ ಸುತಾರ ಸಾರುವರಿಲ್ಲಿ ಹೀಗೆಂದು
ಇಲ್ಲ ಇಲ್ಲಿ ಯಾತ್ಯಾತಕೂ ಕಮ್ಮಿ
ನೀವೂ ಇಲ್ಲಿಗೆ ಬಂದು ಹೋಗಿರೊಮ್ಮಿ’

ಅಲ್ಲಿಗೆ ನಾವು ಹೋಗಲಿ, ಹೋಗದೇ ಇರಲಿ ಭಾವೈಕ್ಯದ ಬೆಳೆ ಕಣ್ಣಿಗಿಂತ ಮನಸ್ಸಿಗೆ, ಹೃದಯಕ್ಕೆ ಕಾಣುವಂತಹದ್ದು. ಭಾವೈಕ್ಯತೆಯಲ್ಲಿ ಮಹಾಲಿಂಗಪುರದ ಬಗ್ಗೆ ಹೇಳುವುದೇನಿದೆ? ಹಾಗೆಯೇ ಅಲ್ಲಿ ಹರಿಯುವ ಜೀವನದಿ ಘಟಪ್ರಭದ ಬಗೆಗೆ ಹೇಳುವುದೇನಿದೆ? ಜನತೆಯ ತುಂಬು ದುಡಿಮೆ, ಜೀವನ ವಿಧಾನವೇ ಎಲ್ಲ ಕಥೆ ಹೇಳುತ್ತದೆ. ಹಿಂದೂಗಳಿರಲಿ, ಮುಸ್ಲಿಮರಿರಲಿ ಯಾವುದೇ ಮತಭೇದ, ಘರ್ಷಣೆ, ಜಾತಿಯ ವಿಷದ ಗಾಳಿ ಸುಡದ ಹಾಗೆ ತಾಯಿ ಘಟಪ್ರಭೆ ಅವರನ್ನು ತಣ್ಣಗಿಟ್ಟಿರುವಳು.

ನಲವತ್ತು ಹಿನ್ನಾಡು ಹಳ್ಳಿಗಳುಳ್ಳ ಊರು ಮಹಾಲಿಂಗಪುರ ಒಂದು ಪುಟ್ಟ ಭಾರತದಂತೆಯೇ ಇದೆ. ವೈವಿಧ್ಯಮಯ ಬದುಕಿನ ಜೊತೆ ಕಬ್ಬು, ಗೋಧಿ, ಮುಸುಕಿನ ಜೋಳ, ಹತ್ತಿ, ಸದಕ, ಸೋಯ ಮತ್ತು ಸೂರ್ಯಕಾಂತಿಯ ಬೆಳೆಗಳಿಂದಾಗಿ ಅವಿಭಕ್ತ ಕುಟುಂಬಗಳು ಇಲ್ಲಿ ಮಣ್ಣು ನೆಚ್ಚಿಕೊಂಡು ಬದುಕಿವೆ. ಹೊಸ ಕಾಲಕ್ಕೆ ಹೊಂದಿಕೊಂಡು ಮೂಲ ಕೂಡಿಕಟ್ಟುವ ದಾರಿ ಬಿಡದೆ ಎಲ್ಲರೂ, ಎಲ್ಲ ಧರ್ಮ ಗುರುಗಳೂ ಪ್ರಜಾಪ್ರಭುತ್ವದ ಬದುಕನ್ನು ಬದುಕುತ್ತಿರುವುದು ಈ ನೆಲದ ಅನನ್ಯ ಗುಣ. ಮಹಾಲಿಂಗೇಶ್ವರ ಲಕ್ಷ ದೀಪೋತ್ಸವ ನಡೆದಾಗ ಇಡೀ ಊರು ಒಂದು ಗುಣಗ್ರಾಹಿ ಭಾರತವಾಗಿದ್ದರ ಸಾಂಸ್ಕೃತಿಕ ಸಂಗತಿಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟವರು ಕವಿ, ಪ್ರಾಧ್ಯಾಪಕ ಡಾ. ಅಶೋಕ ನರೋಡೆ.


ಇಬ್ರಾಹಿಂ ಸುತಾರ

ಆದಿದೈವ ಮಹಾಲಿಂಗೇಶ್ವರ ಮಠ, ಮಹಾಲಿಂಗೇಶ್ವರ ಮಂದಿರ, ಚೆನ್ನಗಿರೀಶ್ವರ ದೇವಾಲಯ, ಬಸವ ತೀರ್ಥ, ಶರಣ ಸಿದ್ಧಾಯಿಯ ಗುಡಿ, ನಾಲ್ಕು ಮಹಾದ್ವಾರಗಳು, ಹೂ ಬನದ ನಿರ್ಮಾಣ ಇವೆಲ್ಲವೂ ಮಹಾಲಿಂಗಪುರವನ್ನು ಹಚ್ಚಹಸಿರಾಗಿಟ್ಟಿವೆ. ಊರ ದೈವ ಮಹಾಲಿಂಗೇಶ್ವರನ ವಾರದ ದಿನವಾದ ಸೋಮವಾರ ಹಿಂದೂಗಳಂತೆ ಮುಸ್ಲಿಮರೂ ಇಲ್ಲಿ ಸೋಮವಾರದ ವ್ರತ ಪಾಲಿಸುತ್ತಾರೆ. ಅಂದು ಮುಸ್ಲಿಮರ ಮನೆಗಳಲ್ಲಿ ಮಾಂಸದ ಅಡುಗೆ ಇರುವುದಿಲ್ಲ.


ಒಂದೆಡೆ ಹಿಜಾಬ್. ಇನ್ನೊಂದೆಡೆ ಕೇಸರಿ ಶಾಲು. ಸಮಾಜದಲ್ಲಿನ ಒಡಕುಗಳು ಶಾಲಾಕಾಲೇಜುಗಳಲ್ಲೂ ಕಾಣಿಸಿಕೊಂಡಿರುವ ದಿನಗಳಲ್ಲಿ ‘ಭಾರತದ ಬಹುತ್ವ ಪರಂಪರೆ’ ಹಾಗೂ ಆ ಪರಂಪರೆಯ ಪ್ರಯೋಗಶಾಲೆಗಳಂತಿದ್ದ ಊರುಗಳು ಸಂಘರ್ಷದ ಸಮವಸ್ತ್ರ ತೊಟ್ಟುಕೊಂಡಂತಿವೆ. ‘ಬಹುತ್ವ ಭಾರತ’ ಎಲ್ಲಿ ಕಳೆದುಹೋಯಿತು? ಈ ಪ್ರಶ್ನೆಗೆ ಉತ್ತರರೂಪದಂತಿದೆ ಘಟಪ್ರಭೆಯ ಮಡಿಲಿನ ಮಹಾಲಿಂಗಪುರ. ಅದು ಇಬ್ರಾಹಿಂ ಸುತಾರ ಅವರನ್ನು ರೂಪಿಸಿದ ಪರಿಸರ; ಸುತಾರ ಅವರಿಂದ ಮತ್ತಷ್ಟು ಸಮೃದ್ಧಗೊಂಡ ಪರಿಸರ. ಪ್ರಕ್ಷುಬ್ಧ ಸಮಾಜಕ್ಕೆ ತಂಪನೆರೆವ ‘ಮಹಾಲಿಂಗಪುರ ಮಾದರಿ’ ಎಲ್ಲರ ದಾರಿಯೂ ಆಗಬೇಕಿದೆ...

ಭಾವೈಕ್ಯತೆಯ ತೊಟ್ಟಿಲು ವಿಜಯಪುರ–ಕಲಬುರಗಿ ಸೀಮೆ. ಮತಭೇದ, ಘರ್ಷಣೆ, ಜಾತಿಯ ವಿಷದ ಗಾಳಿ ಸುಡದ ಹಾಗೆ ಇಲ್ಲಿನ ನದಿಗಳು ಈ ನೆಲವನ್ನು ತಣ್ಣಗಿಟ್ಟಿರುವ ಪ್ರತೀಕವಾಗಿ ಈ ಅಜ್ಜಂದಿರು ಗೋಚರಿಸುತ್ತಾರೆ –ಚಿತ್ರ: ತಾಜುದ್ದೀನ್ ಆಜಾದ್

ಮಾರುಕಟ್ಟೆಯಲ್ಲೂ ಮಾಂಸದ ಅಂಗಡಿಗಳೂ ತೆರೆದಿರುವುದಿಲ್ಲ. ಇದು ಅವರೇ ಮನದ ಭಾವೈಕ್ಯತೆಯಲ್ಲಿ ಮೂಡಿಸಿಕೊಂಡಿರುವ ಜೀವನ ಪ್ರೇಮ.

ಮುಸ್ಲಿಮರಿಗೆ ಇಲ್ಲಿನ ಹಿಂದೂ ಜನ ಮಸೀದಿ, ದರ್ಗಾ ಕಟ್ಟಿಸಿಕೊಡುವುದು, ಹಿಂದೂ ಮಂದಿರಗಳನ್ನು ಮುಸ್ಲಿಮರು ಕಟ್ಟುವುದು – ಇದು ಇಲ್ಲಿನ ವಾಸ್ತವ ಬದುಕಿನ ಕನ್ನಡಿ. ಬರೀ ಭೌತಿಕ ಜಗತ್ತಿನ ಮಾತೇಕೆ, ಇಲ್ಲಿಯೇ ಹುಟ್ಟಿ ಬೆಳೆದ ಆಧುನಿಕ ಕಬೀರ, ನಮ್ಮ ನಡುವೆ ಸಂದುಹೋದ ಸಂತ ಇಬ್ರಾಹಿಂ ಸುತಾರರವರು ಮುಸ್ಲಿಂ ಧರ್ಮದಲ್ಲಿ ಹುಟ್ಟಿದರೂ ಅವರು ಅಳವಡಿಸಿಕೊಂಡ ತತ್ವಗಳು ಬಸವಾದಿ ಶರಣರ ತತ್ವ ಸಿದ್ಧಾಂತಗಳನ್ನು. ಹಿಂದೂ ಶಾಸ್ತ್ರ ಪುರಾಣಗಳ ಸಾರವನ್ನು ಮೈಗೂಡಿಸಿಕೊಂಡು ಜಗತ್ತಿನ ದರ್ಶನಗಳನ್ನು ಅದರಲ್ಲೂ ಕುರಾನ್, ಬೈಬಲ್, ಭಗವದ್ಗೀತೆಯ ನುಡಿ ತತ್ವಗಳನ್ನು ಅವರು ಸಾರಿ ನಿಂತ ಚರಿತ್ರೆ ಈ ನೆಲಕ್ಕೆ ಇದೆ.

ಅಧ್ಯಾತ್ಮದ ಒಡಲೊಂದು ಮಧುರಚೆನ್ನರ ಹಾಡಿನಂತೆ ಇಲ್ಲಿಯೂ ತುಂಬಿ ನಿಂತಿದೆ. ‘ಪ್ರೀತಿಯಂಥ ವಸ್ತು ಭವದಲ್ಲಿ ಕಾಣೆ, ಮನಗಂಡ ಮಾತು’ ಕುರಿತು ಹೇಳುವಾಗ ಅವರ ಬುದ್ಧಿಯಾಚೆಗಿನ ಸಹಬಾಳ್ವೆಯ ತಂತಿಯನ್ನು ನುಡಿಸುವ ಪ್ರಯತ್ನವನ್ನು ಈ ನಾಡು ಕಂಡಿದೆ. ಸಾಧು ನಿರಂಜನಾವಧೂತ ಪರಂಪರೆಯ ಬೇರುಳ್ಳ ಕಥನಗಳು ಇಲ್ಲಿನ ತತ್ವ ವಿಚಾರಗಳಾಗಿ ಹೊರಹೊಮ್ಮಿವೆ. ಇಲ್ಲಿಯೂ ಮಹಾಲಿಂಗಪುರವನ್ನು ಧರ್ಮ ಸಮನ್ವಯದ ನಾಡೆಂದೇ ಗುರುತಿಸಲಾಗಿದೆ. ಅದಕ್ಕೆ ಕಾರಣವೂ ಇದೆ.

ಬಸವಾನಂದರ ಪುಣ್ಯಾರಾಧನಾ ಮಹೋತ್ಸವದಲ್ಲಿ ಮುಸ್ಲಿಂ ಬಾಂಧವರು ಶ್ರದ್ಧೆಯಿಂದ ಪಾಲ್ಗೊಳ್ಳುವರು. ‘ಮೊಹರಂ’ನಲ್ಲಿ ಅಲೈದೇವರು ಕೊನೆಗೆ ಸಾಯುವ ಆಚರಣೆ ಬಸವತೀರ್ಥದಲ್ಲಿ ಜರುಗುವುದು. ಇದು ಧರ್ಮದ ಒಲುಮೆಗೆ ಸಾಕ್ಷಿ. ದೇಶದಲ್ಲಿ ಹಿಂದೂ-ಮುಸ್ಲಿಂ ಆತಂಕದ ವಾತಾವರಣ ನಿರ್ಮಾಣವಾದಾಗಲೂ, ರಾಮ ಜನ್ಮಭೂಮಿ, ಬಾಬ್ರಿ ಮಸೀದಿಗಳ ಧಾರ್ಮಿಕ ರಾಜಕಾರಣ ಶುರುವಾದಾಗಲೂ ಇಲ್ಲಿನ ಹಿಂದೂ–ಮುಸ್ಲಿಂ ಜನತೆ ಪರಸ್ಪರ ಸಹೋದರರಂತೆ, ಕುಟುಂಬದ ಐಕ್ಯತೆ ತೋರಿದ್ದು ಸಹಬಾಳ್ವೆಯ ಪ್ರತೀಕ. ಯಾಕೆಂದರೆ ಹಳ್ಳಿಗಳಾಗಲಿ, ನಗರ ಪ್ರದೇಶಗಳಾಗಲಿ ಅವು ಸೌಹಾರ್ದತೆಯಿಂದ ಬದುಕಿದರೇನೇ ಅವುಗಳಿಗೆ ಜೀವನ ಸೌಂದರ್ಯ ಒದಗುವುದು. ಮಹಾಲಿಂಗಪುರದ ಸಿದ್ಧಾರೂಢರ ಮಠದಲ್ಲಿ ಜರುಗುವ ಗುತ್ತಿ ಪೂಜೆಯಲ್ಲಿ ಮುಸ್ಲಿಂ ಬಾಂಧವರೂ ಭಾಗವಹಿಸಿ ಪೂಜೆ ಸಲ್ಲಿಸುವರು. ಸ್ವತಃ ಮಹಾಲಿಂಗೇಶ್ವರ ಮಠದ ಟ್ರಸ್ಟಿನಲ್ಲಿ ಹುಸೇನಸಾಬ್ ಕಲಾಲ, ರಸೂಲಸಾಬ್ ಎಕ್ಸಂಬಿ, ಕಾಸೀಮಸಾಬ್ ಯಾದವಾಡ ಇದ್ದ ಸಮನ್ವಯವು ನಮಗೆ ತೋರಿ ಬರುವುದು.

ನೀಲಕಂಠೇಶ್ವರ ಮಠದ ನಿಜಗುಣ ಶಿವಯೋಗಿಗಳ ಜಯಂತಿ ಉತ್ಸವದಂದು ನಡೆಯುವ ಸಾಮೂಹಿಕ ವಿವಾಹದಲ್ಲಿ ಎಲ್ಲ ಮತಧರ್ಮಗಳ ವಧುವರರು ಕೂಡಿ ಇಲ್ಲಿ ಹೊಸಬಾಳು ಕಟ್ಟಿಕೊಳ್ಳುವ ಪ್ರತಿಜ್ಞೆ ಮಾಡುವರು. ನಾವು ಒಂದೇ ಎಂಬುವ ಬೀಜವೊಂದು ಮನದಲ್ಲಿ ಮೊಳೆಯಲು ಇಂಥ ಸಂಗತಿಗಳು ನಾಂದಿ ಹಾಡುತ್ತವೆ. ಹೇಳುತ್ತಾ ಹೋದಂತೆ ತೂಗುತ್ತಾ ಹೋಗುವ ಭಾವೈಕ್ಯತೆಯ ತೊಟ್ಟಿಲುಗಳು ಇಲ್ಲೆಲ್ಲಾ ಇವೆ.

ಕೃಷಿ ಮತ್ತು ನೇಕಾರಿಕೆಯನ್ನೇ ವೃತ್ತಿ ಮಾಡಿಕೊಂಡ ಇಲ್ಲಿನ ಜನತೆ ಗುರು ಮಹಾಲಿಂಗ ಯೋಗಿಗಳನ್ನು ಬಲ್ಲವರು. ಮಹಾಲಿಂಗಪುರವನ್ನು ನಿರ್ಮಿಸಿದರು ಎಂಬುವ ಪ್ರತೀತಿಯೊಂದಿಗೆ ಈ ಊರಿನ ಕಲೆ, ಸಾಹಿತ್ಯ, ಅಧ್ಯಾತ್ಮ, ಶಿಕ್ಷಣ, ಸಾಮಾಜಿಕ ಬದುಕು ಹುರಿಗೊಳ್ಳುತ್ತಾ ಸಾಗುತ್ತದೆ. ರನ್ನನ ಗದಾಯುದ್ಧ ಬೆಳೆದ, ಘಟಪ್ರಭೆ ತುಂಬಿ ಹರಿದ ನಾಡ ಮಣ್ಣಿದು. ವಿಜಯಪುರ, ಬಾಗಲಕೋಟೆಯ ಜನಸಂಸ್ಕೃತಿಯ ವಾತಾವರಣವೂ ಇದಕ್ಕೆ ಹೇಳಿ ಮಾಡಿಸಿದಂತಿದೆ. ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದ ಇಲ್ಲಿನ ಪ್ರದೇಶಗಳು ರಾಜ ಪ್ರಭುತ್ವದ ಅನುಭವಗಳನ್ನು ಪಡೆದರೂ ಸರ್ವಧರ್ಮದ ಸಾಮರಸ್ಯವೊಂದು ಇಲ್ಲೆಲ್ಲಾ ಹರಡಿ ನಿಂತಿದೆ.

ಹಾಗೆ ನೋಡಿದರೆ ಬೆಲ್ಲದ ಸಿಹಿ ಸೊಬಗಿನ ಮಾರುಕಟ್ಟೆ ಮಹಾಲಿಂಗಪುರದ ಬದುಕನ್ನು ಹಸನಾಗಿಸುತ್ತಲೇ ಬಂದಿದೆ.

12ನೇ ಪುಟಕ್ಕೆ...

ದಿಂಗೂಚ ಊರಿನ ನೋಟ
ಚಿತ್ರ: ಸತೀಶ್ ಝಾ

ಡಾಲರ್ ಕನಸಿನ ಬೆನ್ನೇರಿ...

ಡಿ. ಉಮಾಪತಿ

ಅಮೆರಿಕನ್ ಡಾಲರುಗಳ ಕನಸಿನ ಬೆನ್ನು ಹತ್ತಿ ಆ ದೇಶವನ್ನು ಪ್ರವೇಶಿಸುವ ಅಕ್ರಮ ಹಾದಿಯಲ್ಲೇ ಗುಜರಾತಿ ಕುಟುಂಬವೊಂದು ಮೊನ್ನೆ ಮಂಜುಗಲ್ಲಾಯಿತು.

ಕಲೋಲ್ ಜಿಲ್ಲೆಯ ಗಾಂಧೀನಗರದಿಂದ ಇಪ್ಪತ್ತು ಕಿಲೋಮೀಟರು ದೂರದಲ್ಲಿರುವ ಪುಟ್ಟ ಗ್ರಾಮ ಡಿಂಗೂಚ. ಇಲ್ಲಿನ ಜನಸಂಖ್ಯೆ 3,600. ಆದರೆ ಇಲ್ಲಿ ವಾಸ್ತವವಾಗಿ ವಾಸಿಸುವವರ ಸಂಖ್ಯೆ ವಿರಳ. ಬಹುತೇಕರು ಅಮೆರಿಕ ಮತ್ತು ಕೆನಡಾಗೆ ವಲಸೆ ಹೋಗಿದ್ದಾರೆ. ಇಲ್ಲಿನ ಬಹುತೇಕ ಮನೆಗಳು ಒಡೆಯರಿಲ್ಲದೆ ಕದವಿಕ್ಕಿವೆ. ತೆರೆದಿರುವ ಬಹಳಷ್ಟು ಮನೆಗಳಲ್ಲಿ ಕೂಡ ಬಾಡಿಗೆದಾರರಿದ್ದಾರೆ.

ಈ ಗ್ರಾಮದ ನಾಲ್ವರು ವಾರಗಳ ಹಿಂದೆ ಮಡಿದ ದುರಂತದ ಕತೆಯಿಂದಾಗಿ ಡಿಂಗೂಚ ಸುದ್ದಿಯಲ್ಲಿದೆ. ಕೆನಡಾದ ಮೂಲಕ ಕಳ್ಳ ಮಾರ್ಗದಲ್ಲಿ ಅಮೆರಿಕೆಯನ್ನು ಪ್ರವೇಶಿಸುವ ಪ್ರಯತ್ನದಲ್ಲಿ ಅವರು ಮರಗಟ್ಟಿ ಸತ್ತರು. ಮೂವತ್ತೊಂಬತ್ತರ ಹರೆಯದ ಜಗದೀಶ ಪಟೇಲ್, ಆತನ ಪತ್ನಿ ವೈಶಾಲಿ ಪಟೇಲ್, ಮಗಳು ವಿಹಾಂಗಿ ಪಟೇಲ್ ಹಾಗೂ ಗಂಡುಕೂಸು ಧಾರ್ಮಿಕ್ ಪಟೇಲ್ ದುರ್ಮರಣದಿಂದ ಶೋಕದ ಉರಿಯಲ್ಲಿ ಬೆಂದಿದೆ ಡಿಂಗೂಚ.

ವಿದೇಶಗಳಿಗೆ ಈ ಗ್ರಾಮಸ್ಥರ ವಲಸೆ ಇಂದು ನೆನ್ನೆಯದಲ್ಲ, ದಶಕಗಳಷ್ಟು ಹಳೆಯದು. ಅರವತ್ತರ ದಶಕದಲ್ಲಿ ಮೊದಲಾದದ್ದು. ವಿದ್ಯಾರ್ಥಿ ವೀಸಾದಲ್ಲಿ ತೆರಳಿ ಅಲ್ಲಿಯೇ ನೆಲೆಸಿದವರು ಸೂಜಿಗಲ್ಲುಗಳಾಗಿ ಸೆಳೆದರು ಇತರರನ್ನು. ಅಮೆರಿಕೆಯಲ್ಲಿ ಮೋಟೆಲ್, ಗ್ಯಾಸ್ ಸ್ಟೇಷನ್ ಇಟ್ಟು ಹಣ ಗಳಿಸುವ ಆಸೆ, ಕುರುಡು ಪೈಪೋಟಿ.

ಕೆನಡಾ – ಅಮೆರಿಕ ಗಡಿ ದಾಟಲೆಳಸಿದ ದೇಹಗಳೇನೋ ಮಂಜುಗಲ್ಲಾದವು.... ಆದರೆ ಎನ್‌ಆರ್‌ಐ ಗ್ರಾಮಗಳ ಮನಸುಗಳೂ ಕಾಯಮ್ಮಾಗಿ ಮಂಜುಗಲ್ಲೇ ಆಗಿವೆಯಲ್ಲ! ಅವುಗಳಿಗೆ ಮಾನವೀಯತೆಯ ಸಹಬಾಳುವೆಯ ಸೂರ್ಯರಶ್ಮಿ ಸೋಕುವುದೆಂದು... ಮಾನವ ಪ್ರೀತಿ ಕರಗಿ ಹರಿದು ಅವುಗಳು ಜೀವಂತಗೊಳ್ಳುವುದೆಂದು?

ಆದರೆ ಗ್ರಾಮಸ್ಥರು ಡಿಂಗೂಚ ತೊರೆದು ವಿದೇಶಗಳಿಗೆ ಹೋಗುವುದಾದರೂ ಯಾಕೆ ಎಂಬ ಪ್ರಶ್ನೆಗೆ ಅವರೇ ಉತ್ತರ ಹೇಳುತ್ತಾರೆ - ಓದು ಕಲಿತವರಿಗೆ ಅವರ ಅರ್ಹತೆಗೆ ತಕ್ಕಂತಹ ನೌಕರಿಗಳು ಇಲ್ಲಿ ಇಲ್ಲ, ನಿರುದ್ಯೋಗದ ಕಾರಣ ಜನ ವಿದೇಶಗಳತ್ತ ನೋಡದೆ ವಿಧಿಯಿಲ್ಲ ಎನ್ನುತ್ತಾರೆ ಆ ಗ್ರಾಮದ ಅಮೃತ್ ಪಟೇಲ್.

‘ಇಲ್ಲಿ ನೌಕರಿಗಳಿದ್ದಿದ್ದರೆ ನನ್ನ ಮಕ್ಕಳು ಹೊರದೇಶಗಳಿಗೆ ಹೋಗುತ್ತಲೇ ಇರಲಿಲ್ಲ. ಮಕ್ಕಳು ವಿದ್ಯಾವಂತರಾದ ನಂತರವೂ ಕೃಷಿಯನ್ನೇ ಆಧರಿಸಲು ಇಷ್ಟಪಡುವುದಿಲ್ಲ. ಅಮೆರಿಕ, ಕೆನಡಾ, ದಕ್ಷಿಣ ಆಫ್ರಿಕಾ ಎಲ್ಲಿಗೆ ಹೋದರೂ ಅಲ್ಲಿ ಪಟೇಲರ (ಪಾಟೀದಾರ್ ಎಂದೂ ಕರೆಯಲಾಗುವ ಗುಜರಾತಿನ ಬಲಿಷ್ಠ ಜಾತಿ) ಸಮುದಾಯದ ನೆರವಿನ ಜಾಲ ಹಬ್ಬಿ ಹರಡಿದೆ. ಮೋಟೆಲ್ ಉದ್ಯಮ, ಡಂಕಿನ್ ಡೋನಟ್, ಸಬ್‌ವೇ ಸ್ಯಾಂಡ್‌ವಿಚ್, ಗ್ಯಾಸ್ ಸ್ಟೇಷನ್ ಇತ್ಯಾದಿ ವ್ಯಾಪಾರ ವ್ಯವಹಾರಗಳಲ್ಲಿ ನೆಲೆ ನಿಂತಿರುವ ಪಾಟೀದಾರರು ಗುಜರಾತಿನಿಂದ ಬರುವ ತಮ್ಮ ಬಂಧುಗಳನ್ನು ಬೆಂಬಲಿಸಿ ಬೆಳೆಸುತ್ತಾರೆ. ಅಕ್ರಮವಾಗಿ ಆ ದೇಶವನ್ನು ಪ್ರವೇಶಿಸಿದವರಿಗೂ ತಲಾ ಹತ್ತು ಸಾವಿರ ಡಾಲರುಗಳ ಧನಸಹಾಯ ನೀಡಿ ಕೈಹಿಡಿದು ಮೇಲೆತ್ತುತ್ತಾರೆ. 10-15 ಸಾವಿರ ಡಾಲರುಗಳು ಅವರಿಗೆ ದೊಡ್ಡ ಲೆಕ್ಕವೇ ಅಲ್ಲ’ ಎನ್ನುತ್ತಾರೆ ಅಮೃತ್ ಭಾಯಿ. ಆರು ತಿಂಗಳು ಭಾರತದಲ್ಲಿ, ಆರು ತಿಂಗಳು ಅಮೆರಿಕೆಯಲ್ಲಿ ಇವರ ವಾಸ. ಮಕ್ಕಳೆಲ್ಲ ಅಮೆರಿಕೆಯ ಅಧಿಕೃತ ನಾಗರಿಕರು.

ಅಮೆರಿಕನ್ ಡಾಲರ್ ಮತ್ತು ಗ್ರೀನ್ ಕಾರ್ಡಿನದು ಸೂಜಿಗಲ್ಲಿನ ಸೆಳೆತ. ಸಕ್ರಮ ವಲಸೆ ಸುಲಭವಲ್ಲ. ಹೀಗಾಗಿ ಅಪಾಯ ಮೈಮೇಲೆರಗಿದರೂ ಸರಿಯೇ, ಅಕ್ರಮ ವಲಸೆಗೆ ಸಿದ್ಧ ಗುಜರಾತಿಗಳು.

ಮಾನವ ಕಳ್ಳಸಾಗಣೆಗೆ ನೆರವಾಗುವ ಕಸಬುದಾರ ದಲ್ಲಾಳಿಗಳ ದೊಡ್ಡ ಜಾಲವೇ ಗುಜರಾತಿನಲ್ಲಿದೆ. ಭಾರೀ ಮೊತ್ತ ಪಡೆದು ಕಳ್ಳದಾರಿಯಲ್ಲಿ ದೇಶ-ವಿದೇಶಗಳ ಗಡಿ ದಾಟಿಸುವ ಅಂತರರಾಷ್ಟ್ರೀಯ ಏಜೆಂಟರೊಂದಿಗೆ ಇವರ ಸಂಪರ್ಕ ಉಂಟು. ಡಿಂಗೂಚದ ಇಂತಹ ಒಬ್ಬ ದಲ್ಲಾಳಿ ಇಲ್ಲಿಯವರೆಗೆ 8-10 ಕುಟುಂಬಗಳನ್ನು ಯಶಸ್ವಿಯಾಗಿ ಅಮೆರಿಕೆಯನ್ನು ಮುಟ್ಟಿಸಿಬಿಟ್ಟಿದ್ದಾನೆ.

ಇದೇ ದಲ್ಲಾಳಿ ಇತ್ತೀಚೆಗೆ ರವಾನಿಸಿದ ಇಂತಹ ಕುಟುಂಬವೊಂದು ನಾಪತ್ತೆಯಾಗಿತ್ತು. ಅದಕ್ಕಾಗಿ ಶೋಧ ಕಾರ್ಯಗಳು ವ್ಯಾಪಕವಾಗಿ ನಡೆದಿದ್ದವು. ಗುಜರಾತಿನ ಅಪರಾಧ ತನಿಖಾ ಇಲಾಖೆಯಲ್ಲದೆ ಅಮೆರಿಕ ಮತ್ತು ಕೆನಡಾದ ಭದ್ರತಾ ಏಜೆನ್ಸಿಗಳು ಈ ದುರಂತದ ಸುತ್ತಣ ಮಾನವ ಕಳ್ಳಸಾಗಣೆ ಕುರಿತು ತನಿಖೆ ನಡೆಸುತ್ತಿವೆ.

ಆನಂದ್, ಅಮ್ರೇಲಿ, ಮೆಹಸಾಣ, ಖೇಡಾ, ಗಾಂಧೀನಗರ ಜಿಲ್ಲೆಗಳ ಪಟೇಲ್ ಪ್ರಾಬಲ್ಯದ ಹಳ್ಳಿಗಳ ಮಧ್ಯಮ ತರಗತಿಯ ಕುಟುಂಬಗಳಿಗೆ ಅಮೆರಿಕ ವಲಸೆ ಮಾಮೂಲು ವಿಚಾರ. ಇವರ ಪೈಕಿ ಕಳ್ಳದಾರಿ ಹಿಡಿಯುವವರ ಸಂಖ್ಯೆ ಸಣ್ಣದೇನಲ್ಲ. ಅಮೆರಿಕದಲ್ಲಿ ನೆಲೆಸುವುದು ಪಟೇಲರಲ್ಲಿ ಪ್ರತಿಷ್ಠೆಯ ಪ್ರತೀಕ.

ಜನವರಿ ಮೊದಲ ವಾರ ಅಮೆರಿಕದ ವೀಸಾ ಕಾಗದಪತ್ರಗಳ ವಿನಾ ಕೆನಡಾಗೆ ತೆರಳಿತ್ತು ಈ ಕುಟುಂಬ. ಅಮೆರಿಕ ಪ್ರವೇಶದ ದುಸ್ಸಾಹಸ ಜಗದೀಶನ ತಂದೆತಾಯಿಗಷ್ಟೇ ತಿಳಿದಿತ್ತು. ಕ್ಷೇಮವಾಗಿ ಕೆನಡಾ ತಲುಪಿದ್ದೇವೆಂದು ಜನವರಿ ಹದಿನೈದರಂದು ಬಂದ ಸಂದೇಶವೇ ಮಗನ ಕಟ್ಟಕಡೆಯ ಮಾತಾಗಿ ಪರಿಣಮಿಸಿತು.

11ನೇ ಪುಟಕ್ಕೆ...

ಬಹುಶಿಸ್ತೀಯ ಕಲಿಕಾ ಕೇಂದ್ರದ ರೂವಾರಿ ಪೂರ್ಣಿಮಾರ ಯಶೋಗಾಥೆ

ಮಹಿಳಾ ನವೋದ್ಯಮಿಯ ಸಾಹಸ

ಜಗತ್ತು ವಿಪತ್ತಿಗೆ ಒಳಗಾದಾಗ ಜನಜೀವನವೂ ಅಸ್ತವ್ಯಸ್ತಗೊಳ್ಳುತ್ತದೆ. ನೆಮ್ಮದಿಯ ಮೂಲ ನೆಲೆಗಳು ಕಿತ್ತು ಹೋಗಿ ಬದುಕು ಬತ್ತಿ ಬಸವಳಿದು ಬಿಡುತ್ತದೆ. ಬದುಕು ಒಡ್ಡುವ ಸವಾಲುಗಳಿಗೆ ಕೋಟ್ಯಂತರ ಜನರು ಹಲವಾರು ವಿಧದಲ್ಲಿ ಸ್ಪಂದಿಸುತ್ತಾರೆ. ಕೊರೋನಾ ಕಾಲವು ತಂದಿಟ್ಟ ವಿಷಮ ಪರಿಸ್ಥಿತಿಯಲ್ಲಿ ಬಹುತೇಕರು ಸಮಸ್ಯೆಗಳನ್ನು ಎದುರಿಸದೆ ಮೌನಕ್ಕೆ ಶರಣಾಗುತ್ತಾರೆ. ಆದರೆ ಕೆಲವರು ಮಾತ್ರ ಆತಂಕಗಳನ್ನೇ ಅವಕಾಶಗಳನ್ನಾಗಿ ಪರಿವರ್ತಿಸುತ್ತಾರೆ. ಅದಮ್ಯ ಇಚ್ಛಾಶಕ್ತಿಯಿಂದ ಕನಸುಗಳನ್ನು ಮರು ಕಟ್ಟಲು ಮುಂದಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸಿಕೊಳ್ಳುತ್ತಾರೆ. ಈಗ ತಾವು ಓದುತ್ತಿರುವ ಯಶೋಗಾಥೆ ಒಬ್ಬ ಮಹಿಳೆಯದ್ದು. ಅವರೇ ಪೂರ್ಣಿಮಾ ವಿಶ್ವನಾಥ್.

ಅವರು ಕೇವಲ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಧಾವಂತದಲ್ಲಿಲ್ಲ. ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ನವೋದ್ಯಮ ಸ್ಥಾಪಿಸಬೇಕು ಎನ್ನುವವರಿಗೆ ಮಾರ್ಗದರ್ಶನ ನೀಡಬೇಕೆಂದು ತಮ್ಮ ಹತ್ತಾರು ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಬಹುಶಿಸ್ತೀಯ ಕಲಿಕಾ ಕೇಂದ್ರವನ್ನು ಸ್ಥಾಪಿಸಿ, ನಿರ್ವಹಿಸುತ್ತಿದ್ದಾರೆ.

ತಮ್ಮ ಸಂಸ್ಥೆಯನ್ನು ಅವರು ಒಂದು ಟ್ರೈನಿಂಗ್ ಮ್ಯೂಸಿಯಂ ಎಂದೇ ಹೆಮ್ಮೆಯಿಂದ ಕರೆಯುತ್ತಾರೆ. ಅದಕ್ಕೆ ಅವರಿಟ್ಟ ಹೆಸರು ಕ್ಷೇಮ ಅಧ್ಯಯನ ಕೇಂದ್ರ.

ಕ್ಷೇಮ ಅಧ್ಯಯನ ಕೇಂದ್ರ

ಒಂದು ಸಂಸ್ಥೆಯ ನಿರ್ಮಾಣ ಮತ್ತು ನಿರ್ವಹಣೆಯ ಎಲ್ಲ ಒಳ ಸುಳಿವುಗಳು, ಕೌಶಲಗಳು ಅವರಲ್ಲಿ ನಿತ್ಯ ಚಟುವಟಿಕೆಯ ಭಾಗವಾಗಿ ಸಹಜವೆನ್ನುವಂತೆ ಪ್ರಕಟಗೊಳ್ಳುತ್ತವೆ. ಕ್ಷೇಮ ಅಧ್ಯಯನ ಕೇಂದ್ರದ ಕಾರ್ಯ ಚಟುವಟಿಕೆಗಳ ಕುರಿತು ಅವರು ನೀಡುವ ಮಾಹಿತಿ ನಮ್ಮ ಹೃನ್ಮನಗಳನ್ನು ಅರಳಿಸುವಂತಹುದು.

ಮಹಿಳಾ ಅಭಿವೃದ್ಧಿ ಕೇಂದ್ರಿತ ಯೋಜನೆಗಳು ಪೂರ್ಣಿಮಾ ಅವರ ಚಿಂತನೆಯಲ್ಲಿ ಅತ್ಯಂತ ಸ್ಪಷ್ಟವಾಗಿ ರೂಪುಗೊಂಡಿವೆ. ಮೊದಲನೆಯದಾಗಿ 50ವರ್ಷ ಮೇಲಿನ ವಯೋಮಾನದ ಮಹಿಳೆಯರು ಈ ಅಧ್ಯಯನ ಕೇಂದ್ರದಲ್ಲಿ ಆಶ್ರಯ ಪಡೆದುಕೊಳ್ಳಬಹುದು. ಕುಟುಂಬಸ್ಥರು ಇಲ್ಲದವರಿಗೆ ಈ ಕೇಂದ್ರ ಪ್ರಶಸ್ತ ವಾತಾವರಣ ಕಲ್ಪಿಸುತ್ತದೆ ಎಂದು ಅವರು ಹೇಳುತ್ತಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿನಿಯರಿಗಾಗಿ ಸಹಾಯವಾಣಿ ಆರಂಭಿಸಿದ್ದು ಆಯ್ದ ವಿದ್ಯಾರ್ಥಿನಿಯರಿಗೆ ತರಬೇತಿ ನೀಡಲಾಗುತ್ತಿದೆ.

ಅನೇಕ ಕುಟುಂಬಗಳು ಇಂದು ಹಲವಾರು ಕಾರಣಗಳಿಂದ ನೆಮ್ಮದಿಯನ್ನು ಕಳೆದುಕೊಂಡಿವೆ. ಮುಖ್ಯವಾಗಿ ಮಹಿಳೆಯರಿಗೆ ಅಭದ್ರತೆ ಕಾಡುತ್ತದೆ. ಆದ್ದರಿಂದ ಆಪ್ತಸಮಾಲೋಚನೆಯ ಮೂಲಕ ಭರವಸೆಯ ಬದುಕು ಕಟ್ಟಿಕೊಳ್ಳಲು ಮಹಿಳೆಯರು, ವಿದ್ಯಾರ್ಥಿನಿಯರು ಮುಂದೆ ಬಂದು ಇದರ ಪ್ರಯೋಜನ ಪಡೆದುಕೊಳ್ಳಲಿ ಎಂಬುದು ಅವರ ಆಶಯ.

ಪುರುಷರಿಗೂ, ಮಹಿಳೆಯರಿಗೂ ಸಮಾನವಾಗಿ ಲಭ್ಯವಾಗುವಂತೆ ಜೀವನ ಕೌಶಲ್ಯಗಳ ಕುರಿತು ಒಂದು ದಿನದ ಅಥವಾ ಮೂರು ದಿನಗಳ ವಸತಿಯುತ ಕಾರ್ಯಾಗಾರ ನಡೆಸುತ್ತಾರೆ. 18 ವರ್ಷ ಮೇಲ್ಪಟ್ಟ ಎಲ್ಲ ವಯೋಮಾನದವರು ಭಾಗವಹಿಸಬಹುದು. ಸಮಗ್ರ ಚಿಂತನ ಗೋಷ್ಠಿ, ಸಂವಹನ ಹಾಗೂ ನಿರಂತರ ಕಲಿಕೆ ಈ ಕಾರ್ಯಕ್ರಮದ ಜೀವಾಳ. ಯಶಸ್ಸು ಬೇಕು ಎನ್ನುವವರು, ಈಗಾಗಲೇ ಯಶಸ್ಸಿನ ಮಾರ್ಗದಲ್ಲಿ ಇರುವವರು, ಹೊಸದನ್ನು ಸೃಷ್ಟಿಸಬೇಕೆನ್ನುವ ಆರಂಭಿಕರಿಗೆ ಈ ಕಾರ್ಯಾಗಾರ ಉಪಯುಕ್ತ ಎಂದು ಅವರು ಹೇಳುತ್ತಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕೊರೋನಾ ಕಾರಣದಿಂದ ಮಕ್ಕಳ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವುದು ದೊಡ್ಡ ಸವಾಲು. ಮಕ್ಕಳಿಗಾಗಿ ತರಬೇತಿ ಶಿಬಿರಗಳನ್ನು ನಡೆಸುವ ಕ್ಷೇಮ ಅಧ್ಯಯನ ಕೇಂದ್ರವು ಇಡೀ ರಾಜ್ಯದಿಂದ ಆಯ್ದ ಮಕ್ಕಳನ್ನು ಗುರುತಿಸಿ ಅವರಿಗೆ ತರಬೇತಿ ನೀಡುತ್ತದೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಹದವಾಗಿ ಮಿಳಿತಗೊಂಡಿದ್ದು, ಆರೋಗ್ಯಕರ ಪರಿಸರದಲ್ಲಿ ವಿದ್ಯಾರ್ಥಿಗಳು ಕಲಿಯುತ್ತಾರೆ ಎಂದು ಪೂರ್ಣಿಮಾ ಹೇಳುತ್ತಾರೆ.

6ನೇ ವರ್ಗದಿಂದ 10ನೇ ವರ್ಗದ ವಿದ್ಯಾರ್ಥಿಗಳಿಗೆ ವೈವಿಧ್ಯಮಯವಾದ ತರಬೇತಿಗಳನ್ನು ಯೋಜಿಸಲಾಗಿದೆ. ಪ್ರತಿ ತರಬೇತಿಗೆ ಸೀಮಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಅವರು ಸಮಗ್ರ ಪ್ರಗತಿ ಹೊಂದುವಂತೆ ತರಬೇತಿ ನೀಡಲಾಗುವುದು. ಮಕ್ಕಳನ್ನು ಬದುಕಿನ ಪ್ರಕ್ರಿಯೆಗೆ ತರಬೇತುಗೊಳಿಸುವುದು ಒಂದು ಕೌಶಲ್ಯ ಎಂದು ಅವರು ಪ್ರತಿಪಾದಿಸುತ್ತಾರೆ.

ಪಾಲಕರು ತಮ್ಮ ಆಲೋಚನೆಗಳನ್ನು ಮರುಸ್ಥಾಪಿಸಿಕೊಳ್ಳುವುದು ಇಂದಿನ ಕಾಲಘಟ್ಟದ ಬೇಡಿಕೆ. ಹೊಸ ಹೊಸ ಕೋರ್ಸುಗಳು, ಮುಂದಿನ ಎಂಟತ್ತು ವರ್ಷಗಳಲ್ಲಿ ಡಿಜಿಟಲ್ ಯುಗದ ಅಗಾಧ ಪರಿಣಾಮ, ಮೊಬೈಲ್ ಮತ್ತು ಇತರ ಗ್ಯಾಜೆಟ್‌ಗಳ ಸದ್ಬಳಕೆ ಕುರಿತು ಸಕಾರಾತ್ಮಕ ಚಿಂತನೆಗಳು ನಮ್ಮ ಸಮಾಜದಲ್ಲಿ ಇನ್ನೂ ಬೇರೂರಬೇಕಿದೆ. ಆದ್ದರಿಂದ ಪಾಲಕರಿಗೂ ಈ ಕುರಿತು ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತದೆ.

ಕ್ಷೇಮ ಅಧ್ಯಯನ ಕೇಂದ್ರದಲ್ಲಿ ಸಾಹಿತ್ಯ ಆಸಕ್ತರಿಗೂ ಒಂದು ವೇದಿಕೆ ಒದಗಿಸಲಾಗಿದೆ. ಕನ್ನಡ ಕಾವ್ಯ ರಚನಾ ಕಮ್ಮಟಗಳಿಗಾಗಿ ಈ ವೇದಿಕೆಯನ್ನು ಸಮರ್ಪಿಸಲಾಗಿದೆ. ಅಲ್ಲದೆ, ಸಂಘ-ಸಂಸ್ಥೆಗಳು, ನಿಗಮಗಳು, ಖಾಸಗಿ ತರಬೇತುದಾರರು, ಸಣ್ಣ ಉದ್ದಿಮೆದಾರರು ಶಾಲೆ-ಕಾಲೇಜುಗಳು ತಮ್ಮ ಸಿಬ್ಬಂದಿಗೆ ತರಬೇತಿಯನ್ನು ತಾವೇ ನೀಡಿಕೊಳ್ಳಲು ಅಥವಾ ಆ ಸೇವೆಯನ್ನು ನಮ್ಮಿಂದಲೇ ಪಡೆಯಲು ನಮ್ಮ ಅಧ್ಯಯನ ಕೇಂದ್ರದ ವೇದಿಕೆಗಳು ಸಹಕಾರ ನೀಡುತ್ತವೆ ಎಂದು ಕ್ಷೇಮ ಅಧ್ಯಯನ ಕೇಂದ್ರದ ಸಂಸ್ಥಾಪಕ ಅಧ್ಯಕ್ಷೆ ಪೂರ್ಣಿಮಾ ವಿಶ್ವನಾಥ್ ಹೇಳುವಾಗ ಅವರದ್ದು ವಿಶಿಷ್ಟ ಸೇವೆಗಳ ವಿಚಾರಪೂರ್ಣ ಯೋಜನೆಗಳು ಎಂದು ಅನ್ನಿಸದೆ ಇರದು.

ಮಲೆನಾಡಿನ ಪರಿಸರದಲ್ಲಿ, ಶುದ್ಧಗಾಳಿ, ಆಹಾರ ಸೇವನೆಗಳೊಂದಿಗೆ ಕಲಿಕೆಯು ಆಹ್ಲಾದಕರ ಅನುಭವ. ಮೈಮನಗಳಿಗೆ ಚೈತನ್ಯ ನೀಡುವ ಇಂತಹ ಬಹುಶಿಸ್ತೀಯ ಕಲಿಕಾ ಕೇಂದ್ರಗಳು ವಿರಳಾತಿವಿರಳ. ಎಲ್ಲಾ ವಿವರಗಳನ್ನು ನಗುನಗುತ್ತಾ ನೀಡುವ ಪೂರ್ಣಿಮಾ ಅವರ ಮಾತಿನ ಶೈಲಿ ಅವರು ಕೊಟ್ಟ ಕಾಫಿಯ ಘಮದೊಂದಿಗೆ ಬೆರೆತು ಅವರ್ಣನೀಯ ಅನುಭವ ನೀಡಿತು. ಅವರ ಮಾತುಗಳನ್ನು ಮೆಲುಕು ಹಾಕುತ್ತ ಅವರಿಗೆ ಶುಭ ಹಾರೈಸಿ ಆ ಸುಂದರ ಪರಿಸರದಿಂದ ಮನಸ್ಸಿಲ್ಲದೆ ಹೊರಗೆ ಬಂದೆವು. ನೀವೂ ಒಮ್ಮೆ ಭೇಟಿ ಕೊಡಿ.

ಪೂರ್ಣಿಮಾ ಅವರನ್ನು ಸಂಪರ್ಕಿಸಲು **9945072895** ಬಳಸಿ.

ಡಾ. ಜ್ಯೋತಿ ನಿಂಬರಗಿ
ಎಚ್.ಆರ್. ಶ್ರೀಲತಾ

ಹೆಚ್ಚಿನ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

www.kak.org.in

ಬಣ್ಣದಲೋಕಕ್ಕೆ 'ಚಿಟ್ಟೆ'ಯಾಗಿ ಜೀವತುಂಬಿದ ಗೋಕುಲ

ಬಣ್ಣದ ಚಿಟ್ಟೆಯ ಚೆಲ್ಲಾಟ

ನಾವೆಂಕಿ ಕೋಲಾರ

ಕೋಲಾರದ ಆದಿಮ ಕುಟೀರದಲ್ಲಿ ಚಿಟ್ಟೆಯ ಚೆಲ್ಲಾಟವನ್ನು ಅಲ್ಲಿನ ಮರಗಿಡ, ಕಲ್ಲು ಬಂಡೆಗಳೂ ಕಣ್ತುಂಬಿಕೊಂಡು ಆನಂದಿಸಿರಬಹುದು. ಕಳೆದೆರಡು ವರ್ಷಗಳಿಂದ ಕೊರೊನಾ ಹೆಸರಿನಲ್ಲಿ ಇಲ್ಲಿ ಬಣ್ಣದ ಚಿಟ್ಟೆಗಳ ಚೆಲ್ಲಾಟ ನಿಂತು ಹೋಗಿ, ಆದಿಮ ಮಕ್ಕಳ ರಂಗಗುಡಿ ಮೂಕವಾಗಿತ್ತು. ಆದಿಮ ಹುಟ್ಟಿಕೊಂಡಿದ್ದೇ ಮಕ್ಕಳಲ್ಲಿ ದೇಸಿ ನೆಲಮೂಲ ಸಂಸ್ಕೃತಿಯ ಬೇರುಗಳ ಪರಿಚಯಿಸಿ ವಿವಿಧ ಸಾಂಸ್ಕೃತಿಕ ನೋಟಗಳನ್ನು ಬಿತ್ತಲು. ಆ ಕೆಲಸವನ್ನು ಚಾಚೂ ತಪ್ಪದೆ 2006ರಿಂದ ಪ್ರತಿವರ್ಷವೂ ಎಷ್ಟೇ ಕಷ್ಟವಾದರೂ ನಿಭಾಯಿಸುತ್ತಾ ಬಂದಿದೆ. ಮಕ್ಕಳ ಮನಸ್ಸಿನ ಅರಿವಿನ ಹಣತೆಯಾಗಿ ಬೆಳಕು ನೀಡುತ್ತಿದೆ. ಅದೇ ಮಕ್ಕಳ ಬೇಸಿಗೆ ಶಿಬಿರ 'ಚುಕ್ಕಿಮೇಳ'.

ಕವಿ ಕೋಟಗಾನಹಳ್ಳಿ ರಾಮಯ್ಯನವರ ಪರಿಕಲ್ಪನೆಯಲ್ಲಿ ನಾಡಿನ, ನಾಡಿನಾಚೆಯ ಪ್ರತಿಭಾವಂತ ರಂಗಕರ್ಮಿಗಳು, ನೂರಾರು ಸ್ಥಳೀಯ ಕಾರ್ಯಕರ್ತರು, ಹತ್ತಾರು ವರ್ಷಗಳ ಕಾಲ ಐವತ್ತಕ್ಕೂ ಹೆಚ್ಚು ಮಕ್ಕಳ ನಾಟಕಗಳು ಆದಿಮ ರಂಗಗುಡಿಯಲ್ಲಿ ಪ್ರಯೋಗವಾಗಲು ಜೊತೆಯಾಗಿದ್ದಾರೆ. ಮಕ್ಕಳ ರಂಗಭೂಮಿಯತ್ತ ಆದಿಮಕ್ಕೆ ವಿಶೇಷ ಕಾಳಜಿ ಇದೆ ಎನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ.

ಚುಕ್ಕಿಮೇಳಕ್ಕೆ ಆದಿಮ ರಂಗು ರಂಗು ವೈಭವವಾಗಿ ಸಿಂಗಾರಗೊಳ್ಳುತ್ತದೆ. ಮಕ್ಕಳು, ಪೋಷಕರು 'ಪಿಲಪಿಲಾ' ಅಂತ ಓಡಾಡುತ್ತಾ, ಕುಂತು, ನಿಂತು ಮಾತಾಡೊ ದೃಶ್ಯಗಳು ಬಲುಸೊಗಸು. ಪೋಷಕರು ಬರೀ ಬಂಧುಗಳಂತೆ ಆದಿಮಕ್ಕೆ ಬಂದು ಹೋಗದೇ ನಿರಂತರ ಗುಂಪು ಗುಂಪುಗಳಾಗಿ ತೆಕ್ಕೆ ಕಟ್ಟಿಕೊಂಡು ಬರುವಾಗ ಬರಿ ಕೈನಾಗ ಬರರು. ಅವರವರ ಶಕ್ತ್ಯಾನುಸಾರ ಬುತ್ತಿ ಕಟ್ಟಿಕೊಂಡು ತಂದ ಹಣ್ಣು-ಹಂಪಲು, ತಿಂಡಿ-ತಿನಿಸುಗಳನ್ನು ಅಲ್ಲಿನ ಮಕ್ಕಳಿಗೆಲ್ಲಾ ಹಂಚಿ ಆದಿಮ ಅಂಗಳದಲ್ಲಿ ಕೂತು, ಅಲ್ಲಿನ ನಿರ್ಮಲ ನಿಷ್ಕಪಟ ಗಾಳಿಯ ಉಸಿರಾಡಿ 'ಮತ್ತೊಮ್ಮೆ ಎಂದು, ಹೇಗೆ ಬರೋಣ' ಎಂದೇ ಆಲೋಚಿಸುತ್ತಾ ಇರುತ್ತಾರೆ.

ಹಸಿರಿನಂಗಳದಲ್ಲಿ ಕೋಲಾರದ ಆದಿಮ ಕುಟೀರ

ನಗರ, ಪಟ್ಟಣ ಪರಿಸರದಲ್ಲಿ ಬೆಳೆದ ಕಾನ್ವೆಂಟ್ ಶಾಲೆ ಮಕ್ಕಳು, ಹಳ್ಳಿಗಾಡಿನ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆ ಮಕ್ಕಳು ಇಲ್ಲಿಗೆ ಬರುತ್ತಾರೆ. ಹಸಿವಿನ ಪರಿಚಯವಿಲ್ಲದ ಮಕ್ಕಳು, ಹಸಿವಿನಿಂದ ಪರಿತಪಿಸಿ ಬದುಕುತ್ತಿರುವ ಮಕ್ಕಳು ಒಂದು ಕಡೆ ಸೇರುತ್ತಾರೆ. ಆದಿಮ ಎನುವ ಜೇನುಗೂಡಿನಲ್ಲಿ ನೂರಾರು ಮಕ್ಕಳು ಜೇನಿಬ್ಬೆಗಳಂತೆ ಅಲ್ಲಿನ ಪರಿಸರದ ಜೊತೆ ಜೋಲಿ ಜೋತಾಡಿ ಬೆರೆತು ಹೋಗುತ್ತಾರೆ. ಸುಮಾರು ಹದಿನೈದರಿಂದ ಇಪ್ಪತ್ತು ದಿನಗಳ ಕಾಲ ಬೆಟ್ಟದ ಪರಿಸರದಲ್ಲಿ ಅವರದೇ ಲೋಕವನ್ನು ಕಟ್ಟಿಕೊಂಡು ರೆಕ್ಕೆಪುಕ್ಕ ಬಂದ ಹಕ್ಕಿಗಳಂತೆ, ಜಿಡ್ಡುಗಟ್ಟಿದ ಸಮಾಜದಲ್ಲಿ ಮೊಟ್ಟೆಗಳಾಗಿದ್ದವೆಲ್ಲಾ ಚಿಟ್ಟೆಗಳಾಗಿ ಹೊರಬಂದು ಬಣ್ಣದ ಚಿಟ್ಟೆಗಳಂತೆ ಕಲ್ಲುಬಂಡೆ, ಮರಗಿಡಗಳೊಂದಿಗೆ ಒಂದಾಗಿ ಓಡಾಡಿ, ಕೂಡಾಡಿ, ಮಾತಾಡಿ ಹಾರಾಡುತ್ತಾರೆ.

ಮಕ್ಕಳಲ್ಲಿ ಸಾಕಷ್ಟು ಬದಲಾವಣೆಯ ಚಹರೆಗಳು ಕಾಣಿಸುತ್ತವೆ. ಅವರ ಚಲನವಲನಗಳಲ್ಲಿ, ಕಲಿಕೆಯಲ್ಲಿ, ಚಟುವಟಿಕೆಗಳಲ್ಲಿ ಹೊಸ ಹುರುಪು, ಉತ್ಸಾಹ, ಉಲ್ಲಾಸ ಹೇಳತೀರದು. ಮಕ್ಕಳಲ್ಲಿ ವಿಶ್ವಮಾನವತೆಯನ್ನು ಕಾಣಲು ಇಂತಹ ಮೇಳಗಳು ಎಷ್ಟು ಮುಖ್ಯ ಅನ್ನುವುದು ತಿಳಿಯುತ್ತದೆ. ಅಷ್ಟೇ ಅಲ್ಲದೆ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿ ಅಲ್ಲಿ ನಡೆಯುವ ಸೃಜನಾತ್ಮಕ ಪ್ರಯೋಗಗಳು ಸಹಕಾರಿಯಾಗಿವೆ. ಸಮ ಸಮಾಜದ ಸಾಮಾಜಿಕ ವ್ಯವಸ್ಥೆಗೆ ಮುನ್ನುಡಿಯಾಗಿ ಹಂಚಿ ತಿನ್ನುವ, ಕೂಡಿ ಬದುಕುವ ಅರಿವು ತಾನಾಗಿ ಮಕ್ಕಳಲ್ಲಿ ಮೂಡುತ್ತದೆ.

ರಂಗಭೂಮಿ

ಕೊರೊನಾ ದುರಿತಕಾಲವೆಂದು ಎಲ್ಲವೂ ಸ್ತಬ್ಧವಾಗಿ ಎರಡು ವರ್ಷಗಳಿಂದ ಮಕ್ಕಳ ಚುಕ್ಕಿಮೇಳ ನಿರ್ವಹಿಸಲು ಸಾಧ್ಯವಾಗಲಿಲ್ಲ. ಹಾಗೆಯೇ ರಂಗಭೂಮಿಯ ಚಟುವಟಿಕೆಗಳೂ ನಿಂತು ಹೋಗಿದ್ದವು. ಇತ್ತೀಚೆಗಷ್ಟೇ ಸುಮಾರು ಒಂದು ಗಂಟೆಯ ಕಾಲ ಪ್ರೇಕ್ಷಕರ ಮನಸು ಕದ್ದ ಏಕವ್ಯಕ್ತಿ ನಾಟಕ 'ಚಿಟ್ಟೆ'.

ಆದಿಮ ಕುಟೀರದಲ್ಲಿ ಮಕ್ಕಳ ಕಲರವ, ಮಕ್ಕಳ ದನಿ, ಕುಣಿತ ಮರೆತಿವಿ ಎನ್ನುವಾಗಲೇ ಮೆಲುಕು ಹಾಕಿಸಿದ ಸಿಲಿಕಾನ್ ಸಿಟಿ ಬೆಂಗಳೂರಿನ ವಾತಾವರಣದಲ್ಲಿ ಬೆಳೆಯುತ್ತಿರುವ, ಆರನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕಂದ ಸಹೃದಯ ಗೋಕುಲನಿಂದ 'ಚಿಟ್ಟೆ' ಎಂಬ ಏಕವ್ಯಕ್ತಿ ನಾಟಕದ ಮೂಲಕ ಆಯಿತು.

ಚಿಟ್ಟೆ ನಾಟಕವು ಬೇಲೂರು ರಘನಂದನ್ ಅವರಿಂದ ರಚನೆ ಆಗಿದ್ದರೆ, ಅದರ ವಿನ್ಯಾಸ, ಸಂಗೀತ, ನಿರ್ದೇಶನ ಕೃಷ್ಣಮೂರ್ತಿ ಕವತ್ತಾರ್ ಅವರದಾಗಿದೆ. ಹತ್ತಾರು ಮಕ್ಕಳು ಕೂಡಿ ಮಾಡಬಹುದಾದ ವಸ್ತು ನಾಟಕದಲ್ಲಿದೆ. ಅದರಲ್ಲಿನ ಸಂಗತಿಗಳು ಸಾಮುದಾಯಿಕ, ಜಾಗತಿಕ ಮತ್ತು ಪರಿಸರದಲ್ಲಿನ ಅಸಮತೋಲನ ಕುರಿತಂತೆ ಮಾತನಾಡುತ್ತವೆ. ಆದರೆ, ಮಕ್ಕಳ ನಾಟಕದಲ್ಲಿ ಏಕಪಾತ್ರ ತಂದಿರುವ ಉದ್ದೇಶವೇ ಒಂದು ಹೊಸ ಪ್ರಯತ್ನ, ಪ್ರಯೋಗ ಅನ್ನಿಸುತ್ತದೆ ಹಾಗೂ ಅಪರೂಪವೂ ಹೌದು. ಮಕ್ಕಳ ನಾಟಕ ಅಂದಾಗ ನಾಟಕದ ವಸ್ತು, ಸಂಭಾಷಣೆ, ಹಾಡುಗಳು ರಂಜನಾತ್ಮಕವಾಗಿ ಸರಳವಾಗಿರಬೇಕು ಎನ್ನುವುದಿದೆ. ರಂಗದ ಮೇಲೆ ನಟ ಬೆಳಕಲ್ಲಿ ಪ್ರೇಕ್ಷಕ ಪ್ರಭುಗಳು ಕತ್ತಲಲ್ಲಿ ಇರುವುದರಿಂದ ಕೆಲವೊಮ್ಮೆ ಕೆಲವು ಸುಳ್ಳಾಗುವ ಸಾಧ್ಯತೆಗಳೂ ಇವೆ.

ನಾಟಕದಲ್ಲಿ ಗೋಕುಲನ 'ಪಾಪಣ್ಣಿ' ಪಾತ್ರ ಅತ್ತ ಗ್ರಾಮೀಣಕ್ಕೂ ಇತ್ತ ನಗರ ಜೀವನಕ್ಕೂ ಕನ್ನಡಿ ಹಿಡಿದಂತಿದೆ. ಮಕ್ಕಳ ಹಕ್ಕು, ಇವತ್ತಿನ ಆರ್ಥಿಕ ಮುಗ್ಗಟ್ಟುಗಳ ನಡುವೆ ಮಕ್ಕಳು ಎದುರಿಸುತ್ತಿರುವ ಸವಾಲು, ಮಕ್ಕಳನ್ನು ಕಾಡುವ ಬಡತನ, ಬಡತನ ತಂದೊಡ್ಡುವ ಹಸಿವು, ಶೈಕ್ಷಣಿಕ ಅವಧಿಯಲ್ಲಿ ಮಕ್ಕಳಿಗೆ ಆಗುತ್ತಿರುವ ಒತ್ತಡ ಸಾರಾಸಗಟಾಗಿ ನಾಟಕ ರಂಗದ ಮೇಲೆ ಒಂದು ಹಣತೆಯಾಗಿ ರಾರಾಜಿಸುತ್ತಾ ಸಾಗುತ್ತವೆ. ಹಾಡುಗಳಲ್ಲಿ ಪರಿಸರಕ್ಕೆ ಸಂಬಂಧಿಸಿದ ಕೆರೆ, ಕೆರೆಯ ಕೊರಗನ್ನು ರೂಪಕವಾಗಿಸಿಕೊಂಡು 'ತುಳುಕೀ ತುಳುಕಿ ಬೇಸರವೇ ಕೆರೆಯೇ, ನೋವಾಯ್ತಾ ಕೆರೆಯೇ ನನ್ನ ಮುದ್ದು ಮರಿಯೇ' ಎಂದು ಕಟ್ಟಿದ್ದರೆ, 'ನಗುತಾ ಇರಬೇಕು ಅಳುವನ್ನು ಮರೀಬೇಕು' ಎನ್ನುವ ಹಾಡೂ ಪ್ರೇಕ್ಷಕರನ್ನು ಆಪ್ತವಾಗಿಸಿಕೊಳ್ಳುತ್ತದೆ. ಮಕ್ಕಳ ಮನಸ್ಸಲ್ಲಿ 'ಹೌದು! ಹಸಿವು ಯಾಕಾಗುತ್ತದೆ? ನನ್ನಪ್ಪನ ಸ್ವಭಾವ ಮತ್ತು ನಡತೆ ಇನ್ನೊಬ್ಬರ ಅಪ್ಪನಂತೆ ಯಾಕಿಲ್ಲ' ಎನ್ನುವ ಪ್ರಶ್ನೆಗಳು ಮೂಡುತ್ತವೆ. ಇಂತಹ ಅಚಾತುರ್ಯಗಳಿಗೆ ಕಾರಣಗಳ ಹುಡುಕಾಟ ಮತ್ತು ಮಗು ಕದಿಯಲು ಕಾರಣ ಏನು ಎನುವಂಥದ್ದು ಪ್ರೇಕಕರನ್ನು ಕಾಡುತ್ತವೆ.

ಪುಟ್ಟ ಬಾಲಕ ಗೋಕುಲನ ಅಭಿನಯಚಾತುರ್ಯ ನಿಜಕ್ಕೂ ಬೆರಗು ಮೂಡಿಸುತ್ತದೆ. ಏರಿಳಿತಗಳ ಗಮನದಲ್ಲಿಟ್ಟುಕೊಂಡು ಆಡಿರುವ ಸಂಭಾಷಣೆ ಆಗಬಹುದು, ಹಾವಭಾವ, ದೇಹಭಾಷೆ, ಹಾಸ್ಯ ಸನ್ನಿವೇಶ, ರಂಗಪರಿಕರಗಳ ಬಳಕೆ, ಸಾಮಾನ್ಯವಾಗಿ ಆಗಬಹುದಾದ ತಾಂತ್ರಿಕ ದೋಷಗಳ ನಿವಾರಿಸಿಕೊಳ್ಳುವ ಕ್ರಿಯಾವಿಧಾನಕ್ಕೆ ಸಂಬಂಧಿಸಿ ಒಬ್ಬ ನುರಿತ ಕಲಾವಿದನಲ್ಲಿಯೂ ಕೆಲವೊಮ್ಮೆ ಕೊರತೆ ಕಾಣಿಸುತ್ತದೆ. ಆದರೆ, ಗೋಕುಲ ಎಲ್ಲಕ್ಕೂ ಮೀರಿದ ಕಲಾಪ್ರತಿಭೆ ಎನಿಸಿಕೊಂಡಿದ್ದಾನೆ. 'ಅವನಲ್ಲಿ ಹೇಗೆ ಅಷ್ಟು ನೈಜವಾದ ಅಭಿನಯ ಪ್ರತಿಭೆ' ಬಂತು ಎನ್ನುವುದೇ ಪ್ರೇಕ್ಷಕರ ಮಾತಾಗಿತ್ತು. ನಿರ್ದೇಶಕರು ಹೇಳಿ ಮಾಡಿಸಿದ್ದರೂ ಅವನು ಅದನ್ನು ಮೂವತ್ತನೇ ಪ್ರದರ್ಶನದಲ್ಲಿಯೂ ಅರಿವಿನ ಸೆಲೆಯಾಗಿ ಮರೆಯದೇ ನಿರ್ವಹಿಸಿರುವುದು ಅವನಲ್ಲಿನ ಆಸಕ್ತಿ, ಶ್ರದ್ಧೆ, ಶಿಸ್ತು, ಸಂಯಮಗಳನ್ನು ಎತ್ತಿ ತೋರಿಸುತ್ತದೆ.

ಕಲೆ ಎನ್ನುವುದು ಕಲಾವಿದನಲ್ಲಿ ಇದ್ದರೆ ಪ್ರತೀ ಕಲ್ಲೂ ಸುಂದರ ಶಿಲ್ಪವಾಗಲು ಸಾಧ್ಯ. ಯಾವುದೇ ಪಾತ್ರ ಕಲಾವಿದನ ಭಾವದಲ್ಲಿ ಅರಳಿ ರಂಗದ ಮೇಲೆ ಹೊರಹೊಮ್ಮುತ್ತದೆ. ಪುಟ್ಟ ಕಂದ ಗೋಕುಲನಿಂದ ಇನ್ನೂ ಹೆಚ್ಚು ನಾಟಕಗಳು, ಪಾತ್ರಗಳು ನಿರೀಕ್ಷೆ ಮಾಡುತ್ತಾ ಇರೋಣ. ❖

ಡಾಲರ್ ಕನಸಿನ ಬೆನ್ನೇರಿ...

10ನೇ ಪುಟದಿಂದ...

ಅಮೆರಿಕ-ಕೆನಡಾ ಗಡಿ ಭಾಗದ ದಕ್ಷಿಣ ಮಾನಿಟೋಬಾದಲ್ಲಿ ಈ ನತದೃಷ್ಟ ಕುಟುಂಬದ ಕಳೇಬರಗಳು ಜನವರಿ 19ರಂದು ಪತ್ತೆಯಾದವು. ಹಿಮದ ಬಿರುಗಾಳಿ ಬೀಸಿ ಉಷ್ಣಾಂಶ ಮೈನಸ್ 35 ಡಿಗ್ರಿಗೆ ಕುಸಿದ ಭಯಾನಕ ಚಳಿಯಲ್ಲಿ ಎರಗಿತ್ತು ಸಾವು.

ಜಗದೀಶ ಮತ್ತು ವೈಶಾಲಿ ಶಾಲಾ ಶಿಕ್ಷಕರಾಗಿದ್ದವರು. ಶಿಕ್ಷಕ ನೌಕರಿ ತೊರೆದು ಕಲೋಲದಲ್ಲಿ ತಮ್ಮನ ಸಿದ್ಧ ಉಡುಪು ವ್ಯಾಪಾರದಲ್ಲಿ ಕೈಕಲೆಸಿದ್ದ ಜಗದೀಶ. ಈ ವ್ಯಾಪಾರವನ್ನೂ ಕೈಬಿಟ್ಟು ಕೆಲ ತಿಂಗಳ ಹಿಂದೆ ಕುಟುಂಬಸಹಿತ ಡಿಂಗೂಚದ ತಂದೆ ತಾಯಿಯ ಮನೆಗೆ ಹಿಂದಿರುಗಿದ್ದ. ಕೆನಡಾ ಮೂಲಕ ಅಮೆರಿಕೆಯನ್ನು ಸುರಕ್ಷಿತವಾಗಿ ತಲುಪಲು ಈ ಕುಟುಂಬ ಏಜೆಂಟರಿಗೆ ನೀಡಿದ್ದ ಮೊತ್ತ ಒಂದೂವರೆ ಕೋಟಿ ರೂಪಾಯಿ ಎನ್ನಲಾಗಿದೆ. ಕಳೆದ ಕೆಲ ವರ್ಷಗಳಲ್ಲಿ ಡಿಂಗೂಚದಿಂದ ಹೀಗೆ ಕಳ್ಳದಾರಿಯಲ್ಲಿ ಅಮೆರಿಕೆಯಲ್ಲಿ ಇಳಿದ ಕುಟುಂಬಗಳು ಹತ್ತಕ್ಕೂ ಹೆಚ್ಚು ಎಂಬುದು ಅನಧಿಕೃತ ಅಂದಾಜು.

ಡಿಂಗೂಚದಂತಹ ಹತ್ತಾರು 'ಅನಿವಾಸಿ ಭಾರತೀಯ' ಹಳ್ಳಿಗಳು ಗುಜರಾತಿನಲ್ಲಿವೆ. ಇವೆಲ್ಲವುಗಳ ಸಾಮಾಜಿಕ-ಆರ್ಥಿಕ-ರಾಜಕೀಯ ಸಂರಚನೆ ಹೆಚ್ಚು ಕಡಿಮೆ ಏಕಪ್ರಕಾರದ್ದು. ಪಟೇಲರು ಮತ್ತು ಠಾಕೂರರೇ ಈ ಹಳ್ಳಿಗಳ ಪ್ರಬಲ ಜಾತಿಗಳು. ತಳಜಾತಿಗಳು ಬೇರೆಯೇ ಲೋಕದಲ್ಲಿ ವಾಸಿಸುತ್ತವೆ. ಸಿರಿಸಂಪತ್ತು ಅವುಗಳನ್ನು ಸೋಕುವುದು ವಿರಳ. ಜಾತಿವ್ಯವಸ್ಥೆಯ ಭೇದಭಾವಕ್ಕೆ ಕೊರತೆಯೇ ಇಲ್ಲ. ಪರಂಪರಾಗತ ಉಕ್ಕಿನ ಚೌಕಟ್ಟು ಸಡಿಲಾಗಿಲ್ಲ. ಇವೆಲ್ಲವುಗಳ ಅಡಿಪಾಯವೆನಿಸಿದ ಭೂಮಿ ಸಂಬಂಧಗಳು ಇನ್ನಷ್ಟು ಕಟ್ಟುನಿಟ್ಟು.

ಡಿಂಗೂಚದಲ್ಲೂ ಪಟೇಲರು ಮತ್ತು ಠಾಕೂರರ ಜನಸಂಖ್ಯೆ ಹೆಚ್ಚೂಕಡಿಮೆ ಸರಿಸಮ ಇದೆ. ಎಪ್ಪತ್ತಕ್ಕೂ ಹೆಚ್ಚು ಕುಟುಂಬಗಳು ಅಮೆರಿಕೆಯಲ್ಲಿ ನೆಲೆಸಿವೆ. ಆಸ್ಟ್ರೇಲಿಯಾ ಮತ್ತು ಕೆನಡಾಕ್ಕೂ ವಲಸೆ ಹೋಗಿವೆ.

ರೈತಾಪಿ ಕುಟುಂಬ ಇಲ್ಲವೇ ಕೆಳಮಧ್ಯಮವರ್ಗಕ್ಕೆ ಸೇರುವ ಜಗದೀಶ್ ಮತ್ತು ವೈಶಾಲಿಯಂತಹ ಬಹುತೇಕರು ಕಳ್ಳದಾರಿಯಿಂದ ಸುರಕ್ಷಿತವಾಗಿ ಅಮೆರಿಕೆ ತಲುಪಿದರೂ ಅಲ್ಲಿ ಅವರಿಗೆ ದೊಡ್ಡ ಉದ್ಯೋಗಗಳೇನೂ ದೊರೆಯುವುದಿಲ್ಲ. ಅನಿವಾಸಿ ಭಾರತೀಯರು ನಡೆಸುವ ಗ್ಯಾಸ್ ಸ್ಟೇಷನ್‌ಗಳು, ಮೊಟೆಲ್‌ಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳ ಕಡಿಮೆ ಆದಾಯದ ಚಾಕರಿಗಳೇ ಗತಿ. ಇವರು ಕಳ್ಳದಾರಿಯಿಂದ ಬಂದವರೆಂದು ಅವರು ಪೊಲೀಸರಿಗೆ ಹಿಡಿದುಕೊಡುವುದಿಲ್ಲ. ಇವರು ಅಮೆರಿಕೆಯಲ್ಲಿ ಚಾಲ್ತಿಯಲ್ಲಿರುವ ದುಬಾರಿ ಕೂಲಿ ಕೇಳುವುದಿಲ್ಲ. ಈ ಅಲಿಖಿತ ಒಪ್ಪಂದದಲ್ಲಿ ಅನಿರೀಕ್ಷಿತ ಘಟಿಸಿ ಧನವಂತರಾಗುವುದು ಅಪರೂಪ. ಆದರೆ ಇಲ್ಲಿ ಭಾರತದಲ್ಲಿ ಇವರು ಅಮೆರಿಕೆಯವರೆಂಬ ಪ್ರತಿಷ್ಠೆ.

ಗುಜರಾತಿನ ಅಗ್ರಗಣ್ಯ ಅನಿವಾಸಿ ಭಾರತೀಯ ಗ್ರಾಮ ಆನಂದ್ ಜಿಲ್ಲೆಯ ಧರ್ಮಜ. ಏಷ್ಯಾದ ಅತ್ಯಂತ ಶ್ರೀಮಂತ ಹಳ್ಳಿಯೆಂದು ಪ್ರಸಿದ್ಧ. ಅತಿ ಹೆಚ್ಚಿನ ಅನಿವಾಸಿ ಭಾರತೀಯ ಹಣ ಇಲ್ಲಿಗೆ ಹರಿದು ಬರುತ್ತದೆ. ಧರ್ಮಜ ಗ್ರಾಮದ ಜನಸಂಖ್ಯೆ 11,333. ಇಷ್ಟು ಕಡಿಮೆ ಜನಸಂಖ್ಯೆಗೆ ಇಲ್ಲಿರುವ ಬ್ಯಾಂಕುಗಳು ಹದಿಮೂರು! ಠೇವಣಿ ಸಾವಿರ ಕೋಟಿ ರೂಪಾಯಿ.

ಇಲ್ಲಿನ ಮನೆಗಳು ಮಹಲುಗಳೆಂದೇ ಕರೆಯಬೇಕಾದಷ್ಟು ಭವ್ಯ. ಆದರೆ ಧರ್ಮಜದ ದಲಿತರ ಮನೆಗಳು ಈ ಮಾತಿಗೆ ಹೊರತು. ಸಿರಿವಂತಿಕೆ ಅವರ ಹಟ್ಟಿಯತ್ತ ಹರಿದು ಬಂದಿಲ್ಲ. ಊನಾದ ದಲಿತರನ್ನು ಕಾರಿನ ಬಂಪರ್‌ಗೆ ಬಿಗಿದು ಕಟ್ಟಿ ಅಮಾನುಷವಾಗಿ

ಅಮೆರಿಕ-ಕೆನಡಾ ಗಡಿಯಲ್ಲಿ ಮಂಜಿನ ಮಧ್ಯೆ ಮರಗಟ್ಟಿ ಪ್ರಾಣತೆತ್ತ ಗುಜರಾತಿನ ಡಿಂಗೂಚ ಗ್ರಾಮದ ಕುಟುಂಬ: ಜಗದೀಶ ಪಟೇಲ್, ವೈಶಾಲಿ ಪಟೇಲ್, ವಿಹಾಂಗಿ ಪಟೇಲ್ ಹಾಗೂ ಧಾರ್ಮಿಕ್ ಪಟೇಲ್ (ಅಮ್ಮನ ತೋಳಿನಲ್ಲಿ)

ಥಳಿಸಿದ ಘಟನೆ ಜಗಜ್ಜಾಹೀರಾದ ನಂತರ ಧರ್ಮಜದ ದಲಿತ ಮುಂದಾಳು ಕಾಂತಿಭಾಯಿ ಮಕ್ವಾನ ಬೌದ್ಧ ಧರ್ಮ ಸ್ವೀಕರಿಸಿದರು. ಆನಂತರ ಇಡೀ ಹಟ್ಟಿಯೇ ಆತನ ಹಿಂದೆ ನಡೆದು ಬುದ್ಧನಿಗೆ ಶರಣೆಂದಿದೆ.

ಇತ್ತೀಚೆಗೆ ಪಾಟೀದಾರರ ಕ್ರೋಧಕ್ಕೆ ಬೆದರಿ 274 ದಲಿತ ಕುಟುಂಬಗಳ ಪೈಕಿ 250 ಕುಟುಂಬಗಳು ದಲಿತ ಹಟ್ಟಿಯನ್ನು ತೊರೆದು ಹೋಗಿದ್ದವು. ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಮತದಾನ ಮಾಡಲು ಮುಂದಾಗಿದ್ದೇ ದಲಿತರ ಮಹಾಪರಾಧವಾಗಿತ್ತು. ಮತದಾನ ಮಾಡದಂತೆ ಅವರನ್ನು ತಡೆಯಲಾಗಿತ್ತು.

ಸೂರತ್ ಜಿಲ್ಲೆಯ ಯೇನಾ ಎಂಬುದು ರಾಜ್ಯದ ಮತ್ತೊಂದು ಅನಿವಾಸಿ ಭಾರತೀಯ ಗ್ರಾಮ. ಯಾವುದೇ 'ಸ್ಮಾರ್ಟ್ ಸಿಟಿ'ಗಿಂತ ಕಮ್ಮಿಯಿಲ್ಲದ ಗ್ರಾಮ. ಆದರೆ ಈ ಶ್ರೇಯಸ್ಸು ನೂರಕ್ಕೆ ನೂರು ಈ ಗ್ರಾಮದ ಅನಿವಾಸಿ ಭಾರತೀಯರದೇ. ಯೇನಾದ ಜನಸಂಖ್ಯೆ 4,700. ಈ ಪೈಕಿ 2000ಕ್ಕೂ ಹೆಚ್ಚು ಮಂದಿ ಬ್ರಿಟನ್, ಅಮೆರಿಕ, ಕೆನಡಾದಲ್ಲಿ ನೆಲೆಸಿದ್ದಾರೆ.

ಕಛ್ ಜಿಲ್ಲೆಯ ಮಾಧಾಪಾರ್ ಗ್ರಾಮದ ಅಧಿಕಾಂಶ ಬ್ಯಾಂಕ್ ಠೇವಣಿಗಳು ಆಫ್ರಿಕಾ ಮತ್ತು ಬ್ರಿಟನ್‌ನಲ್ಲಿ ನೆಲೆಸಿರುವ ಲೇವಾ ಪಟೇಲರದು. ಇವರು ಮೂರು ಅಥವಾ ನಾಲ್ಕನೆಯ ತಲೆಮಾರಿನ ಅನಿವಾಸಿ ಭಾರತೀಯರು. ಇವರ ತಾತ ಮುತ್ತಾತಂದಿರು 19ನೆಯ ಶತಮಾನದಲ್ಲಿ ಆಫ್ರಿಕಾಗೆ ವಲಸೆ ಹೋಗಿದ್ದರು. ಹೀಗೆ ವಲಸಿಗ ವರ್ತಕರ ಪರವಾಗಿ ವಕಾಲತ್ತು ವಹಿಸಲೆಂದು ಮಹಾತ್ಮ ಗಾಂಧಿ ಕೂಡ ಆಫ್ರಿಕೆಗೆ ತೆರಳಿದ್ದರು. 1950ರ ದಶಕದಲ್ಲಿ ಬರಗಾಲ ಬಿದ್ದಾಗ ಎದ್ದಿದ್ದು ವಲಸೆಯ ಎರಡನೆಯ ಅಲೆ.

ಹೆಚ್ಚೆಂದರೆ 7,600 ಮಹಲುಗಳಿರುವ ಮಾಧಾಪಾರದ ಹದಿನೇಳು ಬ್ಯಾಂಕುಗಳಲ್ಲಿ ಒಟ್ಟು 5,000 ಕೋಟಿ ರೂಪಾಯಿಯಷ್ಟು ಠೇವಣಿಯಿದೆ! ವಿಶ್ವದ ಅತ್ಯಂತ ಶ್ರೀಮಂತ ಹಳ್ಳಿಯೆಂದು ಮಾಧಾಪಾರವನ್ನು ಕರೆಯುವುದುಂಟು. 1968ರಷ್ಟು ಹಿಂದೆಯೇ ಲಂಡನ್‌ನಲ್ಲಿ ಮಾಧಾಪಾರ್ ಗ್ರಾಮ ಸಂಘವನ್ನು ಸ್ಥಾಪಿಸಲಾಗಿತ್ತು. ವಿದೇಶಗಳಲ್ಲಿನ ಮಾಧಾಪಾರದ ಜನರನ್ನು ಸಭೆ ಸೇರಿಸುವುದು ಈ ಸಂಘದ ಉದ್ದೇಶವಾಗಿತ್ತು.

ಕಛ್ ಸೀಮೆಯ ಹಿಂದೂ-ಮುಸ್ಲಿಮರು ಶತಮಾನಗಳಿಂದಲೂ ವಿದೇಶಗಳಲ್ಲಿ ವ್ಯಾಪಾರ ವಹಿವಾಟಿನ ಸಾಹಸಕ್ಕೆ ಹೆಸರುವಾಸಿ. ಮಾಧಾಪಾರದ ಜನ ಆಫ್ರಿಕಾ ಮತ್ತು ಬ್ರಿಟನ್ ನಂತರ ಸ್ವಿಟ್ಜರ್ಲೆಂಡ್, ನ್ಯೂಜಿಲೆಂಡ್, ಹಾಗೂ ಅಮೆರಿಕೆಗೆ ಹಿಂಡುಹಿಂಡಾಗಿ ವಿಸ್ತರಿಸಿ ಹಬ್ಬಿಕೊಂಡವರು. ಬಡತನವನ್ನೇ ಹಾಸಿ ಹೊದ್ದಿರುವ ಕಛ್‌ನ ಅನೇಕ ಹಳ್ಳಿಗಳಿವೆ. ಅವುಗಳನ್ನು ಮಾಧಾಪಾರಕ್ಕೆ ಹೋಲಿಸಿ ಅಧ್ಯಯನ ಮಾಡಬೇಕೆನ್ನುತ್ತಾರೆ ಹಿರಿಯ ರಾಜಕೀಯ ಸಮಾಜಶಾಸ್ತ್ರಜ್ಞ ಡಿ.ಎಲ್.ಶೇತ್.

ತಮ್ಮ ಬೇರುಗಳು ಹುಟ್ಟಿದ ಹಳ್ಳಿಗಳೊಂದಿಗೆ ಗುಜರಾತಿನ ಅನಿವಾಸಿ ಭಾರತೀಯರ ಬಂಧ ಎಂದೂ ಕಡಿದು ಹೋಗದಷ್ಟು ಗಟ್ಟಿ. ಹುಟ್ಟಿದ ನೆಲವನ್ನು ಸಕಲ ಸೌಕರ್ಯಗಳೊಂದಿಗೆ 'ಸಮೃದ್ಧ'ಗೊಳಿಸುತ್ತಾರೆ. ಬಹುತೇಕರು ಮುಪ್ಪಿನ ಕಾಲಕ್ಕೆ ವಾಪಸು ಬಂದು ಇಲ್ಲಿಯೇ ಕಡೆಗಾಲ ಕಳೆದು ಮಣ್ಣು ಸೇರುತ್ತಾರೆ.

ಅನಿವಾಸಿ ಭಾರತೀಯ ಗುಜರಾತಿಗಳ ಪೈಕಿ ಬಹಳ ಮಂದಿ ತಮ್ಮ ಸಂಪಾದನೆಯನ್ನು ತಮ್ಮ ಹಳ್ಳಿಗಳ ಬ್ಯಾಂಕುಗಳಲ್ಲಿಯೇ ಠೇವಣಿ ಇರಿಸುತ್ತಾರೆ. ತಾವು ನೆಲೆಸಿರುವ ವಿದೇಶಗಳಲ್ಲಿನ ಬ್ಯಾಂಕುಗಳಲ್ಲಿ ಅವರಿಗೆ ನಂಬಿಕೆಯಿಲ್ಲ. ವಿಶೇಷವಾಗಿ ಆಫ್ರಿಕಾದಿಂದ ಹಲವು ಸಲ ಪಲಾಯನ ಮಾಡಬೇಕಾದ ಸಂದರ್ಭಗಳನ್ನು ಅವರು ಎದುರಿಸಿದ್ದಾರೆ. ಉಗಾಂಡಾದ ಇದಿ ಅಮೀನ್ ಆಳ್ವಿಕೆ ಇವರ ಆಸ್ತಿಪಾಸ್ತಿಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡುಬಿಟ್ಟಿತ್ತು. ತಾವು ನೆಲೆಸಿರುವ ದೇಶಗಳಲ್ಲಿನ ಕೆಲವು ಸ್ಥಳೀಯ ಬ್ಯಾಂಕುಗಳು ತಾವೂ ಮುಳುಗಿ ಗುಜರಾತಿಗಳ ಗಳಿಕೆಯ ಠೇವಣಿಗಳನ್ನೂ ಮುಳುಗಿಸಿವೆ. ಭಾರತೀಯ ಬ್ಯಾಂಕುಗಳಲ್ಲಿ ಠೇವಣಿ ಇರಿಸಿದರೆ ತೆರಿಗೆ ರಿಯಾಯತಿಗಳು ಸೇರಿದಂತೆ ಹಲವು ರಿಯಾಯಿತಿಗಳು ಲಭ್ಯ. ತಮ್ಮ ನಿವೃತ್ತ ಬದುಕಿಗಾಗಿ ಉಳಿಸಿದ ಇಡುಗಂಟು ಇದೆಂದೂ ಗುಜರಾತಿಗಳು ಭಾವಿಸುತ್ತಾರೆ.

ಮದುವೆ ಮಾರುಕಟ್ಟೆ ಪ್ರವೇಶಿಸುವ ವರನಿಗೆ ತನ್ನ ಮನೆ, ಉದ್ಯೋಗ, ಸಂಬಳ, ಸಂಪಾದನೆ ಕುರಿತು ಪ್ರಶ್ನೆಗಳು ಎದುರಾಗುವುದು ಸ್ವಾಭಾವಿಕ. ಆದರೆ '42 ಹಳ್ಳಿಗಳ ಪಾಟೀದಾರ ಸಮಾಜ'ಕ್ಕೆ (ಗಾಂಧೀನಗರ ಮತ್ತು ಮೆಹಸಾಣ ಜಿಲ್ಲೆಗಳ 42 ಹಳ್ಳಿಗಳ ಪಾಟೀದಾರ ಸಮುದಾಯ) ಸೇರಿದ ವಧುವನ್ನು ಬಯಸುವ ವರ ಹೆಚ್ಚುವರಿ ಪ್ರಶ್ನೆಯೊಂದನ್ನು ಎದುರಿಸುತ್ತಾನೆ- ನಿನ್ನ ಬಂಧುಗಳು, ಸಂಬಂಧಿಕರು ಯಾರಾದರೂ ಅಮೆರಿಕೆಯಲ್ಲಿ ಇಲ್ಲವೇ ಕನಿಷ್ಠಪಕ್ಷ ಕೆನಡಾದಲ್ಲಿ ನೆಲೆಸಿದ್ದಾರೆಯೇ? ಇಲ್ಲ ಎಂಬುದು ಆತನ ಉತ್ತರವಾದರೆ ಆ ವಧುವಿನ ಆಸೆಯನ್ನು ಕೈಬಿಡಬೇಕು. ಮಹಿಳೆಯರು ಎನ್‌ಆರ್‌ಐ ವರನನ್ನೇ ಬಯಸುತ್ತಾರೆ. ಅಮೆರಿಕೆಯಲ್ಲಿ ಈಗಾಗಲೇ ನೆಲೆಸಿರುವ ಗುಜರಾತಿ ವರನಿಗೆ ಅಲ್ಲಿಯೇ ನೆಲೆಸಿದ ಗುಜರಾತಿ ವಧು ಬೇಕು. ಅದಕ್ಕಾಗಿ ಆಕೆಗೆ 'ವಧುದಕ್ಷಿಣೆ'ಯನ್ನೂ ತೆರುತ್ತಾನೆ ಆತ. ವಧುವನ್ನು ಅಕ್ರಮವಾಗಿ ಅಮೆರಿಕೆಗೆ ಸಾಗಿಸಲು ಆಕೆಯ ಕುಟುಂಬ ಮಾಡಿದ್ದ ವೆಚ್ಚವನ್ನು ಒಳಗೊಂಡಿರುತ್ತದೆ ಈ 'ವಧುದಕ್ಷಿಣೆ'.

ಡಿಂಗೂಚ ಗ್ರಾಮದ ಭವಿನ್ ಪಟೇಲ್ ಪ್ರಕಾರ ಅಮೆರಿಕೆ ಇಲ್ಲವೇ ಇತರೆ ವಿದೇಶಗಳಿಗೆ ಹೋಗದಿರುವ ಪುರುಷನಿಗೆ ವಧು ಸಿಗುವುದು ಅತಿ ಕಠಿಣ. ಅಂತಹ ಎಷ್ಟೋ ಪುರುಷರು ಅವಿವಾಹಿತರಾಗಿ ಉಳಿದಿದ್ದಾರೆ. ಈ ಕಾರಣಕ್ಕಾಗಿಯೇ ಅಪಾಯಕರ ಎನಿಸಿದರೂ ಕಳ್ಳ ಮಾರ್ಗಗಳಲ್ಲಿ ಅಮೆರಿಕೆಗೆ ಹೋಗಲು ಬಯಸುತ್ತಾರೆ.

ಭುಜ್‌ನಿಂದ ಹದಿನೈದು ಕಿ.ಮೀ ದೂರದ ಹಳ್ಳಿ ಬಲಾದಿಯಾ. ಅನಿವಾಸಿ ಭಾರತೀಯರ ಈ ಹಳ್ಳಿ ಏಳು ವರ್ಷಗಳ ಹಿಂದೆ 2015ರಲ್ಲೇ 2000 ಕೋಟಿ ರೂಪಾಯಿ ಬ್ಯಾಂಕ್ ಠೇವಣಿಗಳನ್ನು ಹೊಂದಿತ್ತು. ಮಾಧಾಪಾರದ ಬ್ಯಾಂಕ್ ಠೇವಣಿಗಳ ಮೊತ್ತ ಅದಾಗಲೇ 5000 ಕೋಟಿ ರೂಪಾಯಿ ದಾಟಿತ್ತು. ಕೇವಲ 1,863 ಕುಟುಂಬಗಳ ಕೇರಾ ಎಂಬ ಮತ್ತೊಂದು ಹಳ್ಳಿಯ ಬ್ಯಾಂಕ್ ಠೇವಣಿಗಳ ಮೊತ್ತ ಕೂಡ 2000 ಕೋಟಿ ರೂಪಾಯಿಯಾಗಿತ್ತು. ಮೂರೂ ಹಳ್ಳಿಗಳಲ್ಲಿನ ಬ್ಯಾಂಕ್ ಶಾಖೆಗಳ ಸಂಖ್ಯೆ 30 ದಾಟಿತ್ತು. 24 ಎ.ಟಿ.ಎಂ. ಇದ್ದವು. 100ರಿಂದ 500 ಕೋಟಿ ಬ್ಯಾಂಕ್ ಠೇವಣಿಗಳಿರುವ ಇತರೆ ಹಳ್ಳಿಗಳಿವೆ. ಅವು ನಾನ್ಪುರ, ಸುಖ್ಪಾರ್, ಕೋಡಕಿ, ರಾಂಪಾರ್ ವೇಕರ, ಮಾನ್ಕುವ, ಭರಸರ್ ಹಾಗೂ ಸಾಮ್ತರಾ.

ಕಛ್ ಜಿಲ್ಲೆಯ ಒಟ್ಟು ಎನ್‌ಆರ್‌ಐ ಠೇವಣಿಗಳು ಏಳು ವರ್ಷಗಳಷ್ಟು ಹಿಂದೆಯೇ 9,181 ಕೋಟಿ ರೂಪಾಯಿಯನ್ನು ತಲುಪಿದ್ದವು. ಈ ಬಾಬತ್ತಿನಲ್ಲಿ ಅಹಮದಾಬಾದ್‌ಗೆ ಮೊದಲ ಸ್ಥಾನ. ಕಛ್‌ನದ್ದು ಎರಡನೆಯ ಸ್ಥಾನ. ಎನ್‌ಆರ್‌ಐ ಮತ್ತು ಇತರರ ಠೇವಣಿಗಳೂ ಸೇರಿ ಕಛ್ ಜಿಲ್ಲೆಯ ಬ್ಯಾಂಕುಗಳಲ್ಲಿನ ಠೇವಣಿ 24,353 ಕೋಟಿ ರೂಪಾಯಿ ದಾಟಿತ್ತು. ಈ ಹಳ್ಳಿಗಳ ನಿವಾಸಿಗಳು ಕೀನ್ಯಾ, ಉಗಾಂಡ, ಮೊಝಾಂಬಿಕ್, ತಾಂಜಾನಿಯಾ, ದಕ್ಷಿಣ ಆಫ್ರಿಕಾ, ಬ್ರಿಟನ್ ಹಾಗೂ ಆಸ್ಟ್ರೇಲಿಯಾದ ಅನಿವಾಸಿ ಭಾರತೀಯ ಗುಜರಾತಿಗಳು.

ಠೇವಣಿಗಳಿಗೆ ಆಕರ್ಷಕ ಬಡ್ಡಿದರಗಳನ್ನು ಜಾಹೀರುಗೊಳಿಸುವ ಭಾರೀ ಭಿತ್ತಿಬರಹಗಳು ಈ ಹಳ್ಳಿಗಳಲ್ಲಿ ಮಾಮೂಲು ನೋಟ. ಪಂಜಾಬಿನಲ್ಲಿ ದೋಬ್ ಸೀಮೆ ಕೂಡ ಅನಿವಾಸಿ ಭಾರತೀಯರ ವಿಪುಲ ಸಂಖ್ಯೆಗೆ ಹೆಸರಾದದ್ದು. ಒಟ್ಟು 80 ಲಕ್ಷ ಅನಿವಾಸಿ ಭಾರತೀಯರ ಪೈಕಿ 20 ಲಕ್ಷ ಮಂದಿ ದಲಿತರಿದ್ದಾರೆ.

ಈ ಶತಕೋಟಿ ಇಲ್ಲವೇ ಸಾವಿರ ಕೋಟ್ಯಧೀಶ ಅನಿವಾಸಿ ಹಳ್ಳಿಗಳು ನಮ್ಮವು ಎಂದು ಬಹು ಜನರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹೆಮ್ಮೆಪಡುವ ಕಾಲ ಇನ್ನೂ ಬರಬೇಕಿದೆ. ಏಕಮುಖವಾಗಿರುವ ಸಂಪತ್ತಿನ ಚಲನೆ ಬಹುಮುಖವೂ ಬಹುಜನವೂ ಆಗಬೇಕಿದೆ. ಇಲ್ಲವಾದರೆ ಈ ಸಿರಿಸಂಪತ್ತಿಗೆ ಅರ್ಥವಿರದು. ❖

ಮುನ್ನೋಟ 13-02-2022 ರಿಂದ 19-02-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೃಷಿ ಕ್ಷೇತ್ರದಲ್ಲಿರುವವರ ಆದಾಯ ಹೆಚ್ಚುತ್ತದೆ. ಹಣಕಾಸು ವ್ಯವಹಾರಗಳ ಒಪ್ಪಂದದ ವಿಚಾರದಲ್ಲಿ ಬಹಳ ಎಚ್ಚರಿಕೆ ಇರಲಿ. ಹೂವಿನ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ತನ್ಮೂಲಕ ಆದಾಯವೂ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಇರುತ್ತದೆ. ಉನ್ನತ ವ್ಯಾಸಂಗದ ವಿಚಾರದಲ್ಲಿ ಅನುಕೂಲಕರ ವಾತಾವರಣವಿರುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವೃತ್ತಿಯಲ್ಲಿ ಹೆಚ್ಚು ಅನುಕೂಲವನ್ನು ಕಾಣಬಹುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಗೆ ಹೆಚ್ಚು ಅನುಕೂಲಗಳು ದೊರೆಯುತ್ತವೆ. ನಿಮ್ಮ ವ್ಯವಹಾರಕ್ಕೆ ವಿದೇಶಿ ಪಾಲುದಾರರು ದೊರೆಯುವ ಸಾಧ್ಯತೆಗಳಿವೆ ಮತ್ತು ಅವರಿಂದ ಬಂಡವಾಳ ಹೂಡಿಕೆಯೂ ಆಗುತ್ತದೆ. ಆರ್ಥಿಕವಾಗಿ ಮುಂದುಬರಲು ನಾನಾ ಮಾರ್ಗಗಳನ್ನು ಹುಡುಕುವಿರಿ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಉದ್ಯೋಗದಲ್ಲಿ ನಿಮ್ಮ ಮೇಲಿಟ್ಟಿದ್ದ ಭರವಸೆಗಳನ್ನು ಈಡೇರಿಸಿ ಸಂತಸ ಪಡುವಿರಿ. ಪುರಾತನ ವಸ್ತುಗಳನ್ನು ಮಾರಾಟ ಮಾಡುವವರ ವ್ಯವಹಾರ ಹೆಚ್ಚಾಗಿ ಅನಿರೀಕ್ಷಿತ ಧನಲಾಭವಿರುತ್ತದೆ. ವಿಗ್ರಹಗಳನ್ನು ಕೆತ್ತುವವರಿಗೆ ಮಾರುಕಟ್ಟೆ ವಿಸ್ತರಿಸುತ್ತದೆ. ಮರದ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಆದಾಯದಲ್ಲಿ ಹೆಚ್ಚಳ ಇರುತ್ತದೆ. ತಂದೆಯಿಂದ ನಿಮಗೆ ಧನಸಹಾಯ ಒದಗುವ ಸಾಧ್ಯತೆಯಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಉದ್ಯೋಗ ಸ್ಥಳದಲ್ಲಿ ಹಿರಿಯ ಅಧಿಕಾರಿಯ ಸಹಾಯದಿಂದ ನಿಮ್ಮ ಶತ್ರುಗಳನ್ನು ಮಟ್ಟ ಹಾಕುವಿರಿ. ಪ್ರೀತಿ ಪಾತ್ರರೊಡನೆ ನಿಮ್ಮ ಅನಿಸಿಕೆ ಮತ್ತು ಸಾಧನೆಗಳನ್ನು ಹಂಚಿಕೊಳ್ಳುವಿರಿ. ವಿವಾದಿತ ಆಸ್ತಿಯು ನಿಮಗೆ ದೊರೆಯುವ ಸಾಧ್ಯತೆ ಇದೆ. ನಿಮ್ಮ ಮೇಧಾವಿತನದಿಂದ ಕ್ಲಿಷ್ಟ ಸಮಸ್ಯೆಗಳನ್ನು ಆಲೋಚಿಸಿ ಪರಿಹಾರ ಮಾಡಿಕೊಳ್ಳುವಿರಿ. ನೇತ್ರ ಸಂಬಂಧಿ ಕಾಯಿಲೆ ಇರುವವರಿಗೆ ಈಗ ಸ್ವಲ್ಪ ಆರಾಮವೆನಿಸುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಸಮಸ್ಯೆ ಪರಿಹಾರಕ್ಕಾಗಿ ಹಿರಿಯರನ್ನು ಭೇಟಿ ಮಾಡುವಿರಿ. ಅವರ ಸಲಹೆಯಂತೆ ದೈವಕಾರ್ಯಗಳನ್ನು ಮಾಡುವಿರಿ. ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿರುವವರು ಕುಟುಂಬ ಜೀವನದ ಕಡೆಗೂ ಗಮನಹರಿಸುವುದು ಅಗತ್ಯ. ವ್ಯವಹಾರಗಳಲ್ಲಿ ಸ್ವಲ್ಪ ಏರಿಳಿತಗಳು ಕಂಡುಬಂದರೂ ಗಾಬರಿ ಏನಿಲ್ಲ. ಗೃಹೋಪಯೋಗಿ ವಸ್ತುಗಳನ್ನು ಸಂಗ್ರಹ ಮಾಡುವಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವ್ಯವಹಾರದಲ್ಲಿ ಕೆಲವೊಂದು ಅವಸರದ ತೀರ್ಮಾನಗಳನ್ನು ತೆಗೆದುಕೊಂಡು ಸಂಕಟಕ್ಕೆ ಸಿಲುಕುವ ಸಾಧ್ಯತೆ ಇದೆ ಎಚ್ಚರ. ಹಮ್ಮಿಕೊಂಡ ಕೆಲಸ ಕಾರ್ಯಗಳಲ್ಲಿ ಉದಾಸೀನತೆ ಸಲ್ಲದು. ಬರಹಗಾರರು ಮತ್ತು ಪ್ರಕಾಶಕರ ನಡುವೆ ಒಪ್ಪಂದವೇರ್ಪಡುವ ಸಾಧ್ಯತೆಗಳಿವೆ. ಮೇಲ್ಮಟ್ಟದಲ್ಲಿರುವ ಅಧಿಕಾರಿಗಳು ಸಾರ್ವಜನಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಸಾರ್ವಜನಿಕರಿಂದ ಗೌರವ ಪಡೆಯುವರು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಸಂಗಾತಿ ಕಡೆಯವರಿಗೆ ನಿಮ್ಮ ಎಲ್ಲಾ ಕಷ್ಟಸುಖಗಳನ್ನು ಹೇಳಿಕೊಳ್ಳುವುದು ತರವಲ್ಲ. ಬಂಧುಗಳ ನಡುವೆ ಬರುವ ಭಿನ್ನಾಭಿಪ್ರಾಯಗಳಿಗೆ ನೀವೇ ಕಾರಣಕರ್ತರಾಗಬಹುದು, ಎಚ್ಚರ ಇರಲಿ. ಕೃಷಿ ಸಂಶೋಧನಾ ವಿದ್ಯಾರ್ಥಿಗಳಿಗೆ ಗೌರವಧನ ಬರುತ್ತದೆ. ವಿಜ್ಞಾನಿಗಳಿಗೆ ಹೊಸ ಹೊಸ ವಿಚಾರಗಳು ಅರಿವಿಗೆ ಬಂದು ಹೆಚ್ಚಿನ ಸಾಧನೆಗೆ ಅನುಕೂಲವಾಗುತ್ತದೆ. ಸ್ವಂತ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಇರಲಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ನಿಮ್ಮ ಆಲೋಚನೆಗೆ ಬಂದ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದರಿಂದ ಅನುಕೂಲ ಹೆಚ್ಚುತ್ತದೆ. ಹೊಂದಿಕೊಳ್ಳುವ ಮನೋಭಾವದಿಂದಾಗಿ ಹೆಚ್ಚು ಜನರ ವಿಶ್ವಾಸವನ್ನು ಗಳಿಸುವಿರಿ. ಆರ್ಥಿಕ ಸ್ಥಿತಿಯು ಸುಧಾರಣೆ ಸ್ಥಿತಿಯತ್ತ ಹೊರಳುತ್ತದೆ. ಕಾನೂನು ಕಾಯ್ದೆ ವಿಚಾರದಲ್ಲಿ ನಿಮಗೆ ಯಶಸ್ಸು ಇರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಚಿನ್ನಾಭರಣಗಳನ್ನು ಖರೀದಿ ಮಾಡುವ ಸಾಧ್ಯತೆಗಳಿವೆ. ಮಾಧ್ಯಮದ ಕೆಲಸಗಾರರಿಗೆ ಹೆಚ್ಚಿನ ಕೆಲಸಗಳು ದೊರೆತು ಆದಾಯ ಹೆಚ್ಚುತ್ತದೆ. ಉದ್ಯೋಗಸ್ಥ ಮಹಿಳೆಯರಿಗೆ ಸೂಕ್ತ ಪದೋನ್ನತಿಯ ಅವಕಾಶ ಇರುತ್ತದೆ. ಆಪ್ತ ಬಂಧುಗಳನ್ನು ಭೇಟಿ ಮಾಡುವ ಅವಕಾಶವಿದೆ. ನ್ಯಾಯವಾದಿಗಳಿಗೆ ಉತ್ತಮ ಸಂಭಾವನೆ ಸಿಗುವ ಅವಕಾಶಗಳಿವೆ. ಕಣ್ಣಿಟ್ಟ ಆಸ್ತಿಯನ್ನು ಪ್ರಯತ್ನಪೂರ್ವಕವಾಗಿ ಪಡೆಯಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ರಾಜಕೀಯದವರ ಸಹಕಾರದಿಂದ ಮಹತ್ತರ ಕೆಲಸವೊಂದನ್ನು ಸಾಧಿಸಿಕೊಳ್ಳುವಿರಿ. ಗುತ್ತಿಗೆ ಕೆಲಸ ಮಾಡುವವರಿಗೆ ಕೆಲಸಗಳಲ್ಲಿ ಹೆಚ್ಚಿನ ಲಾಭವಿದೆ. ಗುಣವಂತರ ಸ್ನೇಹ ಮತ್ತು ಸಹಕಾರಗಳು ದೊರೆತು ಸಂತಸವಾಗುತ್ತದೆ. ಉದ್ಯೋಗ ಬದಲಾವಣೆಯ ಬಗ್ಗೆ ಸಾಕಷ್ಟು ಪ್ರಯತ್ನಿಸುವಿರಿ. ಕೆಲವರಿಗೆ ಹೊಸ ಯಂತ್ರಗಳನ್ನು ಖರೀದಿ ಮಾಡಿ ಉತ್ಪಾದನೆ ಹೆಚ್ಚು ಮಾಡುವ ಅವಕಾಶವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬಹಳ ದಿನಗಳಿಂದ ಬಾಕಿ ಇರುವ ಕೆಲಸವೊಂದನ್ನು ಮಾಡಿ ಮುಗಿಸುವಿರಿ. ಮಹಿಳೆಯರು ವಿದ್ಯುತ್ ಉಪಕರಣಗಳನ್ನು ಬಳಸುವಾಗ ಬಹಳ ಎಚ್ಚರಿಕೆಯನ್ನು ವಹಿಸುವುದು ಒಳ್ಳೆಯದು. ನಿತ್ಯದ ಕೆಲಸಗಳ ಕಡೆಗೆ ಹೆಚ್ಚಿನ ನಿಗಾ ವಹಿಸುವಿರಿ. ವಸ್ತ್ರದ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ರೈತರು ಬೆಳೆದ ಬೆಳೆಗೆ ಹೆಚ್ಚಿನ ಲಾಭವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಡೆ-ನುಡಿಗಳಿಂದ ಜನರು ಮಹತ್ವ ಕೊಡುವುದು ಕಡಿಮೆಯಾಗಬಹುದು. ಆತ್ಮೀಯರೊಬ್ಬರ ಶಿಫಾರಸಿನಿಂದ ಸರ್ಕಾರಿ ಕಚೇರಿಯ ಕೆಲ ಕೆಲಸಗಳು ಆಗುತ್ತವೆ. ವಾಣಿಜ್ಯ ವ್ಯವಹಾರಗಳಲ್ಲಿ ಹೆಚ್ಚಿನ ಯಶಸ್ಸನ್ನು ಕಾಣಬಹುದು. ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಅವಕಾಶವೊಂದು ದೊರೆಯುತ್ತದೆ, ಅದನ್ನು ಬಳಸಿಕೊಳ್ಳಿರಿ. ದಿನಸಿ ವ್ಯಾಪಾರಿಗಳಿಗೆ ಉತ್ತಮ ಆದಾಯವಿರುತ್ತದೆ.

ಪದಬಂಧ 2726



ಮೇಲಿನಿಂದ ಕೆಳಕ್ಕೆ

1. ಹಣ ಪಾವತಿಸಿ ಚೀಟಿ ಪಡೆಯಿರಿ 3
2. ಜಪತಪದಿಂದ ಉಂಟಾದ ಉರಿ 3
3. ಮಂಗಳಕರವಲ್ಲದ್ದು 3
4. ಒಳ್ಳೆಯ ವಾರಕ್ಕೆ ಬರುವ ಬಾಣಸಿಗ 3
7. ಕೊಂಬು ಕಳೆದುಕೊಂಡರೆ ಸೂರ್ಯ ಹರೆಯದ ಹುಡುಗಿಯಾಗುತ್ತಾನೆ 3
9. ಛಲದ ವಿಶ್ವಾಮಿತ್ರನಷ್ಟೇ ಪಟ್ಟು ಹಿಡಿದ ಮಹರ್ಷಿ 3
11. ಸುರಸ್ತ್ರೀಯ ಸ್ವರೂಪ ತಲೆಕೆಳಕಾಗಿದೆ 3
12. ಬಾಯಿ ಮೊಸರಾಗಲು ಕೈಗೆ ಒದಗುವ ಸ್ಥಿತಿ 3
13. ಮನಸು ಮುರುಸುವಂತಹ ಗೋಜಲಿನ ಪೂರ್ವ ಪದ 3
14. ಗೇಣಿಯ ಭೂಮಿಯಿಂದ ಪಡೆಯುವ ಹಣ 3
17. ವಿಮೋಚನೆಯ ಕಡೆ ಹೋರಾಡುವ ಹೆಣ್ಣು 3
19. ಅಚ್ಚ ಬರಹದಲ್ಲಿರುವುದು 3
20. ಹೆಣ್ಣು ಗಂಡು ಕೂಡಿರುವ ರಾಶಿ 3
21. ಕನಸು ನಿಜವಾದ ಸ್ಥಿತಿ 3
22. ತದ್ಭವ ರೂಪದಲ್ಲಿ ಯಾದವ 3
23. ಭಗೀರಥನ ಪ್ರಯತ್ನದಿಂದ ಉದ್ಧಾರವಾದ ಪೂರ್ವಜ 3

ಎಡದಿಂದ ಬಲಕ್ಕೆ

1. ದ್ರವ್ಯದ ಲೆಕ್ಕಾಚಾರಕ್ಕೆ ಬಳಸುವ ಶಾಸ್ತ್ರ 5
3. ಭಗವಂತನಾಗಿ 'ಮತ್ತೆ ಹುಟ್ಟಿ ಬಾ' ಎಂದು ಮೊರೆ 5
5. ಭಾರ್ಗವ ಹಿಡಿದ ಕೈಗೊಡಲಿ 3
6. ನಿತ್ಯ ಸಿಗುವ ಸಂಬಳ 5
8. ದಾಟುವುದಕ್ಕೆ ಕಠಿನವೆನಿಸುವ ಲೌಕಿಕ ಸಮುದ್ರ 5
10. ಮಾಡಿದ ಅಪರಾಧಕ್ಕೆ ದೇವರಿಗೆ ಸಲ್ಲಿಸುವ ದಂಡದ ಹಣ 5
13. ಪ್ರಿಯವೆನಿಸುವ ದೈವ 5
15. ನಮ್ಮನ್ನಾಳುವ ವ್ಯವಸ್ಥೆ ಸದಾ 'ಕಾರ' ವಾಗಿ ಇರುತ್ತೆ 3
16. ಪಂಗಡದ ಆರಾಧ್ಯ ಮೂರ್ತಿ 5
18. ಸಿಪ್ಪೆಯಂತೆ ಇರುವ ಹಣವನ್ನು ಬಿಡಿಸಿ ಕೀಳುವವ 5
20. ಅತಿಯಿಲ್ಲದೆ ಹಿತವಾಗಿ ನಿಯಮದಷ್ಟೇ ಮಕ್ಕಳು 5
22. ವೇದಗಳ ಜೊತೆ ಹುಟ್ಟಿ ಬಂದ ಅಗ್ನಿ 5
24. ಹಿಂದೆ ಬೌದ್ಧಕಾಲದಲ್ಲಿ ಮೆರೆದ ವಿಶ್ವವಿದ್ಯಾಲಯ 3
25. ಸದಾ ಹಸನ್ಮುಖಿ ಈ ಸಣ್ಣ ಮಗು 5
26. ಹೊಳೆಯುವ ಕಠಿಣ ಹರಳಿನ ಭೂಷಿತಾಭರಣ 5

ಪದಬಂಧ ಉತ್ತರ -2725

ಮೇಲಿಂದ ಕೆಳಕ್ಕೆ

1. ಕಡುಕೋಪ 2.ತ್ರಯೋದಶಿ 3.ಬಾಣಸಿಗ 4.ಹರಿಕತೆ 7.ರಕ್ಷಾಕವಚ 8.ವರದಾಭಯ 9.ನಾಟಕರಂಗ 10.ಕರುಣಾನಂದ 12.ವಾತಜ್ವರ 13.ಲಯಕಾರ 15.ರಿಪಿರಿಪಿ 16.ರುದ್ರದೇವ

ಎಡದಿಂದ ಬಲಕ್ಕೆ

1. ಕರಪತ್ರ 3.ಬಾದೂಷಹ 5.ಯೋಗಶಿಕ್ಷಣ 6.ಪರಮಶಿವ 9.ನಾಗರೀಕತೆ 11.ದಾಯಕ 12.ವಾಚನಾಲಯ 14.ಗರಿಗೆದರು 17.ಕಾಮಕಸ್ತೂರಿ 18.ರಣಧೀರ 19.ಪಿಳ್ಳೆನೆವ

ನನ್ನಜ್ಜ ಲಾಂಗೂಲಾಚಾರ್ಯ!


ಪಾ.ವೆಂ. ಆಚಾರ್ಯ

ಪಾ.ವೆಂ. ಆಚಾರ್ಯ ಎಂದರೆ ಶಬ್ದಗಳ ಗಾರುಡಿಗ. ಪದಾರ್ಥ ಚಿಂತಾಮಣಿಯ ಮೂಲಕ ಶಬ್ದಗಳ ಇತಿಹಾಸವನ್ನೇ ತೆರೆದಿಟ್ಟವರು. ಓದುಗರೊಡನೆ ಹರಟೆಯ ಮೂಲಕ ಲಾಂಗೂಲಾಚಾರ್ಯರಾಗಿ ರಾಜ್ಯದ ಮನೆಮಾತಾದವರು. ಕನ್ನಡ ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಹಿರಿಮೆಯನ್ನು ತಂದುಕೊಟ್ಟವರು. ಅವರ ಮೊಮ್ಮಗಳು, ಅಜ್ಜನನ್ನು ನೆನಪಿಸಿಕೊಂಡ ಆಪ್ತ ಬರಹ ಇಲ್ಲಿದೆ...

ಛಾಯಾ ಕೆ. ಉಪಾಧ್ಯ

ನನಗೆ ಅಜ್ಜನ ನೆನಪೆಂದರೆ ಸದಾ ಬರೆಯುತ್ತ ಕೂತವರು ಸಾಹಿತ್ಯ, ಸಂಗೀತದ ಕುರಿತೇ ಯೋಚಿಸುವವರು, ದೇವರೆಂದರೆ ಸಿಡಿಮಿಡಿಗೊಳ್ಳುವವರು. ನಾನು ಅವರ ಮಗಳ ಮಗಳು. ನನ್ನ ಬಾಲ್ಯದ ದಿನಗಳಲ್ಲಿ ನಾವು ಬೇಸಿಗೆ ರಜೆಗೆಂದು ಬೆಂಗಳೂರಿನಿಂದ ಹುಬ್ಬಳ್ಳಿಯಲ್ಲಿರುವ ಅವರ ಮನೆಗೆ ಹೋಗುತ್ತಿದ್ದೆವು. ಅಜ್ಜನೆಂದರೆ ಎಲ್ಲರಂತೆ ಮಾತಿಗೆ, ಹರಟೆಗೆ ಸಿಗುವ ಮನುಷ್ಯನಾಗಿರಲಿಲ್ಲ. ಬದಲಾಗಿ ಅವರು ಬರೆಯುತ್ತ ಒಂದೆಡೆ ಕೂತರೆ ಮಕ್ಕಳೆಲ್ಲ ಗಲಾಟೆ ಮಾಡಬಾರದೆಂದು ಮೊದಲೇ ನಮಗೆ ಹೇಳಿಬಿಟ್ಟಿದ್ದರಿಂದ ಅಲ್ಲೊಂದು ಅಲಿಖಿತ ಶಿಸ್ತು ಇದ್ದುಬಿಡುತ್ತಿತ್ತು. ಅಜ್ಜ ಬರೆಯಲು ಕೂತರೆಂದರೆ ಇಡೀ ಮನೆಯಲ್ಲಿ ಒಂಥರದಲ್ಲಿ ಮೌನ ಆವರಿಸುತ್ತಿತ್ತು.

ನನ್ನ ಅಮ್ಮ ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಅಮ್ಮ ದಾಸರ ಪದ್ಯಗಳನ್ನು ಹೇಳುವಾಗಲೆಲ್ಲ ಬಂದು ಕೂತು ಶ್ರದ್ಧೆಯಿಂದ ಕೇಳುತ್ತಿದ್ದ ಅಜ್ಜ, ಅದು ಮುಗಿದ ಮೇಲೆ ಆ ದಾಸರ ಕುರಿತು ವಿವರಗಳನ್ನೂ ಕೊಡುತ್ತಿದ್ದರು. ಕುಮಾರವ್ಯಾಸ ಭಾರತವನ್ನು ಅದೆಷ್ಟು ಚಂದ ಹೇಳುತ್ತಿದ್ದರೆಂದರೆ, ನಮಗೆಲ್ಲ ಕರ್ಣನೇ ಇಷ್ಟವಾಗಲು ಕಾರಣನೇ ಕುಮಾರವ್ಯಾಸ ಎನ್ನುತ್ತ ನಮ್ಮ ಕರ್ಣದೊಳಗೂ ಕರ್ಣನನ್ನು ಇಳಿಸಿಬಿಡುತ್ತಿದ್ದರು.

ನನಗೆ ತುಂಬ ಕುತೂಹಲ ಎನಿಸಿದ್ದೆಂದರೆ ದೇವರೆಂದರೆ ಸಿಡಿಮಿಡಿಗೊಳ್ಳುತ್ತಿದ್ದರು ಅಜ್ಜ. ಅಜ್ಜಿ, ದೊಡ್ಡಮ್ಮಂದಿರೆಲ್ಲ ಅಪಾರವಾಗಿ ದೈವಭಕ್ತಿ ಇಟ್ಟುಕೊಂಡಿದ್ದರೆ ಅಜ್ಜ ಮಾತ್ರ ಅದರಿಂದ ಮಾರುದೂರ. ಅಜ್ಜಿಗೆ ಮಾತುಕೊಟ್ಟಂತೆ ಪ್ರತಿದಿವಸ ದೇವರ ಪೂಜೆಯನ್ನೇನೋ ಮಾಡುತ್ತಿದ್ದರು. ಆದರೆ ಬೈದುಕೊಂಡೇ ಮಾಡುತ್ತಿದ್ದರು. ಒಮ್ಮೆ ಅವರಿಗೆ ಅಸ್ತಮಾ ಆಗಿ ಮಲಗಿಬಿಟ್ಟಿದ್ದರು. ಆಗ ಅವರು 'ಈ ಅಸ್ತಮಾಕ್ಕೆ ಥ್ಯಾಂಕ್ಸ್ ಹೇಳುತ್ತೇನೆ. ಇದರಿಂದ ನಾನು ದೇವರ ಪೂಜೆ ಮಾಡುವುದು ತಪ್ಪಿತು' ಎಂದಿದ್ದು ಈಗಲೂ ನನ್ನ ನೆನಪಿನಲ್ಲಿದೆ. ಅಲ್ಲದೆ 'ನನಗೆ ಇಬ್ಬರು ಹೆಂಡತಿಯರು, ಒಂದು ನನ್ನ ಧರ್ಮಪತ್ನಿ, ಇನ್ನೊಂದು ಅಸ್ತಮಾ' ಎನ್ನುತ್ತಿದ್ದರು. ಅಂದರೆ ನೋವನ್ನೂ ತಿಳಿಹಾಸ್ಯವಾಗಿಸುವ ಕಲೆ ಅವರಿಗೆ ಒಲಿದಿತ್ತು.

ಹೀಗೆಲ್ಲ ಇದ್ದ ಅಜ್ಜ ಇನ್ನೊಂದು ದೊಡ್ಡ ಪತ್ರಕರ್ತನಾಗಿದ್ದ, ನಾಡು ಗುರುತಿಸುವಂತಹ ಕೆಲಸ ಮಾಡಿದ್ದ, ದೊಡ್ಡ ಸಾಹಿತಿಯಾಗಿದ್ದ ಎನ್ನುವುದು ತಿಳಿದದ್ದೇ ನಾವು ಮಧ್ಯವಯಸ್ಸನ್ನು ದಾಟಿದ ಮೇಲೆ. ಅವರ ಪದಾರ್ಥ ಚಿಂತಾಮಣಿಯಾಗಲೀ, ಲಾಂಗೂಲಾಚಾರ್ಯನಾಗಿ ಬರೆದ ಹರಟೆಯಾಗಲೀ, ಅನುವಾದ ಕೃತಿಗಳಾಗಲೀ, ವಿಜ್ಞಾನ ಲೇಖನಗಳಾಗಲೀ ಎಲ್ಲವನ್ನೂ ನಾನು ಓದಿದ್ದು ಈ ದಿನಗಳಲ್ಲಿ. ಈಗ ಅನಿಸುತ್ತಿದೆ, ಈ ಅಜ್ಜ ಅದೆಷ್ಟು ಎತ್ತರದಲ್ಲಿದ್ದ, ನಾವು ಆತನ ಕುರಿತು ಅಧ್ಯಯನ ಮಾಡಬೇಕಾದ್ದು ಎಷ್ಟೊಂದು ಇತ್ತು ಎಂಬುದು.

ಅಜ್ಜನನ್ನು ನೆನಪಿಸಿಕೊಳ್ಳಲು ಈಗ ಕೆಲವು ಕಾರಣಗಳಿವೆ. ಈಗ ಸಂಸ್ಕೃತವೇ ಬೇಕು, ಕನ್ನಡವೊಂದೇ ಸಾಕು ಎಂದು ಕೂಡ, ಎಲ್ಲರ ಕನ್ನಡ, ಸಂಸ್ಕೃತ ಎಂಬೆಲ್ಲ ಭಾಷೆಯ ಕುರಿತಾದ ಈ ಕಿತ್ತಾಟಗಳು ನಡೆಯುತ್ತಿರುವ ಸಂದರ್ಭದಲ್ಲಿ ತಾತ ಬದುಕಿದ್ದರೆ ಯಾವ ಪ್ರತಿಕ್ರಿಯೆ ಅವರಿಂದ ಬರುತ್ತಿತ್ತು ಎಂದು ಯೋಚಿಸುತ್ತೇನೆ. ಭಾಷೆಯೊಂದು ಬೇರೆಬೇರೆ ಮೂಲಗಳಿಂದ ಎರವಲು ಪಡೆದ ಒಂದು ಶಿಷ್ಟ ಸಂಸ್ಕೃತಿಯಾಗುತ್ತದೆಂಬುದನ್ನು ಬರೆದೇ ಬದುಕಿ ತೋರಿದವರು. ಶಬ್ದಗಳ ವ್ಯುತ್ಪತ್ತಿಯ ಕುರಿತು ಹೆಕ್ಕಿಹೆಕ್ಕಿ ಕನ್ನಡಕ್ಕೆ ಒದಗಿಸಿಕೊಟ್ಟವರು ಅವರು.

ನಿಜಕ್ಕೂ ಭಾಷೆ ತೀರ ತರ್ಕಶೂನ್ಯ most illogical ಆಗಿದೆ. ಮತ್ತೆ ನಾವು ನಮ್ಮ ತರ್ಕಶಾಸ್ತ್ರವನ್ನು ಕಟ್ಟಿ ಅದು ಬಹುಭದ್ರ ಕಟ್ಟಡವೆಂದು ಭಾವಿಸುತ್ತೇವೆ- ಎನ್ನುತ್ತಿದ್ದರು ಅಜ್ಜ. ಅದಕ್ಕೆ ಉದಾಹರಣೆಗಳು ಹೀಗಿವೆ...

ಶಬ್ದ ಸೃಷ್ಟಿಯಲ್ಲಿ, ಅರ್ಥದಾನದಲ್ಲಿ ಮಾನವಕುಲದ ಸಮಾನ ಚಿಂತನೆಗೆ ಅಜ್ಜ ಮನುಷ್ಯ ಶಬ್ದವನ್ನು ಉದಾಹರಿಸುತ್ತಾರೆ. 'ನನ್ನ ಮನುಷ್ಯನನ್ನು ಕಳುಹಿಸುತ್ತೇನೆ' ಎನ್ನುವಾಗ ಮನುಷ್ಯ ಸೇವಕನೆಂಬ ಅರ್ಥಕ್ಕೆ ತಿರುಗುತ್ತದೆ. ದ್ರಾವಿಡದಲ್ಲಿ ಆಳ್ ಎಂದರೆ ಮನುಷ್ಯನೂ ಹೌದು, ಸೇವಕನೂ ಹೌದು. ಅರಬ್ಬಿಯಲ್ಲಿ ಆದ್ಮಿ ಎಂದರೆ ಮನುಷ್ಯ. ನಮ್ಮ ಮನುವಿನಂತೆ ಅರಬ್ಬರಲ್ಲದೆ ಹೀಬ್ರೂ ಜನಾಂಗಗಳಿಗೂ ಆದಮ್ ಮೂಲಪುರುಷನೂ ಆದಿ ಋಷಿಯೂ ಆಗಿದ್ದಾನೆ. ಅಲ್ಲಿ ಕೂಡ ಆದ್ಮಿ ಶಬ್ದ ಸೇವಕನೆಂಬ ಅರ್ಥವನ್ನು ಸಂಪಾದಿಸಿದೆ. ಖಂಡಾಂತರದಲ್ಲಿ ಇಂಗ್ಲಿಷ್‌ನ man ಕೂಡ ನಮ್ಮಲ್ಲಿರುವಂತೆ ಸೇವಕನೆಂಬ ಅರ್ಥ ಪಡೆಯುತ್ತದೆ. I will send my man ಎನ್ನುತ್ತಾರೆ. ಅಂದರೆ ಎಷ್ಟೆಷ್ಟು ದೂರ ದೂರದ ಮಾನವರು, ಎಷ್ಟು ಸಮಾನವಾಗಿ ಆಲೋಚಿಸುತ್ತಾರೆ, ಎಷ್ಟು ಸಮಾನವಾಗಿ ಮಾತು ನಿರ್ಮಿಸಿಕೊಳ್ಳುತ್ತಾರೆ ಮತ್ತು ಎಷ್ಟು ನಿರ್-ಅರ್ಥಕವಾಗಿ ಹೋರಾಡುತ್ತಾರೆ ಎಂದು ವಿವರಿಸುತ್ತಾರೆ.

ಶಬ್ದಗಳು ಭಾಷೆಯಿಂದ ಭಾಷೆಗೆ ಹೋದಾಗ ಹೊಸ ಅವತಾರ ತಾಳುತ್ತವೆ. ಕಾಲಕ್ಕೆ ತಕ್ಕ ಕೋಲ ಕಟ್ಟುತ್ತವೆ. ಅಜ್ಜ ಕೂಡ ಶಬ್ದಗಳ ಭವಾವಳಿಯನ್ನು ಶೋಧಿಸುತ್ತ ಸಂಸ್ಕೃತ, ಪ್ರಾಕೃತ, ತಮಿಳು, ಬಂಗಾಳಿ, ಮರಾಠಿ, ಹಿಂದಿ, ಉರ್ದು, ಪರ್ಷಿಯನ್, ಅರಬ್ಬಿ, ಇಂಗ್ಲಿಷ್, ಪೋರ್ಚುಗೀಸ್ ಶಬ್ದಗಳನ್ನು ತನಿಖೆ ಮಾಡುತ್ತಾರೆ. ಈ ಶಬ್ದ ಜಿಜ್ಞಾಸೆಯಲ್ಲಿ ಸ್ವಾರಸ್ಯಕರ ಮಾಹಿತಿಗಳು ಗೊತ್ತಾಗುತ್ತವೆ. ರಿಕ್ಷಾ ಜಪಾನಿ ಮೂಲದ ಶಬ್ದ.- ಜಿನ್‌ರಿಕಿಷಾ (ಜಿನ್ - ಮನುಷ್ಯ, ರಿಕಿ - ಶಕ್ತಿ, ಷಾ - ವಾಹನ). ಸಂಸ್ಕೃತದ ಪೃಥುಕ (ಹೊಸ ಪ್ರಾಯದ ಪ್ರಾಣಿ) ಪ್ರಾಕೃತದಲ್ಲಿ 'ಹುಡುಅ' ಆಗಿ ಕನ್ನಡದ ಹುಡುಗ ಆಗಿದೆ ಎಂದು ಬರೆದಿದ್ದಾರೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಅವರು ಮಹಿಳಾ ದೃಷ್ಟಿಕೋನದಿಂದ ಆ ಕಾಲದಲ್ಲೇ ಯೋಚಿಸಿದ್ದು ಮತ್ತು ಆ ಶಬ್ದಗಳ ಹಿನ್ನೆಲೆಯನ್ನೂ ವಿವರಿಸಿದ್ದು ಒಬ್ಬ ಮಹಿಳೆಯಾಗಿ ನನಗೆ ಅಚ್ಚರಿಯೆನಿಸುತ್ತದೆ.

ಹೆಣ್ಣನ್ನು ನಿರ್ದೇಶಿಸಲು ನಮ್ಮಲ್ಲಿರುವ ಶಬ್ದಗಳು, ಪುರುಷ ಪರಂಪರೆಯಲ್ಲಿರುವ ಹೆಣ್ಣನ್ನು ಕುರಿತ ಇಷ್ಟ ಅನಿಷ್ಟಗಳನ್ನು, ಕನಸುಗಳನ್ನು ವಿವರಿಸುತ್ತವೆ. ಜಾಯಾ-ಜನನ ಕೊಡುವವಳು, ಪುರಂಧ್ರೀ-ತುಂಬಾ ಫಲವೀಯುವವಳು, ಸತಿ-ಸತ್ಯವಾಗಿರುವವಳು, ವಧು-ಕರೆದುಕೊಂಡು ಅಥವಾ ಹೊತ್ತುಕೊಂಡು ಬಂದವಳು, ಯೋಷಿತ್-ಜವ್ವನಗಿತ್ತಿ, ಅಂಗನೆ-ಮಾಟವಾದ ಅಂಗಗಳುಳ್ಳವಳು, ಅಸಿಯಳ್-ತೆಳ್ಳಗಿರುವವಳು, ಮಹಿಳಾ-ಉತ್ತೇಜನಗೊಳಿಸುವವಳು, ವನಿತಾ-ಆಸೆಪಡುವಂತೆ ಮಾಡುವವಳು, ರಮಣಿ-ರಮಿಸುವಂತೆ ಪ್ರೇರಿಸುವವಳು, ಲಲನಾ- ಲಲ್ಲೆಗರೆಯುವವಳು, ಪ್ರಮದೆ-ಕಾಮೋನ್ಮಾದವುಳ್ಳವಳು, ವಶಾ-ಅಂಕೆಯಲ್ಲಿರುವವಳು, ಮಾನಿನಿ-ಹಮ್ಮುಳ್ಳವವಳು, ಭಾಮಿನಿ-ಕೋಪ, ಛಲವುಳ್ಳವಳು. 'ಇಷ್ಟೆಲ್ಲ ಗಡುಸು ಇದ್ದೂ ಅವಳು ಅಬಲಾ ಆಗಿರಬೇಕು. ಅಂದರೆ ಮಾತ್ರ ಅವಳನ್ನು ಕಾಯುವ ಹೆಮ್ಮೆಯನ್ನು ಗಂಡು ಅನುಭವಿಸಬಲ್ಲ. ಇಂಥ ಎಲ್ಲ ಪರಸ್ಪರ ವಿರೋಧವಾದ ಗುಣ ಲಕ್ಷಣಗಳನ್ನು ಭಾರತೀಯ ರೊಮ್ಯಾಂಟಿಕ್ ಗಂಡಸು ಹೆಣ್ಣಿನಲ್ಲಿ ನಿರೀಕ್ಷಿಸಿದ್ದಾನೆ. ಇದು ಈ ಶಬ್ದಗಳು ಕೊಡುವ ಮಾಹಿತಿ' ಎನ್ನುತ್ತಾರೆ ಅಜ್ಜ.

'ಶಬ್ದಗಳ ಬೇರುಗಳನ್ನು ಹುಡುಕುವುದಷ್ಟೇ ಪದಾರ್ಥ ಚಿಂತಾಮಣಿಯ ಉದ್ದೇಶವಲ್ಲ. ನಾನು ಶಬ್ದ ಮೂಲವನ್ನು ಶೋಧಿಸುವುದರಿಂದ ತೃಪ್ತನಾಗಿಲ್ಲ. ಅವು ಬೇರೆ ಯಾವಯಾವ ಐತಿಹಾಸಿಕ, ನರವಂಶ ಚರಿತ್ರದ, ಅರ್ಥ ವ್ಯವಸ್ಥೆಯ, ಸಂಸ್ಕೃತಿ ಸಂಪ್ರದಾಯಗಳ, ಜನಾಂಗದ ವಲಸೆಯ ಬಗ್ಗೆ ಗುಟ್ಟು ಹೇಳುತ್ತವೆ ಎಂದು ವಿಚಾರಿಸಿದ್ದೇನೆ. ಮನುಷ್ಯನ ವಿಚಾರ ರೀತಿಯಲ್ಲಿರುವ ಸಾಮ್ಯ, ವೈಷಮ್ಯಗಳನ್ನು ಬೇರೆ ಭಾರತೀಯ, ವಿದೇಶೀಯ ಭಾಷೆಗಳ ಪದಗಳ ವಿಕಾಸದೊಡನೆ ಹೋಲಿಸಿದ್ದೇನೆ' ಎನ್ನುತ್ತಾರೆ ಅಜ್ಜ. ಪದಾರ್ಥ ಚಿಂತಾಮಣಿಯ ಜನಪ್ರಿಯತೆ ಎಷ್ಟೆಂದರೆ 'ಲಾಂಗೂಲಾಚಾರ್ಯನಾಗಿ ಕಾಲು ಶತಮಾನದಿಂದ ಗುರುತಿಸಲ್ಪಡುತ್ತಿದ್ದವನನ್ನು ಈ 'ಚಿಂತಾಮಣಿ' ವಿಮೋಚನೆಗೊಳಿಸಿಬಿಟ್ಟಿತು ಎಂದೂ ಹೇಳಿಕೊಂಡಿದ್ದುಂಟು.

ಅಜ್ಜ ಸರ್ವ ಕುತೂಹಲಿಯಾಗಿದ್ದರು. ಅವರ ಆಸಕ್ತಿಗೆ ಬರದ ವಿಷಯವೇ ಇರಲಿಲ್ಲ. ಸೀರೆಯಿಂದಲೇ ಮಹಾಭಾರತವಾಯಿತು, ದ್ರೌಪದಿ ಫ್ರಾಕ್ ತೊಟ್ಟಿದ್ದಿದ್ದರೆ ಅಥವಾ ತಮಿಳು ರೀತಿಯಲ್ಲಿ ಸೀರೆ ಉಟ್ಟಿದ್ದಿದ್ದರೆ ವಸ್ತ್ರಾಪಹರಣಕ್ಕೆ ಅವಕಾಶವಿರುತ್ತಿರಲಿಲ್ಲ ಎಂದಿದ್ದರು. ದಶರಥನಿಗೆ ಒಬ್ಬಳು ಹೆಂಡತಿ ಕಡಿಮೆ ಇದ್ದಿದ್ದರೆ ಅಥವಾ ಆ ಹೆಂಡತಿಯ ಮನಸ್ಸು ಸ್ವಲ್ಪ ಕಡಿಮೆ ಗಟ್ಟಿಯಾಗಿದ್ದಿದ್ದರೆ ಅಥವಾ ಅವನ ರಥದ ಗಾಲಿಯ ಕೀಲು ಸ್ವಲ್ಪ ಹೆಚ್ಚು ಗಟ್ಟಿಯಾಗಿದ್ದಿದ್ದರೆ - ರಾಮಾಯಣವೇ ಆಗುತ್ತಿದ್ದಿಲ್ಲ ಎಂಬುದು ಕೂಡ ಅವರದೇ ಮಾತು.

ಅವರ ಬಲು ಇಷ್ಟವಾದ ಸಾಹಿತ್ಯಪ್ರಕಾರ ಕಾವ್ಯ. ಪ್ರಾರಂಭದಲ್ಲಿ ದೀರ್ಘವಾದ ಕವನಗಳನ್ನು ಬರೆದರೂ ನಂತರದ ದಿನಗಳಲ್ಲಿ ಚುಟುಕು ಕವನಗಳನ್ನು ಬರೆದಿದ್ದಾರೆ. ನವ್ಯ ಕವಿಗಳನ್ನು ಹೀಗೆ ಕವಿತೆಯೊಂದರಲ್ಲಿ ಲೇವಡಿ ಮಾಡಿದ್ದಾರೆ. ಅದು ಇಂತಿದೆ:

ಕವಿಯೊಬ್ಬ ಕವಿತೆಯನ್ನು
ಗಾಜಿನಲ್ಲಿ ಬರೆದ
ಕೈತಪ್ಪಿ ಕೆಳಗೆ ಒಗೆದ
ಕೈಗೆ ಬಂದಂತೆ ಚೂರುಗಳ ಜೋಡಿಸಿದ
ನವ್ಯಕಾವ್ಯ ಇದೆಂದು ಕರೆದ

ಮೂಲತಃ ಸೌಮ್ಯ ಸ್ವಭಾವದವರಾಗಿದ್ದ ಅಜ್ಜ, ಆಕಸ್ಮಿಕಗಳಿಂದಲೇ ತಮ್ಮ ಬದುಕನ್ನು ರೂಪಿಸಿಕೊಂಡವರು. ಈಗ ಅಂಗೈಯಲ್ಲಿ ಪ್ರಪಂಚವನ್ನೇ ಇಟ್ಟುಕೊಂಡಿರುವ ನಾನು ಅವರ ಪುಸ್ತಕಗಳು, ಲೇಖನಗಳನ್ನೆಲ್ಲ ಓದುವಾಗ ಸಿಗುವ ಬೇರೆಬೇರೆ ದೇಶಗಳ ಚಿಕ್ಕ-ಚಿಕ್ಕ ಘಟನೆಗಳು, ಶಬ್ದಗಳ ವಿವರಣೆ, ಹರಟೆ, ವಿಜ್ಞಾನ ಲೇಖನಗಳು ಕೊಡುವ ಮಾಹಿತಿಯಿಂದ ಪುಳಕಿತಳಾಗಿದ್ದೇನೆ. ಮಾಹಿತಿ ಸಂಗ್ರಹಿಸಲು ಕಷ್ಟವಾದ ಆ ದಿನಗಳಲ್ಲಿ ಪುಸ್ತಕವನ್ನು ಓದಿ ಬರೆದೇ ಅಜ್ಜ ಜೀವನವನ್ನು ಹೇಗೆ ಸಾಗಿಸಿದರೆಂದು ಆಶ್ಚರ್ಯಪಟ್ಟಿದ್ದೇನೆ. ಅನೇಕ ಸಲ ಅನಿಸಿದ್ದಿದೆ, ಎಸ್ಸೆಸ್ಸೆಲ್ಸಿಯವರೆಗೆ ಮಾತ್ರ ಓದಿದ ಅಜ್ಜ ಎಷ್ಟೊಂದನ್ನು ಬರೆದ! ಛೇ, ಆತನೊಂದಿಗೆ ನಾನು ಇನ್ನಷ್ಟು ಒಡನಾಡಬೇಕಿತ್ತು.

ನಿರೂಪಣೆ: ಭಾರತಿ ಹೆಗಡೆ

ಪಾ.ವೆಂ. ಸಾಹಿತ್ಯ ಸಿರಿ

ಪಾ.ವೆಂ. ಆಚಾರ್ಯ ಅವರ ಲೇಖನಗಳನ್ನು ಸಾಹಿತ್ಯಾಸಕ್ತರ ನೆರವಿನಿಂದ ಸಂಗ್ರಹಿಸಿಡುವ ಕೆಲಸದಲ್ಲಿ ಸುಮಾರು 5-6 ವರ್ಷಗಳಿಂದ ಛಾಯಾ ಅವರು ತೊಡಗಿಸಿಕೊಂಡಿದ್ದಾರೆ. ಇದುವರೆಗೆ ಸಂಗ್ರಹಿಸಿರುವ ಲೇಖನಗಳನ್ನು ಅಪ್‌ಲೋಡ್ ಮಾಡಿ ಇಡಲಾಗಿದೆ. pavem.sirinudi.org ಎಂಬ ಅಂತರ್ಜಾಲ ತಾಣದಲ್ಲಿ ಪಾವೆಂರವರ ಪುಸ್ತಕಗಳು, ಛಾಯಾಚಿತ್ರಗಳು, ಪತ್ರಿಕಾವರದಿಗಳು, ಕೈಬರಹಗಳು ಮುಂತಾದವುಗಳನ್ನು ಜೋಡಿಸಿಡಲಾಗಿದೆ. ಕಾಂತಾವರ ಕನ್ನಡ ಸಂಘದಲ್ಲಿ 'ಪಾ.ವೆಂ. ಆಚಾರ್ಯ ಪತ್ರಿಕಾ ಮಾಧ್ಯಮ ಪ್ರಶಸ್ತಿ'ಯನ್ನು ಈ ವರ್ಷದಿಂದ ಪ್ರಾರಂಭಿಸಲಾಗಿದೆ.

ಕಾರಕೂನನಿಂದ ಪತ್ರಕರ್ತನವರೆಗೆ

ಪಾಡಿಗಾರು ವೆಂಕಟರಮಣ ಆಚಾರ್ಯರು ಹುಟ್ಟಿದ್ದು 1915ರ ಫೆಬ್ರುವರಿ 6ರಂದು. ಪಾ.ವೆಂ. ತಮ್ಮ ಐದನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ಸೋದೆ ಮತ್ತು ಉಡುಪಿಯಲ್ಲಿ ತಮ್ಮ ಬಾಲ್ಯವನ್ನು ಕಳೆದರು. ಹತ್ತನೇ ತರಗತಿಯವರೆಗೆ ಓದಿದ ಅವರು ಹಣದ ಅಡಚಣೆಗಳಿಂದಾಗಿ ಮುಂದೆ ಓದಲು ಆಗಲಿಲ್ಲ. ಜೀವನ ನಿರ್ವಹಣೆಗಾಗಿ ಉಪಾಧ್ಯಾಯರಾಗಿ, ಅಂಗಡಿಯಲ್ಲಿ ಮಾರಾಟಗಾರರಾಗಿ, ಕಾರಕೂನರಾಗಿ, ಲೆಕ್ಕಪತ್ರ ನೋಡಿಕೊಳ್ಳುತ್ತಿದ್ದರು. ನಂತರ ಮದ್ರಾಸಿಗೆ ಹೋಗಿ, ಅಲ್ಲಿ ಹೋಟೆಲೊಂದರಲ್ಲಿ ಬಿಲ್ ರೈಟರ್ ಆಗಿ ಸೇರಿದರು. ಅದು ಎರಡನೇ ಮಹಾಯುದ್ಧದ ಅವಧಿಯಾದ್ದರಿಂದ ಸ್ವಲ್ಪೇ ಸಮಯದಲ್ಲಿ ಧಾರವಾಡಕ್ಕೆ ಹಿಂದಿರುಗಬೇಕಾಯಿತು. ಮುಂದೆ ಪತ್ರಕರ್ತರಾಗಿ ವೃತ್ತಿ ಆರಂಭಿಸಿದ ಅವರು 1956ರಲ್ಲಿ 'ಕಸ್ತೂರಿ' ಮಾಸ ಪತ್ರಿಕೆ ಸಂಪಾದಕತ್ವದ ಹೊಣೆ ಹೊತ್ತು, ದೀರ್ಘಕಾಲ ಕಾರ್ಯನಿರ್ವಹಿಸಿದರು. 1992 ಮೇ 4ರಂದು ಪಾ.ವೆಂ. ಅಸ್ತಂಗತರಾದರು.

ಕಥೆ
ಫಾತಿಮಾ ರಲಿಯಾ ಅವರ **ಲೆಕ್ಕಪುಸ್ತಕ**
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವನ
ಹಂಪನಾ ಅವರ **ಸಮನ್ವಯಗೀತೆ**
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಶ್ರೀಸಾಹಿತ್ಯದ ಆಕರಗ್ರಂಥ

ಒಳನೋಟ

ಪು: 642 ₹600

ಶ್ರೀಕೌಸ್ತುಭ (ಬಿಎಂಶ್ರೀಯವರ ಬರಹಗಳನ್ನು ಕುರಿತ ವಿಮರ್ಶಾತ್ಮಕ ಲೇಖನಗಳ ಸಂಪುಟ)
ಪ್ರಧಾನ ಸಂಪಾದಕ: ಆರ್. ಲಕ್ಷ್ಮೀನಾರಾಯಣ
ಸಂಪಾದಕ: ಜಿ. ಎಂ. ಹೆಗಡೆ
ಪ್ರ: ಬಿ. ಎಂ. ಶ್ರೀ. ಪ್ರತಿಷ್ಠಾನ
ಸಂ:080-26615877

ಬಿ.ಎಂ. ಶ್ರೀಕಂಠಯ್ಯನವರು ಆಧುನಿಕ ಕನ್ನಡ ಸಾಹಿತ್ಯಪ್ರವರ್ತಕರಲ್ಲಿ ಪ್ರಮುಖರು; 'ಕನ್ನಡದ ಕಣ್ವ' ಎಂದು ಹೆಸರಾದವರು; 'ಸಿಗನ್ನಡಂ ಗೆಲ್ಗೆ ಬಾಳ್ಗೆ', 'ಆಳ್ ಕನ್ನಡ ತಾಯ್', 'ಬಾಳ್ ಕನ್ನಡ ತಾಯ್' ಎಂದು ಘೋಷಿಸಿದವರು; ಕನ್ನಡದ ಏಳಿಗೆಗಾಗಿ ದಿಟವಾಗಿ ಶ್ರಮಿಸಿದವರು; ಹಲವು ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಅದರಲ್ಲೂ ಅವರ 'ಇಂಗ್ಲಿಷ್ ಗೀತಗಳು' ಮೂಡಿಸಿದ ಸಂಚಲನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮೈಲುಗಲ್ಲೆನಿಸಿದೆ. ಶ್ರೀಯವರ ಸಾಹಿತ್ಯವನ್ನು ಕುರಿತಂತೆ ಇದುವರೆಗೆ ಪ್ರಕಟವಾಗಿರುವ ನಾಡಿನ ಪ್ರಮುಖ ವಿದ್ವಾಂಸರ, ವಿಮರ್ಶಕರ ಮುಖ್ಯಲೇಖನಗಳನ್ನೆಲ್ಲ ಒಟ್ಟುಗೂಡಿಸಿ ಪ್ರಕಟಿಸಿರುವ ಕೃತಿಯೇ 'ಶ್ರೀಕೌಸ್ತುಭ'.

ಜಿ. ಎಂ. ಹೆಗಡೆ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಈ ಕೃತಿಯಲ್ಲಿ ಮೂರು ಭಾಗಗಳಿವೆ. ಮೊದಲನೆಯದರಲ್ಲಿ ಶ್ರೀಯವರ 'ಇಂಗ್ಲಿಷ್ ಗೀತಗಳು, 'ಹೊಂಗನಸುಗಳು' ಕುರಿತು ಲೇಖನಗಳಿವೆ; ಎರಡನೆಯ ಭಾಗದಲ್ಲಿ ಅವರ ನಾಟಕಸಾಹಿತ್ಯದ ವಿಮರ್ಶೆಯಿದ್ದರೆ, ಮೂರನೆಯ ಭಾಗದಲ್ಲಿ, ಕನ್ನಡ ಸಾರಸ್ವತಲೋಕಕ್ಕೆ ಬಿ.ಎಂ.ಶ್ರೀ.ಯವರ ಕೊಡುಗೆಯ ಬಗ್ಗೆ ವಿಮರ್ಶಾತ್ಮಕ ಲೇಖನಗಳಿವೆ. ಹಲವು ಗ್ರಂಥಗಳಲ್ಲಿ ನಾಲ್ಕಾರು ದಶಕಗಳಿಂದ ಪ್ರಕಟವಾಗಿದ್ದ ಲೇಖನಗಳ ಸಂಗ್ರಹವಾಗಿರುವ ಈ ಹೆಬ್ಬೊತ್ತಗೆ ಕನ್ನಡ ಸಾಹಿತ್ಯಚರಿತ್ರೆಯಲ್ಲೂ ಕಾವ್ಯಮೀಮಾಂಸೆಯಲ್ಲೂ ಆಕರಗ್ರಂಥವಾಗಿ ಒದಗುತ್ತದೆ ಎಂಬುದು ದಿಟ. ಮಾಸ್ತಿ, ಬೇಂದ್ರೆ, ತೀನಂಶ್ರೀ, ಕುರ್ತಕೋಟಿ, ಎ.ಆರ್.ಕೃ., – ಹೀಗೆ ಹಲವರ 43 ಲೇಖನಗಳು 'ಶ್ರೀಕೌಸ್ತುಭ'ದಲ್ಲಿವೆ.

'ಬಲಿಯುಗ'ದ ಕವಿತೆಗಳು

ಪು: 148 ₹120

ನೀನು ಹೋಗಿ ನಾನು ಜೋಗಿ
ಲೇ: ಎಸ್.ಜಿ. ಸಿದ್ಧರಾಮಯ್ಯ
ಪ್ರ: ವಸಂತ ಪ್ರಕಾಶನ, ಬೆಂಗಳೂರು
ಸಂ: 7892106719.

ನಾಲ್ಕು ದಶಕಗಳಿಗೂ ಹೆಚ್ಚಿನ ಕಾಲದಿಂದ ಕಾವ್ಯದ ಗಂಭೀರ ಅಭ್ಯಾಸದಲ್ಲಿ ತೊಡಗಿಕೊಂಡಿರುವ ಎಸ್.ಜಿ. ಸಿದ್ಧರಾಮಯ್ಯ 'ನೆಲಮೂಲ'ದ ಕವಿಯೆಂದೇ ಪ್ರಸಿದ್ಧರು. ಈ ನೆಲ-ಸಂಸ್ಕೃತಿಯ ಕಳ್ಳುಬಳ್ಳಿಗಳನ್ನು ಎಸ್‌ಜಿಎಸ್ ಕಾವ್ಯ ನಿರಂತರವಾಗಿ ಶೋಧಿಸುತ್ತಿದೆ. ಅವರ ಹೊಸ ಕೃತಿ 'ನೀನು ಹೋಗಿ ನಾನು ಜೋಗಿ' ಸಂಕಲನದ ಕವಿತೆಗಳು ಕೂಡ 'ನೆಲಮೂಲ' ವಿಶೇಷಣಕ್ಕೆ ತಕ್ಕಂತೆಯೇ ಇವೆ.

ಹಿಂದಣ ದಾರಿಯ ಮುಂದುವರಿಕೆಯಾಗಿ ಎಸ್‌ಜಿಎಸ್ ಅವರ ಶೈಲಿಯ ಅಭಿವ್ಯಕ್ತಿಗಳಾದ 'ಅಕ್ಕ ಕರಿಯಕ್ಕ', 'ನೀನು ಹೋಗಿ ನಾನು ಜೋಗಿ'ಯಂಥ ಕೆಲವು ಕವಿತೆಗಳು ಈ ಸಂಕಲನದಲ್ಲಿವೆ. ಆದರೆ, ಪ್ರಸಕ್ತ ಸಂಕಲನದ ಮುಖ್ಯ ಕವಿತೆಗಳು 'ರಾಜಕೀಯ ಕವಿತೆ'ಗಳು. ಸಮಕಾಲೀನ ರಾಜಕಾರಣ – ರಾಜಕಾರಣಿಗಳ ಭ್ರಷ್ಟತೆ ಹಾಗೂ ಕ್ರೌರ್ಯದ ಹಲವು ಆಯಾಮಗಳನ್ನು ಸಿಟ್ಟು, ವ್ಯಂಗ್ಯ, ಹತಾಶೆ, ಸ್ಫೋಟದ ಮನಸ್ಥಿತಿಯಲ್ಲಿ ಕವಿ ಚಿತ್ರಿಸುತ್ತಾರೆ.

'ಗಂಗೆ ಅಳುತ್ತಿದ್ದಾಳೆ' ಕವಿತೆಯ ಶೀರ್ಷಿಕೆ ನದಿಯೊಂದರ ಮಾಲಿನ್ಯದ ಕುರಿತು ನೆನಪಿಸಿದರೂ, ಇಲ್ಲಿನ ಗಂಗೆ ಭಾರತೀಯ ಸಮಾಜವೆನ್ನುವ ಜೀವನದಿಯೇ ಆಗಿದೆ. ಈ ಜೀವನದಿಯನ್ನು ಹೆಣಗಳ ಬಣವೆಯನ್ನಾಗಿಸಿದ ರಾಜಕೀಯ ನಾಯಕನ ಸೋಗಲಾಡಿತನವನ್ನು ಕವಿತೆ ಚಿತ್ರಿಸುತ್ತದೆ. ಬಹುತ್ವ ಭಾರತದ ಜೀವಪರ ಪರಂಪರೆಯನ್ನು ಚಿತ್ರಿಸುವ 'ನಮ್ಮ ಮನೆ' ಕವಿತೆ, ದೇಶದ ಅಂತಃಸತ್ವವನ್ನೇ ಅರಿಯದ 'ಸೊಗಸುಗಾರ ಪುಟ್ಟಸ್ವಾಮಿ'ಯ ಆತ್ಮಾವಲೋಕನಕ್ಕೆ ಒತ್ತಾಯಿಸುತ್ತದೆ.

'ಚಕ್ರವ್ಯೂಹ', 'ನೆಹರು ನಿವೃತ್ತರಾದರು', 'ಕೋಮುಹುಚ್ಚಲಿ', 'ಬಹುತ್ವ ಭಾರತ', 'ಬಲಿಯುಗದರ್ಶನ' – ಈ ಕವಿತೆಗಳ ಶೀರ್ಷಿಕೆಗಳೇ ಎಸ್‌ಜಿಎಸ್ ಅವರ ಈ ಹೊತ್ತಿನ ಕಾವ್ಯದ ಕೇಂದ್ರ ಯಾವುದೆನ್ನುವುದನ್ನು ಸ್ಪಷ್ಟಪಡಿಸುವಂತಿವೆ. ಸಮಕಾಲೀನ ಬಿಕ್ಕಟ್ಟುಗಳು ಹಾಗೂ ರಾಜಕಾರಣದ ಬಗ್ಗೆ ಬರೆಯುವಾಗ ಕವಿ ಪ್ರಜ್ಞಾಪೂರ್ವಕವಾಗಿಯೇ ಕೊಂಚ ವಾಚ್ಯವಾದಂತಿದೆ.

ರಾಜಕೀಯ ಕವಿತೆಗಳಿಗೆ ಭಿನ್ನವಾದ, ಮನಸ್ಸನ್ನು ಮುದಗೊಳಿಸುವಂತಹ ಕೆಲವು ಕವಿತೆಗಳೂ ಸಂಕಲನದಲ್ಲಿವೆ. ಅವು ಮೊಮ್ಮಗನನ್ನು ಕುರಿತಾದ ಪದ್ಯಗಳು, ಆತ್ಮೀಯರ ಕುರಿತ ಪದ್ಯಚಿತ್ರಗಳು. ಕೆ.ಎಸ್. ನರಸಿಂಹಸ್ವಾಮಿ ಅವರ 'ತುಂಗಭದ್ರೆ' ಕವಿತೆಯನ್ನು ನೆನಪಿಸುವಂತಿರುವ 'ಮೊಮ್ಮಗ' ಶೀರ್ಷಿಕೆಯ ರಚನೆಗಳಲ್ಲಿ ಹೃದಯಕ್ಕೆ ತಾಗುವ ಸಾಲುಗಳಿವೆ. 'ಪುಟ್ಟ ಪಾದದ ಹೆಜ್ಜೆ ಹೆಜ್ಜೆಯಲ್ಲೂ ಹಿಲೇರಿಯ ಗಮನ / ಮೊದಲ ತೊದಲುಗಳಲ್ಲಿ ಜಗದ ಭಾಷೆಗಳ / ಅರ್ಥದೋಕುಳಿ ನಮನ' ಎನ್ನುವ ಚಂದದ ಸಾಲುಗಳ ಮೊಮ್ಮಗ ಕವಿತೆಗಳು, ಮಕ್ಕಳ ಮೂಲಕ ಜಗದ ಜಂಜಡಗಳಿಗೆ ಮದ್ದು ಹುಡುಕುವ ಪ್ರಯತ್ನದಂತೆ ಆಪ್ತವಾಗುತ್ತವೆ.

ಪ್ರತಿಕ್ರಿಯೆ

ದಿನಾಂಕ 06/02/22 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಪ್ರೊ. ಬಿ.ಕೆ. ಚಂದ್ರಶೇಖರ್ ಅವರ 'ಕುರುಡು ಅಧಿಕಾರ ಕುಣಿಯುತಲಿತ್ತು' ಲೇಖನ, ನನ್ನ ಮನ ಕಲಕಿತು. ಒಂದೆಡೆ ಆಡಳಿತ ವೈಫಲ್ಯದ ಕಾರಣದಿಂದ, ಆಮ್ಲಜನಕದ ಕೊರತೆಯಿಂದ, ಅಸುನೀಗಿದ ಕಂದಮ್ಮಗಳ ನರಕಯಾತನೆ ಕಣ್ಣಿನ ಮುಂದೆ ಬಂದರೆ, ಇನ್ನೊಂದೆಡೆ, ಅವರನ್ನು ಉಳಿಸಲು ಹೆಣಗಾಡಿದ ಡಾಕ್ಟರ್ ಕಫೀಲ್ ಖಾನ್ ಆಪತ್ಬಾಂಧವನೆಂಬ ಬಿರುದಿಗೆ ಬದಲಾಗಿ ಆರೋಪಿಯಾದ ಬಗ್ಗೆ, ನಮ್ಮ ದೇಶದ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಅಧಿಕಾರದ ದುರುಪಯೋಗದ ಬಗ್ಗೆ ಅಸಹ್ಯ ಮೂಡಿಸಿತು. ತಮ್ಮ ತಪ್ಪನ್ನು ಮರೆಮಾಚಲು ಆಸ್ಪತ್ರೆಯ ವೃಂದ ವೈದ್ಯರೊಬ್ಬರನ್ನು ಬಲಿಪಶುವಾಗಿಸಿದ ವಿಷಯ, ಶೋಚನೀಯ. ಆದರೂ ಧೃತಿಗೆಡದೆ, ಇದೆಲ್ಲದನ್ನೂ ಹಿಮ್ಮೆಟ್ಟಿ, ತನ್ನದೇ ಸ್ವಯಂ ಸೇವಾ ಸಂಸ್ಥೆಯನ್ನು ಆರಂಭಿಸಿ, ರೋಗಿಗಳ ನೆರವಿಗೆ ನಿಂತಿರುವ ವೈದ್ಯನ ಶ್ರಮ ಶ್ಲಾಘನೀಯ. ಸತ್ಯದ ಅರಿವಿಲ್ಲದೆ, ನಡೆದ ಅಚಾತುರ್ಯದ ಬಗ್ಗೆ ಆ ರಾಜ್ಯದ ಮುಖ್ಯಮಂತ್ರಿ ಹಾಗೂ ಆಸ್ಪತ್ರೆಯ ವೃಂದ ಹರಡಿಸಿದ್ದ ಸುದ್ದಿಯನ್ನೇ ನಂಬಿದ್ದ ದೇಶದ ಜನರ ಗಮನಕ್ಕೆ, ನಿಜವಾದ ವಿಷಯನ್ನು ತಮ್ಮ ಲೇಖನದ ಮೂಲಕ ತಿಳಿಯಪಡಿಸಿದ ಪ್ರೊ.ಬಿ.ಕೆ.ಚಂದ್ರಶೇಖರ್ ಅವರ ಪ್ರಯತ್ನ ನಿಜಕ್ಕೂ ಮೆಚ್ಚುವಂಥದ್ದು. ಅನ್ಯ ಧರ್ಮೀಯನೆಂದೋ ಅಥವಾ ರಾಜಕಾರಣಿಗಳಷ್ಟು ಪ್ರಭಾವವನ್ನು ಹೊಂದಿಲ್ಲದಿದ್ದರಿಂದಲೋ ಅನ್ಯಾಯಕ್ಕೊಳಪಟ್ಟ ವೈದ್ಯನ ಬಗ್ಗೆ ಅನುಕಂಪದ ಜೊತೆಗೆ, ಅಭಿಮಾನವೂ ಮೂಡುವಂತೆ ಮಾಡಿತು ಈ ಲೇಖನ.

-ಸಿ.ಎಚ್.ಹನುಮಂತರಾಯ, ಬೆಂಗಳೂರು.

ಮೊದಲ ಓದು

'ಬಹುಮುಖಿ ಅಮೆರಿಕ'ದ ದರ್ಶನ



ಪು: 632 ₹600

ಬಹುಮುಖಿ ಅಮೆರಿಕಾ
ಲೇ: ಸಿರಿಗಂಧ ವಿ.ಶ್ರೀನಿವಾಸಮೂರ್ತಿ
ಪ್ರ: ಚಾರುಮತಿ ಪ್ರಕಾಶನ, ಬೆಂಗಳೂರು
ಸಂ: 9448235553

ಅಮೆರಿಕ ಪ್ರವಾಸದ ಬಗ್ಗೆ ಅದೆಷ್ಟೋ ಲೇಖನಗಳು, ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿವೆ. ಅವುಗಳಲ್ಲಿ ಪ್ರವಾಸಿ ತಾಣಗಳ ಮಾಹಿತಿಗಳಿವೆ, ಕಥನಗಳಿವೆ ಜೊತೆಗೆ ಕ್ಯಾಮೆರಾ ಕಣ್ಣಿನಿಂದ ಕಂಡ ಚಿತ್ರಣಗಳಿವೆ. ಇದೇ ರೀತಿ ವಿಶ್ವದ 'ದೊಡ್ಡಣ್ಣ'ನನ್ನು ಬೃಹದಾಕಾರದಲ್ಲೇ ಲೇಖನಿ ಹಾಗೂ ಕ್ಯಾಮೆರಾ ಕಣ್ಣಿನಲ್ಲಿ ಹಿಡಿದಿಡುವ ವಿಭಿನ್ನ ಪ್ರಯತ್ನವನ್ನು 'ಬಹುಮುಖಿ ಅಮೆರಿಕಾ' ಪ್ರವಾಸ ಕಥನದ ಮುಖಾಂತರ ಸಿರಿಗಂಧ ವಿ. ಶ್ರೀನಿವಾಸಮೂರ್ತಿ ಮಾಡಿದ್ದಾರೆ. ಪುಟಗಳ ಸಂಖ್ಯೆ ಹಾಗೂ ವಿಷಯಗಳೂ 'ಬೃಹತ್' ಎನ್ನುವುದರಲ್ಲಿ ಅಡಕ.

ಈ ಕೃತಿ ಎರಡು ಯಾನಗಳ ಅನುಭವ ಕಥನದ ಸಂಕಲನ. ಸಾವಿರಾರು ಮೈಲಿ ಆಕಾಶದಲ್ಲಿ ಹಾರಾಡಿ, ಮಹಾಸಾಗರಗಳನ್ನು ದಾಟಿ ಅಮೆರಿಕದ ಡೆನ್ವರ್ ವಿಮಾನ ನಿಲ್ದಾಣದಲ್ಲಿ ಸುಟ್ಟು ಬೂದಿಯಾದ ಕರಿಬೇವಿನ ಕಥೆಯಿಂದ ಆರಂಭವಾಗುವ ಪ್ರವಾಸ ಕಥನದಲ್ಲಿ ಅಮೆರಿಕವನ್ನು ಹಲವು ಮಜಲುಗಳಲ್ಲಿ ಲೇಖಕರು ಹಿಡಿದಿಟ್ಟಿದ್ದಾರೆ. ಇದು ಸರಳವಾದ ಪ್ರವಾಸ ಕಥನವಲ್ಲ. ಸುತ್ತಿಬಂದ ಬಳಿಕ ನೆನಪಿನಲ್ಲಿ ಉಳಿದಿದ್ದನ್ನು ಗೀಚಿರುವುದೂ ಅಲ್ಲ ಎನ್ನುವುದು ಸ್ಪಷ್ಟ. ಸಾಮಾನ್ಯ ಪ್ರವಾಸಿಗನ ರೀತಿ ಪ್ರವಾಸ ಕೈಗೊಳ್ಳದೆ ದಾಖಲೆಗೆಂದೇ ಹೆಜ್ಜೆ ಹಾಕಿ, ಪ್ರತೀ ಘಟನೆಯನ್ನೂ ಸ್ಥಳವನ್ನೂ ಅನುಭವಿಸಿ ಲೇಖಕರು ಅಕ್ಷರಗಳಿಗಿಳಿಸಿದ್ದಾರೆ.

'ಸುಂದರವಾದ ಏರ್‌ಹೋಸ್ಟೆಸ್‌ಗಳಿದ್ದರೆ ಅವರನ್ನು ನೋಡಿಕೊಂಡು ಕಾಲ ಕಳೆಯಬಹುದಿತ್ತು' ಎಂದು ಅರೆಕ್ಷಣ ಬೇಸರಪಡುವಲ್ಲಿಂದ ಹಿಡಿದು, ಅಮೆರಿಕದಲ್ಲಿ ಮೊದಲ ಹೆಜ್ಜೆ ಇಟ್ಟ ಬಳಿಕ ಬಾರ್ ಮುಂದೆ ವೆಲ್‌ಕಮ್ ಡ್ರಿಂಕ್ಸ್‌ಗೆ ಕಾರು ಪಾರ್ಕ್ ಮಾಡಿದ ಕ್ಷಣದಲ್ಲಾದ ಖುಷಿಯನ್ನು ದಾಖಲಿಸಿದ ಬರವಣಿಗೆಯಲ್ಲೇ ಯಾವುದೇ ಮಡಿವಂತಿಕೆ ಇಲ್ಲದೇ ಇದ್ದಿರುವುದನ್ನು ಇದ್ದ ಹಾಗೆ ದಾಖಲಿಸುವ ಉಮೇದಿ ಎದ್ದು ಕಾಣುತ್ತದೆ. ಕುತೂಹಲ ಹೆಚ್ಚಿಸುವ ಬರವಣಿಗೆಯ ಶೈಲಿ ಓದಿಗೆ ವೇಗ ನೀಡುತ್ತದೆ. ಕೊನೆಯಲ್ಲಿನ 64 ಪುಟಗಳನ್ನು ತಿರುವಿ ಹಾಕಿದರೆ ಅಮೆರಿಕವನ್ನೇ ಸುತ್ತಿಬಂದ ಅನುಭವ ಓದುಗನಿಗಾಗುತ್ತದೆ.

ವಿಚಾರಗಳಿಗೆ ಕಿಡಿ ತಾಕಿಸುವ 'ಮಿಂಚು'



ಪು: 84 ₹90

ಮಿಂಚು–
ಧ್ಯಾನಸ್ಥ ಘಳಿಗೆಯ ಅನುಭಾವ
ಲೇ: ಕಂ.ಕ. ಮೂರ್ತಿ
ಪ್ರ: ನುಡಿ ಪುಸ್ತಕ, ಬೆಂಗಳೂರು
ಸಂ: 9900615260

ಕವನಗಳೇ ಹಾಗೆ. ಕೋಲ್ಮಿಂಚಿನಂತೆ ಥಟ್ಟನೆ ಬಡಿದು ಯೋಚನೆಗಳ ಕಿಡಿ ಹೊತ್ತಿಸುವ ಅನುಭಾವ ಅವುಗಳದು. ಈ ಕಿಡಿಗೆ ಗಾಳಿ ಸಿಕ್ಕರೆ ಸಾಲಿಗೆ ಸಾಲು ಬೆಳೆದು ಪದ್ಯಗಳ ಸುರಿಮಳೆ. ಇದೇ ರೀತಿಯ ಪದ್ಯಗಳ ಗುಚ್ಛ 'ಮಿಂಚು'. ಮಿಂಚುಗಳಂತೆ ಹೊಳೆದ ಈ ಬರಹಗಳು ಪತ್ರಕರ್ತ ಕಂ.ಕ.ಮೂರ್ತಿ ಅವರ 'ಧ್ಯಾನಸ್ಥ ಗಳಿಗೆಯ ಅನುಭಾವ'.

ಈ ಕವನ ಗುಚ್ಛವನ್ನು ಲೇಖಕರು ಹೀಗೆನ್ನುತ್ತಾರೆ– 'ಒಂದು ವಿಚಾರವನ್ನು ಮಥಿಸಿದಾಗ ಮನಸ್ಸಿನಲ್ಲಿ ಹೊಳೆದ ಕೋಲ್ಮಿಂಚುಗಳು'. 'ಇವುಗಳನ್ನು ಪದ್ಯಗಳಾದರೂ ಎನ್ನಿ ಅಥವಾ ಈ ಪ್ರಕಾರಕ್ಕೆ ಒಗ್ಗದವು ಎಂದರೂ ಚಿಂತೆ ಇಲ್ಲ' ಎಂದು ಹೇಳುತ್ತಾ ಅಲ್ಲಲ್ಲಿ ತಾವು ಬರೆದ ಪದ್ಯಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಕೊಟ್ಟು, ತಮಗೆ ಹೊಳೆದ ವಿಚಾರಗಳನ್ನೂ ಎದುರಿಗಿರಿಸಿದ್ದಾರೆ.

ಅರೆಬೆಂದ ಅಕ್ಕಿ ಅನ್ನವಾಗುವುದಿಲ್ಲ
ಅರೆ ತಿಳಿವಳಿಕೆ ಜ್ಞಾನವಾಗುವುದಿಲ್ಲ

–ಹೀಗೆ ಎರಡು ಸಾಲಿನಲ್ಲೇ ವಿಚಾರಗಳನ್ನು ಬಡಿದೆಬ್ಬಿಸುವ ಕೋಲ್ಮಿಂಚುಗಳಿಲ್ಲಿ ಹಲವು. ಅಮ್ಮನ ಪ್ರೀತಿ, ಮೌನದ ಅರ್ಥ, ಮುಸ್ಸಂಜೆಯ ತಿಳಿಗಾಳಿ, ಪ್ರೀತಿ, ಬದುಕು, ಪ್ರಕೃತಿಯ ವಿಸ್ಮಯ... ಹೀಗೆ ಇಲ್ಲಿ ಸರಳ ವಿಷಯಗಳೇ ಹಲವು ಪದ್ಯಗಳಿಗೆ ವಸ್ತುವಾಗಿವೆ.

ಸಲಾಂ ಮಾಡ್ತೇವಿ ಭಾವೈಕ್ಯದ ವಾಣೀಗೆ

10ನೇ ಪುಟದಿಂದ...

ಕರಡಿ ವಾದ್ಯ ನುಡಿಸುವ ನೇಕಾರರು, ಶಹನಾಯ್ ನುಡಿಸುವ ಭಜಂತ್ರಿಗಳು, ಖಣಿ ನುಡಿಸುವ ದಲಿತರು, ರಥ ಸೇವೆ ಮಾಡುವ ಪಾತ್ರೋಟದವರು, ಬಂಡಿ ವಡ್ಡರು, ಪಲ್ಲಕ್ಕಿ ಸೇವೆ ಮಾಡುವ ಲಿಂಗಾಯತರು, ಪ್ರಸಾದ ಸೇವೆ ಮಾಡುವ ವೀರಶೈವರು, ಅಭಿಷೇಕದ ಜಂಗಮರು, ಹೂವಿನ ಅಲಂಕಾರ ಮಾಡುವ ಹೂಗಾರರು, ಮಠದಲ್ಲಿ ಜಾತ್ರೆ, ಜಟೋತ್ಸವಗಳು ನಡೆದರೆ ಆ ಸುದ್ದಿ ಮುಟ್ಟಿಸುವ ಮಾಲದಾರ ಮನೆತನದ ಮುಸ್ಲಿಂ ಬಾಂಧವರಾದಿಯಾಗಿ ಎಲ್ಲರೂ ಬಾಳು ಕಟ್ಟಿಕೊಂಡು ಬದುಕಿದ್ದು ಮಹಾಲಿಂಗೇಶ್ವರರ ಸನ್ನಿಧಾನದಲ್ಲಿ. ಇಂತಹ ವಾತಾವರಣ ಇರುವುದರಿಂದಲೇ ನಮ್ಮ ಹಳ್ಳಿಗಳಲ್ಲಿ ಭಾವೈಕ್ಯತೆಯ ಬೇರು ಗಟ್ಟಿಯಾಗಿ ಉಳಿಯಲು ಸಾಧ್ಯವಾಗಿದೆ.

ಮಹಾಲಿಂಗಪುರದಲ್ಲಿ ಹಿಂದೂ ಮುಸ್ಲಿಂರು ಕೂಡಿ ಆಚರಿಸುವ ಹಬ್ಬವೆಂದರೆ ಮೊಹರಂ. ನಾನು ಸಣ್ಣವನಿರುವಾಗ, ಬೆಳೆದು ದೊಡ್ಡವನಾಗಿ ಪದವಿ ಹಂತಕ್ಕೆ ಬಂದಾಗಲೂ ಮೊಹರಂನಲ್ಲಿ 'ಫಕೀರ'ನಾಗುತ್ತಿದ್ದೆ. ಕೈಯಲ್ಲಿ, ಕೊರಳಲ್ಲಿ ಕೆಂಪು ಲಾಡಿ ಕಟ್ಟಿಕೊಂಡು ಹಸನ್ ಹುಸೇನರನ್ನು ಸ್ಮರಿಸುತ್ತಾ ಅವ್ವ ಕೊಟ್ಟ ಜೋಳಿಗೆ ಹಿಡಿದು ಊರ ಮನೆಗೆಲ್ಲಾ ಹೋಗಿ 'ಇಮಾಮಲೋ ಯಾಮೊಮ್ದೀನ್' ಎಂದರೆ ಮನೆಯೊಳಗಿನ ತಾಯಂದಿರು ಜೋಳಿಗೆಯಲ್ಲಿ ಕಾಳು ಹಾಕಿ ಕಳಿಸುತ್ತಿದ್ದರು. ಊರಾಡಿ ಬಂದರೆ ಅವ್ವನೇ ಊದಿನ ಕಡ್ಡಿ ಹಚ್ಚಿಕೊಂಡು ಬಂದು ಹೊರಗೆ ನಿಂತ ನನಗೆ ನಮಸ್ಕರಿಸಿ ಒಳಗೆ ಕರೆದುಕೊಂಡು ಹೋಗುತ್ತಿದ್ದಳು.

ನಮಗೆ ಬಯ್ಯದೇ ಹೊಡೆಯದೇ ಕಸಬರಿಗೆಯನ್ನೂ ಮುಟ್ಟಿಸ ಕೊಡದೇ ಇರುವ ದಿನಗಳವು. ಆಗ ಕೂಡಿಟ್ಟ ಕಾಳುಗಳನ್ನೆಲ್ಲಾ ಒಂದು ಅಂಗಡಿಗೆ ಹಾಕಿ ದೇವರ ಹೆಸರಿನಲ್ಲಿ ಉಪ್ಪು, ಸಕ್ಕರೆ, ಎಣ್ಣೆ ಬತ್ತಿ ತಂದು, ಉಪ್ಪನ್ನು ಅಲೆ ಕುಣಿಗೆ ಹಾಕಿ, ದೇವರಿಗೆ ಸಕ್ಕರೆ ಓದಿಸಿ, ಆಶೀರ್ವಾದ ಪಡೆದುಕೊಂಡು ಬರುತ್ತಿದ್ದೆವು. ಡೋಲಿಗೆ ಹೆಗಲು ಕೊಡುವ ಹಸನ್ ಹುಸೇನರ ಪಂಜಾ ಹಿಡಿದು ಹೋಗುವ, ಚಾವಂಗಿ (ಚೌಂಗೆ), ಮಾದಲಿ ಸವೆಯುವ ಆ ಮೊಹರಂನ ಮಧುರ ದಿನಗಳು ಇನ್ನೂ ಮಾಸಿಲ್ಲ. ಆ ಮೊಹರಂ ಪದಗಳೆಂದರೆ ನಮ್ಮ ಬಾಳಿನ ಸುಖ ದುಃಖದ ಪದಗಳೇ ಆಗಿದ್ದವು.

ಅಂತಹ ಭಾವೈಕ್ಯತೆಯ ವಿಶಿಷ್ಟ ಆಚರಣೆ ಮಹಾಲಿಂಗಪುರದ ಮೊಹರಂನಲ್ಲಿಯೂ ಇದೆ. ನಾಲ್ಕು ದಿಕ್ಕಿನಲ್ಲಿರುವ 'ತಾಬೂತ'ಗಳು (ಡೋಲಿ) ಮಹಾಲಿಂಗೇಶ್ವರ ಮಠದವರೆಗೆ ರಥಗಳಂತೆ ಬರುವ ಈ ಸಮಾನಾಂತರ ದೃಶ್ಯ ಎಷ್ಟೊಂದು ಮನೋಹರ. ಮಠದ ಪೀಠಾಧಿಪತಿಗಳು ಆಗಮಿಸಿ ಡೋಲಿಗಳ ಸ್ವಾಗತಿಸಿ ಊದ್ ಹಾಕಿ ಮಂತ್ರ ಪಠಿಸಿ ಬೀಳ್ಕೊಡುವ ಈ ಪರಂಪರೆ ಭಾವಪೂರ್ಣವೂ ಸಾಮರಸ್ಯವೂ ಆಗಿ ನಿಂತಿದೆ. ಚವಂಗಿ, ಸಕ್ಕರೆ, ಪಾನಕ ನೀಡುವ ಈ ಹಬ್ಬವನ್ನು ಮನುಜರಾದ ನಾವು ಮರೆಯಲಾದೀತೆ?

ಮಹಾಲಿಂಗಪುರದಲ್ಲಿ ಹಿಂದೂಗಳೇ ಜಾಗ ಕೊಟ್ಟು ನಿರ್ಮಿಸಿದ ಹಾಜಿ ಮಲಂಗ ದರ್ಗಾ. ಹಿಂದೂಗಳೇ ಈ ದರ್ಗಾದಲ್ಲಿ ನಿತ್ಯ ಪೂಜೆ ನೆರವೇರಿಸುವುದು ವಿಶೇಷ ಚಿತ್ರ: ಮಹೇಶ ಮನ್ನಯ್ಯನವರಮಠ

ಇನ್ನೊಂದು ವಿಶೇಷವೆಂದರೆ ಇಬ್ರಾಹಿಂ ಸುತಾರರವರೇ ನೆನಪಿಸುವಂತೆ 'ಚಿಮ್ಮಡ' ಓಣಿಯ ಮಸೀದಿಯ ನಿರ್ಮಾಣಕ್ಕೆ ನೀಲಕಂಠ ಮಠದ ಶಂಕರ ಶಿವಾಚಾರ್ಯ ಸ್ವಾಮೀಜಿ ಶಂಕುಸ್ಥಾಪನೆ ಮಾಡಿದ್ದು, ಬನಶಂಕರಿ ದೇವಸ್ಥಾನದಲ್ಲಿ ನಡೆದ ಇಫ್ತಾರಕೂಟ ಎಲ್ಲವೂ ಭಾವೈಕ್ಯದ ಕಥೆ ಹೇಳುವುದು. ರಮ್ಜಾನ್ ತಿಂಗಳ ಈ ಶ್ರದ್ಧೆಯ ಇಫ್ತಾರಕೂಟವನ್ನು ಗ್ರಾಮದ ಹಿರಿಯರಾದ ಸಿದಗಿರೆಪ್ಪಣ್ಣ ಬೆಳಗಲಿಯವರು ಏರ್ಪಡಿಸಿದ್ದು, ದೇವಸ್ಥಾನದ ಕಲ್ಯಾಣ ಮಂಟಪದಲ್ಲಿಯೇ ನಮಾಜ ಮಾಡಿದ್ದು ಒಂದು ಪರಂಪರೆಯ ಭಾಗವಾಗಿದೆ.

ಯಾವುದೇ ಒಳಿತಿನ ಪಥ ಸಂಚಲನಗಳು ನಡೆಯಲಿ ಅವು ದರ್ಗಾದ ಬಳಿಗೆ ಬಂದಾಗ ಗುಲಾಬಿ ಪುಷ್ಪಗಳನ್ನು ಅರ್ಚಿಸುವುದು ಒಂದು ರೂಢಿ. ಧಾರ್ಮಿಕ ಪಂಡಿತರ 'ದುವಾ' (ಪ್ರಾರ್ಥನೆ) ಸಂದರ್ಭದಲ್ಲಿ ಮುಸ್ಲಿಂ ಬಾಂಧವರು ಮಹಾಲಿಂಗೇಶ್ವರ ಮಠದ ಸ್ವಾಮಿಗಳನ್ನು ಬರಮಾಡಿಕೊಂಡು ಅವರಿಗೆ ಗೌರವಿಸಿ ಪ್ರೀತಿ ತೋರುವುದು ಈ ನೆಲದ ಸಾಮರಸ್ಯದ ದ್ಯೋತಕ. ನವರಾತ್ರಿ ದೇವಿ ಉತ್ಸವ ಬಂತೆಂದರೆ ಬನಶಂಕರಿ ದೇವಿ ದೇವಸ್ಥಾನದವರೆಗೆ ಸಾಗುವ ಈ ಮೆರವಣಿಗೆ ವೈಭವಕ್ಕೆ ಮುಸ್ಲಿಂ ಬಾಂಧವರು ಸಾಕ್ಷಿಯಾಗುತ್ತಾರೆ. ಬೆಳ್ಳಿ ದೇವಿ ಮೂರ್ತಿಗೆ ಇವರು ಮಾಲಾರ್ಪಣೆ ಮಾಡಿ ತಮ್ಮ ಹಿಂದೂ ದೈವಭಕ್ತಿ ಮೆರೆಯುತ್ತಾರೆ. ಅನ್ನ, ಆರೋಗ್ಯ, ಯೋಗ, ಶಿಕ್ಷಣ, ವನಮಹೋತ್ಸವದಂಥ ಅಭಿಯಾನಗಳನ್ನು ನಡೆಸುವ ಸಿದ್ಧಗಂಗಾ ಶ್ರೀಗಳ ಜನಹಿತ ಟ್ರಸ್ಟ್ ಇಲ್ಲಿದೆ. ನಾಡನ್ನು ಸುಭಿಕ್ಷೆಯಾಗಿಟ್ಟುಕೊಳ್ಳಲು ಈ ಕಾರ್ಯಗಳು ಸಹಕಾರಿ.

'ನಡೆದಷ್ಟು ನಾಡು ಪಡೆದಷ್ಟು ಭಾಗ್ಯ'ವೆಂಬಂತೆ ಇಲ್ಲಿ ಹಲವಾರು ದೈವಿಕ ಪಾದಯಾತ್ರೆಗಳಿವೆ. ಢಪಳಾಪುರ ಪಾದಯಾತ್ರೆ, ಪಂಢರಪುರ ದಿಂಡಿ ಪಾದಯಾತ್ರೆಯಿಂದ ಹಿಡಿದು ಹಜ್ ಯಾತ್ರೆಯವರೆಗೂ ಹಲವು ಕಥನಗಳು ಇಲ್ಲಿ ಬಿಚ್ಚಿಕೊಳ್ಳುತ್ತವೆ. ಹಾಗೆ ನೋಡಿದರೆ ನಮ್ಮ ಕರ್ನಾಟಕದಲ್ಲಿ ನಡೆಯುವ ಬಹುದೊಡ್ಡ ಜಾತ್ರೆಗಳೆಲ್ಲ ಬಹುದೊಡ್ಡ ಪಾದಯಾತ್ರೆಗಳಂತೆಯೇ ಇವೆ. ನಾವು ಮೈಲಾರಕ್ಕೊ, ಕೊಟ್ಟೂರಿಗೊ, ನಾಯಕನಹಟ್ಟಿಗೊ ಹೋದಂತೆ ಜನ ಇಲ್ಲಿ ಮಹಾಲಿಂಗೇಶ್ವರನ ಜಾತ್ರೆಗೆ ಬರುತ್ತಾರೆ. ಮಹಾಲಿಂಗಪುರ, ಬನಹಟ್ಟಿ, ರಬಕವಿ, ಮುಧೋಳ ಇಲ್ಲೆಲ್ಲಾ ಹಲವು ಸಿದ್ಧ ಪರಂಪರೆಗಳ ಕೂಡು ದಾರಿಗಳಿವೆ. ಶರಣರು ಓಡಾಡಿದ ಕಲ್ಯಾಣಕ್ಕಿಂತ ಭಿನ್ನವಾದ ಸೂಫಿ, ಸಂತ, ಶರಣರ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಕಲ್ಯಾಣವೊಂದು ಇಲ್ಲಿ ಸೃಷ್ಟಿಗೊಂಡು ನಿಂತಿದೆ.

ಬದುಕನ್ನು ವೈವಿಧ್ಯಮಯಗೊಳಿಸಿರುವ ನೂರಾರು ಸಂಗತಿಗಳು ಇಲ್ಲಿವೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಎಲ್ಲಾ ಮಗ್ಗಲುಗಳನ್ನು ಹಾದು ಬಂದಿರುವ ಈ ನೆಲ 'ಸರ್ವ ಜನಾಂಗದ ಶಾಂತಿಯ ತೋಟ'ದಂತೆ ಈಗಲೂ ಕಂಗೊಳಿಸುತ್ತಿದೆ. ನೂರಾರು ಸಂತರ ಹೆಜ್ಜೆ ಗುರುತುಗಳ ಜೊತೆ ಮಹಾಲಿಂಗಪುರ ಇಂದು ಅಭಿವೃದ್ಧಿಯ ಪಥದತ್ತ ಸಾಗುತ್ತಿದ್ದರೂ ಮಾರುಕಟ್ಟೆ, ಶಿಕ್ಷಣ, ಔದ್ಯೋಗಿಕತೆಗೆ ತನ್ನನ್ನು ತಾನು ತೆರೆದುಕೊಂಡರೂ ಅದು ತನ್ನ ಹೃದಯ ವೈಶಾಲ್ಯವನ್ನು ಮಾತ್ರ ಬಿಟ್ಟುಕೊಟ್ಟಿಲ್ಲ. ಸಾಂವಿಧಾನಿಕ ಆಶಯಗಳಂತೆ ಬದುಕುವ, ಸಂಸ್ಕೃತಿ, ಧರ್ಮ ಸಮನ್ವಯವನ್ನು ಒಳಗೊಂಡಿರುವ ವಿಶಿಷ್ಟ ಮಾನವ ಸಂಬಂಧದ ಸರಪಳಿಯ ಸೂತ್ರವನ್ನು ಗಟ್ಟಿಯಾಗಿಯೇ ಹೆಣೆದುಕೊಂಡು ನಿಂತಿದೆ. ಇದೇ ಇದರ ಜೀವನ ಸೌಂದರ್ಯದ ಗುಟ್ಟು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಶೇಕ್ರಷ್ಟು ಕಥೆಯ

ನಮ್ಮ ಧಾರವಾಡ

• ಕಲೆ-ಪರಿಕಲ್ಪನೆ:
ಸುರೇಶ ಆರ್. ಅರ್ಕಸಾಲಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗಡಿಯಾರ – ಗಣಿತ

A ಗೋಡೆಯ ಮೇಲಿನ ಗೋಳಾಕಾರದ ಗಡಿಯಾರವೊಂದು ಅಜಾಗರೂಕತೆಯಿಂದ ಕೆಳಗೆಬಿದ್ದು ಅದರ ಗಾಜು ಒಡೆದು ಹೋಯಿತು. ಅಚ್ಚರಿಯೆಂದರೆ ಆ ಗಾಜು ಮೂರು ಭಾಗವಾಗಿತ್ತು. ಪ್ರತೀ ಗಾಜಿನ ಒಳಗಿನ ಸಂಖ್ಯೆಗಳ ಮೊತ್ತ ಸಮನಾಗಿತ್ತು. ಗಾಜು ಹೇಗೆ ಒಡೆದಿತ್ತು?



B ಈ ವೃತ್ತದಲ್ಲಿ ಕೇವಲ 4 ಗೆರೆ ಎಳೆದು 11 ಭಾಗಗಳನ್ನಾಗಿ ಮಾಡಬಲ್ಲಿರಾ? ಭಾಗಗಳೆಲ್ಲವೂ ಸಮನಾಗಿರಬೇಕಿಲ್ಲ.



ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಹರಿಉಬ್ಬು = ____________
2. ಗುಟ್ಟುಮುರಿ = ____________
3. ಕರಿಕವನ = ____________
4. ಮನೆವಧುಭಾರ = ____________

ಪುಟಾಣಿ ಪದ್ಯ

ಅಂದ ಚಂದ

ನಗುವಿನ ಮಗುವಿನ ಆಟವೇ ಚಂದ
ಸುಂದರ ಚಂದಿರ ನೋಟವೆ ಅಂದ
ತರತರ ಹೂವಿನ ತೋಟವೇ ಅಂದ
ಹಬ್ಬದ ಸಡಗರ ಊಟವೇ ಚಂದ
ಗುಡಿ ಗೋಪುರಗಳ ಮಾಟವೇ ಚಂದ
ಗುರುಗಳು ಹೇಳುವ ಪಾಠವೇ ಅಂದ

ಪದಶೋಧ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಒಂದು ವಿಶಿಷ್ಟ ಕ್ರಮದಲ್ಲಿ ಹುಡುಕಿದರೆ ಭಾರತದ ಒಬ್ಬ ಪ್ರಸಿದ್ಧ ಹಿನ್ನೆಲೆ ಗಾಯಕಿಯ ಹೆಸರು ಸಿಗುತ್ತದೆ. ಹುಡುಕಿ

1. ಲಯ ರಾಗ ತಾಳ
2. ಸಿತಾರ ವಾದನ
3. ಗೃಹಮಂತ್ರಿ
4. ನಾಗಲಿಂಗೇಶ್ವರ
5. ಪ್ರಖರ ಭಾಸ್ಕರ
6. ಬಾನಿನ ಚಂದಿರ



ಇದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ. ಆರ್.ಎ. ಜಹಗೀರದಾರ ಈ ವಿವಿಯ ಪ್ರಥಮ ಕುಲಪತಿ. ಬಳಿಕ ಡಿ. ಸಿ.ಪಾವಟೆ ಕುಲಪತಿಯಾಗಿದ್ದರು. ಈ ಅವಧಿಯಲ್ಲಿ ವಿವಿ ವಿಶೇಷ ಪ್ರಗತಿ ಸಾಧಿಸಿತು



ನಾಡು ನುಡಿ ಸೇವೆಗಾಗಿ 1890ರಲ್ಲಿ ಸ್ಥಾಪನೆಯಾದ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘ. ರಾ.ಹ.ದೇಶಪಾಂಡೆ ಇದರ ಸ್ಥಾಪಕರು. ಅಖಿಲ ಕರ್ನಾಟಕದ ವ್ಯಾಪ್ತಿಯಲ್ಲಿ ಮೊಟ್ಟ ಮೊದಲ ಸಾಂಸ್ಕೃತಿಕ ಸಂಸ್ಥೆ ಎಂಬ ಅಗ್ಗಳಿಕೆ ಇದರದು



ಕರ್ನಾಟಕ ಕಾಲೇಜು ನಾಡಿನ ಅತ್ಯಂತ ಹಳೆಯ ಕಾಲೇಜುಗಳ ಪೈಕಿ ಒಂದು. ಕರ್ನಾಟಕ ವಿವಿ ವ್ಯಾಪ್ತಿಗೆ ಸೇರಿದೆ. ಆರಂಭದಲ್ಲಿ ಇದು ಮುಂಬಯಿ ವಿವಿ ಭಾಗವಾಗಿತ್ತು. ಕಾಲೇಜಿನ ಈ ಕಟ್ಟಡ ಕೂಡ ಧಾರವಾಡದ ಹೆಗ್ಗುರುತಾಗಿದೆ



ಧಾರವಾಡದ ಕೋಟೆ. ಧಾರರಾವ್ ಎಂಬಾತ 1403ರಲ್ಲಿ ಈ ಕೋಟೆ ಕಟ್ಟಿಸಿದ. ಹಾಗಾಗಿ ಈ ಊರಿಗೆ ಧಾರವಾಡ ಎಂಬ ಹೆಸರು ಬಂದಿತು ಎಂದೂ ಹೇಳಲಾಗುತ್ತಿದೆ. ಧಾರವಾಡದ ಇತಿಹಾಸದ ಕುರುಹುಗಳಲ್ಲಿ ಪ್ರಮುಖವಾದದ್ದು



ಖ್ಯಾತ ಹಿಂದೂಸ್ತಾನಿ ಗಾಯಕಿ ಗಂಗೂಬಾಯಿ ಹಾನಗಲ್ ಅವರು ಹುಟ್ಟಿದ್ದು ಹಾನಗಲ್‌ನಲ್ಲಿ. ಬೆಳೆದಿದ್ದು, ಬಾಲ್ಯ ಶಿಕ್ಷಣ, ಸಂಗೀತ ಕಲಿತದ್ದು ಧಾರವಾಡದಲ್ಲಿ. ಹಿಂದೂಸ್ತಾನಿ ಸಂಗೀತಕ್ಕೆ ಈ ನಗರದ ಕೊಡುಗೆ ಬಲು ದೊಡ್ಡದು



ದ.ರಾ.ಬೇಂದ್ರೆ ಅವರ ನೆಲೆಯೂ ಧಾರವಾಡವೇ ಆಗಿತ್ತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ವರಕವಿಗೆ ಇಲ್ಲಿನ ಸಾಧನಕೇರಿಯೇ ಸ್ಫೂರ್ತಿಯ ಸೆಲೆ. ಸಾಹಿತ್ಯ ಕ್ಷೇತ್ರಕ್ಕೂ ಈ ನಗರ ಮಹತ್ವದ ಕಾಣಿಕೆಯನ್ನೇ ಸಲ್ಲಿಸಿದೆ

ಟ್ವೆಂಟಿ – 20 ಮ್ಯಾಚ್

ಈ ಧ್ವನಿಗಳನ್ನು ಹೊಂದಿಸಿ

1.	ಸೈಕಲ್	A.	ರಪರಪ
2.	ಕೋಗಿಲೆ	B.	ಗುಡುಗುಡು
3.	ಗುಬ್ಬಿ	C.	ಟಿಕ್ ಟಿಕ್ ಟಿಕ್ ಟಿಕ್
4.	ರೈಲು	D.	ಕಿಚಿ ಚಿಚಿ
5.	ಗಾಳಿ	E.	ಅಂಬಾ
6.	ಮಳೆ	F.	ಟ್ರಿಣ್ ಟ್ರಿಣ್
7.	ನಾಯಿ	G.	ಚುಕುಬುಕು ಚುಕುಬುಕು
8.	ಬೆಕ್ಕು	H.	ಮ್ಯಾಂವ್ ಮ್ಯಾಂವ್
9.	ಇಲಿ	I.	ಕುಹುಕುಹೂ
10.	ಕಬ್ಬಿಣ ಸಲಾಖೆ	J.	ಸುಂಯ್ ಸುಂಯ್
11.	ಶಾಲಾ ಘಂಟೆ	K.	ಬೌ ಬೌ
12.	ಕಾಂಚಾಣ	L.	ಚಿಂವ್ ಚಿಂವ್
13.	ಕೋಳಿ	M.	ಜುಳು ಜುಳು
14.	ಆಕಳು	N.	ತಟ್‌ತಟ್
15.	ಗಡಿಯಾರ	O.	ಟನ್ ಟನ್
16.	ಮೋಡ	P.	ಲಬ್ ಡಬ್ ಲಬ್ ಲಬ್
17.	ನೀರು	Q.	ಢಣ ಢಣ
18.	ಪಟಾಕಿ	R.	ಝಣ ಝಣ
19.	ಹೃದಯ	S.	ಢಂ ಢಂ
20.	ನೀರಿನ ಹನಿ	T.	ಕು ಕೂ ಕೂ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕಾಜು 2. ಗಡ 3. ಉರ 4. ತರು
5. ರಣ 6. ಮುಕ್ಕು 7. ಮರ 8. ನೇರ

1.		ರು	
2.		ಸೂ	
3.		ತ್ತಿ	
4.		ಳಿ	
5.		ತಾ	
6.		ಕಾ	
7.		ಮ	
8.		ಲೇ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು
1. ಕಲ್ಲತ್ತು 2. ಹಬ್ಬಿಸು
3. ಮುದ್ದತ್ತು 4. ಹುತ್ತರಿ
5. ಕೆತ್ತನೆ 6. ಮನ್ನಣೆ
7. ಅಕ್ಕರೆ 8. ಚಿತ್ತಾರ

ಅದಲು ಬದಲು ಕಂಚಿ ಕದಲು
1. ಕನ್ನಡತಿ 2. ಕನ್ನಡಿಗ
3. ಕನ್ನಡತನ 4. ಸುವಿಹಾರ

ಟ್ವೆಂಟಿ-20 ಮ್ಯಾಚ್

1. M	2. K	3. I	4. G	5. L
6. O	7. A	8. E	9. C	10. N
11. J	12. S	13. H	14. F	15. D
16. R	17. B	18. P	19. T	20. Q

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಆನಮೋಲ್
ಬೆಂಗಳೂರು

ದಿಯಾ ಹುಡೇದಗಡ್ಡಿ
ಮೈಸೂರು

ವರ್ಷಾ ಬೇವನೂರಮಠ,
ಲೋಕಾಪುರ (ಬಾಗಲಕೋಟೆ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಆಹಾ ಪ್ರೀತಿ!

ಪ್ರತಿದಿನ ನೆರಳಿನಲ್ಲಿ ಒಂದಾಗುವ ಅಮರಪ್ರೇಮದ ಸಂಕೇತವಾದ ಟಿಕಾಲ್ ದೇವಾಲಯಗಳು

ಡಾ. ಕೆ.ಎಸ್. ಪವಿತ್ರ

ಗ್ವಾಟೆಮಾಲಾದ ಟಿಕಾಲ್ ಎಂಬ ಸ್ಥಳದಲ್ಲಿ ದಟ್ಟ ಅಡವಿಯ ನಡುವೆ ಒಂದು ದೇವಾಲಯವಿದೆ. ಮಾಯನ್ ನಾಗರಿಕತೆಯ ವೈಭವದ ಸೂರ್ಯ ದೊರೆ ಕಟ್ಟಿಸಿದ ದೇವಾಲಯವಿದು. ಅವನ ಹೆಸರು ಜಾಸಾ ಚಾನ್ ಕಾವ್ಲೆ. ಆರಡಿ ಎತ್ತರವಿದ್ದ ಆತ 80 ವರ್ಷ ಜೀವಿಸಿದ್ದನಂತೆ. ಕ್ರಿ.ಶ. 720ರ ಸುಮಾರಿಗೆ ಆತ ಸತ್ತ ಮೇಲೆ ಈ ದೇವಾಲಯದ ಹತ್ತಿರವೇ ಆತನನ್ನು ಹೂಳಿದರು. ಮಾಯನ್ ನಾಗರಿಕತೆಯ ಶಾಸನಗಳ ಪ್ರಕಾರ ಈ ರಾಜನಿಗೆ ತನ್ನ ರಾಣಿಯ ಮೇಲೆ ತುಂಬ ಪ್ರೀತಿ. ತಾನು ಬದುಕಿದ್ದಾಗಲೇ ತನ್ನ ಹೆಸರಿನಿಂದ ಕಟ್ಟಿಸಿದ್ದ ದೇವಾಲಯದ ಎದುರಲ್ಲಿ ಅವಳಿಗೊಂದು ದೇವಾಲಯವನ್ನೇ ಕಟ್ಟಿಸಿಬಿಟ್ಟ. ಪ್ರತೀ ವಸಂತ ಮತ್ತು ಶರದ್ ಋತುವಿನಲ್ಲಿ ಸೂರ್ಯ, ರಾಜನ ದೇವಾಲಯದ ಹಿಂದಿನಿಂದ ಉದಯಿಸಿ, ರಾಣಿಯ ದೇವಾಲಯವನ್ನು ರಾಜನ ದೇವಾಲಯದ ನೆರಳಿನಲ್ಲಿ ಮುಳುಗಿಸಿಬಿಡುತ್ತಾನೆ. ಸಂಜೆಯ ಹೊತ್ತಿಗೆ ಸೂರ್ಯ ಮುಳುಗುವಾಗ ರಾಣಿಯ ದೇವಾಲಯದ ನೆರಳಿನಲ್ಲಿ ರಾಜನ ದೇವಾಲಯ ಒಂದಾಗಿರುತ್ತದೆ. 1300 ವರುಷಗಳ ನಂತರವೂ, ಈ ಇಬ್ಬರು ಪ್ರೇಮಿಗಳು ಹೀಗೆ ತಮ್ಮ ಸಮಾಧಿಯಿಂದ ಒಬ್ಬರನ್ನೊಬ್ಬರು ಪ್ರೀತಿಯಿಂದ ಸ್ಪರ್ಶಿಸುತ್ತಾರೆ, ಮುತ್ತು ಕೊಡುತ್ತಾರೆ!

ಜಗತ್ತಿನಾದ್ಯಂತ ಜನ ಪ್ರೀತಿಸುತ್ತಾರೆ, ಪ್ರೀತಿಗಾಗಿ ಹಾಡುತ್ತಾರೆ, ಕುಣಿಯುತ್ತಾರೆ. ಕವಿತೆ-ಕಥೆ-ಲಾವಣಿ ಬರೆಯುತ್ತಾರೆ. ಪುರಾಣ-ದಂತಕಥೆಗಳನ್ನು ರಚಿಸುತ್ತಾರೆ. ಅಷ್ಟೇಕೆ ಪ್ರೀತಿಗಾಗಿ ಪರಿತಪಿಸುವುದು, ಸಾಯುವುದು, ಕೊಲ್ಲುವುದು ಎಲ್ಲವೂ ನಾವು ಕಾಣಬಹುದಾದ ಸಾಮಾನ್ಯ ಸಂದರ್ಭಗಳೇ. ಸಮಾಜ ಶಾಸ್ತ್ರಜ್ಞರು ಗಂಡು-ಹೆಣ್ಣಿಗೆ ಸಂಬಂಧಿಸಿದ 'ಪ್ರಣಯ' ಎನ್ನುವ ಪ್ರೀತಿಯ ವಿಧ ಜಗತ್ತಿನ ಎಲ್ಲ ಸಮಾಜಗಳಲ್ಲಿ 'ಇದೆ' ಎಂದು ಗುರುತಿಸಿದ್ದಾರೆ. 'ಪ್ರೀತಿ' ನಡೆಯದ ಯಾವ ಸಮಾಜವನ್ನೂ ಅಧ್ಯಯನಗಳು ಗುರುತಿಸಿಲ್ಲ!

ಆದರೆ 'ಪ್ರಣಯ' ಎನ್ನುವುದು ಯಾವಾಗಲೂ ಸಂತೋಷದ ಅನುಭವವೇ ಆಗಬೇಕೆಂದಿಲ್ಲ. ಒಂದು ಅಧ್ಯಯನದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಪ್ರೀತಿಯ ಬಗೆಗೆ ತುಂಬ ಪ್ರಶ್ನೆಗಳನ್ನು ಕೇಳಿದರು. ಅವುಗಳಲ್ಲಿದ್ದ ಎರಡು ಮುಖ್ಯ ಪ್ರಶ್ನೆಗಳು- 'ನೀವು ಉತ್ಕಟವಾಗಿ, ನಿಜವಾಗಿಯೂ ಪ್ರೀತಿಸಿದವರು ಯಾರಾದರೂ ನಿಮ್ಮನ್ನು ತಿರಸ್ಕರಿಸಿದ್ದಾರೆಯೇ?' ಮತ್ತು 'ನಿಮ್ಮನ್ನು ತುಂಬ ಪ್ರೀತಿಸಿದ ಯಾರಿಗಾದರೂ ನೀವು ಈವರೆಗೆ ಕೈಕೊಟ್ಟಿದ್ದಿದೆಯೇ?'. ಶೇ 95ರಷ್ಟು ಜನ ಈ ಎರಡೂ ಪ್ರಶ್ನೆಗಳಿಗೆ 'ಹೌದು' ಎಂದೇ ಉತ್ತರಿಸಿದರು! ಅಂದರೆ ಪ್ರೀತಿಯಿಂದ ಇದ್ದಂತೆ, ಯಾವ ಪರಿಣಾಮವೂ ಆಗದೆ, ಇದ್ದಂತೆಯೇ ಹೊರಬರುವುದು ಬಡಪೆಟ್ಟಿಗೆ ಸಾಧ್ಯವಾಗದ ಕೆಲಸ ಎಂದು ಒಪ್ಪಲೇಬೇಕು!

ಎಮಿಲಿ ಡಿಕಿನ್‌ಸನ್ ಹೇಳುತ್ತಾರೆ: 'Parting is all we need to know of hell'- ಅಗಲುವಿಕೆ-ವಿರಹವೆಂದರೆ ಅದು ನರಕ. ಅಂದರೆ ಪ್ರೇಮದ ಉದ್ವೇಗದಿಂದ ಎಷ್ಟು ಜನ ಈ ನಿಮಿಷದಲ್ಲಿ ಕುಣಿಯುತ್ತಿರಬಹುದೋ, ಅಷ್ಟೇ ಜನ ಬಹುಶಃ ತಮ್ಮ ಪ್ರೀತಿ ಕಳೆದುಕೊಂಡು ದುಃಖದಲ್ಲಿ ಮುಳುಗಿರಬಹುದು. ಒಟ್ಟಿನಲ್ಲಿ 'ಪ್ರೇಮ' ಎನ್ನುವುದು ಪ್ರಬಲವಾದ ಒಂದು ಸಂವೇದನೆ ಎನ್ನುವುದು ನಿಶ್ಚಿತ.

ಪುರುಷನಿಗೂ ಸ್ತ್ರೀಗೂ ಪ್ರೇಮದ ಅನುಭವದಲ್ಲಿ ವ್ಯತ್ಯಾಸವಿದೆಯೇ? 'ಇದೆ' ಎನ್ನುತ್ತದೆ ವಿಜ್ಞಾನ. ಮಹಿಳೆಯರು ಮುಖಕ್ಕೆ ಮುಖ ಕೊಟ್ಟು ಮಾತನಾಡಬಾರದು, ಕೊನೆಗೆ ನಾಚಿಕೆಯಿಂದ ಮುಖ ತಗ್ಗಿಸಬೇಕೆಂದು ಸಮಾಜ ಕಟ್ಟಳೆ ವಿಧಿಸಿದರೂ ಎದುರು-ಬದುರು ನಿಂತಾಗಲೇ ಹೆಣ್ಣಿಗೆ ಪ್ರೀತಿಯ ಅನುಭವ. ಮಾನವ ವಿಕಾಸ ತತ್ವದ ಪ್ರಕಾರ – ಇದು ಬಂದದ್ದು 'anchoring gaze'- 'ಹಿಡಿದಿಡುವ ದೃಷ್ಟಿ'ಯಲ್ಲಿ ಮಗುವನ್ನು ಮುಂದೆ ಹಿಡಿದು, ದೃಷ್ಟಿಸುತ್ತಾ ಮುದ್ದು ಮಾಡುವುದು, ಶಿಕ್ಷಿಸುವುದು, ಶಿಕ್ಷಣ ನೀಡುವುದು ಈ ಅಭ್ಯಾಸವನ್ನು ಮಹಿಳೆ ಮತ್ತೆ ಮತ್ತೆ ಮಾಡುವ ಅಭ್ಯಾಸದಿಂದ. ಅದೇ ಪುರುಷ? ಅನ್ಯೋನ್ಯತೆಯ ಅನುಭವ ಪುರುಷನಿಗೆ ಆಗುವುದು ಪಕ್ಕ ಪಕ್ಕ ಕುಳಿತುಕೊಳ್ಳುವುದರಿಂದ. ಇದು ಬಂದಿರುವುದು ಎಲ್ಲಿಂದ? ಮಿಲಿಯನ್‌ಗಟ್ಟಲೆ ವರುಷಗಳ ಹಿಂದೆ ಪುರುಷ ಶತ್ರುವನ್ನು ಎದುರಿಸುತ್ತಿದ್ದ, ಸ್ನೇಹಿತರ ಜೊತೆ ಪಕ್ಕ ಪಕ್ಕ ಕುಳಿತುಕೊಳ್ಳುತ್ತಿದ್ದ. ಪೊದೆಯ ಹಿಂದೆ ಕುಳಿತು, ನೇರವಾಗಿ ಎದುರು ನೋಡಿ, ಕಾಡುಕೋಣದ ತಲೆಯ ಮೇಲೆ ಗುರಿಯಿಟ್ಟು ಕಲ್ಲು ಹೊಡೆಯುತ್ತಿದ್ದ!

ಪ್ರೇಮ-ಕಾಮಗಳಿಗೂ ಹತ್ತಿರದ ಸಂಬಂಧವಿದೆ. ಆದರೆ ಈ ಸಂಬಂಧ ತುಂಬ ಸ್ಪಷ್ಟವಲ್ಲ. ಕೆಲವೊಮ್ಮೆ ಹೊಸತಾಗಿ ಮದುವೆಯಾದ ದಂಪತಿ ಬಂದು 'ನಾವು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡ ಮೇಲೆಯೇ ದೇಹ ಸಂಪರ್ಕ ಎಂದು ನಿರ್ಧರಿಸಿಕೊಂಡೆವು. ಹಾಗಾಗಿ ನಾವು ಇನ್ನೂ ನಿಜಾರ್ಥದಲ್ಲಿ ಗಂಡ-ಹೆಂಡತಿಯಾಗಿಲ್ಲ' ಎಂದಾಗ ಪ್ರೇಮ-ಕಾಮಗಳ ಬಗೆಗೆ ಮನಸ್ಸು ಅಚ್ಚರಿಪಡುತ್ತದೆ. ವಿವಾಹಪೂರ್ವ ಲೈಂಗಿಕತೆ ಚರ್ಚಾರ್ಹವಾದರೂ ವಿವಾಹಾನಂತರ ದೇಹ ಸಂಬಂಧಕ್ಕೂ ಇಷ್ಟೆಲ್ಲಾ ಯೋಚಿಸುವವರು ಇದ್ದಾರಲ್ಲ ಎಂದು ಆಶ್ಚರ್ಯವಾಗುತ್ತದೆ. ಅಧ್ಯಾತ್ಮದಲ್ಲಿ, ಸಂಗೀತ ರಚನೆಗಳಲ್ಲಿ 'ಕಾಮಿತ ಫಲದಾಯಿನಿ' ಎಂದು ಬಂದಾಗಲೆಲ್ಲ ಕಾಮಕ್ಕೆ ಪಾವಿತ್ರ್ಯ ಬಂದು ಅದನ್ನು ರಕ್ಷಿಸಿದರೂ ಸರಳ ಕನ್ನಡದಲ್ಲಿ ಮಾತ್ರ 'ಕಾಮ' ಎಂದು ಬಂದರೆ ಸ್ವಲ್ಪ ಮುಜುಗರ. ಜೋರಾಗಿ ಮಾತನಾಡಲಾಗದ್ದು ಎಂದು ನಮಗೆ ಅನ್ನಿಸುವುದು ಏಕೋ? ಇಂಗ್ಲಿಷ್‌ನಲ್ಲಿ ಮಾತ್ರ 'ಕಾಮ'ದ ದೈಹಿಕ ಕ್ರಿಯೆಗೂ ಪ್ರೇಮವನ್ನೇ ಜೊತೆಯಾಗಿಸಿ 'Love making' ಮಾಡಿಟ್ಟಿದ್ದಾರೆ! ಮನೋವೈದ್ಯೆಯಾಗಿ ನನಗೆ ಬೇಸರವೆನಿಸುವುದು ಪ್ರೀತಿ-ಪ್ರಣಯಗಳ ಬಗ್ಗೆ ಇಷ್ಟೆಲ್ಲಾ ಮಾತನಾಡುವ ಜನ, ಒಮ್ಮೆ ಮದುವೆಯಾಯಿತು ಅಂದತಕ್ಷಣ 'ಐ ಲವ್ ಯೂ' ಎನ್ನುವುದು, 'ಹೂ ಕೊಡುವುದು' ಇತ್ಯಾದಿ ಪ್ರೀತಿಯ 'ಕ್ರಿಯೆ'ಗಳನ್ನು ಹಾಸ್ಯಾಸ್ಪದವಾಗಿಸಿ, 'ಏ ಅದೇನು ಮಕ್ಕಳಾಟ' ಎಂದು ಪಕ್ಕಕ್ಕೆ ತಳ್ಳಿ, ಕೇವಲ ಆಗಾಗ 'ಕಾಮ'ಕ್ಕೆ, ಜವಾಬ್ದಾರಿಗಳನ್ನು ನಿರ್ವಹಿಸುವ 'ಉದಾತ್ತ ಪ್ರೇಮ'ಕ್ಕೆ ಸೀಮಿತವಾಗಿಸಿ ಬಿಡುತ್ತಾರೆ!

ಮನೋವಿಜ್ಞಾನಿಗಳು ಪ್ರೇಮಿಗಳನ್ನೂ ವಿರಹಿಗಳನ್ನೂ ಭಗ್ನಪ್ರೇಮಿಗಳನ್ನೂ ಅಧ್ಯಯನ ಮಾಡದೆ ಬಿಟ್ಟಿಲ್ಲ. ಈ ಮೂವರನ್ನೂ ಎಂಆರ್‌ಐ ಸ್ಕ್ಯಾನರ್‌ನಲ್ಲಿ ಹಾಕಿ ಪರೀಕ್ಷೆ ಮಾಡಿಯೇ ಮಾಡಿದ್ದಾರೆ. ಮಿದುಳಿನ 'ಆನಂದ ಮಾರ್ಗ' -ರಿವಾರ್ಡ್ ಪಾತ್‌ವೇ- ಎಂಬ ವ್ಯೂಹ ಪ್ರೇಮಿಗಳಲ್ಲಿ ಪೂರ್ತಿ ಕುಣಿದಾಡುತ್ತ ಇರುತ್ತದೆ. ಮಾದಕ ದ್ರವ್ಯದ ಅಮಲು ಹೇಗಿರುತ್ತದೆಂದು ನಿಮಗೆ ಗೊತ್ತಿರದಿದ್ದರೆ, ನೀವು ಪ್ರೀತಿಯಲ್ಲಿ ಬಿದ್ದರೆ ಆ ಅಮಲು ನಿಮಗೆ ಅನುಭವವಾಗುವುದು ಗ್ಯಾರಂಟಿ. 'ನಾನು' ಎಂಬ ಪರಿವೆ ಇಲ್ಲವಾಗಿ, ಮತ್ತೊಬ್ಬರು ನಿಮ್ಮ ಮಿದುಳನ್ನು ತುಂಬಿಬಿಡುತ್ತಾರೆ (ಹೃದಯವನ್ನಲ್ಲ! ಪ್ರೇಮಿಗಳ ದಿನಕ್ಕೆ ನೀವು ಕಳಿಸಬೇಕಾದ್ದು ಹೃದಯದ ಕಾರ್ಡಲ್ಲ, ಮಿದುಳಿನ ಕಾರ್ಡು!). ಇದಾದ ಮೇಲೆ ವಿರಹಿಗಳ ಕಥೆ-ವ್ಯಥೆ. ಇವರಲ್ಲಿ ಕಂಡುಬಂದದ್ದು ಗೀಳು. ಬಿಡಲಾಗದ ಗೀಳು-ವಿರಹಿಗಳ ಚಡಪಡಿಕೆ. ಅದಾದ ನಂತರ ಭಗ್ನಪ್ರೇಮಿಗಳು. ಸಹಜವಾಗಿ ಪ್ರೇಮ ಮುರಿದ ದುಃಖದ ಸ್ಥಿತಿಯಲ್ಲಿ ಇವರನ್ನು ಅಧ್ಯಯನ ಮಾಡುವುದು ಸುಲಭವಲ್ಲ. ಆದರೂ ವಿಜ್ಞಾನದ ಪ್ರೇಮಿಗಳಾದ ವಿಜ್ಞಾನಿಗಳು ಪ್ರಯತ್ನ ಮಾಡಿಯೇ ಬಿಟ್ಟಿದ್ದಾರೆ. ಅವರಿಗೆ ಆಶ್ಚರ್ಯ ಕಾದಿತ್ತು! 'ಆನಂದದ ಮಾರ್ಗ'ಕ್ಕಿಂತ ಬೇರೆಯಾದ ಮಿದುಳಿನ ಭಾಗದಲ್ಲಿ ಚಟುವಟಿಕೆ ಕಾಣಬೇಕಿತ್ತು ತಾನೇ?! ಇಲ್ಲ, ಪ್ರಚೋದನೆ -ಚಟುವಟಿಕೆ ಎಲ್ಲವೂ ಕಂಡುಬಂದಿದ್ದು, ಅದೇ 'ಆನಂದದ ಮಾರ್ಗ'ದಲ್ಲಿಯೇ. 'ಈಕೆ ನನಗೆ ಕೈಕೊಟ್ಟಳು/ ಈತ ನನಗೆ ಕೈಕೊಟ್ಟ. ಅಂದಮೇಲೆ ಈ ವ್ಯಕ್ತಿಯನ್ನು ನಾನು ಮರೆಯಬೇಕು' ಎಂದು ಯೋಚಿಸಬೇಕಷ್ಟೆ. ಊಹೂಂ, ಇಲ್ಲವೇ ಇಲ್ಲ! ರೋಮನ್ ಕವಿ ಟೆರೆನ್ಸ್ ಹೇಳಿದ: 'The less my hope, the hotter my Love'-ತಿರಸ್ಕಾರ ಹೆಚ್ಚಾದಷ್ಟೂ ಪ್ರೇಮದ ಬಿಸಿ ಏರುತ್ತದೆ. ಇದು ವೈಜ್ಞಾನಿಕವಾಗಿಯೂ ಸತ್ಯವೇ! ಮಿದುಳಿನ 'ಆನಂದ ಮಾರ್ಗ'ದಲ್ಲಿ ಬಯಕೆ-ಪ್ರೇರಣೆ, ತುಡಿತ ಎಲ್ಲವೂ ತಮ್ಮ ಚಟುವಟಿಕೆಯನ್ನು ಬೇಕಾದ ವಸ್ತು ಸಿಗದಿದ್ದಾಗ ಹೆಚ್ಚಿಸುತ್ತವೆ.

ಸ್ವಾರಸ್ಯಕರ ಸಂಗತಿ ಏನು ಗೊತ್ತೇ? ಭಗ್ನಪ್ರೇಮಿಗಳಲ್ಲಿ ಲಾಭ-ನಷ್ಟದ ಲೆಕ್ಕಾಚಾರವನ್ನು ಗ್ರಹಿಸುವ ಮಿದುಳಿನ ಭಾಗಗಳಲ್ಲಿಯೂ ಪ್ರಚೋದನೆ ಕಂಡು ಬಂದಿದೆ! ಅಂದರೆ ನೀವು ಪ್ರೀತಿಸಿದವರಿಂದ ತಿರಸ್ಕೃತರಾಗಿ ಸುಮ್ಮನೇ ಮಲಗಿ, ಯೋಚಿಸುತ್ತಿದ್ದೀರಿ ಎಂದುಕೊಳ್ಳಿ, ನಿಮ್ಮನ್ನು ಎಂಆರ್‌ಐ ಸ್ಕ್ಯಾನರ್‌ನಲ್ಲಿ ಮಲಗಿಸಿದರೆ ನೀವು ಲೆಕ್ಕಾಚಾರಕ್ಕೆ ತೊಡಗುತ್ತೀರಿ 'ಏನು ತಪ್ಪಾಯಿತು? ಏನು ಕಳೆದುಕೊಂಡೆ?'. ಆಗ ಕೆಲಸ ಮಾಡುತ್ತಿರುವುದು 'ಆನಂದದ ಮಾರ್ಗ'ವಲ್ಲ! ದೊಡ್ಡ ಲಾಭಕ್ಕಾಗಿ 'ರಿಸ್ಕ್' ತೆಗೆದುಕೊಳ್ಳುವಾಗ ನಮ್ಮ ಮಿದುಳಿನಲ್ಲಿ ಪ್ರಚೋದನೆಗೊಳ್ಳುವ ಭಾಗಗಳು.

ಪ್ರೇಮಕ್ಕಾಗಿ ಅಪರಾಧಗಳೂ ಸಾಮಾನ್ಯವಾಗಿ ನಡೆಯುತ್ತವಷ್ಟೆ. ಇಲ್ಲಿ ನಡೆಯುವುದು ನಿಜವಾಗಿ ಏನು? ವ್ಯಕ್ತಿಯೊಂದಿಗೆ ಆಳವಾದ ಬಾಂಧವ್ಯದಿಂದ 'ಆನಂದ ಮಾರ್ಗ' ಪ್ರಚೋದನೆಯಾದಾಗ, ಅದರಿಂದ ತೀವ್ರ ಶಕ್ತಿ, ತೀವ್ರ ಏಕಾಗ್ರತೆ, ಪ್ರೇರಣೆ ಮತ್ತು ಏನನ್ನಾದರೂ ಎದುರಿಸುವ ಧೈರ್ಯ ಇವೂ ತನ್ನಿಂತಾನೇ ಬುದ್ಧಿ-ಭಾವಗಳಿಗೆ ಒದಗುತ್ತವೆ. ಪ್ರೇಮದ ಹಸಿವಿಗಾಗಿ ಅಪರಾಧ ಮಾಡಲೂ ಹಿಂಜರಿಯುವುದಿಲ್ಲ.

ಪ್ಲೇಟೊ ಹೇಳುವ 'ಪ್ರೇಮದ ದೇವತೆ ಯಾವಾಗಲೂ ಅವಶ್ಯಕತೆಯ ಸ್ಥಿತಿಯಲ್ಲಿರುತ್ತಾನೆ. ಪ್ರೇಮ ಹಸಿವು-ನೀರಡಿಕೆಗಳಂತೆ ಅದುಮಲು ಅಸಾಧ್ಯವಾದ ಒಂದು ತುಡಿತ, ದೇಹ ಮನಸ್ಸುಗಳ ಅಸಮತೋಲನ', ಈ ಮಾತು ನೂರಾರು ವರ್ಷಗಳ ನಂತರವೂ ನಿಜವಾಗಿಯೇ ನಿಂತಿದೆ. ಮನುಷ್ಯರಾಗಿ ನಮಗೆ ಪ್ರೇಮ ಬೇಕೇಬೇಕು. ಪ್ರೀತಿ ನಮ್ಮೆಲ್ಲರಲ್ಲಿ ಇದೆ. ಅದಿರುವುದು ಹೃದಯದಲ್ಲಲ್ಲ! ನಮ್ಮ ಬುದ್ಧಿ-ಮನಸ್ಸುಗಳಲ್ಲಿ ಹುದುಗಿ ಮಿದುಳಿನಲ್ಲಿ ಅಡಗಿ ಕುಳಿತಿದೆ. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದೇ ನಮ್ಮ ಈ ಹೊತ್ತಿನ ಸವಾಲು.



ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಗೋಜೊ–ಸೆಂಗ್ ಫೈನಲ್ ಹಣಾಹಣಿ

ಸಾಕೇತ್–ರಾಮ್‌ಕುಮಾರ್‌ಗೆ ಪ್ರಶಸ್ತಿ

• ವಿಕ್ರಂ ಕಾಂತಿಕೆರೆ

ರಾಮ್‌ಕುಮಾರ್ ರಾಮನಾಥನ್ (ಎಡ) ಮತ್ತು ಸಾಕೇತ್ ಮೈನೇನಿ ಸಂಭ್ರಮ ಹಂಚಿಕೊಂಡರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಸಾಕೇತ್ ಮೈನೇನಿ ಮತ್ತು ರಾಮ್‌ಕುಮಾರ್ ರಾಮನಾಥನ್ ಜೋಡಿ ಬೆಂಗಳೂರು ಓಪನ್ ಎಟಿಪಿ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆವರಣದಲ್ಲಿ ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಫ್ರಾನ್ಸ್‌ನ ಹ್ಯೂಗೊ ಗ್ರೆನಿಯರ್ ಮತ್ತು ಅಲೆಕ್ಸಾಂಡರ್ ಮುಲ್ಲರ್ ವಿರುದ್ಧ ಅವರು 6-3, 6-2ರಲ್ಲಿ ಜಯ ಗಳಿಸಿದರು.

ಸಿಂಗಲ್ಸ್ ವಿಭಾಗದಲ್ಲಿ ಕ್ರೊವೇಷಿಯಾದ ಬೋರ್ನೊ ಗೋಜೊ ಮತ್ತು ಚೀನಾ ಥೈಪೆಯ ಚುನ್ ಸಿನ್ ಸೆಂಗ್ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಡಬಲ್ಸ್ ಫೈನಲ್‌ನಲ್ಲಿ ಶರವೇಗದ ಸರ್ವ್‌ಗಳನ್ನು ಸಿಡಿಸಿದ ರಾಮ್‌ಕುಮಾರ್ ಅವರಿಗೆ ಮೋಹಕ ಆಟದ ಮೂಲಕ ಸಾಕೇತ್ ಸಹಕಾರ ನೀಡಿದರು. ಪಂದ್ಯದ ಆರಂಭದಲ್ಲಿ 4–1ರಿಂದ ಮುನ್ನಡೆದ ಭಾರತದ ಜೋಡಿ ನಂತರ ಸುಲಭವಾಗಿ ಜಯ ಗಳಿಸಿದರು. ದೈಹಿಕವಾಗಿ ದಣಿದಂತೆ ಕಂಡುಬಂದ ಮುಲ್ಲರ್ ರಿಟರ್ನ್ ಮಾಡಲು ಪ್ರಯಾಸಪಟ್ಟರು. ಗ್ರೆನಿಯರ್ ಅವರಿಂದಲೂ ಹೆಚ್ಚಿನ ಸಾಧನೆ ಆಗಲಿಲ್ಲ. ಹೀಗಾಗಿ 2ನೇ ಸೆಟ್‌ನಲ್ಲಿ ಭಾರತದ ಆಟಗಾರರು ಮತ್ತಷ್ಟು ಸುಲಭ ಗೆಲುವು ಸಾಧಿಸಿದರು.

ಪುಟಿದೆದ್ದ ಗೋಜೊ: ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ ಎದುರು ಬೋರ್ನ ಗೋಜೊ ಮೊದಲ ಸೆಟ್‌ನಲ್ಲಿ ಸೋಲುಂಡರೂ ಚೇತರಿಸಿಕೊಂಡು 4-6, 6-3, 6-0ರಲ್ಲಿ ಪಂದ್ಯ ಗೆದ್ದು ಪ್ರಶಸ್ತಿ ಸುತ್ತಿಗೆ ಲಗ್ಗೆ ಇರಿಸಿದರು.

ಸೆಮಿಫೈನಲ್ ಫಲಿತಾಂಶಗಳು: **ಸಿಂಗಲ್ಸ್:** ಕ್ರೊವೇಷ್ಯಾದ ಬೋರ್ನ ಗೋಜೊಗೆ ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ ಎದುರು 4-6, 6-3, 6-0ರಲ್ಲಿ ಜಯ; ಚೀನಾ ತೈಪೆಯ ಚುನ್ ಶಿನ್ ಸೆಂಗ್‌ಗೆ ಫ್ರಾನ್ಸ್‌ನ ಎನ್ಜೊ ಕೊಕಾರ್ಡ್ ವಿರುದ್ಧ 7-5, 6-4ರಲ್ಲಿ ಗೆಲುವು. **ಡಬಲ್ಸ್ ಫೈನಲ್:** ಭಾರತದ ಸಾಕೇತ್ ಮೈನೇನಿ–ರಾಮ್‌ಕುಮಾರ್ ರಾಮನಾಥನ್‌ಗೆ ಫ್ರಾನ್ಸ್‌ನ ಹ್ಯೂಗೊ ಗ್ರೆನಿಯರ್–ಅಲೆಕ್ಸಾಂಡರ್ ಮುಲ್ಲರ್ ಎದುರು 6-3, 6-2ರಲ್ಲಿ ಗೆಲುವು.

ಅಲೆಕ್ಸಾಂಡರ್ ವುಕಿಚ್‌ಗೆ ಅಗ್ರ ಶ್ರೇಯಾಂಕ

ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಎರಡನೇ ಲೆಗ್‌ನಲ್ಲಿ ಅಗ್ರ ಶ್ರೇಯಾಂಕ ಗಳಿಸಿದ್ದಾರೆ. ಪಂದ್ಯಗಳು ಸೋಮವಾರ ಆರಂಭವಾಗಲಿದ್ದು ಅರ್ಹತಾ ಸುತ್ತಿನ ಹಣಾಹಣಿ ಭಾನುವಾರದಿಂದ ನಡೆಯಲಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 138ನೇ ಸ್ಥಾನದಲ್ಲಿರುವ 25 ವರ್ಷದ ವುಕಿಚ್ ಮೊದಲ ಸುತ್ತಿನಲ್ಲಿ ಭಾರತದ ಪ್ರಜ್ಞೇಶ್ ಗುಣೇಶ್ವರನ್ ಎದುರು ಆಡಲಿದ್ದಾರೆ. ರ‍್ಯಾಂಕಿಂಗ್‌ನಲ್ಲಿ ಭಾರತದ ಆಟಗಾರರ ಪೈಕಿ ಅಗ್ರ ಸ್ಥಾನದಲ್ಲಿರುವ ರಾಮ್‌ಕುಮಾರ್ ರಾಮನಾಥನ್ ಅವರಿಗೆ ಏಳನೇ ಶ್ರೇಯಾಂಕ ನೀಡಲಾಗಿದ್ದು ಮೊದಲ ಪಂದ್ಯದಲ್ಲಿ ಫ್ರಾನ್ಸ್‌ನ ಮಥಿಯಾಸ್ ಬೋಜ್ ಎದುರು ಸೆಣಸುವರು.

ಎರಡನೇ ಶ್ರೇಯಾಂಕವನ್ನು ಫ್ರಾನ್ಸ್‌ನ ಹ್ಯೂಗೊ ಗ್ರೆನಿಯರ್ ಅವರಿಗೆ ನೀಡಲಾಗಿದ್ದು ಎನ್ಜೊ ಕಾಕಡ್ ಅವರಿಗೆ ಮೂರನೇ ಶ್ರೇಯಾಂಕ ಲಭಿಸಿದೆ.

ಮಕ್ಕಳು ಅತಿಥಿಗಳು: ಶನಿವಾರ ನಡೆದ ಡ್ರಾ ಸಮಾರಂಭದಲ್ಲಿ 'ಪುಟಾಣಿ' ಟೆನಿಸ್ ಪಟುಗಳು ಅತಿಥಿಗಳಾಗಿದ್ದರು. 12 ವರ್ಷದೊಳಗಿನವರ ವಿಭಾಗದಲ್ಲಿ ರಾಜ್ಯದ ಅಗ್ರಸ್ಥಾನದಲ್ಲಿರುವ ಸೃಷ್ಟಿ ಕಿರಣ್, ಅಯ್ಲಿನ್ ಮಿರಿಯಮ್, ಸಂಜಯ್ ಗಿರೀಶ್ ಕುಮರ್ ಮತ್ತು ಇಶಾನ್ ಬಾದಾಮಿ ಅವರು ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದ 'ಕಾಯಿನ್' ಎತ್ತಿದರು.

ಕಬಡ್ಡಿ: ರೋಚಕ ಪಂದ್ಯದಲ್ಲಿ ಡೆಲ್ಲಿಗೆ ಜಯ

ಪ್ರಜಾವಾಣಿ ವಾರ್ತೆ

ಪಾಯಿಂಟ್ ಗಳಿಸಲು ಪ್ರಯತ್ನಿಸಿದ ತಮಿಳ್ ತಲೈವಾಸ್‌ನ ಮಂಜೀತ್

ಬೆಂಗಳೂರು: ರೇಡರ್‌ಗಳಾದ ನವೀನ್ ಕುಮಾರ್ ಮತ್ತು ಮಂಜೀತ್ 'ಸೂಪರ್ ಟೆನ್' ಸಾಧನೆ ಮಾಡಿದರು. ಅಂತಿಮ ಕ್ಷಣದ ವರೆಗೂ ರೋಚಕ ಹೋರಾಟ ಕಂಡ ಪಂದ್ಯದಲ್ಲಿ ದಬಂಗ್ ಡೆಲ್ಲಿ ಗೆಲುವಿನ ಸಂಭ್ರಮ ಅನುಭವಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಲೀಗ್‌ನಲ್ಲಿ ಶನಿವಾರದ ಪಂದ್ಯದಲ್ಲಿ ದಬಂಗ್ ಡೆಲ್ಲಿ 32–31ರಲ್ಲಿ ತಮಿಳ್ ತಲೈವಾಸ್ ವಿರುದ್ಧ ಜಯ ಸಾಧಿಸಿತು. ಈ ಸೋಲಿನೊಂದಿಗೆ ತಲೈವಾಸ್ ಪ್ಲೇ ಆಫ್ ಹಾದಿ ಕಠಿಣವಾಗಿದೆ.

ನವೀನ್ ಕುಮಾರ್ ಡೆಲ್ಲಿ ತಂಡಕ್ಕಾಗಿ ಮೂರು ಬೋನಸ್ ಪಾಯಿಂಟ್‌ಗಳೊಂದಿಗೆ 13 ಪಾಯಿಂಟ್ ಕಲೆ ಹಾಕಿದರೆ ಮಂಜೀತ್, ತಮಿಳ್ ತಲೈವಾಸ್‌ಗಾಗಿ 10 ಪಾಯಿಂಟ್ ಗಳಿಸಿಕೊಟ್ಟರು.

ಕೊನೆಯ ಹಂತದಲ್ಲಿ ಮಂಜೀತ್ ಕೂಡ ಗಮನಾರ್ಹ ಆಟವಾಡಿದರು. ಆದರೆ ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

13ನೇ ನಿಮಿಷದಲ್ಲಿ ಎದುರಾಳಿಗಳನ್ನು ಆಲೌಟ್ ಮಾಡಿದ ದಬಂಗ್ ಡೆಲ್ಲಿ ಎಂಟು ಪಾಯಿಂಟ್‌ಗಳ ಮುನ್ನಡೆ ಗಳಿಸಿ ಮೊದಲಾರ್ಧದ ಮುಕ್ತಾಯಕ್ಕೆ 17–10ರ ಮುನ್ನಡೆ ಸಾಧಿಸುವಲ್ಲಿ ಡೆಲ್ಲಿ ಯಶಸ್ವಿಯಾಯಿತು.

ಯು ಮುಂಬಾ ಜಯಭೇರಿ: ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡ ಬೆಂಗಾಲ್ ವಾರಿಯರ್ಸ್ ಎದುರು 10 ಪಾಯಿಂಟ್‌ಗಳ ಅಂತರದಲ್ಲಿ ಜಯ ಗಳಿಸಿತು. ರೇಡರ್‌ಗಳಾದ ಅಜಿತ್, ಅಭಿಷೇಕ್ ಸಿಂಗ್ ಮತ್ತು ಡಿಫೆಂಡರ್ ಫಜಲ್ ಅತ್ರಾಚಲಿ ಅವರ ಅಮೋಘ ಆಟದಿಂದ ಮುಂಬಾ 37–27ರಲ್ಲಿ ಬೆಂಗಾಲ್ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 51–31 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ಎದುರು ಜಯಿಸಿತು.

ಇಂದಿನ ಪಂದ್ಯ (ರಾತ್ರಿ)

- ಹರಿಯಾಣ ಸ್ಟೀಲರ್ಸ್ Vs ಯು ಮುಂಬಾ 7.30
- ಬೆಂಗಳೂರು ಬುಲ್ಸ್ Vs ಜೈಪುರ ಪಿಂಕ್ ಪ್ಯಾಂಥರ್ಸ್ 8.30
- ಯುಪಿ ಯೋಧಾ Vs ಗುಜರಾತ್ ಜೈಂಟ್ಸ್ 9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	18	13	4	1	70
ದಬಂಗ್ ಡೆಲ್ಲಿ	19	10	5	4	65
ಹರಿಯಾಣ ಸ್ಟೀಲರ್ಸ್	19	9	7	3	58
ಯು ಪಿ ಯೋಧಾ	19	8	8	3	57
ಬೆಂಗಳೂರು ಬುಲ್ಸ್	19	9	8	2	55
ಯು ಮುಂಬಾ	18	7	6	5	53
ಪುಣೇರಿ ಪಲ್ಟನ್	18	10	8	-	52
ಜೈಪುರ ಪಿಂಕ್ ಪ್ಯಾಂಥರ್ಸ್	18	8	8	2	52
ಗುಜರಾತ್ ಜೈಂಟ್ಸ್	18	7	8	3	49
ತಮಿಳ್ ತಲೈವಾಸ್	19	5	8	6	47
ಬೆಂಗಾಲ್ ವಾರಿಯರ್ಸ್	20	7	10	3	47
ತೆಲುಗು ಟೈಟನ್ಸ್	19	1	14	4	27

(ಶನಿವಾರದ ಪಂದ್ಯಗಳ ಅಂತ್ಯಕ್ಕೆ)

ಲೈಂಗಿಕ ನಿಂದನೆಯ ಪತ್ರ ಬಂದಿತ್ತು: ದ್ರೋಣವಳ್ಳಿ ಹಾರಿಕಾ

ಹಾರಿಕಾ

ಚೆನ್ನೈ (ಪಿಟಿಐ): ಲಾಟ್ವಿಯಾದಲ್ಲಿ ಕಳೆದ ವರ್ಷ ನಡೆದ ಟೂರ್ನಿಯ ಸಂದರ್ಭದಲ್ಲಿ ತಮಗೆ ಲೈಂಗಿಕ ನಿಂದನೆಯ ಪತ್ರ ಬಂದಿತ್ತು ಎಂದು ಭಾರತದ ಚೆಸ್ ಆಟಗಾರ್ತಿ ದ್ರೋಣವಳ್ಳಿ ಹಾರಿಕಾ ಆರೋಪಿಸಿದ್ದಾರೆ.

'ರಿಗಾದಲ್ಲಿ ನಡೆದ ಗ್ರ್ಯಾಂಡ್ ಸ್ವಿಸ್ ಟೂರ್ನಿಯ ವೇಳೆ ಹಲವರಿಗೆ ಈ ರೀತಿಯ ಪತ್ರ ಬಂದಿತ್ತು. ಟೂರ್ನಿಯ ಕೊನೆಯ ದಿನದವರೆಗೆ ಈ ಕುರಿತು ನನಗೆ ಅರಿವಿರಲಿಲ್ಲ. ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ (ಫಿಡೆ) ಈ ವಿಷಯವನ್ನು ಸಮರ್ಪಕವಾಗಿ ನಿರ್ವಹಿಸಿತು' ಎಂದು ವಿಶ್ವ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಹಾರಿಕಾ ಅವರು ಹೇಳಿದ್ದಾರೆ.

'ಪತ್ರವನ್ನು ನಾನು ತೆರೆದು ನೋಡಲಿಲ್ಲ. ಅದರಿಂದ ನನಗೆ ಯಾವುದೇ ತೊಂದರೆಯಾಗಲಿಲ್ಲ. ಫಿಡೆ ಗಮನಕ್ಕೆ ತಂದ ಬಳಿಕ ಈ ಪತ್ರಗಳನ್ನು ಪೊಲೀಸರಿಗೆ ಒಪ್ಪಿಸಿತು' ಎಂದು ಅವರು ಹೇಳಿದ್ದಾರೆ.

'ಗ್ರ್ಯಾಂಡ್ ಸ್ವಿಸ್ ಟೂರ್ನಿಯ ಸಮಯದಲ್ಲಿ ಪತ್ರಗಳನ್ನು ಸ್ವೀಕರಿಸಿದ ಆಟಗಾರರ ಪರವಾಗಿ ಫಿಡೆ ಕ್ರಮ ಕೈಗೊಂಡಿದೆ. ಆಟಗಾರರ ಗೊಂದಲವನ್ನು ಕಡಿಮೆ ಮಾಡಲು ತಕ್ಷಣವೇ ಪೊಲೀಸರಿಗೆ ವರದಿ ಮಾಡಿದ್ದೇವೆ. ಲಾಟ್ವಿಯಾ ಪೊಲೀಸರು ಇದನ್ನು ಗಂಭೀರವಾಗಿ ತೆಗೆದುಕೊಂಡಿದ್ದು, ತನಿಖೆ ಪ್ರಗತಿಯಲ್ಲಿದೆ' ಎಂದು ಫಿಡೆ ತಿಳಿಸಿದೆ. ರಷ್ಯಾ ಮಾಧ್ಯಮಗಳ ವರದಿಯ ಪ್ರಕಾರ 15 ಮಂದಿಗೆ ಲೈಂಗಿಕ ನಿಂದನೆಯ ಪತ್ರಗಳು ಬಂದಿದ್ದವು ಎನ್ನಲಾಗಿದೆ.

ಸೋನಿ ಸ್ಪೋರ್ಟ್ಸ್‌ನಲ್ಲಿ ಯುಎಫ್‌ಸಿ ಪಂದ್ಯ ನೇರಪ್ರಸಾರ

ಬೆಂಗಳೂರು: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಮೊದಲ ಬಾರಿಗೆ ಅಲ್ಟಿಮೇಟ್ ಫೈಟಿಂಗ್ ಚಾಂಪಿಯನ್‌ಷಿಪ್ (ಯುಎಫ್‌ಸಿ) ಪಂದ್ಯಗಳನ್ನು ನೇರ ಪ್ರಸಾರ ಮಾಡಲಿದೆ.

ವಿಶ್ವದ ಪ್ರಮುಖ ಮಿಶ್ರ ಮಾರ್ಷಲ್ ಆರ್ಟ್ಸ್ (ಎಂಎಂಎ) ಕ್ರೀಡೆಯ ಪಂದ್ಯಗಳು ಇಂಗ್ಲಿಷ್, ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಪ್ರಸಾರವಾಗಲಿವೆ. ಭಾನುವಾರ ಅಡೆಸನ್ಯಾ ಮತ್ತು ವಿಟೇಕರ್ ನಡುವಣ ಪಂದ್ಯದೊಂದಿಗೆ ನೇರ ಪ್ರಸಾರ ಆರಂಭವಾಗಲಿದೆ.

ಮುಂಬೈ ರೇಸ್

ಎನಿಗ್ಮಾ ಗೆಲ್ಲುವ ನಿರೀಕ್ಷೆ

ಡಾ. ಎಸ್.ಸಿ.ಜೈನ್ ಸ್ಪ್ರಿಂಟರ್ಸ್ ಚಾಂಪಿಯನ್‌ಷಿಪ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎನಿಗ್ಮಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಂಡೆಸೆಂಟ್ ಸ್ಟಾರ್ 4, ಕಾರ್ಡಶಿಯನಾನ್ 3, ಅಸೆಂಬುರ 2
2ನೇ ರೇಸ್: ಎಂಡೆವರ್ 2, ಡೆಸರ್ಟ್ ಫೈರ್ 3, ಶರಾರೆ 4
3ನೇ ರೇಸ್: ಬ್ರೇವ್ ಬ್ಯೂಟಿ 3, ಫ್ಯಾಶನ್ ಐಕಾನ್ 5, ಫೈತ್ 4
4ನೇ ರೇಸ್: ರೊಡ್ರಿಗೊ 1, ವಿಕ್ರಮಾದಿತ್ಯ 2, ಮ್ಯಾಡ್ ಲವರ್ 6
5ನೇ ರೇಸ್: ಎನಿಗ್ಮಾ 5, ಐರನ್ ಏಜ್ (3), ಜೋಕ್ವಿನ್ 4
6ನೇ ರೇಸ್: ಮೊನಾರ್ಕಿ 6, ಮಲ್ಟಿಸ್ಟಾರರ್ 5, ಸೆಲ್ಲಿನಿ 2
7ನೇ ರೇಸ್: ಸ್ಕಾಟ್ಲಾಂಡ್ 8, ಬ್ರಾಜೋಸ್ 5, ಸಾಂಗ್ ಸಾಂಗ್ ಬ್ಲೂ 2
8ನೇ ರೇಸ್: ಸೆಮಿನೋಲ್ 4, ಅನೌಶ್ಕ 8, ಪವರ್ ಆಫ್ ನೀತ್ 7

ಉತ್ತಮ ಬೆಟ್: ರೊಡ್ರಿಗೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಟಿಟಿಎಫ್‌ಐಗೆ ಆಡಳಿತಾಧಿಕಾರಿ ನೇಮಕಕ್ಕೆ ಹೈಕೋರ್ಟ್ ಸೂಚನೆ


ಮಣಿಕಾ ಬಾತ್ರಾ

ನವದೆಹಲಿ (ಪಿಟಿಐ): ಸಂಕಷ್ಟದ ಸ್ಥಿತಿಯಲ್ಲಿರುವ ಅಖಿಲ ಭಾರತ ಟೇಬಲ್ ಟೆನಿಸ್ ಫೆಡರೇಷನ್‌ಗೆ (ಟಿಟಿಎಫ್‌ಐ) ಆಡಳಿತಾಧಿಕಾರಿಯನ್ನು ನೇಮ ಮಾಡುವಂತೆ ದೆಹಲಿ ಹೈಕೋರ್ಟ್ ಶುಕ್ರವಾರ ಆದೇಶ ನೀಡಿದೆ. ಪದಾಧಿಕಾರಿಗಳಿಂದ ಆಡಳಿತ ಮಂಡಳಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಆಡಳಿತಾಧಿಕಾರಿ ಮುಂದಾಗಬೇಕು ಎಂದೂ ನ್ಯಾಯಾಲಯ ಸೂಚಿಸಿದೆ.

ಕಾಮನ್‌ವೆಲ್ತ್ ಗೇಮ್ಸ್‌ನ ಚಿನ್ನದ ಪದಕ ವಿಜೇತ ಆಟಗಾರ್ತಿ ಮಣಿಕಾ ಬಾತ್ರಾ ಸಲ್ಲಿಸಿದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರೇಖಾ ಪಿಳ್ಳೈ ಅವರು ಟೇಬಲ್ ಟೆನಿಸ್ ಫೆಡರೇಷನ್ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಣಿಕಾ ಬಾತ್ರಾ ಅವರ ಅರ್ಜಿ ಹಿನ್ನೆಲೆಯಲ್ಲಿ ಮೂವರು ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಕ್ರೀಡಾಪಟುಗಳನ್ನು ಬೆಳೆಸಲು ಮುಂದಾಗುವುದು ಬಿಟ್ಟು ಪದಾಧಿಕಾರಿಗಳ ಹಿತಾಸಕ್ತಿ ಕಾಯಲು ಫೆಡರೇಷನ್ ಪ್ರಯತ್ನಿಸಿತ್ತು ಎಂದು ಸಮಿತಿ ವರದಿ ನೀಡಿರುವುದಾಗಿ ನ್ಯಾಯಾಧೀಶರು ತಿಳಿಸಿದರು.